ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿ ಗೆಲುವಿನ ಉದ್ಘಾಟನೆ

ಬೆಂಗಳೂರಿನ ಚಿನ್ನಸ್ವಾಮಿ ಮೈದಾನದಲ್ಲಿ ನಡೆದ 19ನೇ ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ 6 ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದ್ರಾಬಾದ್ ತಂಡವನ್ನು ಸೋಲಿಸಿದೆ. ಮೊದಲು ಬ್ಯಾಟ್ ಮಾಡಿದ ಹೈದರಾಬಾದ್ ನಾಯಕ ಇಶಾನ್ ಕಿಶನ್ ಸ್ಫೋಟಕ 80 ರನ್ ನೆರವಿನಿಂದ 9 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿತ್ತು. ಇದಕ್ಕೆ ಪ್ರತಿಯಾಗಿ ಕೊಹ್ಲಿ (69), ದೇವದತ್ತ ಪಡಿಕ್ಕಲ್ (61) ಸಿಡಿದು ನಿಂತಿದ್ದರಿಂದ ಆರ್‌ಸಿಬಿ 4 ವಿಕೆಟ್ ನಷ್ಟಕ್ಕೆ 203 ರನ್ ಗಳಿಸಿ ಜಯಿಸಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ: 3ನೇ ಭಾಷೆ ಲೆಕ್ಕಭರ್ತಿಗಿಳಿಸಿದ ಸರಕಾರ

ತೃತೀಯ ಭಾಷೆಗೆ ಅಂಕವಿಲ್ಲ: ವಿದ್ಯಾರ್ಥಿಗಳಲ್ಲಿ ತೀವ್ರ ತಲ್ಲಣ

ಮಂಗಳವಾರ ಪರೀಕ್ಷೆಯಿರುವಾಗ ದಿಢೀರ್ ನಿರ್ಧಾರ: ಭಾರೀ ಗೊಂದಲ
ಪರೀಕ್ಷೆಗೆ ಬಹಳ ಮುಂಚೆಯೇ ಹೇಳದೇ ಸರಕಾರ ಈಗ ಘೋಷಿಸಿದ್ದೇಕೆ?
ಹಿಂದಿ ಮಾತ್ರವಲ್ಲ, ಇತರೆ ತೃತೀಯ ಭಾಷಾ ವಿದ್ಯಾರ್ಥಿಗಳಿಗೂ ಆತಂಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತೃತೀಯ ಭಾಷೆಯ ವಿಷಯದಲ್ಲಿ ರಾಜ್ಯ ಸರಕಾರದ ಏಕಾಏಕಿ ತೀರ್ಮಾನ ಇದೀಗ ರಾಜ್ಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಹಿಂದಿ ಹೇರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಎಸ್‌ಎಸ್‌ಎಲ್‌ಸಿಯಲ್ಲಿ ತೃತೀಯ ಭಾಷೆಯ ಅಂಕವನ್ನು ಪರಿಗಣಿಸುವ ಬದಲು, ಗ್ರೇಡಿಂಗ್ ರೂಪದಲ್ಲಿ ಫಲಿತಾಂಶ ನೀಡಲಾಗುವುದು ಹಾಗೂ ಒಟ್ಟಾರೆ ಅಂಕವನ್ನು 625ರಿಂದ 525ಕ್ಕೆ ಇಳಿಸಲಾಗುವುದು ಎಂದು ಶುಕ್ರವಾರವಷ್ಟೇ ಶಿಕ್ಷಣ ಇಲಾಖೆ ಘೋಷಿಸಿತ್ತು.

ಆದರೆ ಈಗಾಗಲೇ ಎಸ್‌ಎಸ್‌ಎಲ್‌ಸಿ ಮೊದಲ ಪರೀಕ್ಷೆ ಚಾಲ್ತಿಯಲ್ಲಿದ್ದು, ಮಂಗಳವಾರ ಹಿಂದಿ ಸೇರಿದಂತೆ ತೃತೀಯ ಭಾಷೆಯ ಪರೀಕ್ಷೆ ನಡೆಯಬೇಕಿದೆ. ರಾಜ್ಯದ ಎಲ್ಲ ಕಡೆಯೂ ಹಿಂದಿಯೇ ತೃತೀಯ ಭಾಷೆಯಲ್ಲ, ಕೆಲವು ನಗರಪ್ರದೇಶಗಳಲ್ಲಿ ಕನ್ನಡವೂ ಸೇರಿ ಹಲವು ಭಾಷೆಗಳನ್ನು ತೃತೀಯ ಭಾಷೆಯನ್ನಾಗಿ ಪರಿಗಣಿಸಲು ಅವಕಾಶವಿದೆ. ಇದು ವಿದ್ಯಾರ್ಥಿಗಳಿಗೆ ಭಾರೀ ಗೊಂದಲವನ್ನು ಮೂಡಿಸಲಿದೆ ಎಂದು ಪೋಷಕರು ಬೇಸರ ವ್ಯಕ್ತಪಡಿಸಿದ್ದಾರೆ. ಪರೀಕ್ಷೆಗೆ ಮೂರು ದಿನವಿರುವಾಗ ಈ ರೀತಿಯ ತೀರ್ಮಾನ ಕೈಗೊಂಡಿರುವುದು ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಭಾರೀ ಗೊಂದಲ ಉಂಟು ಮಾಡಿದೆ. ದಿಢೀರನೆ ಮೌಲ್ಯಮಾಪನದ ಇಡೀ ಪದ್ಧತಿಯನ್ನೇ ಬದಲಾಯಿಸಿದರೆ ಮಕ್ಕಳಿಗೆ ಮಾನಸಿಕವಾಗಿ ತೀವ್ರ ಹೊಡೆತ ಬೀಳಲಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಪರೀಕ್ಷಾ ಪದ್ಧತಿಯನ್ನು ಬದಲಾಯಿಸುವ ಮೊದಲು ಸಚಿವ ಸಂಪುಟ ಸಭೆಯಲ್ಲಿ ಆಗಲಿ, ತಜ್ಞರ ಸಮಿತಿ ಯಿಂದ ಯಾವುದೇ ವರದಿ ಪಡೆದಿಲ್ಲ. ಕನಿಷ್ಠ ಶಿಕ್ಷಣ ತಜ್ಞರೊಂದಿಗೆ ಚರ್ಚಿಸಿ, ಸಾಧಕ-ಬಾಧಕವನ್ನು ಆಲಿಸಿಲ್ಲ. ಏಕಾಏಕಿ 'ತುರ್ತು ಸುದ್ದಿಗೋಷ್ಠಿ' ನಡೆಸಿ, ವಿದ್ಯಾರ್ಥಿ ಜೀವನದ ಪ್ರಮುಖಘಟ್ಟದ ಪ್ರಕ್ರಿಯೆಯನ್ನೇ ಬದಲಾಯಿಸಿರುವುದು ಸರಿಯಲ್ಲ. → 4

ಸರಕಾರದ ವಾದವೇನು?

- ಎಸ್‌ಎಸ್‌ಎಲ್‌ಸಿ ಮಕ್ಕಳ ಮೇಲಿನ ಒತ್ತಡವನ್ನು ತಗ್ಗಿಸಲು ಈ ರೀತಿಯ ಕ್ರಮ
- ಕೊನೆಯ ಕ್ಷಣದ ಘೋಷಣೆಯಾಗಿದ್ದರೂ, ವಿದ್ಯಾರ್ಥಿಗಳಿಗೆ ಲಾಭವೇ ಜಾಸ್ತಿ
- ವರ್ಷಗಳಿಂದ ತೃತೀಯ ಭಾಷೆಯ ನೆಪದಲ್ಲಿ ಹಿಂದಿ ಹೇರಿಕೆಗೆ ವಿರೋಧವಿತ್ತು
- ದೇಶದ ಹಲವು ರಾಜ್ಯಗಳು ಈಗಾಗಲೇ ದ್ವಿಭಾಷಾ ನೀತಿ ಅಳವಡಿಸಿಕೊಂಡಿವೆ

ವಿರೋಧಕ್ಕೆ ಕಾರಣವೇನು?

- ಪರೀಕ್ಷೆಗೆ ಬರೀ 3 ದಿನಗಳಿರುವಾಗ ಈ ತುರ್ತು ಘೋಷಣೆಯ ಅಗತ್ಯವೇನಿತ್ತು?
- ಮುಂದಿನ ಶೈಕ್ಷಣಿಕ ವರ್ಷದಿಂದಲೂ ಈ ಕ್ರಮ ಜಾರಿಗೊಳಿಸಲು ಅವಕಾಶವಿತ್ತು
- ಕನ್ನಡವನ್ನೂ ತೃತೀಯ ಭಾಷೆಯಾಗಿ ತೆಗೆದುಕೊಂಡವರು ಏನು ಮಾಡಬೇಕು?
- ಸಚಿವ ಸಂಪುಟದಲ್ಲಿ ಚರ್ಚಿಸದೇ, ವರದಿಯಿಲ್ಲದೇ ತೀರ್ಮಾನಿಸಿದ್ದು ಸರಿಯಲ್ಲ

ಹಿಂದಿ ಮಾತ್ರವಲ್ಲ ತೃತೀಯ ಭಾಷೆ ಕನ್ನಡವೂ ಆಗಬಹುದು!

ತೃತೀಯ ಭಾಷೆಯ ಅಂಕ, ಅಂಕಪಟ್ಟಿಗೆ ಸೇರಲ್ಲ ಎನ್ನುವ ಶಿಕ್ಷಣ ಇಲಾಖೆಯ ತೀರ್ಮಾನವನ್ನು ಬಹುತೇಕ ಹಿಂದಿ ವಿರೋಧಿ ನಡೆ ಎನ್ನುವ ರೀತಿಯಲ್ಲಿ ಚರ್ಚಿಸಲಾಗುತ್ತಿದೆ. ಆದರೆ ಇದು ಕೇವಲ ಹಿಂದಿ ಭಾಷೆಗೆ ಮಾತ್ರ ಸೀಮಿತವಾಗಿಲ್ಲ ಎನ್ನುವುದು ವಾಸ್ತವ. ಕರ್ನಾಟಕದಲ್ಲಿ ಸದ್ಯ ಹಿಂದಿ (ಎನ್‌ಸಿಇಆರ್‌ಟಿ), ಕನ್ನಡ, ಇಂಗ್ಲಿಷ್, ಅರಬ್ಬಿ, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಮರಾಠಿ ಭಾಷೆಗಳನ್ನೂ ತೃತೀಯ ಭಾಷೆಯನ್ನಾಗಿ ತೆಗೆದುಕೊಳ್ಳಲು ಅವಕಾಶವಿದೆ. ಹೀಗಿರುವಾಗ, ಕೇವಲ ಹಿಂದಿಯನ್ನು ಮಾತ್ರ ಗ್ರೇಡಿಂಗ್ ವ್ಯವಸ್ಥೆಗೆ ಸೇರಿಸಿ ಕನ್ನಡವನ್ನು ಅಂಕಪಟ್ಟಿಯಲ್ಲಿ ಸೇರಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಬೆಂಗಳೂರಿನಂತಹ ನಗರಪ್ರದೇಶಗಳಲ್ಲಿ ಕನ್ನಡವನ್ನೇ ತೃತೀಯ ಭಾಷೆಯನ್ನಾಗಿ ಆಯ್ದುಕೊಳ್ಳಲು ಅವಕಾಶವಿದೆ. ಹಾಗಾದರೆ ವಿದ್ಯಾರ್ಥಿಗಳು ಕನ್ನಡವನ್ನು ಗಂಭೀರವಾಗಿ ಪರಿಗಣಿಸಲು ಹೇಗೆ ಸಾಧ್ಯ ಎನ್ನುವ ಬಹುಮುಖ್ಯ ಪ್ರಶ್ನೆ ಎದುರಾಗಿದೆ.

ಸರಕಾರದ ಯಾವುದೇ ತೀರ್ಮಾನಕ್ಕೆ ಬೆಂಬಲ-ವಿರೋಧ ವ್ಯಕ್ತವಾಗಬಹುದು. ಹಿಂದಿ ಭಾಷೆಯನ್ನು ಕಲಿಸುವುದರಲ್ಲಿ ರಾಜ್ಯ ಸರಕಾರದ ವಿರೋಧವಿಲ್ಲ. ಆದರೆ ಹಿಂದಿ ಪರೀಕ್ಷೆಯ ಅಂಕಗಳು ಅಂಕಪಟ್ಟಿಯಲ್ಲಿ ಕಡ್ಡಾಯವಾಗಬಾರದು ಎನ್ನುವುದು ಸರಕಾರದ ನಿಲುವಾಗಿದೆ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಮಯದಲ್ಲಿ ಏಕಾಏಕಿ ಹಿಂದಿ ಭಾಷೆ ಕೈಬಿಟ್ಟಿರುವುದು ಆಘಾತಕಾರಿ ಬೆಳವಣಿಗೆ. ಸರಕಾರದ ತೀರ್ಮಾನದಿಂದ ವಿದ್ಯಾರ್ಥಿ ಗಳಲ್ಲಿ ಭಾರೀ ಗೊಂದಲ ಮೂಡಿದೆ.
-ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಇರಾನ್ ಯುರೇನಿಯಂ ಸ್ಥಾವರಕ್ಕೆ ಹಾನಿ, ರಿಯಾಕ್ಟರ್‌ಗಳಿಗೂ ಹೊಡೆತ

ಇರಾನ್ ಅಣುಸ್ಥಾವರಕ್ಕೇ ಬಿತ್ತು ಇಸ್ರೇಲ್ ಕ್ಷಿಪಣಿ: ವಿಕಿರಣ ಭೀತಿ

ಇರಾನ್ ದಾಳಿಗೆ ಇಸ್ರೇಲ್‌ನಲ್ಲಿ ವ್ಯಕ್ತಿ ಸಾವು, ಟೆಲ್ ಅವಿವ್‌ನಲ್ಲಿ ಭಯ
ಸೌದಿ ಮೇಲಿನ ಕ್ಷಿಪಣಿ ದಾಳಿಯಲ್ಲಿ 10 ಅಮೆರಿಕ ಯೋಧರಿಗೆ ಗಾಯ
ಅಬುಧಾಬಿ: ಇರಾನ್ ಕ್ಷಿಪಣಿ ಚೂರುಗಳಿಂದ 5 ಭಾರತೀಯರಿಗೆ ಏಟು

ದೆಹಲಿ: ಇರಾನ್ ಮೇಲಿನ ಅಮೆರಿಕ-ಇಸ್ರೇಲ್ ಜಂಟಿ ಯುದ್ಧ 29ನೇ ದಿನಕ್ಕೆ ಕಾಲಿಟ್ಟಿದೆ. ಒಂದು ಕಡೆ ಅಮೆರಿಕ ತೈಲ-ವಿದ್ಯುತ್ ಸ್ಥಾವರಗಳ ಮೇಲೆ ದಾಳಿಯನ್ನು ಏ.6ರವರೆಗೆ ಮುಂದೂಡಿದ್ದರೂ, ಇಸ್ರೇಲ್ ತೀವ್ರ ದಾಳಿಯನ್ನು ಮುಂದುವರಿಸಿದೆ. ಇದಕ್ಕೆ ಬಗ್ಗದೇ ಇರಾನ್ ಕೂಡ ಪ್ರತಿದಾಳಿ ನಡೆಸುತ್ತಿದೆ. ಇಸ್ರೇಲ್ ಸೇನಾಪಡೆಗಳು ಮತ್ತೆ ಇರಾನ್‌ನ ಅಣುಸ್ಥಾವರವೊಂದರ ಮೇಲೆ ಬಲವಾದ ಕ್ಷಿಪಣಿ ದಾಳಿ ನಡೆಸಿವೆ. ಸ್ವತಃ ಇರಾನ್ ಈ ಬೆಳವಣಿಗೆಯಿಂದ ಆತಂಕಗೊಂಡಿದೆ ಎಂದು ಹೇಳಲಾಗಿದೆ.

ಶುಕ್ರವಾರವಷ್ಟೇ ಇರಾನ್ ಮೇಲಿನ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸುವುದಾಗಿ ಹೇಳಿದ್ದ ಇಸ್ರೇಲ್, ಅದರ ಬೆನ್ನಲ್ಲೇ ಇರಾನ್‌ನ ಯಾಜ್ದ್ ನಗರದ ಯುರೇನಿಯಂ ಸ್ಥಾವರಕ್ಕೆ ಗುರಿಯಿಟ್ಟು ಹೊಡೆದಿದೆ. ಇದನ್ನು ಇರಾನಿನ ಅಧಿಕೃತ ಸಂಸ್ಥೆ ಐಆರ್‌ಎನ್‌ಎ ಖಚಿತಪಡಿಸಿದೆ. ಜೀವಹಾನಿಯಾಗಿಲ್ಲ, ವಿಕಿರಣ ಸೋರಿಕೆಯ ಭೀತಿಯಿಲ್ಲ ಎಂದು ಇಸ್ರೇಲ್ ಹೇಳಿಕೊಂಡಿದ್ದರೂ, ಸೋರಿಕೆಯ ಭೀತಿ ಎದುರಾಗಿದೆ. ಯಾಜ್ದ್‌ನಲ್ಲಿ ಯುರೇನಿಯಂ ಅದಿರನ್ನು ಸಂಸ್ಕರಿಸಿ, ಸಂಗ್ರಹಿಸಲಾಗಿತ್ತು. ಹಾಗೆಯೇ ಅಣುಸ್ಥಾವರಗಳಲ್ಲಿ ಬಳಸುವ ಗಡಸುವ ಜಲ ಸ್ಥಾವರಗಳು ಹಾನಿಗೊಳಗಾಗಿವೆ. ಯುರೇನಿಯಂನಿಂದ ಅಣ್ವಸ್ತ್ರ ತಯಾರಿಸಲಾಗುತ್ತದೆ. ಇದೇ ವೇಳೆ ಬುಶೆರ್ ಅಣು ವಿದ್ಯುತ್ ಕೇಂದ್ರಕ್ಕೂ ಕ್ಷಿಪಣಿಗಳು ಅಪ್ಪಳಿಸಿವೆ. ಇರಾನಿನ ಇನ್ನೂ ಹಲವು ಕಡೆ ತೀವ್ರ ದಾಳಿಗಳಾಗಿವೆ. → 4

ಮೊದಲ ಬಾರಿ ಯುದ್ಧಕ್ಕೆ ಯೆಮೆನ್ ಉಗ್ರರ ಪ್ರವೇಶ

ಇದೇ ಮೊದಲ ಬಾರಿ ಯೆಮೆನ್ ಕೂಡ ಯುದ್ಧರಂಗ ಪ್ರವೇಶಿಸಿದೆ. ಹೌತಿ ಉಗ್ರರು ಯೆಮೆನ್‌ನಿಂದ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದಾರೆ. ಈ ದಾಳಿಯನ್ನು ಇಸ್ರೇಲ್ ಖಚಿತಪಡಿಸಿದೆ. ಯೆಮೆನ್ ಕ್ಷಿಪಣಿಯನ್ನ ನಾಶಪಡಿಸಿದ್ದೇವೆ. ನಮ್ಮ ಕಡೆ ಯಾವುದೇ ಯಾವುದೇ ಸಾವುನೋವು ಆಗಿಲ್ಲ ಎಂದು ಇರಾನ್ ಸೇನೆ ಹೇಳಿದೆ. ಇರಾನ್ ಬೆಂಬಲಿಸಿ ಇತ್ತೀಚೆಗೆ ಯೆಮೆನ್‌ನಲ್ಲಿರುವ ಹೌತಿ ಬಂಡುಕೋರ ಸಂಘಟನೆ ಇಸ್ರೇಲ್ ಹಾಗೂ ಅಮೆರಿಕಕ್ಕೆ ಎಚ್ಚರಿಕೆ ನೀಡಿತ್ತು. ಇಸ್ರೇಲ್ ಬೆಂಬಲಿಸಿದರೆ ಜಾಗ್ರತೆ ಎಂದು ಹೇಳಿತ್ತು.

ಕಾಶ್ಮೀರಿಗಳಿಂದ ದಾನ, ಭಾರತಕ್ಕೆ ಧನ್ಯವಾದ ಹೇಳಿದ ಇರಾನ್!

ಇಸ್ರೇಲ್‌ನತ್ತ ಕ್ಷಿಪಣಿಗಳ ಹಾರಿಸಿದ ಇರಾನ್, ಆ ಕ್ಷಿಪಣಿಗಳಲ್ಲಿ ಭಾರತ, ಜರ್ಮನಿ, ಸ್ಪೇನ್, ಪಾಕಿಸ್ತಾನಕ್ಕೆ ಕೃತಜ್ಞತೆಗಳು ಎಂದು ಬರೆದಿದೆ. ಇಸ್ರೇಲ್ ಮೇಲೆ ಇರಾನ್ 83ನೇ ಸುತ್ತಿನ ಕ್ಷಿಪಣಿ ದಾಳಿ ನಡೆಸಿದ್ದು, ಇದಕ್ಕೆ ಬಳಸಿದ ಕ್ಷಿಪಣಿಗಳ ಮೇಲೆ ಭಾರತದ ಜನರಿಗೆ ಧನ್ಯವಾದಗಳು



ಎಂದು ಬರೆಯಲಾಗಿದೆ. ಇಸ್ರೇಲ್ ಮೇಲಿನ ದಾಳಿ ಕುರಿತಂತೆ ಮುಂಬೈನಲ್ಲಿರುವ ಇರಾನ್‌ನ ದೂತಾವಾಸ ಮಾಹಿತಿ ಬಿಡುಗಡೆ ಮಾಡಿ, ಕ್ಷಿಪಣಿ ಮೇಲೆ ನೀಲಿ ಬಣ್ಣದಲ್ಲಿ ಧನ್ಯವಾದ ಎಂದು ಬರೆದಿರುವ ಚಿತ್ರಗಳನ್ನು ಹಂಚಿಕೊಂಡಿದೆ. ಮುಖ್ಯವಾಗಿ ಕಾಶ್ಮೀರಿ ಜನರು ಯುದ್ಧಪೀಡಿತ ಇರಾನ್‌ಗಾಗಿ ಭಾರೀ ಪ್ರಮಾಣದಲ್ಲಿ ದೇಣಿಗೆ ಸಂಗ್ರಹಿಸಿ ನೀಡಿದ್ದರು. ಇದಕ್ಕಾಗಿ ಇರಾನ್ ಧನ್ಯವಾದ ಸಲ್ಲಿಸಿದೆ.

ಟಿಕೆಟ್ ಬೇಡಿಕೆಗೆ ಬಿಜೆಪಿ ಅಧ್ಯಕ್ಷ ವಿಜಯೇಂದ್ರ, ಸುರೇಶ್ ಕುಮಾರ್ ಬೇಸರ

ಐಪಿಎಲ್ ಟಿಕೆಟ್: ಅಶೋಕ ಹಿಟ್‌ವಿಕೆಟ್

ಬೆಂಗಳೂರು: ಕ್ರಿಕೆಟ್ ಟಿಕೆಟ್ ಕೇಳಿ ಸಾರ್ವಜನಿಕವಾಗಿ ಟೀಕೆಗೆ ಒಳಗಾಗಿರುವ ಕೆಲ ಶಾಸಕರ ನಡವಳಿಕೆ ಒಂದಡೆ ಯಾದರೆ, ನಂಗೊಂದು, ನಮ್ ಮಕ್ಕಳಿಗೆರಡು ಟಿಕೆಟ್ ಇರಲಿ ಎಂಬಂತೆ ಮಾತನಾಡಿರುವ ಪ್ರತಿಪಕ್ಷದ ನಾಯಕ ಆರ್.ಅಶೋಕ ಬಗ್ಗೆ ಬಿಜೆಪಿಯಲ್ಲಿಯೇ ತೀವ್ರ ಅಪಸ್ವರ ಕೇಳಿ ಬಂದಿದೆ. ಬ್ಯಾಟ್ ಮಾಡುವ ಮೊದಲೇ ಸಾಮ್ರಾಟ ಅಶೋಕ ಹಿಟ್ ವಿಕೆಟ್ ಆದಂತಿದೆ. ಕ್ರಿಕೆಟ್ ಟಿಕೆಟ್ ವಿಚಾರ ವಾಗಿ ಸದನದಲ್ಲಿ ನಡೆದ ಚರ್ಚೆಯು ನಂತರ ಸಾರ್ವಜನಿಕ ವಾಗಿ ತೀವ್ರ ಟೀಕೆಗೆ ಗುರಿಯಾಗಿದೆ. ಶಾಸಕರು ತಮಗೆ ಐಪಿಎಲ್ ಟಿಕೆಟ್‌ಗಳನ್ನು ನೀಡಬೇಕು ಎಂಬುದಕ್ಕೆ ಸ್ಪೀಕರ್ ಕೂಡ ಸಮ್ಮತಿಸಿ, ನಂತರ ಡಿಸಿಎಂ ಮಾತುಕತೆ ನಡೆಸಿದ್ದರಿಂದ ಸ್ಪಂದಿ ಸಿರುವ ಕೆಎಸ್‌ಸಿಎ ಟಿಕೆಟ್ ನೀಡಲು ತಥಾಸ್ತು ಎಂದಿದೆ. → 4

ಕಳೆದ ವರ್ಷ ನಡೆದ ಜೆನ್ ಝೀ ಪ್ರತಿಭಟನೆ ಹತ್ತಿಕ್ಕದ ಆರೋಪ

ಬಲೇಂದ್ರ ಪ್ರಧಾನಿಯಾದ ಬೆನ್ನಲ್ಲೇ ನೇಪಾಳ ಮಾಜಿ ಪಿಎಂ ಓಲೀ ಸೆರೆ

ಕಠ್ಮಂಡು: ನೇಪಾಳದ ನೂತನ ಪ್ರಧಾನಿಯಾಗಿ ಬಲೇಂದ್ರ ಶಾ ಅಧಿಕಾರ ಸ್ವೀಕರಿಸಿದ ಮರುದಿನವೇ (ಶನಿವಾರ) ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲೀಯನ್ನು ಬಂಧಿಸಲಾಗಿದೆ. ಕಳೆದ ವರ್ಷ ದೇಶಾದ್ಯಂತ ನಡೆದಿದ್ದ ಜೆನ್ ಝೀ ಪ್ರತಿಭಟನೆಯನ್ನು ಕ್ರೂರವಾಗಿ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲೀ ಹಾಗೂ ಮಾಜಿ ಗೃಹ ಸಚಿವ ರಮೇಶ್ ಲೇಖಕ್ ಹತ್ತಿಕ್ಕಿದ್ದರು ಎಂಬ ಕಾರಣ ನೀಡಿ ಅವರನ್ನು ಬಂಧಿಸಲಾಗಿದೆ. ಗೌರಿಬಹಾದ್ದೂರ್ ಕರ್ಕಿ ನೇತೃತ್ವದ ತನಿಖಾ ಆಯೋಗವು ಭದ್ರಾ ಪ್ರದೇಶದಲ್ಲಿ ನಡೆದ ಜೆನ್ ಝೀ ಪ್ರತಿಭಟನೆಯನ್ನು ಹತ್ತಿಕ್ಕಿದ್ದಕ್ಕಾಗಿ ಓಲೀ ಮತ್ತು ಲೇಖಕ್ ಸೇರಿದಂತೆ ಇತರರನ್ನು ತಪ್ಪಿತಸ್ಥರೆಂದು ಘೋಷಿಸಿದೆ.

ಜೆನ್ ಝೀ ಪ್ರತಿಭಟನೆಯಲ್ಲಿ ಏನಾಗಿತ್ತು?

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನೇಪಾಳದಲ್ಲಿ ಸಾಮಾಜಿಕ ಜಾಲತಾಣ ನಿಷೇಧ ಕ್ರಮ ವಿರೋಧಿಸಿ ಜೆನ್ ಝೀಗಳು ಪ್ರತಿಭಟನೆ ನಡೆಸಿದ್ದರು. ಸಾಮಾಜಿಕ ಜಾಲತಾಣ ನಿಷೇಧ ವಾಪಸ್ ಪಡೆದರೂ ಹೋರಾಟ ತೀವ್ರಗೊಂಡಿತು. ಬಳಿಕ ಪ್ರಧಾನಿ ಕೆ.ಪಿ.ಶರ್ಮಾ ಓಲೀ ರಾಜೀನಾಮೆ ನೀಡಿದ್ದರು.

ಹುಸಿಬಾಂಬ್ ಸಂದೇಶ: ದೆಹಲಿ ಪೊಲೀಸರಿಂದ ಮೈಸೂರು ವ್ಯಕ್ತಿ ಸೆರೆ

ಮೈಸೂರು: ಹುಸಿಬಾಂಬ್ ಸಂದೇಶಗಳನ್ನು ಕಳುಹಿಸಿ ಆತಂಕ ಸೃಷ್ಟಿಸುತ್ತಿದ್ದ ವ್ಯಕ್ತಿಯನ್ನು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ದೆಹಲಿ ಪೊಲೀಸರು ಬಂಧಿಸಿದ್ದಾರೆ. ಶ್ರೀನಿವಾಸ್ ಬಂಧಿತ ಆರೋಪಿ. ಈತ ಮೈಸೂರಿನ ಪ್ರತಿಷ್ಠಿತ ಬೃಂದಾವನ ಬಡಾವಣೆ ಎರಡನೇ ಹಂತ 6ನೇ ಕ್ರಾಸ್‌ನ ಮನೆಯೊಂದರಿಂದ ಕಾರ್ಯಾಚರಣೆ ನಡೆಸುತ್ತಿದ್ದ ಎನ್ನಲಾಗಿದೆ. ಈ ನಡುವೆ ಇತ್ತೀಚೆಗೆ ಸರ್ಕಾರಿ ಕಚೇರಿಗಳು, ಶಾಲಾ ಕಟ್ಟಡಗಳು ಹಾಗೂ ನ್ಯಾಯಾಲಯಗಳಿಗೆ ಬಾಂಬ್ ಸ್ಫೋಟವಾಗುವ ಬೆದರಿಕೆ ಸಂದೇಶ ಬಂದು ಆತಂಕ ಸೃಷ್ಟಿಯಾಗಿತ್ತು. ಒಂದೇ ತಿಂಗಳಿನಲ್ಲಿ ಹಲವು ಬಾರಿ ಮೇಲ್ ಮೂಲಕ ಸಂದೇಶ ರವಾನೆ ಆಗಿದೆ. ದೆಹಲಿ ಪೊಲೀಸ್ ಕಾರ್ಯಾಚರಣೆಗೆ ವಿವಿ ಪುರಂ ಪೊಲೀಸರು ನೆರವಾಗಿದ್ದಾರೆ.

ಸೊಂಪಾದ ಪುಟಗಳು

ಮಂಕಿ ಶೋಲ್ಡರ್ ಕುಡಿದಿದ್ದೀರಾ ಅಂತ ಕೇಳಿ, ನಂತರ ಏನೆಂದು ಹೇಳಿ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ಎಲೆಯಡಕೆಯ ಸುಸಂಸ್ಕೃತ ಸಸ್ಯಶಾಸ್ತ್ರೀಯ ಸಂಯೋಗ
ತಿಳಿರು ತೋರಣ
ಶ್ರೀವತ್ಸ ಜೋಶಿ 6

ದಾರಿದೀಪೋಕ್ತಿ

ಸಂತಸ ಮತ್ತು ನೆಮ್ಮದಿಯು ನಿಮ್ಮಲ್ಲಿ ಎಷ್ಟು ಆಸ್ತಿ ಇದೆ ಅಥವಾ ನೀವು ಯಾರು ಎಂಬುದನ್ನು ಆಧರಿಸಿರುವುದಿಲ್ಲ. ಇದು ನೀವು ಏನನ್ನು ಯೋಚಿಸುತ್ತಿದ್ದೀರಿ ಎಂಬುದನ್ನಷ್ಟೇ ಆಧರಿಸಿರುತ್ತದೆ. ಸಂತಸ ನಮ್ಮೊಳಗೇ ಅರಳಿಸಿಕೊಳ್ಳುವಂಥದ್ದು.

ವಕ್ರತುಂಡೋಕ್ತಿ

ಡೋರ್ ಬೆಲ್ ಸದ್ದು ಮೊಳಗಿದಾಗ, ಮನುಷ್ಯರೇ ಬರುತ್ತಾರೆ ಎಂದು ಭಾವಿಸಬೇಕಿಲ್ಲ. ಅದೃಷ್ಟವೂ ಬರಬಹುದು.

ಅಪಘಾತ: ತಿರುಪತಿಗೆ ಹೊರಟಿದ್ದ ಬೆಂಗಳೂರಿನ ಮೂವರು ದುರ್ಮರಣ

ಬೆಂಗಳೂರು: ನಗರದಿಂದ ತಿರುಪತಿ ವೆಂಕಟೇಶ್ವರ ಸ್ವಾಮಿ ದರ್ಶನಕ್ಕೆ ಹೊರಟಿದ್ದ ಬೆಂಗಳೂರಿನ ಒಂದೇ ಕುಟುಂಬದ ಮೂವರು ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಂಗಾರು ಪಾಳ್ಯಂ ಪಲಮಕುಲಪಲ್ಲಿ ಬಳಿ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಬೆಂಗಳೂರು ಮೂಲದ ದಂಪತಿ ಹಾಗೂ 4 ವರ್ಷದ ಹೆಣ್ಣು ಮಗು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

153 ಪೊಲೀಸರಿಗೆ ಮುಖ್ಯಮಂತ್ರಿ ಪದಕ

ಬೆಂಗಳೂರು: ಪೊಲೀಸ್‌ಇಲಾಖೆಯಲ್ಲಿ ಅಸಾಧಾರಣ ಸೇವೆ, ದಕ್ಷತೆ ತೋರಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ 2025ನೇ ಸಾಲಿನ ಮುಖ್ಯಮಂತ್ರಿ ಪದಕ ಪ್ರಕಟವಾಗಿದೆ. ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ತನಿಖೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸುಮನ್ ಡಿ. ಪನ್ನೇಕರ್‌ಗೂ ಪದಕ ಸಿಕ್ಕಿದೆ.

ಬಿಬಿಎಂಪಿ ಬಜೆಟ್ 2026-27

5 ಬಜೆಟ್ ಮಂಡನೆ

ಬೆಂಗಳೂರು: ಬಿಬಿಎಂಪಿ ವಿಭಜಿಸಿ ಬೃಹತ್ ಬೆಂಗಳೂರು ರಚಿಸಿ, ಪಂಚ ನಗರ ಪಾಲಿಕೆ ಮಾಡಿದ ಬಳಿಕ ಮೊದಲ ಬಜೆಟನ್ನು ಶುಕ್ರವಾರ, ಶನಿವಾರ ಐದೂ ನಗರ ಪಾಲಿಕೆಗಳು ಮಂಡಿಸಿವೆ. ಎರಡು ದಿನಗಳ ಕಾಲ ಮಂಡನೆಯಾದ ಬಜೆಟ್‌ನಲ್ಲಿ, ಪಂಚ ಪಾಲಿಕೆಗಳಿಂದ ಒಟ್ಟು 17 ಸಾವಿರ ಕೋಟಿ ರು. ಮೌಲ್ಯದ ಬಜೆಟ್ ಮಂಡನೆಯಾಗಿದೆ.

ಬಿಜೆಪಿ ನಾಯಕರ ಸವಾಲು ಸ್ವೀಕಾರ: ದಾವಣಗೆರೆಯಲ್ಲಿ ಕಮಲ ಕಚೇರಿಯೆದುರೇ ಪ್ರಚಾರ
ಅಹಿಂದ ಮತಗಳನ್ನು ಕ್ರೋಢೀಕರಿಸುವ ಹೊಣೆ ಹೊತ್ತು ಮೆರವಣಿಗೆ ನಡೆಸಿದ ಚಿಕ್ಕಬಳ್ಳಾಪುರ ಶಾಸಕ

ಬಿಜೆಪಿ ಕಚೇರಿಯೆದುರೇ ಪ್ರದೀಪ್ ಈಶ್ವರ್ ಅಬ್ಬರ

ವಿಶ್ವವಾಣಿ ಸುದ್ದಿಮನೆ ದಾವಣಗೆರೆ

ಪ್ರತಿಷ್ಠೆಯ ಕಣವಾಗಿರುವ ದಾವಣಗೆರೆ ದಕ್ಷಿಣದಲ್ಲಿ ಪ್ರಚಾರದ ಕಾವಿಗೆ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಕಿಡಿ ಹೊತ್ತಿಸಿದ್ದು, ತಮ್ಮ ಮೊದಲ ದಿನದ ಪ್ರಚಾರದಲ್ಲಿಯೇ ಬಲಪ್ರದರ್ಶನ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ದಾವಣಗೆರೆ ಜಿಲ್ಲಾ ಬಿಜೆಪಿ ಕಚೇರಿ ಎದುರೇ ತೆರಳಿದ ಪ್ರದೀಪ್, ಅಲ್ಲೇ ಬಿಜೆಪಿ ನಾಯಕರಿಗೆ ಪಂಥಾಹ್ವಾನ ನೀಡಿದ್ದಾರೆ. ಇದು ಕಾಂಗ್ರೆಸ್-ಬಿಜೆಪಿ ಕಾರ್ಯಕರ್ತರು, ನಾಯಕರ ನಡುವೆ ವಾಕ್ಸಮರ ನಡೆದು ಹೈಡ್ರಾಮಾಕ್ಕೆ ಕಾರಣವಾಗಿದೆ.

ಪ್ರಚಾರದ ವೇಳೆ ಮಾತನಾಡಿದ ಪ್ರದೀಪ್ ಈಶ್ವರ್, ಈಗ ಕಾಂಗ್ರೆಸ್‌ನಲ್ಲಿ ಹೊಸ ಪೀಳಿಗೆ ಬಂದಿದೆ. ತೊಡೆ ತಟ್ಟುವಾಗ ತೊಡೆ ಗಟ್ಟಿಯಿದೆಯಾ ಎಂಬ ಎಚ್ಚರಿಕೆ ಇರಬೇಕು. ಬಿಜೆಪಿಯವರು ದಾವಣಗೆರೆಗೆ ಬಾ ಎಂದು ಸವಾಲು ಹಾಕಿದ್ದರು. ಬಿಜೆಪಿ ಪಕ್ಷದ ಕಚೇರಿ ಬಳಿಯೇ ಬಂದಿದ್ದೇನೆ. ಅವರಿಂದ ಏನೂ ಮಾಡಲು ಸಾಧ್ಯವಾಗಲಿಲ್ಲ? ಎಂದು ವ್ಯಂಗ್ಯವಾಡಿದರು. ಅಹಿಂದ ಸಮುದಾಯದ ನನಗೆ ಬಿಜೆಪಿಯವರು ಚಪ್ಪಲಿ, ಪೊರಕೆ ತೋರಿಸಿದ್ದಾರೆ. ಇದೇ ಬಿಜೆಪಿಯ ಸಂಪ್ರದಾಯ. 10 ವರ್ಷದಿಂದ ಬಿಜೆಪಿ ಶಾಸಕರು ಸಚಿವರು, ಸಂಸದರು ಮುಸ್ಲಿಂ ಮಹಿಳೆಯರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ. → 4

ಏನಿದು ಏಟು, ಎದಿರೇಟು?

ಪ್ರದೀಪ್ ತಮ್ಮ ಪ್ರಚಾರವನ್ನು ಬಿಜೆಪಿ ಕಚೇರಿ ಮುಂಭಾಗದಿಂದಲೇ ಆರಂಭಿಸಲು ಮುಂದಾಗಿದ್ದು ದಾವಣಗೆರೆಯಲ್ಲಿ ತೀವ್ರ ಹೈಡ್ರಾಮಾಕ್ಕೆ ಕಾರಣವಾಯಿತು. ಪ್ರದೀಪ್ ಮೆರವಣಿಗೆ ವೇಳೆ ಬಿಜೆಪಿ ಕಾರ್ಯಕರ್ತರು ಚಪ್ಪಲಿ ಹಾಗೂ ಪೊರಕೆ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು. ಇದು ಕೆಲ ಕಾಲ ಬಿಜೆಪಿ-ಕಾಂಗ್ರೆಸ್ ಕಾರ್ಯಕರ್ತರ ನಡುವೆ ಪರಸ್ಪರ ಕೆಸರೆರಚಾಟಕ್ಕೆ ಕಾರಣವಾಯಿತು. ಕೆಲ ದಿನಗಳ ಹಿಂದೆ ನಾಮಪತ್ರ ಸಲ್ಲಿಕೆ ವೇಳೆ ದಾವಣಗೆರೆಗೆ ಆಗಮಿಸಿದ್ದ ಪ್ರದೀಪ್ ಈಶ್ವರ್, ಬಿಜೆಪಿ ಮುಖಂಡರ ವಿರುದ್ಧ ತೀಕ್ಷ್ಣ ವಾಗ್ದಾಳಿ ನಡೆಸಿದ್ದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಮುಖಂಡ ಅಜಯಕುಮಾರ್, ದಾವಣಗೆರೆಗೆ ಬಂದರೆ ತಕ್ಕ ಪಾಠ ಕಲಿಸುವುದಾಗಿ ಎಚ್ಚರಿಕೆ ನೀಡಿದ್ದರು. ಈ ಸವಾಲನ್ನು ಸ್ವೀಕರಿಸಿದ್ದ ಶಾಸಕರು, ಬಿಜೆಪಿ ಕಚೇರಿ ಮುಂದೆಯೇ ಪ್ರಚಾರ ನಡೆಸುವುದಾಗಿ ಹೇಳಿದ್ದರು. ಅದರಂತೆ ಶನಿವಾರ ನಗರಕ್ಕೆ ಆಗಮಿಸಿದ ಪ್ರದೀಪ್, ಪಿ.ಬಿ.ರಸ್ತೆಯಲ್ಲಿ ತೆರೆದ ವಾಹನದ ಮೇಲೆ ನಿಂತು ಕಾಂಗ್ರೆಸ್ ಧ್ವಜ ಪ್ರದರ್ಶನ ಮಾಡಿದರು. ಈ ವೇಳೆ ಅಜಯಕುಮಾರ್ ನೇತೃತ್ವದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯರ್ತರು, ಶಾಸಕರ ವಿರುದ್ಧ ಘೋಷಣೆ ಕೂಗಿದರು.

ಸಮಾಚಾರ ಸಣ್ಣದಲ್ಲ

ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರ ಸಾವು

ಬೆಂಗಳೂರು: ಈಜಲು ತೆರಳಿದ್ದ ವೇಳೆ ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಯುವಕರು ಮೃತಪಟ್ಟಿರುವ ಘಟನೆ ನೆಲಮಂಗಲದ ಭೂಸಂದ್ರ ಗ್ರಾಮದಲ್ಲಿ ನಡೆದಿದೆ. ಸುರೇಶ್ (21), ನರಸೇಗೌಡ (22) ಮೃತ ಯುವಕರು. ನಾಲ್ಕು ಮಂದಿ ಯುವಕರು ಈಜಲು ತೆರಳಿದ್ದರು. ಈ ವೇಳೆ ಕೃಷಿ ಹೊಂಡದಲ್ಲಿ ಸಿಲುಕಿ ಇಬ್ಬರು ಮೃತಪಟ್ಟಿದ್ದು, ಮತ್ತಿಬ್ಬರನ್ನು ರಕ್ಷಿಸಲಾಗಿದೆ. ಮೃತದೇಹಗಳನ್ನು ನೆಲಮಂಗಲ ಶವಾಗಾರಕ್ಕೆ ರವಾನಿಸಲಾಯಿತು. ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

59 ಶಾಲಾ ವಾಹನ ಚಾಲಕರ ವಿರುದ್ಧ ಕೇಸ್

ಬೆಂಗಳೂರು: ಮದ್ಯದ ಅಮಲಿನಲ್ಲಿ ವಾಹನ ಚಲಾಯಿಸುತ್ತಿದ್ದ 59 ಶಾಲಾ ವ್ಯಾನ್ ಚಾಲಕರು ಮತ್ತು 14 ನೀರಿನ ಟ್ಯಾಂಕರ್ ಚಾಲಕರ ವಿರುದ್ಧ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಶಾಲಾ ಮಕ್ಕಳನ್ನು ಸಾಗಿಸುವ ವ್ಯಾನ್ ಚಾಲಕರು ಮದ್ಯ ಸೇವಿಸಿ ವಾಹನ ಚಲಾಯಿಸಿರುವುದು ಪೋಷಕರು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕ ವಲಯದಲ್ಲಿ ತೀವ್ರ ಕಳವಳಕ್ಕೆ ಕಾರಣವಾಗಿದೆ. ಇಂತಹ ಚಾಲಕರ ನಿರ್ಲಕ್ಷ್ಯ ಮಕ್ಕಳ ಜೀವಕ್ಕೆ ನೇರ ಅಪಾಯ ಉಂಟುಮಾಡಬಹುದು ಎಂಬ ಆತಂಕ ಸೃಷ್ಟಿಯಾಗಿದೆ. ಇದೇ ವೇಳೆ, ಕುಡಿಯುವ ನೀರಿನ ಸರಬರಾಜು ಸೇರಿದಂತೆ ಅತ್ಯವಶ್ಯಕ ಸೇವೆಗಳಿಗೆ ಸಂಬಂಧಿಸಿದ ನೀರಿನ ಟ್ಯಾಂಕರ್ ಚಾಲಕರೂ ಅಮಲಿನಲ್ಲಿ ವಾಹನ ಚಲಾಯಿಸುತ್ತಿರುವುದು ಕಂಡು ಬಂದಿದೆ. ಟ್ರಾಫಿಕ್ ಪೊಲೀಸರ ಪ್ರಕಾರ, ಬಂಧಿತ ಚಾಲಕರ ವಿರುದ್ಧ ಭಾರತೀಯ ಮೋಟಾರು ವಾಹನ ಕಾಯಿದೆಯಡಿ ಕಾನೂನು ಕ್ರಮ ಜರುಗಿಸಲಾಗಿದ್ದು, ಪ್ರಕರಣ ದಾಖಲಿಸುವುದರ ಜೊತೆಗೆ ಚಾಲನಾ ಪರವಾನಗಿ ಅಮಾನತು ಮಾಡಲಾಗುತ್ತದೆ. ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ವಿರುದ್ಧ ಕಠಿಣ ನಿಲುವು ಮುಂದುವರಿಸಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ಇದೇ ವರ್ಷ ಜನವರಿಯಲ್ಲಿಯೂ ಬೆಂಗಳೂರಿನಲ್ಲಿ ನಡೆದ ಇಂತಹವೇ ವಿಶೇಷ ಕಾರ್ಯಾಚರಣೆಯಲ್ಲಿ 26 ಶಾಲಾ ಬಸ್ ಚಾಲಕರು ಸಿಕ್ಕಿಬಿದ್ದಿದ್ದರು ಎಂಬ ಮಾಹಿತಿ ಗಮನಾರ್ಹ. ಬೆಂಗಳೂರಿನಲ್ಲಿ ದೀರ್ಘಕಾಲದಿಂದಲೂ ಮದ್ಯಪಾನ ಮಾಡಿ ವಾಹನ ಚಲಾಯಿಸುವ ಪ್ರಕರಣಗಳು ಟ್ರಾಫಿಕ್ ಪೊಲೀಸರಿಗೆ ದೊಡ್ಡ ಸವಾಲಾಗಿದೆ.

ವಿರಾಮ
ಪ್ರತಿ ಭಾನುವಾರ

ಐಪಿಎಲ್ ಪಂದ್ಯ ವೀಕ್ಷಣೆಗೆ ಜನಸಾಗರ | ದಟ್ಟಣೆ ನಿಯಂತ್ರಿಸಲು ಪೊಲೀಸರ ಪರದಾಟ

ನಗರದೆಲ್ಲೆಡೆ ವಿಪರೀತ ಸಂಚಾರ ದಟ್ಟಣೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಟಿ-20 ಕ್ರಿಕೆಟ್ ಪಂದ್ಯದಿಂದಾಗಿ ಶನಿವಾರ ವಿಪರೀತ ಸಂಚಾರ ದಟ್ಟಣೆ ಉಂಟಾಯಿತು.

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಸನ್‌ರೈಸರ್ ಹೈದರಾಬಾದ್ ತಂಡಗಳ ನಡುವೆ ಪಂದ್ಯ ನಡೆಯಿತು. ಪಂದ್ಯ ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಜನರು ಕ್ರೀಡಾಂಗಣದತ್ತ ಬಂದಿದ್ದರು. ಮೆಟ್ರೊ, ಬಸ್ ಹಾಗೂ ಸ್ವಂತ ವಾಹನಗಳ ಮೂಲಕ ಜನರು ಕ್ರೀಡಾಂಗಣಕ್ಕೆ ಬಂದಿದ್ದರು. ಕ್ರೀಡಾಂಗಣದೊಳಗೆ ಹೋಗುವಾಗ ಜನರ ಸಂಚಾರಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಸಾರ್ವಜನಿಕರ ವಾಹನಗಳನ್ನು ತಡೆದು ನಿಲ್ಲಿಸಲಾಗಿತ್ತು.

ಕ್ವೀನ್ಸ್ ರಸ್ತೆ, ಕಬ್ಬನ್ ರಸ್ತೆ, ಎಂ.ಜಿ. ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರಬಾ ರಸ್ತೆ, ವಿಧಾನಸೌಧ-ಹೈಕೋರ್ಟ್ ಎದುರಿನ ರಸ್ತೆ, ಟ್ರಿನಿಟಿ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠ್ಠಲ್ ಮಲ್ಯ ರಸ್ತೆ, ನೃಪತುಂಗ ರಸ್ತೆ ಹಾಗೂ ಸುತ್ತಮುತ್ತ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಈ ರಸ್ತೆಯಲ್ಲಿ ಶನಿವಾರ ಮಧ್ಯಾಹ್ನ 12 ಗಂಟೆಯಿಂದಲೇ ದಟ್ಟಣೆ ಶುರುವಾಗಿತ್ತು. ವಾಹನಗಳು ನಿಧಾನಗತಿಯಲ್ಲಿ ಸಾಗಿದವು. ಪಂದ್ಯ ಆರಂಭಕ್ಕೂ ಮುನ್ನ ಕ್ರೀಡಾಂಗಣ ಸುತ್ತಮುತ್ತ ಜನರು ಗುಂಪು ಗುಂಪಾಗಿ ಓಡಾಡಿದರು. ಈ ವೇಳೆ ವಾಹನಗಳು ನಿಂತಲ್ಲೇ ನಿಲ್ಲಬೇಕಾಯಿತು. ರಾತ್ರಿಯೂ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ದಟ್ಟಣೆ ನಿಯಂತ್ರಿಸಲು ಪೊಲೀಸರು ಪರದಾಡಿದರು. ಕ್ರೀಡಾಂಗಣ ಬಳಿ ದಟ್ಟಣೆ ಉಂಟಾಗುವ ಮುನ್ಸೂಚನೆ ಅರಿತಿದ್ದ ಪೊಲೀಸರು, ವಾಹನ ನಿಲುಗಡೆ ನಿರ್ಬಂಧಿಸಿದ್ದರು. ಅಷ್ಟಾದರೂ ಹಲವರು ರಸ್ತೆಯಲ್ಲಿ ವಾಹನ ನಿಲ್ಲಿಸಿ, ಕ್ರೀಡಾಂಗಣದೊಳಗೆ ಹೋಗಿದ್ದರು. ಇಂಥ ವಾಹನಗಳಿಂದಲೂ ದಟ್ಟಣೆ ಉಂಟಾಯಿತು.

ವಾಹನ ಸವಾರರ ಪರದಾಟ

ನಗರದಲ್ಲಿ ಹಲವೆಡೆ ರಸ್ತೆ ಕಾಮಗಾರಿಗಳು ಹಾಗೂ ದುರಸ್ತಿ ಕಾರ್ಯ ನಡೆಯುತ್ತಿರುವುದರಿಂದ ಪ್ರಮುಖ ರಸ್ತೆಗಳಲ್ಲಿ ಸಂಚಾರ ಮಾಡಲು ವಾಹನ ಸವಾರರು ಪರದಾಡುವಂತಾಯಿತು. ಅಲ್ಲದೆ ವಾರಾಂತ್ಯ ಇದ್ದಿದ್ದರಿಂದ ಜನ ಸುತ್ತಾಟದಿಂದಾಗಿ ವಾಹನಗಳ ಸಂಚಾರ ಹೆಚ್ಚಾಗಿ ಕಂಡು ಬಂತು. ರಾತ್ರಿ 2 ಗಂಟೆಯವರೆಗೂ ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಕಂಡು ಬಂತು.

ಮೆಟ್ರೊದಲ್ಲಿ ಜನಸಂದಣಿ: ಪಂದ್ಯ ವೀಕ್ಷಿಸುವುದಕ್ಕಾಗಿ ಹೆಚ್ಚಿನ ಸಂಖ್ಯೆಯ ಜನ, ಶನಿವಾರ ಮೆಟ್ರೊದಲ್ಲಿ ಕಬ್ಬನ್ ಪಾರ್ಕ್ ಹಾಗೂ ವಿಧಾನಸೌಧ ನಿಲ್ದಾಣಕ್ಕೆ ಬಂದಿಳಿದರು. ಅಲ್ಲಿಂದಲೇ ನಡೆದುಕೊಂಡು ಕ್ರೀಡಾಂಗಣಕ್ಕೆ ತೆರಳಿದರು. ರಾತ್ರಿ ಸಹ ತಮ್ಮ ಸ್ಥಳಗಳಿಗೆ ಮೆಟ್ರೊದಲ್ಲಿ ತೆರಳಿದರು.

ಪ್ರತಿಭಟನೆಗಳ ಬಿಸಿ

ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ನಗರದಲ್ಲಿ ಬುಧವಾರ ಸರಣಿ ಪ್ರತಿಭಟನೆಗಳು ನಡೆದ ಪರಿಣಾಮ ಸಂಚಾರ ಅಸ್ತವ್ಯಸ್ತವಾಯಿತು. ಇದರಿಂದಾಗಿ ವಾಹನ ಸವಾರರು ಪರದಾಡಿದರು. ಶಾಂತಲಾ ಜಂಕ್ಷನ್. ಆನಂದ್‌ರಾವ್ ವೃತ್ತದ ಮೇಲ್ಸೇತುವೆ. ಶೇಷಾದ್ರಿ ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಚಾಲುಕ್ಯ ವೃತ್ತ. ಕೆ.ಜಿ.ರಸ್ತೆ. ಸಾಗರ್ ಜಂಕ್ಷನ್, ರಾಜೀವ್‌ಗಾಂಧಿ ವೃತ್ತ, ನೆಹರೂ ವೃತ್ತದಲ್ಲಿ ದಟ್ಟಣೆ ಉಂಟಾಗಿ ವಾಹನ ಚಾಲನರು ಪರದಾಡಿದರು.

ಇದರಿಂದಾಗಿ ನಿಲ್ದಾಣಗಳಲ್ಲಿ ಜನಸಂದಣಿ ಹೆಚ್ಚಿತ್ತು. ರಾತ್ರಿ 2 ಗಂಟೆಯವರೆಗೂ ಮೆಟ್ರೋ ವ್ಯವಸ್ಥೆ ಕಲ್ಪಿಸಿದ್ದರಿಂದ ಪ್ರಯಾಣಿಕರಿಗೆ ಅನುಕೂಲವಾಯಿತು.

4 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ, ಕೊಲೆ

ಬೆಂಗಳೂರು: 4 ವರ್ಷದ ಕಂದಮ್ಮನ ಮೇಲೆ ದುರುಳರು ಅತ್ಯಾಚಾರವೆಸಗಿ ಕೊಲೆ ಮಾಡಿರುವ ಘಟನೆ ಬೆಂಗಳೂರು ಹೊರವಲಯದ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣಾ ವ್ಯಾಪ್ತಿಯ ವಿಟ್ಟಸಂದ್ರ ಬಳಿಯ ಬೋಳುಗುಟ್ಟದ ಬಳಿ ನಡೆದಿದೆ.

ಅಸ್ಸಾಂ ಮೂಲದ ನಾಲ್ಕು ವರ್ಷದ ಬಾಲಕಿ, ವಿಟ್ಟಸಂದ್ರ ಸಮೀಪದ ಶೆಡ್‌ನಲ್ಲಿ ಪೋಷಕರ ಜತೆ ವಾಸವಿದ್ದಳು. ಪೋಷಕರು ಚಿಂದಿ ಆಯುವ ಕೆಲಸ ಮಾಡುತ್ತಿದ್ದು, ಗುರುವಾರ ಎಂದಿನಂತೆ ಬಾಲಕಿಯನ್ನು ಮನೆಯಲ್ಲೇ ಬಿಟ್ಟು ಕೆಲಸಕ್ಕೆ ಹೋಗಿದ್ದರು. ಸಂಜೆ ಬಂದು ನೋಡಿದಾಗ ಬಾಲಕಿ ಕಾಣೆಯಾಗಿದ್ದಳು. ಬಾಲಕಿ ಕಾಣೆಯಾಗುತ್ತಿದ್ದಂತೆ ಪೋಷಕರು ಸುತ್ತಮುತ್ತ ಹುಡುಕಾಡಿದರೂ ಪತ್ತೆಯಾಗಲಿಲ್ಲ. ಬಳಿಕ ಶುಕ್ರವಾರ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲು ಮಾಡಲಾಗಿತ್ತು. ಪೊಲೀಸರು ಹುಡುಕಾಟ ನಡೆಸುತ್ತಿದ್ದ ವೇಳೆ, ಬೋಳುಗುಟ್ಟದ ನಿರ್ಜನ ನೀಲಗಿರಿ ತೋಪಿನಲ್ಲಿ ಬಾಲಕಿಯ ಶವ ಪತ್ತೆಯಾಗಿದೆ.

ಬಾಲಕಿಯ ಶವ ನಗ್ನ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಅತ್ಯಾಚಾರವೆಸಗಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಮಗುವನ್ನು ಅಪಹರಿಸಿ ಅತ್ಯಾಚಾರವೆಸಗಿರುವ ಕಿರಾತಕರು, ತಮ್ಮ ಆಸೆ ತೀರಿಸಿಕೊಂಡ ನಂತರ ಮಗುವಿನ ಮುಖ ಮತ್ತು ದೇಹದ ಹಲವು ಕಡೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ್ದಾರೆ ಎನ್ನಲಾಗಿದೆ. ಇನ್ನು ಸ್ಥಳಕ್ಕೆ ಬಂದಿದ್ದ ವಿಧಿ ವಿಜ್ಞಾನ ತಂಡ, ಶ್ವಾನ ದಳ ಸ್ಥಳದಲ್ಲಿ ಎಲ್ಲಾ ಸಾಕ್ಷಾಧಾರಗಳನ್ನು ಕಲೆ ಹಾಕಿದ್ದು, ಮೃತದೇಹವನ್ನು ಮರಣೋತ್ತರ ಪರಿಕ್ಷೆಗೆ ಕಳುಹಿಸಿದ್ದಾರೆ. ಇನ್ನು ಈ ಘಟನೆಯಿಂದ ಸುತ್ತಮುತ್ತಲ ಸಾರ್ವಜನಿಕರು ಬೆಚ್ಚಿಬಿದ್ದಿದ್ದು, ಪೋಷಕರ ಆಕ್ರಂದನ ಮುಗಿಲು ಮುಟ್ಟಿತು. ಘಟನೆ ಸಂಬಂಧ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಕಾರು ಅಪಘಾತ: 4 ವರ್ಷದ ಮಗು ಸಮೇತ ದಂಪತಿ ಸಾವು

ಬೆಂಗಳೂರು: ನಗರದಿಂದ ತಿರುಪತಿ ವೆಂಕಟೇಶ್ವರ ಸ್ವಾಮಿ ದರ್ಶನಕ್ಕೆ ಹೊರಟಿದ್ದ ಒಂದೇ ಕುಟುಂಬದ ಮೂವರು ಭೀಕರ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ.

ಅಪರಾಧ ಸುದ್ದಿಗಳು

ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಂಗಾರುಪಾಳ್ಯಂ ಪಲಮ ಕುಲಪಲ್ಲಿ ಬಳಿ ಅಪಘಾತ ಸಂಭವಿಸಿದೆ. ಭೀಕರ ಅಪಘಾತದಲ್ಲಿ ಬೆಂಗಳೂರು ಮೂಲದ ದಂಪತಿ ಹಾಗೂ ಅವರ 4 ವರ್ಷದ ಹೆಣ್ಣು ಮಗು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನೂ ಕಾರು ಚಾಲಕನ ಸ್ಥಿತಿ ಗಂಭೀರವಾಗಿದೆ.

ಅಪಘಾತ ಸಂಭವಿಸಿದ್ದು ಹೇಗೆ?: ಪಲಮನೇರ್‌ನಿಂದ ಚಿತ್ತೂರಿಗೆ ಬರುತ್ತಿದ್ದ ಬಸ್ಸು ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಂಗಾರುಪಾಳ್ಯಂ ಪಲಮಕುಲಪಲ್ಲಿ ಬಳಿ ನಿಂತಿತ್ತು. ಈ ವೇಳೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ದಂಪತಿ ಹಾಗೂ ಮಗು ಸ್ಥಳದಲ್ಲೇ ಸಾವನ್ನಪ್ಪಿದ್ದು, ಕಾರಿನಲ್ಲೇ ಮೃತದೇಹಗಳು ಸಿಲುಕಿಕೊಂಡಿದ್ದವು. ಚಾಲಕನ ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಪೊಲೀಸರು ಬೆಂಗಳೂರು ಮೂಲದ ದಂಪತಿಯ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ.

ಪ್ರಾಥಮಿಕ ಮೂಲಗಳ ಪ್ರಕಾರ, ಅತಿ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣ ಎಂದು ಹೇಳಲಾಗುತ್ತಿದೆ.

ಬೆಂಗಳೂರಿನಲ್ಲಿ ವಾಸವಿದ್ದ ಕುಟುಂಬ ಶನಿವಾರ ಮಧ್ಯಾಹ್ನ 12 ಗಂಟೆಗೆ ತಿರುಪತಿ ವೆಂಕಟೇಶ್ವರ ಸ್ವಾಮಿ ದರ್ಶನಕ್ಕೆ ಟಿಕೆಟ್ ಪಡೆದುಕೊಂಡಿತ್ತು. ಆದ್ರೆ ದುರಂತದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಅಪಘಾತದ ಬಳಿಕ ಬಸ್‌ನ ಹಿಂಭಾಗಕ್ಕೆ ಸಿಲುಕಿಕೊಂಡಿದ್ದ ಕಾರನ್ನು ಪೊಲೀಸರು ಜೆಸಿಬಿ ಮೂಲಕ ಹೊರತೆಗೆದಿದ್ದಾರೆ.

ವಿದ್ಯಾರ್ಥಿಗೆ 'ಉಗ್ರ' ಎಂದು ಕರೆದ ಪ್ರಾಧ್ಯಾಪಕ ಅಮಾನತು

ಬೆಂಗಳೂರು: ಖಾಸಗಿ ವಿಶ್ವವಿದ್ಯಾಲಯವೊಂದರ ಪ್ರಾಧ್ಯಾಪಕರೊಬ್ಬರು ವಿದ್ಯಾರ್ಥಿಯ ಧರ್ಮವನ್ನು ಗುರಿಯಾಗಿಸಿಕೊಂಡು ಅವಮಾನಿಸಿರುವ ಆರೋಪ ಪ್ರಕರಣ ನಗರದಲ್ಲಿ ವರದಿಯಾಗಿದೆ.

ತರಗತಿಯಲ್ಲಿ ಪಾಠ ಮಾಡುತ್ತಿದ್ದ ವೇಳೆ ವಿದ್ಯಾರ್ಥಿಯ ಧರ್ಮವನ್ನು ಉಲ್ಲೇಖಿಸಿ ಪದೇ ಪದೆ 'ಭಯೋತ್ಪಾದಕ' ಎಂದು ಕರೆದಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಕಾಲೇಜಿನ ವಾಣಿಜ್ಯ ವಿಭಾಗದ ಅರೆಕಾಲಿಕ ಪ್ರಾಧ್ಯಾಪಕರೊಬ್ಬರನ್ನು ಅಮಾನತುಗೊಳಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಆಡಳಿತ ಮಂಡಳಿ ತಿಳಿಸಿದೆ. ಈ ಸಂಬಂಧ ಗಿರಿನಗರ ಪೊಲೀಸ್ ಠಾಣೆಯಲ್ಲಿ ಎನ್‌ಸಿಆರ್ ದಾಖಲಾಗಿದೆ.

ಆರೋಪವೇನು?: ಪ್ರಾಧ್ಯಾಪಕ ಶುಕ್ರವಾರ ಬಿಬಿಎ ಅನಾಲಿಟಿಕ್ಸ್ ತರಗತಿಯಲ್ಲಿ ಸುಮಾರು 60 ವಿದ್ಯಾರ್ಥಿಗಳ ಸಮ್ಮುಖದಲ್ಲಿ ಓರ್ವ ವಿದ್ಯಾರ್ಥಿಯನ್ನು ಉದ್ದೇಶಿಸಿ ಪದೇ ಪದೆ ಭಯೋತ್ಪಾದಕ ಎಂದು ಕರೆದಿದ್ದಾರೆ. ನಿಮ್ಮಂತಹವರಿಂದಲೇ ಇರಾನ್ ಯುದ್ಧ ನಡೆಯಿತು ಮತ್ತು ಟ್ರಂಪ್ ನಿನ್ನನ್ನು ಕರೆದೊಯ್ಯುತ್ತಾರೆ ಎಂದು ನಿಂದನಾತ್ಮಕ ಮಾತುಗಳನ್ನು ಆಡಿದ್ದಾರೆ ಎಂದು ದೂರಲಾಗಿದೆ.

ಘಟನೆಗೆ ಸಂಬಂಧಿಸಿದ ವಿಡಿಯೋವೊಂದು ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಘಟನೆ ಖಂಡಿಸಿ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ನಡೆಸಿವೆ. ರಾಷ್ಟ್ರೀಯ ವಿದ್ಯಾರ್ಥಿ ಸಂಘಟನೆ ನೀಡಿದ ದೂರಿನ ಮೇರೆಗೆ ಗಿರಿನಗರ ಠಾಣೆಯಲ್ಲಿ ಎನ್‌ಸಿಆರ್ ದಾಖಲಾಗಿದೆ. ವಿದ್ಯಾರ್ಥಿ ದೂರು ನೀಡಲು ಸಮಯಾವಕಾಶ ಕೇಳಿದ್ದಾರೆ. ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಪ್ರತಿಕ್ರಿಯೆ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿಯ ಆಡಳಿತಾತ್ಮಕ ಸುಧಾರಣೆ, ತಂತ್ರಜ್ಞಾನ ಆಧಾರಿತ ಪಾರದರ್ಶಕ ನೇಮಕಾತಿ ಪ್ರಕ್ರಿಯೆಗಾಗಿ ಪ್ರತಿಷ್ಠಿತ ಸ್ಕ್ಯಾಚ್ ರಾಷ್ಟ್ರೀಯ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ದೆಹಲಿಯ ಇಂಡಿಯಾ ಹ್ಯಾಬಿಟೇಟ್ ಸೆಂಟರ್‌ನ ಸಿಲ್ವರ್ ಓಕ್ ಹಾಲ್‌ನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಅವರು ಸ್ಕ್ಯಾಚ್ ಫೌಂಡೇಶನ್ ಅಧ್ಯಕ್ಷ ಸಮೀರ್ ಕೊಚ್ಚರ್ ಮತ್ತು ಉಪಾಧ್ಯಕ್ಷ ಡಾ. ಗುರುಚರಣ್ ಧನ್ಜಾಲ್ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು.

ಜಯನಗರದಲ್ಲಿ ಔರ್ಯ ಡೈಮಂಡ್ಸ್ ಸಂಸ್ಥೆಯ ಲ್ಯಾಬ್- ಗ್ರೋನ್ ವಜ್ರಗಳ ಗ್ಯಾಲರಿಯನ್ನುಸಂಸ್ಥಾಪಕಿ ಶಿಖಾ ದಾದಾ ಲೋಕಾರ್ಪಣೆಗೊಳಿಸಿದರು. ಈ ವೇಳೆ ಸಹ-ಸಂಸ್ಥಾಪಕ ಸಾದ್ ಸಲ್ಮಾನ್, ಚೇಫ್ ಆಫ್ ಆಪರೇಷನ್ಸ್ ರಿತೇಶ್ ಗಡೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಂಪ್ರದಾಯಕ್ಕೆ ಧಕ್ಕೆಯಾಗದಂತೆ ಪೂಜಾ ಕೈಂಕರ್ಯ

ಕರಗ ಮಹೋತ್ಸವದ ಸಿದ್ಧತೆ ಪರಿಶೀಲಿಸಿದ ರಾಮಲಿಂಗಾರೆಡ್ಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಈ ಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಸಂಪ್ರದಾಯಕ್ಕೆ ಧಕ್ಕೆಯಾಗದಂತೆ ಅದ್ದೂರಿಯಾಗಿ ಕರಗ ಮಹೋತ್ಸವವನ್ನು ಆಚರಿಸಲಾಗುವುದು ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕರಗ ಉತ್ಸವದ ಹಿನ್ನೆಲೆಯಲ್ಲಿ ನಗರದ ತಿಗಳರಪೇಟೆಯಲ್ಲಿರುವ ಧರ್ಮರಾಯಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಸಿದ್ಧತೆಗಳ ಪರಿಶೀಲನೆ ಬಳಿಕ ಸಭೆಯಲ್ಲಿ ಮಾತನಾಡಿದ ಅವರು, ಉತ್ಸವವನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಹಾಗೂ ದೇವಾಲಯದಲ್ಲಿ ಪೂಜಾ-ಕೈಂಕರ್ಯಗಳನ್ನು ವ್ಯವಸ್ಥಿತವಾಗಿ ನಡೆಸಲು ಸೂಚನೆ ನೀಡಲಾಗಿದೆ. ಸರಕಾರದ ಇತ್ತೀಚಿನ ಮಾರ್ಗಸೂಚಿ ಅನ್ವಯ ಕರಗ ಉತ್ಸವದ ಪ್ರಾರಂಭದಿಂದ ಮುಕ್ತಾಯದವರೆಗೆ ಪ್ರತಿದಿನ ನಡೆಯುವ ಕಾರ್ಯಕ್ರಮಗಳ ವಿವರಗಳನ್ನು ಅಂತಿಮಗೊಳಿಸಿ ಪೊಲೀಸ್ ಇಲಾಖೆಗೆ ಒದಗಿಸಲಾಗಿದ್ದು, ಯಾವುದೇ ಸಮಸ್ಯೆಗಳು ಉದ್ಭವಿಸದಂತೆ ಕ್ರಮ ವಹಿಸಲು ಸೂಚಿಸಲಾಗಿದೆ ಎಂದರು.

ಪೂಜಾ ಸಾಮಾಗ್ರಿ, ವಿಡಿಯೊ ಚಿತ್ರಿಕರಣ, ಅಗತ್ಯವಿರುವ ಸ್ಟೇಜ್, ಮೈಕ್, ಕುರ್ಚಿ ಮತ್ತು ವಾದ್ಯಗೋಷ್ಠಿ ಇತ್ಯಾದಿಗಳಿಗೆ ಪ್ರಕಟಣೆ ಹೊರಡಿಸಿ ಆಹ್ವಾನಿಸಿಲಾಗಿದೆ ಮತ್ತು ಹೂವು ಮತ್ತು ಹೂವಿನ ಹಾರ, ದೇವಾಲಯದ ಆವರಣದಲ್ಲಿ ಹೂವಿನ ಅಲಂಕಾರ ಮಾಡಲು ಇ-ಪ್ರಕ್ಯೂರ್ಮೆಂಟ್ ಮುಖಾಂತರ ಇ-ಟೆಂಡರ್ ಕರೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದು, ಹೂವು ಹೂವಿನ ಹಾರ ಮತ್ತು ಹೂವಿನ ಅಲಂಕಾರಕ್ಕೆ ತಗಲುವ ವೆಚ್ಚವನ್ನು ಸಾಮಾನ್ಯ ಸಂಗ್ರಹಣ ನಿಧಿಯಿಂದ ಭರಿಸಲು ತಿಳಿಸಲಾಗಿದೆ ಎಂದರು.

ಈ ವೇಳೆ ಶಾಸಕ ಉದಯ ಗರುಡಾಚಾರ್, ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚಲಕರಿ ನಾರಾಯಣಸ್ವಾಮಿ, ಮುಜರಾಯಿ ಇಲಾಖೆ ಆಯುಕ್ತ ಶರತ್ ಬಿ., ಧಲ್ಜಿತ್ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕರಗ ಮಹೋತ್ಸವಕ್ಕೆ ಸಿಎಂ ಚಾಲನೆ

ಏಪ್ರಿಲ್ 1ರಂದು ನಡೆಯುವ ಕರಗ ಶಕ್ತ್ಯೋತ್ಸವ ಮತ್ತು ಮಹಾರಥೋತ್ಸವದಲ್ಲಿ ಲಕ್ಷಾಂತರ ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕ ಡಾ.ಉದಯ್ ಗರುಡಾಚಾರ್, ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ದೇವಾಲಯದ ಹೊರ ಆವರಣದಲ್ಲಿ ಅಗತ್ಯ ಸೌಕರ್ಯಗಳನ್ನು ಜಿ.ಬಿ.ಎ.ಗೆ ವಹಿಸಲಾಗಿದ್ದು, ನಗರದ ಪ್ರಮುಖ ರಸ್ತೆಗಳು ಹಾಗೂ ಸರ್ಕಲ್‌ಗಳಲ್ಲಿ ವಿಶೇಷ ದೀಪಾಲಂಕಾರ ಮಾಡಲಾಗುತ್ತಿದೆ. ಕರಗ ಸಾಗುವ ಮಾರ್ಗಗಳಲ್ಲಿ ಗುಂಡಿಗಳು ಮುಚ್ಚುವ ಕಾರ್ಯ ನಡೆಯುತ್ತಿದ್ದು, ತಾತ್ಕಾಲಿಕ ಮೊಬೈಲ್ ಶೌಚಾಲಯಗಳನ್ನು ಅಳವಡಿಸಲಾಗುತ್ತಿದೆ. ಜತೆಗೆ ಬ್ಯಾರಿಕೇಡ್‌ಗಳನ್ನು ಸ್ಥಾಪಿಸಿ ಭದ್ರತಾ ಕ್ರಮಗಳನ್ನು ಬಲಪಡಿಸಲು ಸೂಚಿಸಲಾಗಿದೆ.

– ರಾಮಲಿಂಗಾರೆಡ್ಡಿ, ಮುಜರಾಯಿ ಸಚಿವ

ಮುಜರಾಯಿ ಇಲಾಖೆ ಸಚಿವ ರಾಮಲಿಂಗರೆಡ್ಡಿ ಸಭೆಯಲ್ಲಿ ಕರಗ ಉತ್ಸವದ ಪೋಸ್ಟರ್ ಅನಾವರಣಗೊಳಿಸಿದರು. ಈ ವೇಳೆ ಈ ವೇಳೆ ಶಾಸಕ ಉದಯ ಗರುಢಾಚಾರ್ಯ, ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚಲಕರಿ ನಾರಾಯಣಸ್ವಾಮಿ, ಮುಜರಾಯಿ ಇಲಾಖೆ ಆಯುಕ್ತ ಶರತ್ ಬಿ., ಧಲ್ಜಿತ್ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ 117/2026
ಅರ್ಜಿದಾರರು : 1. ಶ್ರೀಮತಿ. ಪುಟ್ಟಮ್ಮ ಕೋಂ. ಲೇಟ್ ಮರಿಯಪ್ಪ, 2. ಶ್ರೀಮತಿ. ಲಕ್ಷ್ಮಮ್ಮ. ಕೋಂ ಲಿಂಗಯ್ಯ, 3. ಶ್ರೀ. ರಾಜು. ಬಿನ್. ಲೇಟ್ ನಿಂಗಯ್ಯ, 4. ಶ್ರೀ. ಸಿದ್ದಯ್ಯ. ಬಿನ್. ಲೇಟ್ ನಿಂಗಯ್ಯ, 5. ಶ್ರೀಮತಿ ಭಾಗ್ಯಮ್ಮ ಕೋಂ ರಮೇಶ್, 6. ಶ್ರೀ.ಎಸ್.ಎನ್. ಶಿವಕುಮಾರ. ಬಿನ್. ಲೇಟ್ ನಿಂಗಯ್ಯ.
1,3,4,6 ನೇ ಅರ್ಜಿದಾರರ ವಿಳಾಸ : ಸೀಗೆಕೋಟೆ ಗ್ರಾಮ ಶಿವನಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ-562117. 2 ನೇ ಅರ್ಜಿದಾರರ ವಿಳಾಸ, ಗುರುವಿನಪುರ ಗ್ರಾಮ ಕಬ್ಬಾಳು ಅಂಚೆ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ – 562126. 5 ನೇ ಅರ್ಜಿದಾರರ ವಿಳಾಸ, #412, 2ನೇ ಮುಖ್ಯರಸ್ತೆ, ಮುನೇಶ್ವರ ದೇವಸ್ಥಾನದ ಹತ್ತಿರ, ಕಾವೇರಿ ನಗರ, ಮಹದೇವಪುರ. ಬೆಂಗಳೂರು ಉತ್ತರ-560048
ವಿರುದ್ಧ
ಎದುರುದಾರರು : 1, ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ. 2, ಗ್ರಾಮ ಲೆಕ್ಕಾಧಿಕಾರಿ, ಶಿವನಹಳ್ಳಿ ವೃತ್ತ, ಕಸಬಾ ಹೋ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ-562117
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 6ನೇ ಅರ್ಜಿದಾರರ ತಂದೆ "ನಿಂಗಯ್ಯ ಬಿನ್. ಲೇಟ್ ಬೋರಯ್ಯ" ಸೀಗೆಕೋಟೆ ಗ್ರಾಮ ಶಿವನಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪು ತಾಲ್ಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ-562117 ದಿನಾಂಕ: 08/04/1986 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ: 06-04-2026ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.
23-02-2026ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು.
ಜೈರಾಮೇಗೌಡ.ಎಸ್., ವಕೀಲರು. ಕನಕಪುರ ಟೌನ್
ದಿನಾಂಕ : 23/02/2026
ಸ್ಥಳ : ಕನಕಪುರ.

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 182/2026.
1. ಶ್ರೀಮತಿ ಲಕ್ಷ್ಮಮ್ಮ ಬಿನ್. ಲೇಟ್ ತಿಮ್ಮಯ್ಯ @ ತಮ್ಮಯ್ಯ ವಯಸ್ಸು 58 ವರ್ಷ, ವಾಸ : ಕುರುಪೇಟೆ ಕನಕಪುರ ಟೌನ್ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು
...ಅರ್ಜಿದಾರರು
ವಿರುದ್ಧ
1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ನಗರಸಭೆ, ಕನಕಪುರ.
...ಎದುರುದಾರರು
: ಪ್ರಕಟಣೆ :
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೇ, 1 ರಿಂದ 6ನೇ ಅರ್ಜಿದಾರರ ವಾರಸು ಸಹೋದರ, 7ನೇ ರಿಂದ 9ನೇ ಅರ್ಜಿದಾರರ ಚಿಕ್ಕಪ್ಪ ಮತ್ತು 10ನೇ ರಿಂದ 12ನೇ ಅರ್ಜಿದಾರರ ತಂದೆಯವರಾದ ಶ್ರೀ ಬಲರಾಮು ಬಿನ್ ಲೇಟ್ ತಿಮ್ಮಯ್ಯ @ ತಮ್ಮಯ್ಯ ರವರು ದಿನಾಂಕ: 04.06.2007 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕನಕಪುರ ಟೌನ್, ಕುರುಪೇಟೆಯಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 15.05.2026 ರ ಬೆಳಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ 26ನೇ ಮಾರ್ಚ್ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ.
ಅರ್ಜಿದಾರರ ಪರ ವಕೀಲರು
ಎಸ್.ಆರ್. ಶಶಿಕುಮಾರ್,
ವಕೀಲರು ಕನಕಪುರ
ದಿನಾಂಕ : 09/03/2026

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 183/2026.
1. ಶ್ರೀಮತಿ ಲಕ್ಷ್ಮಮ್ಮ ಬಿನ್. ಲೇಟ್ ತಿಮ್ಮಯ್ಯ @ ತಮ್ಮಯ್ಯ ವಯಸ್ಸು 58 ವರ್ಷ, ವಾಸ : ಕುರುಪೇಟೆ ಕನಕಪುರ ಟೌನ್ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು
...ಅರ್ಜಿದಾರರು
ವಿರುದ್ಧ
1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ನಗರಸಭೆ, ಕನಕಪುರ.
...ಎದುರುದಾರರು
[illegible]
ದಿನಾಂಕ : 09/03/2026

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 184/2026.
1. ಶ್ರೀಮತಿ ಲಕ್ಷ್ಮಮ್ಮ ಬಿನ್. ಲೇಟ್ ತಿಮ್ಮಯ್ಯ @ ತಮ್ಮಯ್ಯ ವಯಸ್ಸು 58 ವರ್ಷ, ವಾಸ : ಕುರುಪೇಟೆ ಕನಕಪುರ ಟೌನ್ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು
...ಅರ್ಜಿದಾರರು
ವಿರುದ್ಧ
[illegible]
ದಿನಾಂಕ : 09/03/2026

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 181/2026.
1. ಶ್ರೀಮತಿ ಲಕ್ಷ್ಮಮ್ಮ ಬಿನ್. ಲೇಟ್ ತಿಮ್ಮಯ್ಯ @ ತಮ್ಮಯ್ಯ ವಯಸ್ಸು 58 ವರ್ಷ, ವಾಸ : ಕುರುಪೇಟೆ ಕನಕಪುರ ಟೌನ್ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು
...ಅರ್ಜಿದಾರರು
ವಿರುದ್ಧ
1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ನಗರಸಭೆ, ಕನಕಪುರ.
...ಎದುರುದಾರರು
[illegible]
ದಿನಾಂಕ : 09/03/2026

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 185/2026.
1. ಶ್ರೀಮತಿ ಲಕ್ಷ್ಮಮ್ಮ ಬಿನ್. ಲೇಟ್ ತಿಮ್ಮಯ್ಯ @ ತಮ್ಮಯ್ಯ ವಯಸ್ಸು 58 ವರ್ಷ, ವಾಸ : ಕುರುಪೇಟೆ ಕನಕಪುರ ಟೌನ್ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು
...ಅರ್ಜಿದಾರರು
ವಿರುದ್ಧ
1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು,
[illegible]
ದಿನಾಂಕ : 09/03/2026

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 186/2026.
[illegible]
ದಿನಾಂಕ : 09/03/2026

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 177/2026.
1. ಶ್ರೀ ಈರೇಗೌಡ ಬಿನ್. ಲೇಟ್ ಈರೇಗೌಡ @ ಕೋಳ್ಳಿರೇಗೌಡ ವಯಸ್ಸು 51 ವರ್ಷ, ವಾಸ : ಕುರುಬರಹಳ್ಳಿ ಗ್ರಾಮ, ಕಸಬಾ ಹೋಬಳಿ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು
.....ಅರ್ಜಿದಾರರು
ವಿರುದ್ಧ
1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಿಗರು, ಕುರುಬರಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
....ಎದುರುದಾರರು
ಪ್ರಕಟಣೆ.
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೇ, ಅರ್ಜಿದಾರರ ತಮ್ಮ ಶ್ರೀ ಶಿವರಾಜು ಬಿನ್ ಲೇಟ್ ಈರೇಗೌಡ ರವರು ದಿನಾಂಕ: 02.12.2016 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಕುರುಬರಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 27.04.2026 ರ ಬೆಳಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ 26ನೇ ಮಾರ್ಚ್ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ಕನಕಪುರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಅರ್ಜಿದಾರರ ಪರ ವಕೀಲರು
ಎಸ್.ಆರ್. ಶಶಿಕುಮಾರ್, ವಕೀಲರು ಕನಕಪುರ.
ದಿನಾಂಕ : 26/03/2026

M.V.C.No: 135/2025
IN THE COURT OF III ADDL. SENIOR CIVIL JUDGE AND M.A.C.T AT:DHARWAD
PETITIONER: Sri. Chandrakant S/o Gururaj Shirasangi @ Sirasagi, R/o Revoor (B), Kalaburagi District, Now at: Saraswatpur, Dharwad.
V/s
RESPONDNETS:1)Mr. H.C.Nagarajaiah R/o Prop. SEA BIRD Tourist, # 24, Ananth Arcade, Kalasipalyam, Bangalore-560002 (Owner of the Bus Bearing its Regn.No. KA-01/AB-7425)
CITATION U/O V RULE 20 R/W SECTION-151 OF CPC
WHEREAS, the above named petitioner has filed this petition for grant of compensation on account of injuries sustained by him in the motor vehicle accident. Now the matter is fixed on **21/04/2026** if any objection they can appear on the above said date at **10.30 A.M.** before this Hon'ble court failing to appear on the above said date and time, necessary order will be passed.
Given under my hand and seal of the court this the day 26/03/2026 at Dharwad.
By order of the court
SHIRASTEDAR
III Addl. Senior Civil Judge and MACT, Dharwad.
S.S.KAMPALI
Advocate for Petitioner.

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.: 116/2026
ಅರ್ಜಿದಾರರು : 1. ಶ್ರೀಮತಿ. ಪುಟ್ಟಮ್ಮ ಕೋಂ. ಲೇಟ್ ಮರಿಯಪ್ಪ, 2. ಶ್ರೀಮತಿ. ಲಕ್ಷ್ಮಮ್ಮ. ಕೋಂ ಲಿಂಗಯ್ಯ, 3. ಶ್ರೀ. ರಾಜು. ಬಿನ್. ಲೇಟ್ ನಿಂಗಯ್ಯ, 4. ಶ್ರೀ. ಸಿದ್ದಯ್ಯ. ಬಿನ್. ಲೇಟ್ ನಿಂಗಯ್ಯ, 5. ಶ್ರೀಮತಿ ಭಾಗ್ಯಮ್ಮ ಕೋಂ ರಮೇಶ್, 6. ಶ್ರೀ.ಎಸ್.ಎನ್. ಶಿವಕುಮಾರ. ಬಿನ್. ಲೇಟ್ ನಿಂಗಯ್ಯ.
ವಿರುದ್ಧ
[illegible]
ದಿನಾಂಕ : 23/02/2026
ಸ್ಥಳ : ಕನಕಪುರ.

17 ಸಾವಿರ ಕೋಟಿ ರುಪಾಯಿ ಬೃಹತ್ ಬಜೆಟ್ ಮಂಡಿಸಿ ಗ್ರೇಟರ್ ಬೆಂಗಳೂರು | ಮೂಲಸೌಕರ್ಯ, ತ್ಯಾಜ್ಯ ವಿಲೇವಾರಿಗೆ ಆದ್ಯತೆ

ಪಂಚ ಪಾಲಿಕೆಗಳ ಬಜೆಟ್ ಮಂಡನೆ ಮುಕ್ತಾಯ

ಬಿಬಿಎಂಪಿ ವಿಭಜಿಸಿ ಗ್ರೇಟರ್ ಬೆಂಗಳೂರು ರಚಿಸಿ, ಪಂಚ ನಗರ ಪಾಲಿಕೆ ಮಾಡಿದ ಬಳಿಕ ಮೊದಲ ಬಜೆಟ್ ಅನ್ನು ಐದು ನಗರ ಪಾಲಿಕೆಗಳು ಮಂಡಿಸಿವೆ. ಪಂಚ ನಗರ ಪಾಲಿಕೆಗಳು ಎರಡು ದಿನಗಳ ಕಾಲ ಬಜೆಟ್ ಮಂಡಿಸಿದ್ದು, ಪಂಚ ಪಾಲಿಕೆಗಳಿಂದ ಒಟ್ಟು 17 ಸಾವಿರ ಕೋಟಿ ರು. ಮೌಲ್ಯದ ಬಜೆಟ್ ಅನ್ನು ಮಂಡಿಸಲಾಗಿದೆ. ಶುಕ್ರವಾರ ಬೆಂಗಳೂರು ಪೂರ್ವ, ಕೇಂದ್ರ ನಗರ ಪಾಲಿಕೆಗಳು ಬಜೆಟ್ ಮಂಡಿಸಿದ್ದವು. ಶನಿವಾರ ಇನ್ನುಳಿದ ಮೂರು ಪಾಲಿಕೆಗಳು ಬಜೆಟ್ ಮಂಡಿಸಿವೆ. ಪಂಚ ನಗರ ಪಾಲಿಕೆಗಳು ಉಳಿಕೆ ಬಜೆಟ್ ಅನ್ನು ಮಂಡಿಸಿರುವುದು ವಿಶೇಷ.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜಿಬಿಎಯ ಮತ್ತೊಂದು ನಗರ ಪಾಲಿಕೆಯಾದ ಉತ್ತರ ನಗರ ಪಾಲಿಕೆಯು ಶನಿವಾರ ಬಜೆಟ್ ಮಂಡಿಸಿದ್ದು, ಒಟ್ಟು 4,344 ಕೋಟಿ ರು.ಆಯವ್ಯಯವನ್ನು ಮಂಡಿಸಿದೆ.

ಯಲಹಂಕ ಎನ್.ಇ.ಎಸ್ ಬಳಿಯಿರುವ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ 2026-27ನೇ ಸಾಲಿನ ಚೊಚ್ಚಲ ಬಜೆಟ್‌ನ್ನು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಮಂಡಿಸಿದ್ದು, ಮೂಲಸೌಕರ್ಯ, ಘನತ್ಯಾಜ್ಯ ನಿರ್ವಹಣೆ, ಪರಿಸರ ನಿರ್ವಹಣೆ, ಹವಾಮಾನ ಕ್ರಮ ಮತ್ತು ಕೆರೆ ಪುನರುಜ್ಜೀವನಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಆಸ್ತಿ ತೆರಿಗೆ ಮತ್ತು ಇತರ ಮೂಲಗಳಿಂದ 826.25 ಕೋಟಿ ರು. ಆದಾಯ ನಿರೀಕ್ಷಿಸಲಾಗಿದ್ದು, ತೆರಿಗೆಯೇತರ ಆದಾಯ ಮತ್ತು ನಗರ ಯೋಜನಾ ಅನುಮೋದನೆಗಳು ಇದಕ್ಕೆ ಗಮನಾರ್ಹವಾಗಿ ಕೊಡುಗೆ ನೀಡುವ ನಿರೀಕ್ಷೆಯಿದೆ.

ಉತ್ತರ ನಗರ ಪಾಲಿಕೆ ಬಜೆಟ್‌ನಲ್ಲಿ ನೈರ್ಮಲ್ಯ ಮತ್ತು ಪರಿಸರ ನಿರ್ವಹಣೆಗೆ ಒತ್ತು ನೀಡುತ್ತದೆ. ಘನತ್ಯಾಜ್ಯ ನಿರ್ವಹಣೆ, ಡಂಪಿಂಗ್ ಅನ್ನು ತಡೆಯಲು ಸಿಸಿಟಿವಿ ಕ್ಯಾಮೆರಾಗಳ ಅಳವಡಿಕೆ ಮತ್ತು ಯಾಂತ್ರೀಕೃತ ಶುಚಿಗೊಳಿಸುವ ವ್ಯವಸ್ಥೆಗಳಿಗೆ ಹೆಚ್ಚು ಹಣ ಹಂಚಿಕೆ ಮಾಡಲಾಗಿದೆ. ಮರ ನೆಡುವಿಕೆ ಮತ್ತು ಸಂರಕ್ಷಣೆ ಸೇರಿದಂತೆ ನಗರ ಅರಣ್ಯ ಉಪಕ್ರಮಗಳಿಗೆ 10 ಕೋಟಿ ರು.ಗಳಿಗೂ ಹೆಚ್ಚು ಅನುದಾನ ನೀಡಲಾಗಿದೆ.

ಕಟ್ಟಡ ಅನುಮೋದನೆ, ಅಭಿವೃದ್ಧಿ ಶುಲ್ಕಗಳು ಮತ್ತು ಸಂಬಂಧಿತ ಮೂಲಗಳಿಂದ 817.37 ಕೋಟಿ ರು.. ಆದಾಯ ಬರಬಹುದೆಂದು ಅಂದಾಜಿಸಲಾಗಿದೆ. ಎ-ಖಾತಾ ಪರಿವರ್ತನೆ ಮತ್ತು ಜಾಹೀರಾತು ನೀತಿಗಳ ಮೂಲಕ ಹೆಚ್ಚುವರಿ ಆದಾಯ ನಿರೀಕ್ಷಿಸಲಾಗಿದ್ದು, ವೆಚ್ಚದ ಪ್ರಮುಖ ಪಾಲನ್ನು ಶೇ.61ಕ್ಕಿಂತ ಹೆಚ್ಚು ರಸ್ತೆಗಳು, ಚರಂಡಿಗಳು ಮತ್ತು ಮೂಲಸೌಕರ್ಯ ಯೋಜನೆಗಳು ಸೇರಿದಂತೆ ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳಿಗೆ ಹಂಚಿಕೆ ಮಾಡಲಾಗಿದೆ. ರಾಜ್ಯ ಯೋಜನೆಗಳ ಅಡಿಯಲ್ಲಿ ಮೂಲಸೌಕರ್ಯ ಯೋಜನೆಗಳಿಗೆ 935.56 ಕೋಟಿ ರು., ಕ್ಷೇತ್ರ ಮಟ್ಟದ ಅಭಿವೃದ್ಧಿಗೆ 120 ಕೋಟಿ ರು. ಗಳನ್ನು ಮೀಸಲಿಟ್ಟಿದೆ. ರಸ್ತೆ ವಿಸ್ತರಣೆ, ಪಾದಚಾರಿ ಮಾರ್ಗ ಮತ್ತು ಮಳೆನೀರು ಚರಂಡಿ ದುರಸ್ತಿಗೆ ಆದ್ಯತೆ ನೀಡಲಾಗಿದೆ. ಪ್ರತಿ ವಾರ್ಡ್‌ಗೆ 25 ಲಕ್ಷ ರು. ಅನುದಾನದೊಂದಿಗೆ ಪಾದಚಾರಿ ಮಾರ್ಗ ದುರಸ್ತಿ ಮತ್ತು ಪುನರ್‌ನಿರ್ಮಾಣಕ್ಕೆ 18 ಕೋಟಿ ನಿಗದಿಪಡಿಸಲಾಗಿದೆ. **ಕಂದಾಯ ಮತ್ತು ಆಡಳಿತ ಸುಧಾರಣೆ:** ಪಾಲಿಕೆ ಜಿಐಎಸ್ ಆಧಾರಿತ ಇ-ಖಾತಾ ವ್ಯವಸ್ಥೆ ಜಾರಿಗೊಳಿಸಿ, ಎಲ್ಲಾ ಸೇವೆಗಳನ್ನು ಆನ್‌ಲೈನ್ ಮೂಲಕ ನೀಡಲು ಕ್ರಮ ಕೈಗೊಂಡಿದ್ದು, ಡೈರೆಕ್ಟ್ ಬೆನೆಫಿಟ್ ಟ್ರಾನ್ಸ್‌ಫರ್ ಮೂಲಕ ಹಣ ವರ್ಗಾವಣೆ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ.

ಪ್ರಮುಖಾಂಶ

ಒಟ್ಟು ಆಸ್ತಿ ತೆರಿಗೆ ಗುರಿ: 826.25 ಕೋಟಿ
ಸ್ಟಾಂಪ್ ಡ್ಯೂಟಿ ಮೂಲಕ ಆದಾಯ: 40 ಕೋಟಿ
ಅಭಿವೃದ್ಧಿ ಶುಲ್ಕ : 97.15 ಕೋಟಿ
ಬಿ-ಖಾತಾ, ಎ-ಖಾತಾ ಪರಿವರ್ತನೆ ಮೂಲಕ ನಿರೀಕ್ಷಿತ **ಆದಾಯ:** 680 ಕೋಟಿ
ಜಾಹೀರಾತು ಆದಾಯ ಗುರಿ: 108 ಕೋಟಿ
ನಗರ ಯೋಜನೆ ವಿಭಾಗದಿಂದ ಆದಾಯ: 817.37 ಕೋಟಿ

ಉತ್ತರ ನಗರ ಪಾಲಿಕೆ ಮುಖ್ಯಾಂಶಗಳು

- 4341 ಕೋಟಿ ರು. ಬಜೆಟ್‌ನಲ್ಲಿ ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳಿಗೆ ಶೇ.61ರಷ್ಟು ಹಣ ಮೀಸಲು.
- ಘನತ್ಯಾಜ್ಯ ನಿರ್ವಹಣೆಗೆ 301 ಕೋಟಿ ರು. ಹಣ ಮೀಸಲು.
- ಪೌರ ಕಾರ್ಮಿಕರ ಕಲ್ಯಾಣಕ್ಕೆ 10 ಕೋಟಿ ರು.
- ಕೆರೆಗಳ ವಾರ್ಷಿಕ ನಿರ್ವಹಣೆಗೆ 8 ಕೋಟಿ ರು.
- ಅಪಾಯಕಾರಿ ಮರಗಳ ತೆರವಿಗೆ 5 ಕೋಟಿ ರು.
- ಅರಣ್ಯ ವಿಭಾಗಕ್ಕೆ 10 ಕೋಟಿ ರು.
- ಪಾರ್ಕ್‌ಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ 62 ಕೋಟಿ ರು.
- ಸೊಳ್ಳೆಗಳ ನಿಯಂತ್ರಣಕ್ಕೆ 8.86 ಕೋಟಿ ರು.
- ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ 11 ಕೋಟಿ ರು.
- ಆಧುನಿಕ ಕಸಾಯಿಖಾನೆ ಸ್ಥಾಪನೆಗೆ 14 ಕೋಟಿ ರು.

ಮಹಿಳಾ ಸಬಲೀಕರಣ, ಆರೋಗ್ಯ, ಮೂಲ ಸೌಕರ್ಯ ಹಾಗೂ ನಗರಾಭಿವೃದ್ಧಿಗೆ ಒತ್ತು ನೀಡಲು ಬೆಂಗಳೂರು ಉತ್ತರ ನಗರ ಪಾಲಿಕೆಯಿಂದ 4344 ಕೋಟಿ ರೂ.ಗಳ ಬೃಹತ್ ಬಜೆಟ್ ಮಂಡನೆಯಾಗಿದೆ. ಮಹಿಳೆಯರಿಗಾಗಿ- ಅಕ್ಕ ಕೆಫೆ, ಹೊಸ ಆಸ್ಪತ್ರೆಗಳ ಸ್ಥಾಪನೆ ಸೇರಿದಂತೆ ಹಲವಾರು ಜನಪರ ಯೋಜನೆಗಳನ್ನು ಘೋಷಿಸ ಲಾಗಿದೆ. ಕೂಲಿ ಕಾರ್ಮಿಕರು, ಪೌರಕಾರ್ಮಿಕರು ಮತ್ತು ದುರ್ಬಲ ವರ್ಗಗಳ ಕಲ್ಯಾಣಕ್ಕೂ ವಿಶೇಷ ಆದ್ಯತೆ ನೀಡಲಾಗಿದೆ.

- ಪೊಮ್ಮಲ ಸುನೀಲ್ ಕುಮಾರ್,
ಆಯುಕ್ತ ಉತ್ತರ ನಗರ ಪಾಲಿಕೆ

ಕಲ್ಯಾಣ ಕಾರ್ಯಕ್ರಮಗಳು

- ಶಿಕ್ಷಣಕ್ಕೆ ಮೀಸಲು: 8.94 ಕೋಟಿ (ಸುಮಾರು 1700 ವಿದ್ಯಾರ್ಥಿಗಳಿಗೆ ನೆರವು)
- ಇ-ಸಾರಥಿ ಯೋಜನೆ: 4.08 ಕೋಟಿ (350 ಮಂದಿಗೆ ವಾಹನ ನೆರವು)
- ವಸತಿ ಯೋಜನೆ: 71.07 ಕೋಟಿ (1420 ಫಲಾನುಭವಿಗಳಿಗೆ ಮನೆ)
- ಆರೋಗ್ಯ ಸೇವೆಗಳು: 11.12 ಕೋಟಿ

ಸ್ವಚ್ಛತೆ ಮತ್ತು ಪರಿಸರ ಘನತ್ಯಾಜ್ಯ ನಿರ್ವಹಣೆಗೆ

ಆಡಳಿತ ವೆಚ್ಚ: 13.38 ಕೋಟಿ
ಸಂಗ್ರಹ ಮತ್ತು ಸಾಗಣೆ: 129.57 ಕೋಟಿ
ಮೂಲಸೌಕರ್ಯ ಕಾಮಗಾರಿಗಳು: 157.05 ಕೋಟಿ
ಹಸಿರೀಕರಣ ಮತ್ತು ಅರಣ್ಯಕ್ಕೆ: 10.51 ಕೋಟಿ
ಉದ್ಯಾನಗಳ ಅಭಿವೃದ್ಧಿಗೆ: 37 ಕೋಟಿ

ಮೂಲಸೌಕರ್ಯ

ಭೂಸ್ವಾಧೀನಕ್ಕೆ ಮೀಸಲು: 17 ಕೋಟಿ
ಕೇಂದ್ರ ಕಚೇರಿ ಕಟ್ಟಡ ನಿರ್ಮಾಣ: 40 ಕೋಟಿ
ಯಲಹಂಕ ಮಿನಿ ವಿಧಾನಸೌಧದಲ್ಲಿ ಕಚೇರಿ ಅಭಿವೃದ್ಧಿಗೆ: 10 ಕೋಟಿ
ಸಾಫ್ಟ್‌ವೇರ್ ಅಭಿವೃದ್ಧಿಗೆ: 6 ಕೋಟಿ

ಖರ್ಚು-ವೆಚ್ಚ ಸಮನಾಗಿಸಿಕೊಂಡ ದಕ್ಷಿಣ ಪಾಲಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜಿಬಿಎ ಸ್ಥಾಪನೆಯಾದ ಬಳಿಕ ಮೊದಲ ಬಾರಿಗೆ ಬಜೆಟ್ ಮಂಡನೆಯಾಗಿದ್ದು, ಕೊನೆಯ ಪಾಲಿಕೆಯಾಗಿ ದಕ್ಷಿಣ ನಗರ ಪಾಲಿಕೆಯು 3,826 ಕೋಟಿ ರುನ ತನ್ನ ಬಜೆಟ್‌ನ್ನು ಪ್ರಸ್ತುತಪಡಿಸಿದೆ.

ಬನಶಂಕರಿ ದೇವಾಲಯದ ಬಳಿಯಿರುವ ಬೆಂಗಳೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ 2026-27 ನೇ ಸಾಲಿನ ಬಜೆಟ್ ಮಂಡಿಸಲಾಗಿದೆ. ಒಟ್ಟು 3,826.43 ಕೋಟಿ ರು. ಆದಾಯ ಮತ್ತು 3,825.95 ಕೋಟಿ ವೆಚ್ಚದ ಸಮತೋಲನ ಬಜೆಟ್ ಪ್ರಕಟವಾಗಿದೆ. 48.21 ಲಕ್ಷ ರು. ಉಳಿತಾಯದೊಂದಿಗೆ ಈ ಬಜೆಟ್ ಮಂಡನೆಯಾಗಿದೆ. ಸುರಕ್ಷತೆ, ಸಮಾನತೆ ಮತ್ತು ಯೋಜಿತ ಅಭಿವೃದ್ಧಿ ಎಂಬ ಉದ್ದೇಶದೊಂದಿಗೆ ಈ ಬಜೆಟ್ ರೂಪಿಸಲಾಗಿದೆ. ಮೂಲಸೌಕರ್ಯ, ಹಸಿರೀಕರಣ, ಸಾರ್ವಜನಿಕ ಆರೋಗ್ಯ ಮತ್ತು ನಾಗರಿಕ ಸೇವೆಗಳ ಮೇಲೆ ಹೆಚ್ಚಿನ ಒತ್ತು ನೀಡಲಾಗಿದೆ. ಆಡಳಿತದಲ್ಲಿ ಪಾರದರ್ಶಕತೆಗಾಗಿ ಇ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಲು ಗಮನಹರಿಸಲಾಗಿದ್ದು, ಶಿಕ್ಷಣ ಸಂಶೋಧನೆ ಮತ್ತು ಆಡಳಿತದ ಸಮನ್ವಯ ಸಾಧಿಸಲು ಹಲವು ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಲಾಗಿದೆ. ಈ ನಿಟ್ಟಿನಲ್ಲಿ ಆಡಳಿತ ವ್ಯವಸ್ಥೆಯ ಸಮಗ್ರ ಸುಧಾರಣೆಗಾಗಿ ಸಿಬ್ಬಂದಿಗೆ ವೃತ್ತಿಪರ ತರಬೇತಿ ನೀಡಲು ಮುಂದಾಗಿದೆ. 2109 ಪೌರ ಕಾರ್ಮಿಕರನ್ನು ನೇರ ನೇಮಕಾತಿಯಡಿ ನೇಮಕ ಮಾಡಲು ಹಲವು ಕ್ರಮಗಳನ್ನು ಘೋಷಿಸಲಾಗಿದೆ.

ಬಜೆಟ್‌ನಲ್ಲಿ ಸ್ವೀಕೃತಿ 3,826 ಕೋಟಿ ರು. ನಿಗಧಿಪಡಿಸಲಾಗಿದ್ದು, ರಾಜಸ್ವ ಅನುದಾನವಾಗಿ 103.97 ಕೋಟಿ ರು., 16 ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ 128.29 ಕೋಟಿ ರು. ನಿರೀಕ್ಷೆಯಿದೆ. ಹೊಸ ಜಾಹೀರಾತು ನೀತಿಯ ಮೂಲಕ 126 ಕೋಟಿ ರು. ಗಳ ಆದಾಯವನ್ನು ಸಹ ನಿಗಧಿಪಡಿಸಲಾಗಿದೆ. ಹೊಸದಾಗಿ ನಿರ್ಮಾಣವಾಗಿರುವ ಸ್ಕೈವಾಕ್‌ಗಳ ಮೇಲೆ ಜಾಹೀರಾತುಗಳ ಅಳವಡಿಕೆಗೆ ಕ್ರಮ ಕೈಗೊಂಡಿದ್ದು, ಆಸ್ತಿ ತೆರಿಗೆಯನ್ನು ಹೆಚ್ಚಿಸದೇ 1,101ಕೋಟಿ ರು. ಗಳ ಆದಾಯವನ್ನು ನಿರೀಕ್ಷಿಸಲಾಗಿದೆ. ಬಿ ಖಾತೆಯನ್ನು ಎ ಖಾತೆಗೆ ಬದಲಾಯಿಸಲು 225 ಕೋಟಿ ರು. ಹಾಗೂ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೆ ತಂದು 40 ಕೋಟಿ ರು. ಗಳ ಆದಾಯದ ಸಾಧ್ಯತೆಯ ಕಡೆಗೂ ಗಮನಹರಿಸಲಾಗಿದೆ.

ಗ್ರೇಡ್ ಸಪರೇಟರ್ ಮತ್ತು ಜಂಕ್ಷನ್ ಗಳ ಅಭಿವೃದ್ಧಿಗೆ 50.45 ಕೋಟಿ ರು. ಗಳನ್ನು ಮೀಸಲಿರಿಸಲಾಗಿದೆ. ಬನಶಂಕರಿ ದೇವಸ್ಥಾನದಿಂದ ಹೊರವರ್ತುಲ ರಸ್ತೆಯ ಅಭಿವೃದ್ಧಿಗೆ 20 ಕೋಟಿ ರು. ಮತ್ತು ಬೇಗೂರು ಮುಖ್ಯ ರಸ್ತೆಯ ಅಗಲೀಕರಣಕ್ಕೆ 40 ಕೋಟಿ ರು. ಮೀಸಲಿಡಲಾಗಿದೆ.

ದಕ್ಷಿಣ ನಗರ ಪಾಲಿಕೆಗೆ ಸಿಕ್ಕಿದ್ದೇನು?

- 3825 ಕೋಟಿ ರು. ಬಜೆಟ್‌ನಲ್ಲಿ ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳಿಗೆ ಶೇ.43
- ಬಿ-ಸ್ಮೈಲ್ ಕಾಮಗಾರಿಗಳಿಗೆ ಶೇ.16
- ವಿದ್ಯಾರ್ಥಿಗಳಿಗೆ 5 ಕೋಟಿ ರು ಅನುದಾನಲ್ಲಿ ಉಚಿತವಾಗಿ ಲ್ಯಾಪ್ ಟಾಪ್
- 11.92 ಕೋಟಿ ರು ಅನುದಾನದಲ್ಲಿ ಬೀದಿ ವ್ಯಾಪಾರಿಗಳಿಗೆ ಇ-ವೆಂಡಿಂಗ್ ಮಾರಾಟ.
- ಪೌರಕಾರ್ಮಿಕರಿಗೆ ಅಂದಾಜು 6 ಕೋಟಿ ರು ವೆಚ್ಚದಲ್ಲಿ ಎಲೆಕ್ಟ್ರಿಕಲ್ ದ್ವಿಚಕ್ರ ವಾಹನ.
- ಅಮೃತ ಮಹೋತ್ಸವ ಯೋಜನೆಯಡಿ 1 ಬಿಎಚ್‌ಕೆ ಫ್ಲಾಟ್ ಖರೀದಿಸಲು 88.25 ಕೋಟಿ ರು ಅನುದಾನ.
- 500 ಬೀದಿ ನಾಯಿಗಳ ಸಾಮರ್ಥ್ಯವಿರುವ ಆಶ್ರಯ ತಾಣ ನಿರ್ಮಾಣ
- ಕಸದಿಂದ ರಸ ರೀತಿಯ ಯೋಜನೆಗಳಿಗೆ ಒತ್ತು, ಶೂನ್ಯ ತ್ಯಾಜ್ಯ ವಾರ್ಡ್‌ಗಳನ್ನು ರಚಿಸಲು ಕ್ರಮ.
- ಪ್ರಸಕ್ತ ವರ್ಷದಲ್ಲಿ 200 ಇಂಗು ಗುಂಡಿಗಳನ್ನು ಸಿಎಸ್‌ಆರ್‌ನಡಿ ನಿರ್ಮಿಸಲು ಕ್ರಮ.
- ಪಾದಚಾರಿ ಮಾರ್ಗವನ್ನು ಮೇಲ್ದರ್ಜೆಗೆ ಏರಿಸಲು ಮತ್ತು ಸ್ಕೈ ವಾಕ್‌ಗಳ ನಿರ್ಮಾಣ ಮಾಡಲು 50 ಕೋಟಿ ಮೀಸಲು

ಅಂಕಿ ಅಂಶಗಳು

- ಒಟ್ಟು ಆದಾಯ: 3,826.43 ಕೋಟಿ ರು.
- ಒಟ್ಟು ವೆಚ್ಚ: 3,825.95 ಕೋಟಿ ರು.
- ಉಳಿತಾಯ: 48.21 ಲಕ್ಷ ರು.
- ಜನಸಂಖ್ಯೆ: ಸುಮಾರು 26 ಲಕ್ಷ
- ವಿಸ್ತೀರ್ಣ: 147 ಚ.ಕಿ.ಮೀ
- ರಸ್ತೆ ಉದ್ದ: 2,674 ಕಿ.ಮೀ (ವಾರ್ಡ್ ರಸ್ತೆ)
- ನೀರುಗಾಲುವೆಗಳು: 167.49 ಕಿ.ಮೀ
- ಉದ್ಯಾನವನಗಳು: 304
- ಕೆರೆಗಳು: 59

ಆದಾಯ ಮೂಲಗಳ ವಿವರ

- ಆಸ್ತಿ ತೆರಿಗೆ: 1101.30 ಕೋಟಿ ರು.
- ಜಾಹೀರಾತು ಆದಾಯ: 126 ಕೋಟಿ ರು.
- ಸ್ಮಾರ್ಟ್ ಪಾರ್ಕಿಂಗ್: 40 ಕೋಟಿ ರು.
- ನಗರ ಯೋಜನೆ ಶುಲ್ಕ: 382 ಕೋಟಿ ರು.
- ಪ್ರೀಮಿಐಂ ಎಫ್‌ಎಆರ್ ನೀತಿ: 360 ಕೋಟಿ ರು.
- ಸಿಂಗಲ್ ಪ್ಲಾಟ್ ಅಪ್ರೂವಲ್ 175 ಕೋಟಿ ರು.
- ಕೇಂದ್ರ ಅನುದಾನ: 128.29 ಕೋಟಿ ರು.
- ರಾಜ್ಯ ಅನುದಾನ: 103.97 ಕೋಟಿ ರು.

ಪರಿಸರ ಮತ್ತು ಹಸಿರೀಕರಣ

- 25,000 ಸಸಿಗಳ ನೆಡುವ ಯೋಜನೆ
- ಒಟ್ಟು ಮರಗಳು: 2.4 ಲಕ್ಷ
- ಸ್ಪಾಂಜ್ ಪಾರ್ಕ್ ಅಭಿವೃದ್ಧಿ: ಎರಡು ಕೋಟಿ
- ಎಲ್ಲಾ ಬೀದಿ ದೀಪಗಳನ್ನು ಎಲ್‌ಇಡಿಗೆ ಪರಿವರ್ತನೆ

ಮೂಲಸೌಕರ್ಯ ಮತ್ತು ಅಭಿವೃದ್ಧಿ ಯೋಜನೆಗಳು

- ರಸ್ತೆ ಅಭಿವೃದ್ಧಿಗೆ 433 ಕೋಟಿ
- 18 ಸ್ಕೈವಾಕ್ ನಿರ್ಮಾಣ ಯೋಜನೆ
- ಬನಶಂಕರಿ-ಮೆಟ್ರೋ ಸ್ಕೈವಾಕ್: 32 ಕೋಟಿ
- ಮಳೆ ನೀರುಗಾಲುವೆ ಅಭಿವೃದ್ಧಿ: 440 ಕೋಟಿ
- ಮಲ್ಟಿ-ಲೆವೆಲ್ ಪಾರ್ಕಿಂಗ್ (ಪಿಪಿಪಿ ಮಾದರಿ)
- ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳು

ಪ್ರಮುಖ ವೆಚ್ಚ ವಿಭಾಗಗಳು

ವಿಭಾಗ	ಮೊತ್ತ	ಶೇಕಡಾವಾರು
ಸಾರ್ವಜನಿಕ ಕಾಮಗಾರಿಗಳು	1,661.95 ಕೋಟಿ	ಶೇ.43.4
ಕಾರ್ಯಾಚರಣೆ ನಿರ್ವಹಣೆ	656.61 ಕೋಟಿ	ಶೇ.17.2
ಬಿ-ಸ್ಮೈಲ್ ಯೋಜನೆ	625.40 ಕೋಟಿ	ಶೇ.16.3
ಸಿಬ್ಬಂದಿ ವೆಚ್ಚ	372.66 ಕೋಟಿ	ಶೇ.9.74
ಕಾರ್ಯಕ್ರಮ ವೆಚ್ಚ	286.16 ಕೋಟಿ	ಶೇ.7.5

ಆರೋಗ್ಯ ಮತ್ತು ಶಿಕ್ಷಣ

- 50 ಹಾಸಿಗೆಗಳ ಆಸ್ಪತ್ರೆ (ರು.18.96 ಕೋಟಿ)
- ಶಾಲೆಗಳಿಗೆ 2 ಕೋಟಿ ರು. ಅನುದಾನ
- ಹಬ್ ಸ್ಪೋಕ್ ಲ್ಯಾಬ್ ವ್ಯವಸ್ಥೆ
- ಸೊಳ್ಳೆ ನಿಯಂತ್ರಣಕ್ಕೆ 8.5 ಕೋಟಿ ರು.

ಕಲ್ಯಾಣ ಯೋಜನೆಗಳು

- ಕಲ್ಯಾಣಕ್ಕೆ 260.67 ಕೋಟಿ ರು.
- ಮನೆ ನಿರ್ಮಾಣ ಸಹಾಯಧನ: 88.25 ಕೋಟಿ ರು.
- ವಿದ್ಯಾರ್ಥಿಗಳಿಗೆ ಲ್ಯಾಪ್ಟಾಪ್, ವಿದ್ಯಾರ್ಥಿವೇತನ
- ಮಹಿಳೆಯರಿಗೆ ಇ-ವಾಹನ ವಿತರಣೆ
- ವಿಶೇಷ ಚೇತನರಿಗೆ ತ್ರಿಚಕ್ರ ವಾಹನ

ಮುಖ್ಯ ಅಭಿವೃದ್ಧಿ ಕಾಮಗಾರಿಗಳು

- ಅರ್ಟೀರಿಯಲ್, ಸಬ್ ಅರ್ಟೀರಿಯಲ್ ಮತ್ತು ವಾರ್ಡ್ ಮೇಲ್ದರ್ಜೆಗೆ 433 ಕೋಟಿ ರು.
- 72 ವಾರ್ಡ್ ಗಳ ತುರ್ತು ದುರಸ್ತಿ ಕಾರ್ಯಗಳಿಗೆ 162 ಕೋಟಿ ರು.
- ಬನಶಂಕರಿ ಮೆಟ್ರೋ ಮತ್ತು ಟಿಟಿಎಂಸಿ ಬಳಿಯ ಪಾದಚಾರಿ ಕಾಮಗಾರಿಗೆ 32 ಕೋಟಿ ರು.

ನೈರ್ಮಲೀಕರಣ ಮತ್ತು ತ್ಯಾಜ್ಯ ನಿರ್ವಹಣೆ

- ಘನ ತ್ಯಾಜ್ಯ ನಿರ್ವಹಣೆಗೆ 300 ಕೋಟಿ
- 8 ಮೆಕ್ಯಾನಿಕಲ್ ಸ್ವೀಪಿಂಗ್ ಯಂತ್ರಗಳು

ಪ್ರಮುಖ ಆಡಳಿತ ಕ್ರಮಗಳು

- 72 ಹೊಸ ವಾರ್ಡ್‌ಗಳ ಸ್ಥಾಪನೆ
- ಇ-ಆಫೀಸ್ ಮೂಲಕ ಕಾಗದ ರಹಿತ ಆಡಳಿತ
- 2109 ಪೌರಕಾರ್ಮಿಕರಿಗೆ ಖಾಯಂ ನೇಮಕ
- ಪ್ರತ್ಯೇಕ ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮ ಬಳಕೆ

ಆಡಳಿತಕ್ಕೆ ಹೊಸ ಸ್ಪರ್ಶ ನೀಡುವ ಭರವಸೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ 2026-27ನೇ ಸಾಲಿನ ಬಜೆಟ್‌ನಲ್ಲಿ ಒಟ್ಟು 1964.60 ಕೋಟಿ ರು. ಆದಾಯ ಸಂಗ್ರಹಿಸುವ ಗುರಿಯನ್ನಿಟ್ಟುಕೊಂಡಿದ್ದು, ಹೊಸ ಆಡಳಿತ ವ್ಯವಸ್ಥೆಯಲ್ಲಿ ಮಂಡನೆಯಾದ ಈ ಬಜೆಟ್ ನಗರ ಅಭಿವೃದ್ಧಿಗೆ ದಿಕ್ಕು ತೋರಿಸುವ ಯೋಜನೆಗಳನ್ನೊಳಗೊಂಡಿದೆ. ಪಶ್ಚಿಮದ ಅಭಿವೃದ್ಧಿಗಾಗಿ ಸ್ವಂತ ಆದಾಯ ಹೆಚ್ಚಳಕ್ಕೆ, ಅನುದಾನಗಳ ಸಮರ್ಪಕ ಬಳಕೆಗೆ ಒತ್ತು ನೀಡಲಾಗಿದೆ.

ಶನಿವಾರ ಜಲಮಂಡಳಿಯ ಸುವರ್ಣಭವನದಲ್ಲಿ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಬಜೆಟ್ ಮಂಡಿಸಿದ್ದು, ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳನ್ನು ಗುರುತಿಸುವ ಗುರಿ ಹೊಂದಿದೆ. ಈ ನಿಟ್ಟಿನಲ್ಲಿ ಕಂದಾಯ ವಿಭಾಗಕ್ಕೆ 1964.60 ಕೋಟಿ ರು. ಆದಾಯದ ಗುರಿಯಿದ್ದು, 872 ಕೋಟಿ ರು ಆಸ್ತಿ ತೆರಿಗೆ ರು.ಪದಲ್ಲಿ ಸಂಗ್ರಹಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಬಿ-ಖಾತಾದಿಂದ ಎ-ಖಾತಾಗೆ ಪರಿವರ್ತನೆ ಅಭಿಯಾನದಿಂದ 563 ಕೋಟಿ ರು. ಆದಾಯದ ನಿರೀಕ್ಷೆಯಿಟ್ಟಿದ್ದು, ಹೊಸ ಆಸ್ತಿ ನೋಂದಣಿ ಮತ್ತು ಇ-ದಾಖಲೆಗಳ ವ್ಯವಸ್ಥೆಯಿಂದ ಹೆಚ್ಚುವರಿ ಆದಾಯವೂ ಲಭಿಸುವ ಸಾಧ್ಯತೆಯಿದೆ. ಹೊಸ ಜಾಹೀರಾತು ನೀತಿಯಡಿ ಖಾಸಗಿ ಸಂಸ್ಥೆಗಳಿಗೆ ಟೆಂಡರ್ ಮೂಲಕ ಅವಕಾಶ ನೀಡುವುದರಿಂದ 116 ಕೋಟಿ ಸಂಗ್ರಹದ ಜತೆಗೆ 50 ಸ್ಕೈವಾಕ್‌ಗಳ ಮೇಲೆ ಜಾಹೀರಾತು ಅಳವಡಿಸಿಹೆಚ್ಚುವರಿ ಆದಾಯ ನಿರೀಕ್ಷಿಸಲಾಗಿದೆ. ಭೂಸ್ವಾಧೀನ ಹಾಗೂ ಟಿಡಿಆರ್ ಕೋಶ ಸ್ಥಾಪನೆ, ಟಿಡಿಆರ್ ಎಕ್ಸ್‌ಚೇಂಜ್ ಸೇರಿದಂತೆ ಮೂಲಸೌಕರ್ಯ ಯೋಜನೆಗಳಿಗೆ ವೇಗ ನೀಡಲು ಹಲವು ಯೋಜನೆಗಳನ್ನಿಟುಕೊಂಡು ಬಜೆಟ್ ನಿರ್ಮಿಸಲಾಗಿದ್ದು, ಇಟ್ಟುಮಡು, ಕುರುಬರಹಳ್ಳಿ, ಮಹಾಲಕ್ಷ್ಮೀಪುರಂ, ಹನುಮಂತನಗರ, ತ್ಯಾಗರಾಜನಗರ ಸೇರಿ ಹಲವೆಡೆ ರಸ್ತೆ ಅಗಲೀಕರಣಕ್ಕೆ ಹಲವು ಯೋಜನೆಗಳನ್ನು ಉಲ್ಲೇಖಿಸಲಾಗಿದೆ. 200 ಕೋಟಿ ರು. ಮುನ್ಸಿಪಲ್ ಬಾಂಡ್ ಹೊರಡಿಸುವ ಯೋಜನೆಯಿದ್ದು, ಕೇಂದ್ರದಿಂದ 26 ಕೋಟಿ ರು. ಪ್ರೋತ್ಸಾಹಧನದ ನಿರೀಕ್ಷೆಯೊಂದಿಗೆ 226 ಕೋಟಿ ಬಂಡವಾಳವನ್ನು ಕಾಮಗಾರಿಗಳಿಗೆ ಬಳಸಲಾಗುತ್ತದೆ.

ಪ್ರಮುಖ ಆದಾಯ ಮೂಲಗಳು

- ಬಿ-ಖಾತಾ, ಎ-ಖಾತಾಗೆ ಪರಿವರ್ತನೆ ಮೂಲಕ 563 ಕೋಟಿ ಆದಾಯ ನಿರೀಕ್ಷೆ
- ಹೊಸ ಖಾತಾ ನೋಂದಣಿ ಮೂಲಕ ರು.18 ಕೋಟಿ ಸಂಗ್ರಹ ಗುರಿ
- ಜಾಹೀರಾತು ನೀತಿಯಿಂದ ರು.116 ಕೋಟಿ ಆದಾಯ ನಿರೀಕ್ಷೆ
- ಪ್ರೀಮಿಯಂ ಎಫ್‌ಎಆರ್ ನೀತಿಯಿಂದ ರು.380 ಕೋಟಿ ಸಂಗ್ರಹ ನಿರೀಕ್ಷೆ
- ಸಿಂಗಲ್ ಪ್ಲಾಟ್ ಅಪ್ರೂವಲ್ ಮೂಲಕ ರು.200 ಕೋಟಿ ಆದಾಯ ಗುರಿ

ಪಶ್ಚಿಮ ನಗರ ಪಾಲಿಕೆ ಬಜೆಟ್ ಮುಖ್ಯಾಂಶಗಳು

- 4,732 ಕೋಟಿ ರು. ಬಜೆಟ್‌ನಲ್ಲಿ ಶೇ.60ರಷ್ಟು ಹಣ ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲು.
- ಘನತ್ಯಾಜ್ಯ ನಿರ್ವಹಣೆಗೆ 322 ಕೋಟಿ ರು.
- ಆರೋಗ್ಯ, ಶಿಕ್ಷಣ, ಕಲ್ಯಾಣ ಕಾರ್ಯಕ್ರಮಗಳಿಗೆ 242 ಕೋಟಿ ರು.
- ಒಂಟಿ ಮನೆ ಯೋಜನೆಯಡಿ 71 ಕೋಟಿ ರು. ವೆಚ್ಚದಲ್ಲಿ ವಸತಿ ಯೋಜನೆ.
- ಬಡ ಸಮುದಾಯದ ಜನರಿಗೆ 334 ಕೋಟಿ ರು ಸಹಾಯಧನ.
- 496 ಪಾರ್ಕ್‌ಗಳ ನಿರ್ವಹಣೆಗೆ 47 ಕೋಟಿ ರು.
- 00 ಮಿಯಾವಕಿ ಕಾಡುಗಳ ನಿರ್ಮಾಣಕ್ಕೆ ಕ್ರಮ.
- 9 ಕೆರೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ 30 ಕೋಟಿ ರು.
- ಕೋಟಿ ರು. ವೆಚ್ಚದಲ್ಲಿ ಮಕ್ಕಳಿಗೆ ಕರ್ನಾಟಕ ದರ್ಶನ ಪ್ರವಾಸ ಯೋಜನೆ
- 5 ವಾರ್ಡ್‌ಗಳ ಶಾಲೆಯನ್ನ ಸ್ಮಾರ್ಟ್ ಶಾಲೆಗಳನ್ನಾಗಿ ಪರಿವರ್ತಿಸುವುದು.

ಪ್ರಮುಖ ಅಂಕಿಅಂಶಗಳು

- ಒಟ್ಟು ನಿರೀಕ್ಷಿತ ಆದಾಯ: ರು.1964.60 ಕೋಟಿ
- ಬಿ-ಖಾತೆಯಿಂದ ಎ-ಖಾತೆಗೆ ಪರಿವರ್ತನೆ ಮೂಲಕ: ರು.563 ಕೋಟಿ ಆದಾಯ ನಿರೀಕ್ಷೆ
- ಹೊಸ ಖಾತಾ ನೋಂದಣಿ : ರು.18 ಕೋಟಿ ಆದಾಯ
- ಜಾಹೀರಾತು ನೀತಿಯಿಂದ: ರು.116 ಕೋಟಿ ಆದಾಯ
- ಸ್ಕೈವಾಕ್ ಜಾಹೀರಾತುಗಳಿಂದ: ರು.2 ಕೋಟಿ ಆದಾಯ
- ಪ್ರೀಮಿಯಂ ಎಫ್‌ಎಆರ್ ನೀತಿಯಿಂದ: ರು.380 ಕೋಟಿ ಆದಾಯ
- ಸಿಂಗಲ್ ಪ್ಲಾಟ್ ಅನುಮೋದನೆಗಳಿಂದ: ರು.200 ಕೋಟಿ ಆದಾಯ
- ವಿವಿಧ ಅನುಮೋದನೆ ಶುಲ್ಕಗಳಿಂದ: ರು.254.20 ಕೋಟಿ ಸಂಗ್ರಹ

ಭೂಸ್ವಾಧೀನ ಮತ್ತು ಮೂಲಸೌಕರ್ಯ

- ರಸ್ತೆ, ಪಾರ್ಕಿಂಗ್ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ರು.20 ಕೋಟಿ ಮೀಸಲು
- ಟಿಡಿಆರ್ ವ್ಯವಸ್ಥೆ ಜಾರಿಗೆ ಕ್ರಮ
- ಖಾಲಿ ಜಾಗಗಳಿಗೆ ಫೆನ್ಸಿಂಗ್ ಯೋಜನೆಗೆ ರು.5 ಕೋಟಿ ಮೀಸಲು

ಸಮಾಚಾರ ಸಣ್ಣದಲ್ಲ

ಏ.15ಕ್ಕೆ ಕ್ರೈಸ್ತ ವಸತಿ ಶಾಲೆ ಕಾರ್ಮಿಕರ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರೈಸ್ತ ವಸತಿ ಶಾಲೆಗಳ ಹೊರಗುತ್ತಿಗೆ ರಾಜ್ಯ ಡಿ ಗ್ರೂಪ್ ನೌಕರರ ವತಿಯಿಂದ ಏ.15 ರಂದು ಬೆ.11ಕ್ಕೆ ನಗರದ ಫ್ರೀಡಂ ಪಾರ್ಕ್ ನಲ್ಲಿ ರಾಜ್ಯ ಮಟ್ಟದ ಪ್ರತಿಭಟನೆಯನ್ನು ಆಯೋಜಿಸಲಾಗಿದೆ ಎಂದು ಸಂಘದ ಗೌರವಾಧ್ಯಕ್ಷ ಆರ್.ಮಾನಸಯ್ಯ ತಿಳಿಸಿದರು. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸರಕಾರಿ ಕ್ರೈಸ್ತ ವಸತಿ ಶಾಲೆಗಳಲ್ಲಿ ಸರಾಸರಿ 5-7 ಸಿಬ್ಬಂದಿಯ ಕೊರತೆಯಿದ್ದು ,ಕೆಲಸದ ಭಾರ ತಗ್ಗಿಸಲು ಹಾಗೂ ಎಂಟು ಗಂಟೆ ಕೆಲಸ ಅನ್ವಯಿಸಲು ಹೆಚ್ಚುವರಿ ಕೆಲಸಗಾರರನ್ನು ನೇಮಕ ಮಾಡಬೇಕು. ಗುತ್ತಿಗೆ ಪದ್ಧತಿಯನ್ನು ರದ್ದು ಮಾಡಿ ಎಲ್ಲಾ ವಸತಿ ಶಾಲೆಗಳ ಕಾರ್ಮಿಕರನ್ನು ಖಾಯಂ ಗೊಳಿಸಬೇಕು.ಅಲ್ಲಿಯವರೆಗೆ ಸಿಬ್ಬಂದಿಗೆ ವೇತನ ಪರಿಷ್ಕರಿಸಿ ಸಮಾನ ದುಡಿಮೆಗೆ ಸಮಾನ ವೇತನ ನೀಡಬೇಕೆಂದು ಆಗ್ರಹಿಸಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಈ ವೇಳೆ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ,ಉಪಾಧ್ಯಕ್ಷ ರಂಗನಾಥ್ ಮಸ್ಕಿ ಸೇರಿದಂತೆ ಮತ್ತಿತರರು ಇದ್ದರು.

ವಿರಾಮ
ಪ್ರತಿ ಭಾನುವಾರ

ಏಜೆಂಟಿಕ್ ಎಐ ಕಾರ್ಯಾಗಾರಕ್ಕೆ ತೆರೆ

ಬೆಂಗಳೂರು: ಕೃತಕ ಬುದ್ಧಿಮತ್ತೆ ವಿದ್ಯಾರ್ಥಿಗಳ ಹೊಸ ಚಿಂತನೆಗೆ ವೇದಿಕೆಯಾಗುತ್ತದೆ. ಎಐನಿಂದ ಕೆಲವು ಉದ್ಯೋಗಗಳು ನಶಿಸಬಹುದು ಆದರೆ ಅದಕ್ಕಿಂತ ಹೆಚ್ಚು ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ ಎಂದು ಉನ್ನತ ಶಿಕ್ಷಣ ಇಲಾಖೆ ಸಚಿವ ಡಾ.ಎಂ.ಸಿ.ಸುಧಾಕರ್ ವಿಶ್ವಾಸ ವ್ಯಕ್ತಪಡಿಸಿದರು.'ಏಜೆಂಟಿಕ್ ಎಐ ಸಕ್ಷಮ್' ಕಾರ್ಯಗಾರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಏಜೆಂಟಿಕ್ ಎಐ ಎಂಬ ಹೊಸ ಪರಿಕಲ್ಪನೆಗೆ ತೆರೆದುಕೊಂಡಿದ್ದು ಹಲವು ಕ್ಷೇತ್ರಗಳಲ್ಲಿ ಅವಕಾಶಗಳು ಸೃಷ್ಟಿಯಾಗಲಿದೆ. ಉದ್ಯೋಗ ನಷ್ಟ ಭಯ ಸೃಷ್ಟಿಯಾಗಿದ್ದು ಇತಿಹಾಸ ನೋಡಿದರೆ ಕಂಪ್ಯೂಟರ್ ಬಂದಾಗಲೂ ಇದೇ ರೀತಿಯ ಆತಂಕ ಸೃಷ್ಟಿಯಾಗಿತ್ತು. ಆದರೆ ಕಾಲಕ್ರಮೇಣ ಅದು ಹೊಸ ಅವಕಾಶವನ್ನು ಸೃಷ್ಟಿಸಿತು ಅದೇ ರೀತಿ ಅಐ ಕೂಡ ಹೊಸ ಅವಕಾಶ ತೆರೆದಿಡಲಿದೆ ಎಂದು ತಿಳಿಸಿದರು.ಏಜೆಂಟಿಕ್ ಎಐ ಸಕ್ಷಮ್ ಕಾರ್ಯಗಾರ ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕ, ನವೀನ, ಜ್ಞಾನಧಾರಿತ ವ್ಯಕ್ತಿಗಳಾಗಿ ರೂಪಿಸುತ್ತದೆ. ಭವಿಷ್ಯದ ಉದ್ಯಮಿಗಳನ್ನೂ ರೂಪಿಸಲು ಸಹಾಯಕವಾಗಿದೆ. ಕಲಿಕೆಯು ಎಂದಿಗೂ ನಿಲ್ಲದ ಪ್ರಕ್ರಿಯೆಯಾಗಿದ್ದು ಕೌಶಲ್ಯ ಅಭಿವೃದ್ಧಿ ವಿದ್ಯಾರ್ಥಿಗಳಲ್ಲಿ ಬಲ ತುಂಬಲಿದೆ. ಬೆಂಗಳೂರು ವಿವಿ ಏಜೆಂಟಿಕ್ ಎಐ ಸಕ್ಷಮ್ ಆಯೋಜನೆ ಮೂಲಕ ಮುಂಚೂಣಿಯಲ್ಲಿದ್ದು ಇತರೆ ವಿಶ್ವವಿದ್ಯಾಲಯಗಳಿಗೂ ಮಾದರಿಯಾಗಲಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಏಜೆಂಟಿಕ್ ಎಐ ಸಕ್ಷಮ್ ಹ್ಯಾಕಾಥಾನ್‌ನಲ್ಲಿ 90 ಕ್ಕೂ ಅಧಿಕ ತಂಡಗಳು ನೊಂದಣಿಯಾಗಿದ್ದು ಬೆಂಗಳೂರು ನಗರ ವಿವಿ ಯ ವಿದ್ಯಾರ್ಥಿಗಳ ತಂಡ ಮೊದಲ ಸ್ಥಾನ ಪಡೆದಿದ್ದು ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ಈ ವೇಳೆ ಬೆಂಗಳೂರು ವಿವಿ ಕುಲಪತಿ ಡಾ.ಜಯಕರ ಎಸ್.ಎಂ, ಕುಲಸಚಿವರು ಕೆ.ಟಿ.ಶಾಂತಲಾ, ಕಾರ್ಯಕ್ರಮ ಸಂಯೋಜಕರಾದ ಡಾ. ಮುರುಳಿಧರ ಬಿ.ಎಲ್,ಪಿಎಂ ಉಷಾ ನೋಡಲ್ ಅಧಿಕಾರಿ ಪ್ರೊ.ವಿ.ಸುದೇಶ್, ಶಿಕ್ಷಣ ಸಚಿವಾಲಯದ ವಿಭಾಗಾಧಿಕಾರಿ ಡಾ.ಅಮಿತ್ ಸಿಂಗ್, ಕೇಪಬ್ಲ್ ಸಹ- ಸ್ಥಾಪಕ ಉಮಾಂಗ್ ಸುರಾನಾ, ಪಿಎಂ ಉಷಾ ಹಿರಿಯ ಸಲಹೆಗಾರರು ಅನನ್ಯ ಪಟ್ಟನಾಯಕ ಇದ್ದರು.

ಪ್ರಶಾಂತ್ ನಗರದಲ್ಲಿ ಶ್ರೀರಾಮ ನವಮಿ

ಬೆಂಗಳೂರು: ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಪ್ರಶಾಂತ್ ನಗರ ಸರ್ಕಲ್‌ನಲ್ಲಿ ಶ್ರೀರಾಮ ನವಮಿ ಹಬ್ಬವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಡಾ.ಅರುಣ್ ಸೋಮಣ್ಣನವರ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಲಾಗಿದ್ದ ಈ ಪೂಜಾ ಸಮಾರಂಭದಲ್ಲಿ ಭಾಗವಹಿಸಿದ್ದ ಡಾ. ಅರುಣ್ ಸೋಮಣ್ಣನವರು, ನೆರೆದಿದ್ದ ಸಾವಿರಾರು ಭಕ್ತಾದಿಗಳಿಗೆ ಪಾನಕ ಹಾಗೂ ಮಜ್ಜಿಗೆ ವಿತರಿಸುವ ಮೂಲಕ ಹಬ್ಬದ ಶುಭಾಶಯಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಡಾ. ಅರುಣ್ ಸೋಮಣ್ಣನವರು, ಶ್ರೀರಾಮಚಂದ್ರನ ಆದರ್ಶಗಳು ಇಂದಿನ ಸಮಾಜಕ್ಕೆ ದಾರಿದೀಪವಾಗಿದ್ದು, ಸಮಾಜದಲ್ಲಿ ಶಾಂತಿ ಮತ್ತು ಸಾಮರಸ್ಯ ನೆಲೆಸಲು ರಾಮನ ತತ್ವ ಅಳವಡಿಸಿಕೊಳ್ಳುವುದು ಅತ್ಯಗತ್ಯ. ಅಯೋಧ್ಯೆಯಲ್ಲಿ ಬಾಲರಾಮನ ಪ್ರತಿಷ್ಠಾಪನೆಯಾದ ನಂತರ ಬರುತ್ತಿರುವ ಈ ರಾಮನವಮಿಯು ಎಲ್ಲರ ಜೀವನದಲ್ಲಿ ಹೊಸ ಚೈತನ್ಯ ತುಂಬಲಿ. ಈ ಬೇಸಿಗೆಯ ಬಿಸಿಲಿನಲ್ಲಿ ಭಕ್ತಾದಿಗಳಿಗೆ ಸೇವೆ ಸಲ್ಲಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಪಾನಕ-ಮಜ್ಜಿಗೆ ವಿತರಣಾ ಕಾರ್ಯಕ್ರಮವು ತೃಪ್ತಿ ನೀಡಿದೆ. ಗೋವಿಂದರಾಜನಗರದ ಜನರ ಸುಖ-ಸಮೃದ್ಧಿಗಾಗಿ ನಾನು ಸದಾ ಪ್ರಾರ್ಥಿಸುತ್ತೇನೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಂ.ಚೆನ್ನಪ್ಪ, ದಾಸೇಗೌಡ್ರು, ವಿಶ್ವನಾಥಗೌಡ್ರು, ಎಚ್.ರಮೇಶ್, ಪಿ.ಮೂರ್ತಿ, ಜಗದೀಶ್, ಪಲ್ಲವಿ ಚೆನ್ನಪ್ಪ, ಬಾರ್ ರಾಮಣ್ಣ, ಚೇತನ್‌ಗೌಡ ಸೇರಿದಂತೆ ಅಭಿಮಾನಿ ಬಳಗದ ಪ್ರಮುಖರು ಮತ್ತು ಸ್ಥಳೀಯ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

ಡಾ. ಅರುಣ್ ಸೋಮಣ್ಣ ಅಭಿಮಾನಿ ಬಳಗದ ವತಿಯಿಂದ ಶ್ರೀರಾಮನವಮಿ ಆಚರಿಸಲಾಯಿತು.

ಸಮಾಚಾರ ಸಣ್ಣದಲ್ಲ

ಬಿಜೆಪಿ ಕಚೇರಿಯೆದುರೇ ಪ್ರದೀಪ್ ಈಶ್ವರ್ ಅಬ್ಬರ

← ಮೊದಲ ಪುಟದಿಂದ

ಹಲಾಲ್, ಹಿಜಾಬ್ ಬಗ್ಗೆ ಅಗೌರವದಿಂದ ಮಾತನಾಡಿದ್ದಾರೆ. ಆದರೆ ಕಾಂಗ್ರೆಸ್ ಮುಸ್ಲಿಮರ ಸಬಲೀಕರಣಕ್ಕೆ ಶ್ರಮಿಸುತ್ತಿದೆ. ಹಿಂದುಳಿದ ವರ್ಗದವನಾದ (ಒಬಿಸಿ) ನನಗೆ ಚಪ್ಪಲಿ ತೋರಿಸಿದರು. ಇದು ಬಿಜೆಪಿಯವರ ಸಂಪ್ರದಾಯ. ಅವರ ಮುಖವಾಡ ಬಯಲಾಗಿದೆ. ಬಿಜೆಪಿಯವರಿಗೆ ಅಹಿಂದ ಬಗ್ಗೆ ಗೌರವವಿಲ್ಲ ಎಂದರು.ಅಹಿಂದ ಮತ ಸೆಳೆಯುವ ಜವಾಬ್ದಾರಿ: ರಾಜ್ಯ ನಾಯಕರ ಹಾಗೂ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಸೂಚನೆಯಂತೆ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಶನಿವಾರದಿಂದ ಪ್ರಚಾರಕ್ಕೆ ಧುಮುಕಿದ್ದಾರೆ. ಶನಿವಾರ ದಾವಣಗೆರೆ ಬಿಜೆಪಿ ಕಚೇರಿಯ ಮುಂಭಾಗದಿಂದ ಪ್ರಚಾರ ಆರಂಭಿಸುವ ಮೂಲಕ ಬಿಜೆಪಿ ಅಭ್ಯರ್ಥಿಗಳಿಗೆ ಟಾಂಗ್ ನೀಡಿದ್ದಾರೆ. ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಂ ಸಮುದಾಯವೇ ನಿರ್ಣಾಯಕ ಪಾತ್ರವಹಿಸಿದರೂ, ಪ್ರದೀಪ್ ಈಶ್ವರ್ ಅವರನ್ನು ಪ್ರಚಾರಕ್ಕೆ ಇಳಿಸುವ ಹಿಂದೆ ಯುವಕರ ಮತ ಸೆಳೆಯುವ ಹಾಗೂ ಅಹಿಂದ ಮತಗಳನ್ನು ಒಗ್ಗೂಡಿಸುವ ಲೆಕ್ಕಾಚಾರವಿದೆ ಎಂದು ಹೇಳಲಾಗುತ್ತಿದೆ.

> ಬಿಜೆಪಿಯವರು ಮುಸ್ಲಿಮರ ದೇಶಭಕ್ತಿಯನ್ನು ಪ್ರಶ್ನಿಸುತ್ತಾರೆ. ಹಿಜಾಬ್, ಹಲಾಲ್ ಬಗ್ಗೆ ಮಾತನಾಡುತ್ತಾರೆ. ಮುಸ್ಲಿಂ ಮಹಿಳೆಯರ ಬಗ್ಗೆ ಅವರಿಗೆ ಗೌರವವಿಲ್ಲ. ನಮ್ಮ ಸರಕಾರದ ಅವಧಿಯಲ್ಲಿಯೇ ಸಚಿವ ಸ್ಥಾನ, ವಿಧಾನಸಭೆಯ ಸ್ಪೀಕರ್ ಸೇರಿ ಹಲವು ಪ್ರಮುಖ ಹುದ್ದೆಗಳನ್ನು ಮುಸ್ಲಿಂ ಸಮುದಾಯಕ್ಕೆ ನೀಡಿರುವುದು ಕಾಂಗ್ರೆಸ್ ಪಕ್ಷ
> – ಪ್ರದೀಪ್ ಈಶ್ವರ್, ಶಾಸಕ

ತೃತೀಯ ಭಾಷೆಗೆ ಅಂಕವಿಲ್ಲ: ವಿದ್ಯಾರ್ಥಿಗಳಲ್ಲಿ ತೀವ್ರ ತಲ್ಲಣ

← ಮೊದಲ ಪುಟದಿಂದ

ಪರೀಕ್ಷೆ ಘೋಷಣೆಯ ಸಮಯದಲ್ಲಿ ಒಟ್ಟು 625 ಅಂಕವನ್ನು ನಿಗದಿಪಡಿಸಿ, ಬಳಿಕ 525ಕ್ಕೆ ಇಳಿಸಿರುವುದರಿಂದ ಕಾನೂನಾತ್ಮಕವಾಗಿ ಸಮಸ್ಯೆ ಯಾಗುವುದಿಲ್ಲವೇ? ಸಚಿವ ಸಂಪುಟದಲ್ಲಿ ಅನುಮೋದನೆ ಪಡೆಯದೇ ಇಂತಹ ಮಹತ್ವದ ತೀರ್ಮಾನ ಕೈಗೊಳ್ಳುವ ಅಗತ್ಯವೇನಿತ್ತು ಎನ್ನುವ ಪ್ರಶ್ನೆ ಅನೇಕ ಪೋಷಕರು ಕೇಳುತ್ತಿದ್ದಾರೆ.

ಪ್ರಸ್ತುತ ಪರೀಕ್ಷೆಗೇ ಏಕೆ?: ಒಂದು ವೇಳೆ ಕರ್ನಾಟಕದಲ್ಲಿ ದ್ವಿಭಾಷಾ ಸೂತ್ರದಲ್ಲಿಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ನಡೆಸಬೇಕು ಎನ್ನುವ ಆಲೋಚನೆ ಇದ್ದಿದ್ದರೆ ಅದನ್ನು ಪರೀಕ್ಷೆ ಘೋಷಿಸುವ ಮೊದಲೇ ಸ್ಪಷ್ಟಪಡಿಸಬೇಕಿತ್ತು. ಇಲ್ಲವಾದರೆ, ಈ ಶೈಕ್ಷಣಿಕ ವರ್ಷದ ಬಳಿಕ ತೀರ್ಮಾನಿಸಬಹುದಾಗಿತ್ತು. ಆದರೆ ಅದನ್ನು ಮಾಡದೇ ಪರೀಕ್ಷೆ ನಡೆಯುತ್ತಿರುವ ಸಮಯದಲ್ಲಿಯೇ ಈ ರೀತಿಯ ಗ್ರೇಡಿಂಗ್ ವ್ಯವಸ್ಥೆ ಪರಿಚಯಿಸುವ ಅವಸರವೇನಿತ್ತು? ಎನ್ನುವುದು ತಜ್ಞರ ಪ್ರಶ್ನೆಯಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಜಿಲ್ಲೆಯಲ್ಲಿ ಶೇ.100 ರಷ್ಟು ಡಿಜಿಟಲೀಕರಣ ಪೂರ್ಣ | ಭೂ-ಸುರಕ್ಷಾ ಯೋಜನೆ ಪರಿಣಾಮಕಾರಿ ಅನುಷ್ಠಾನ | ಜಿಲ್ಲಾಡಳಿತಕ್ಕೆ ಮೆಚ್ಚುಗೆ

ಭೂ ದಾಖಲೆ ಡಿಜಿಟಲೀಕರಣ: ರಾಜ್ಯಕ್ಕೆ ಕಲಬುರಗಿ ಮಾದರಿ

ದೇವೇಂದ್ರ ಜಾಡಿ ಕಲಬುರಗಿ

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಭೂ-ಸುರಕ್ಷಾ ಯೋಜನೆಯು ಭೂ ದಾಖಲೆಗಳ ಸಂರಕ್ಷಣೆಯಲ್ಲಿ ಹೊಸ ಕ್ರಾಂತಿ ಸೃಷ್ಟಿಸುತ್ತಿದೆ. ಕಲಬುರಗಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಈ ಯೋಜನೆಯಡಿ ಹಳೆಯ ಭೂ ದಾಖಲೆಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣ ಪ್ರಕ್ರಿಯೆ ನೂರಕ್ಕೆ ನೂರರಷ್ಟುಯಶಸ್ವಿಯಾಗಿ ಪೂರ್ಣಗೊಂಡಿದೆ. ಕಲಬುರಗಿ ಜಿಲ್ಲಾಡಳಿತದ ಪರಿಣಾಮಕಾರಿ ನಡೆ ರಾಜ್ಯಕ್ಕೆ ಮಾದರಿ ಆಗಿದೆ. ಇದರ ಫಲವಾಗಿ ಜಮೀನಿನ ಹಳೆ ದಾಖಲೆಗಳಿಗಾಗಿ ರೈತರ ಕಚೇರಿ ಅಲೆದಾಟ ತಪ್ಪಲಿದೆ.

ಚಿಂಚೋಳಿಯಿಂದ ಶುರುವಾದ ಯಶಸ್ಸು: ಮೊದಲು ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕನ್ನು ಪೈಲಟ್ ಯೋಜನೆಯಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು. ಫೆಬ್ರವರಿ 2024 ರಿಂದ ಆಗಸ್ಟ್ 2024 ರ ಅವಧಿಯಲ್ಲಿ ಸುಮಾರು 16.52 ಲಕ್ಷ ಪುಟಗಳ ದತ್ತಾಂಶವನ್ನು ಡಿಜಿಟಲೀಕರಿಸಲಾಯಿತು. ಈ ಯಶಸ್ಸಿನ ಬೆನ್ನಲ್ಲೇ ಜಿಲ್ಲೆಯ ಉಳಿದ ಎಲ್ಲಾ ತಾಲೂಕುಗಳಿಗೂ ಯೋಜನೆಯನ್ನು ವಿಸ್ತರಿಸಲಾಗಿದ್ದು, ಜನವರಿ 2025 ರಿಂದ ಪೂರ್ಣ ಪ್ರಮಾಣದ ಕೆಲಸಗಳು ಆರಂಭವಾಗಿದ್ದವು. ಕೇವಲ ಒಂದೂವರೆ ವರ್ಷದ ಅವಧಿಯಲ್ಲಿ ಇಡೀ ಜಿಲ್ಲೆಯನ್ನೇ ಡಿಜಿಟಲ್ ಮಯವಾಗಿಸಿದೆ. ಜೂನ್ 1, 2025 ರಿಂದಲೇ ಈ ದಾಖಲೆಗಳು ಡಿಜಿಟಲ್ ಸಹಿಯೊಂದಿಗೆ ಸಾರ್ವಜನಿಕರ ಕೈಸೇರುತ್ತಿರುವುದು ಆಡಳಿತದ ವೇಗಕ್ಕೆ ಹಿಡಿದ ಕನ್ನಡಿಯಾಗಿದೆ.

1.39 ಕೋಟಿ ಪುಟಗಳ ದತ್ತಾಂಶ ಲಭ್ಯ: ಕಲಬುರಗಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸೇರಿ ಒಟ್ಟು 1,38,81,963 ಪುಟಗಳನ್ನು ಡಿಜಿಟಲೀಕರಿಸುವ ಗುರಿ ಹೊಂದಲಾಗಿತ್ತು. ಆದರೆ, ನಿರೀಕ್ಷೆಗಿಂತಲೂ ಹೆಚ್ಚಿನ ಅಂದರೆ 1,39,41,869 ಪುಟಗಳನ್ನು ಸ್ಕ್ಯಾನ್ ಮಾಡಿ ಸಾಫ್ಟ್‌ವೇರ್‌ಗೆ ಅಪ್‌ಲೋಡ್ ಮಾಡಲಾಗಿದೆ. ಈ ಮೂಲಕ ಶೇ. 100.40 ರಷ್ಟು ಪ್ರಗತಿ ಸಾಧಿಸಲಾಗಿದೆ. ಈಗಾಗಲೇ ಶೇ. 94.61 ರಷ್ಟು ದಾಖಲೆಗಳನ್ನು ಶಿರಸ್ತೇದಾರರು ಪರಿಶೀಲಿಸಿ ಅನುಮೋದಿಸಿದ್ದು, ಜೂನ್ 1, 2025 ರಿಂದಲೇ ಇವು ಡಿಜಿಟಲ್ ಸಹಿಯೊಂದಿಗೆ ಸಾರ್ವಜನಿಕರಿಗೆ ಆನ್‌ಲೈನ್‌ನಲ್ಲಿ ಲಭ್ಯವಾಗುತ್ತಿವೆ.

ಡಿಸಿ ಮತ್ತು ಎಸಿ ಕಚೇರಿಗಳಲ್ಲೂ ಪ್ರಗತಿ: ತಾಲೂಕು ಮಟ್ಟದ ಯಶಸ್ಸಿನ ನಂತರ ಈಗ ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿ ಕಚೇರಿಗಳಲ್ಲಿನ ದಾಖಲೆಗಳ ಡಿಜಿಟಲೀಕರಣಕ್ಕೆ ಚಾಲನೆ ನೀಡಲಾಗಿದೆ. ಪ್ರಸ್ತುತ ಕಲಬುರಗಿ ಜಿಲ್ಲೆಯಲ್ಲಿ ಈ ಪ್ರಕ್ರಿಯೆಯು ಶೇ. 22.52 ರಷ್ಟು ಪೂರ್ಣಗೊಂಡಿದೆ. ಕಲಬುರಗಿ ಡಿಸಿ ಕಚೇರಿಯಲ್ಲಿ ಶೇ. 31.52, ಕಲಬುರಗಿ ಎಸಿ ಕಚೇರಿಯಲ್ಲಿ ಶೇ. 13.47 ಹಾಗೂ ಸೇಡಂ ಎಸಿ ಕಚೇರಿಯಲ್ಲಿ ಶೇ. 11.12 ರಷ್ಟು ಪ್ರಗತಿ ದಾಖಲಾಗಿದೆ.

ನಾಗರಿಕರ ಪೋರ್ಟಲ್: ಸೌಲಭ್ಯಗಳ ಮಾಹಿತಿ: ಭೂ-ಸುರಕ್ಷಾ ಯೋಜನೆಯಡಿ ಡಿಜಿಟಲೀಕರಣಗೊಂಡ ದಾಖಲೆಗಳು ಈಗ ನಾಗರಿಕರ ಬೆರಳ ತುದಿಯಲ್ಲಿವೆ. ಸಾರ್ವಜನಿಕರು ಆನ್‌ಲೈನ್ ಪೋರ್ಟಲ್ ಅಥವಾ ನಾಡಕಚೇರಿಗಳ ಮೂಲಕ ಅರ್ಜಿ ಸಲ್ಲಿಸಿ, ಡಿಜಿಟಲ್ ಸಹಿಯಿರುವ ಅಧಿಕೃತ ದಾಖಲೆಗಳನ್ನು ಪಡೆಯಬಹುದು. ಒಂದು ವೇಳೆ ದಾಖಲೆ ಲಭ್ಯವಿಲ್ಲದಿದ್ದರೆ, ಕೇವಲ 7 ದಿನಗಳಲ್ಲಿ ಡಿಜಿಟೈಸ್ ಮಾಡಿ ನೀಡುವ ಭರವಸೆ ನೀಡಲಾಗಿದೆ. ಇದು ಪಾರದರ್ಶಕತೆ ಹೆಚ್ಚಿಸುವುದಲ್ಲದೆ, ಮಧ್ಯವರ್ತಿಗಳ ಹಾವಳಿ ಮತ್ತು ಕಚೇರಿ ಅಲೆದಾಟವನ್ನು ಸಂಪೂರ್ಣವಾಗಿ ತಪ್ಪಿಸಲಿದೆ.

ಕಲಬುರಗಿಯ ಈ ಯಶಸ್ಸು ರಾಜ್ಯ ಸರಕಾರಕ್ಕೆ ದೊಡ್ಡ ಬಲ ತುಂಬಿದೆ. ಹಿಂದುಳಿದ ಜಿಲ್ಲೆ ಎನ್ನುವ ಹಣೆಪಟ್ಟಿ ಅಳಿಸಿ, ತಂತ್ರಜ್ಞಾನ ಬಳಕೆಯಲ್ಲಿ ಕಲಬುರಗಿ ಮೊದಲ ಸಾಲಿನಲ್ಲಿ ನಿಂತಿರುವುದು ಇಡೀ ರಾಜ್ಯಕ್ಕೆ ಹೆಮ್ಮೆಯ ವಿಷಯ. ಮುಂಬರುವ ದಿನಗಳಲ್ಲಿ ಇತರ ಜಿಲ್ಲೆಗಳಿಗೂ ಕಲಬುರಗಿ ಮಾದರಿಯನ್ನು ವಿಸ್ತರಿಸಲು ಸರಕಾರ ಚಿಂತನೆ ನಡೆಸುತ್ತಿದೆ.

ರೈತರ ಸಂಕಷ್ಟಕ್ಕೆ ಡಿಜಿಟಲ್ ಮುಕ್ತಿ

ಈ ಯೋಜನೆಯ ಯಶಸ್ಸಿನಿಂದಾಗಿ ಕಲಬುರಗಿ ಭಾಗದ ರೈತರ ಪಾಲಿಗೆ ಹೊಸ ಭರವಸೆ ಮೂಡಿದ್ದು, ಮಧ್ಯವರ್ತಿಗಳ ಹಾವಳಿ ಇಲ್ಲದೆ, ಕಚೇರಿಗಳಿಗೆ ಅಲೆಯುವ ಪ್ರಮೇಯವಿಲ್ಲದೆ ತಮ್ಮ ಜಮೀನಿನ ಹಳೆಯ ದಾಖಲೆಗಳನ್ನು ಆನ್‌ಲೈನ್‌ನಲ್ಲೇ ಪಡೆಯಬಹುದು. ಒಮ್ಮೆ ಡಿಜಿಟಲೀಕರಣಗೊಂಡು ಅಧಿಕಾರಿಗಳಿಂದ ಅನುಮೋದನೆ ಪಡೆದ ನಂತರ, ಈ ದಾಖಲೆಗಳಲ್ಲಿ ಯಾವುದೇ ಅಕ್ರಮ ತಿದ್ದುಪಡಿ ಅಥವಾ ವಂಚನೆ ಮಾಡಲು ಸಾಧ್ಯವಿಲ್ಲ. ಭೂ ವಿವಾದಗಳು ಅಥವಾ ಸಾಲ ಸೌಲಭ್ಯಗಳಿಗಾಗಿ ಹಳೆಯ ದಾಖಲೆ ಬೇಕಾದಲ್ಲಿ, ಕೇವಲ ಏಳು ದಿನಗಳೊಳಗೆ ಅದು ಸಾರ್ವಜನಿಕರಿಗೆ ಲಭ್ಯವಾಗಲಿದೆ.

ನಾಗರಿಕರಿಗೆ ಏನು ಪ್ರಯೋಜನ?

- **ಆನ್‌ಲೈನ್ ಲಭ್ಯತೆ:** ನಾಗರಿಕರು ತಮ್ಮ ಭೂ ದಾಖಲೆಗಳನ್ನು ಆನ್‌ಲೈನ್ ಮೂಲಕ ಅಥವಾ ನಾಡಕಚೇರಿಗಳಲ್ಲಿ ಅರ್ಜಿ ಸಲ್ಲಿಸಿ ಡಿಜಿಟಲ್ ಪ್ರತಿ ಪಡೆಯಬಹುದು.
- **ತ್ವರಿತ ಸೇವೆ:** ದಾಖಲೆಗಳು ಡಿಜಿಟಲ್ ರೂಪದಲ್ಲಿದ್ದರೆ ಅದೇ ದಿನ ಪಡೆಯಬಹುದು. ಒಂದು ವೇಳೆ ಲಭ್ಯವಿಲ್ಲದಿದ್ದರೆ, 7 ದಿನಗಳ ಒಳಗೆ ಡಿಜಿಟೈಸ್ ಮಾಡಿ ನೀಡುವ ಭರವಸೆ ನೀಡಲಾಗಿದೆ.
- **ಸುರಕ್ಷತೆ:** ಈ ದಾಖಲೆಗಳು ಡಿಜಿಟಲ್ ಸಹಿ ಹೊಂದಿರುವುದರಿಂದ ಹೆಚ್ಚು ವಿಶ್ವಾಸಾರ್ಹ. ಇವುಗಳಲ್ಲಿ ಅಕ್ರಮ ಬದಲಾವಣೆ ಅಥವಾ ತಿದ್ದುಪಡಿ ಮಾಡಲು ಸಾಧ್ಯವಿಲ್ಲ.
- **ವ್ಯವಹಾರಕ್ಕೆ ಸುಲಭ:** ಜಮೀನು ಮಾರಾಟ, ಗಿರವಿ ಅಥವಾ ಕಾನೂನು ವಿವಾದಗಳ ಸಂದರ್ಭದಲ್ಲಿ ಈ ದಾಖಲೆಗಳು ಅಧಿಕೃತ ಆಧಾರವಾಗಲಿವೆ.

> ಭೂ-ಸುರಕ್ಷಾ ಯೋಜನೆಯು ರೈತರ ಭೂ ದಾಖಲೆಗಳ ಸಮಗ್ರತೆಯನ್ನು ಕಾಪಾಡುವಲ್ಲಿ ಮೈಲಿಗಲ್ಲಾಗಿದೆ. ಕಲಬುರಗಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ 1.39 ಕೋಟಿಗೂ ಅಧಿಕ ಪುಟಗಳ ಸ್ಕ್ಯಾನಿಂಗ್ ಪೂರ್ಣಗೊಂಡಿದೆ. ಇದು ಅನಧಿಕೃತ ಬದಲಾವಣೆಗಳನ್ನು ತಡೆಯುವುದಲ್ಲದೆ, ನಾಗರಿಕರಿಗೆ ಪಾರದರ್ಶಕ ಮತ್ತು ವಿಶ್ವಾಸಾರ್ಹ ಸೇವೆಯನ್ನು ಒದಗಿಸುತ್ತದೆ. ಬಾಕಿ ಇರುವ ಡಿಸಿ ಮತ್ತು ಎಸಿ ಕಚೇರಿಗಳ ಡಿಜಿಟಲೀಕರಣವನ್ನೂ ಶೀಘ್ರವಾಗಿ ಪೂರ್ಣಗೊಳಿಸಲು ಆದ್ಯತೆ ನೀಡಲಾಗಿದೆ.
> -ಫೌಜಿಯಾ ತರನ್ನುಮ್, ಜಿಲ್ಲಾಧಿಕಾರಿ

ರಾಜ್ಯದ ಕೆಲವೆಡೆ ಗುಡುಗು, ಮಿಂಚು, ಮಳೆ

ಬೆಂಗಳೂರು: ರಾಜ್ಯದಲ್ಲಿ ಬಿಸಿಲಿನ ಝಳ ಹೆಚ್ಚುತ್ತಿದ್ದು, ಉತ್ತರ ಕರ್ನಾಟಕದಲ್ಲಿ ಭಾರಿ ಬಿಸಲು ಕಂಡು ಬಂದಿದ್ದರೆ ದಕ್ಷಿಣ ಒಳನಾಡು ಮತ್ತು ಕರಾವಳಿ ಭಾಗಗಳಲ್ಲಿ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಮಳೆಯಾಗುವ ಮುನ್ಸೂಚನೆ ಯಿಂದಾಗಿ 'ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಹವಾಮಾನ ಇಲಾಖೆಯ ಮಾಹಿತಿಯಂತೆ, ರಾಜ್ಯದಲ್ಲೇ ಅತಿ ಹೆಚ್ಚು ಗರಿಷ್ಠ ತಾಪಮಾನ ಕಲಬುರಗಿಯಲ್ಲಿ 38.6 ಡಿ.ಸೆ ದಾಖಲಾಗಿದೆ. ಬಳ್ಳಾರಿ, ವಿಜಯನಗರ, ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವಾಡಿಕೆಗಿಂತ 2 ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಿನ ಉಷ್ಣಾಂಶದೊಂದಿಗೆ ತೀವ್ರ ಸ್ವರೂಪದ ಬಿಸಿಲಿನ ಝಳ ಕಂಡುಬರುತ್ತಿದೆ. ವಿಜಯಪುರ, ಕೊಪ್ಪಳ ಮತ್ತು ಯಾದಗಿರಿಯಲ್ಲೂ ತಾಪಮಾನ ಏರಿಕೆಯಾಗಿದ್ದು, ಮಧ್ಯಾಹ್ನದ ವೇಳೆಗೆ ಮನೆಯಿಂದ ಹೊರಬರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಬೆಂಗಳೂರು ಹವಾಮಾನ ವರದಿ: ಬೆಂಗಳೂರಿನಲ್ಲಿ ಹವಾಮಾನದಲ್ಲಿ ಏರುಪೇರು ಮುಂದುವರಿದಿದ್ದು, ಬೆಂಗಳೂರು ನಗರದಲ್ಲಿ ಗರಿಷ್ಠ ತಾಪಮಾನ 32.6 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ತಾಪಮಾನ 21.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಬೆಳಗ್ಗೆ ಮತ್ತು ಮಧ್ಯಾಹ್ನ ಬಿಸಿಲಿನ ವಾತಾವರಣವಿದ್ದರೆ, ಸಂಜೆಯ ವೇಳೆಗೆ ಭಾಗಶಃ ಮೋಡ ಕವಿದ ವಾತಾವರಣ ನಿರ್ಮಾಣವಾಗಲಿದೆ. ನಗರದ ಒಂದೆರಡು ಕಡೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಹೊರವಲಯದಲ್ಲಿ ಸಂಜೆ ಅಥವಾ ರಾತ್ರಿಯ ವೇಳೆಗೆ ಬಿರುಗಾಳಿ ಸಹಿತ ಸಾಧಾರಣ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

14 ಜಿಲ್ಲೆಗೆ ಯೆಲ್ಲೋ ಅಲರ್ಟ್

ಬಿಸಿಲಿನ ತಾಪದ ನಡುವೆ ರಾಜ್ಯದ ಜನತೆಗೆ ಸ್ವಲ್ಪ ನಿರಾಳತೆ ಸಿಗುವ ಲಕ್ಷಣಗಳಿದ್ದು, ದಕ್ಷಿಣ ಒಳನಾಡು ಮತ್ತು ಕರಾವಳಿ ಭಾಗದಲ್ಲಿ ಮುಂಗಾರು ಪೂರ್ವ ಮಳೆ ಚುರುಕುಗೊಂಡಿದೆ. ಭಾರತೀಯ ಹವಾಮಾನ ಇಲಾಖೆ ವರದಿಯ ಪ್ರಕಾರ, ದಕ್ಷಿಣ ಕನ್ನಡ, ಉಡುಪಿ, ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಮಂಡ್ಯ ಹಾಗೂ ಬೆಂಗಳೂರು ಸೇರಿದಂತೆ ಸುಮಾರು 14 ರಿಂದ 15 ಜಿಲ್ಲೆಗಳಲ್ಲಿ ಏಪ್ರಿಲ್ 2ರವರೆಗೆ ಗುಡುಗು, ಮಿಂಚು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಈ ವೇಳೆ ಗಂಟೆಗೆ 30 ರಿಂದ 50 ಕಿ.ಮೀ. ವೇಗದಲ್ಲಿ ಬಿರುಗಾಳಿ ಬೀಸುವ ನಿರೀಕ್ಷೆಯಿರುವುದರಿಂದ, ಮುನ್ನೆಚ್ಚರಿಕಾ ಕ್ರಮವಾಗಿ ಈ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಐಪಿಎಲ್ ಟಿಕೆಟ್: ಅಶೋಕ ಹಿಟ್‌ವಿಕೆಟ್

← ಮೊದಲ ಪುಟದಿಂದ

ಸದನದಲ್ಲಿ ಚರ್ಚೆಯಾಗಿ ಕೇವಲ 24 ಗಂಟೆಗಳಲ್ಲಿಯೇ ಈ ರೀತಿಯ ಸ್ಪಂದನೆ ದೊರೆತಿರುವುದೂ ವಿವಾದವೆದ್ದಿದೆ. ಈ ಎಲ್ಲಾ ಜಟಾಪಟಿ ನಡುವೆ ಶಾಸಕ ಸುರೇಶ್ ಕುಮಾರ್ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಟಿಕೆಟ್‌ಗಳನ್ನು ನಿರಾಕರಿಸಿದ್ದಾರೆ. 'ಆಡಳಿತ ಪಕ್ಷ, ವಿಪಕ್ಷಗಳ ಶಾಸಕರ ಹೇಳಿಕೆ ಗಮನಿಸಿದ್ದೇನೆ. ವೈಯಕ್ತಿಕವಾಗಿ ಅವರ ಹೇಳಿಕೆಗಳನ್ನು ಒಪ್ಪುವುದಿಲ್ಲ. ರಾಜಕಾರಣಿಗಳೆಂದರೆ ಜನಸಾಮಾನ್ಯರು ನಮ್ಮನ್ನು ಯಾವ ರೀತಿ ನೋಡುತ್ತಾರೆ ಎಂಬುದನ್ನು ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಕಳೆದ ಬಾರಿ ಇದೇ ಐಪಿಎಲ್ ಮ್ಯಾಚ್ ಸಂದರ್ಭದಲ್ಲಿ ಆಡಳಿತ ಪಕ್ಷದ ಮೂರ್ಖತನದಿಂದ 11 ಜನ ಮುಗ್ಧರು ಪ್ರಾಣ ಕಳೆಕೊಂಡರು. ಅದನ್ನು ರಾಜ್ಯದ, ದೇಶದ ಜನರು ಮರೆತಿಲ್ಲ. ಇಂಥ ಸಂದರ್ಭದಲ್ಲಿ ಇಂಥ ಹೇಳಿಕೆಗಳ ಅವಶ್ಯಕತೆ ಇತ್ತೇ ಎಂಬುದು ನನಗಂತೂ ಅರ್ಥವಾಗುವುದಿಲ್ಲ. ನಾನಿದರ ಪರವಾಗಿ ಇಲ್ಲ. ಒಬ್ಬ ಶಾಸಕ, ಜನಪ್ರತಿನಿಧಿ ಆಗಿರುವವರು ಜನಸಾಮಾನ್ಯರಿಗಿಂತ ವಿಭಿನ್ನ, ವಿಐಪಿ ಎಂಬುದು ಖಂಡಿತವಾಗಿ ಒಳ್ಳೆಯ ಬೆಳವಣಿಗೆ ಅಲ್ಲ. ಟಿಕೆಟ್ ಪಡೆಯುವ ವಿಚಾರಕ್ಕೆ ನನ್ನ ಬೆಂಬಲ ಇಲ್ಲ' ಎಂದು ಬಿ.ವೈ.ವಿಜಯೇಂದ್ರ ಹೇಳಿದ್ದು, ಸಾಮ್ರಾಟರ ಪೇಟವನ್ನು ಉದುರಿಸಿದಂತಾಗಿದೆ.ಇದರ ಬೆನ್ನಲ್ಲೇ ಟಿಕೆಟ್ ನಿರಾಕರಿಸಿ ಬಿಜೆಪಿ ಶಾಸಕ ಸುರೇಶ್ ಕುಮಾರ್ ಕೂಡ ತಮ್ಮ ಸಾಮಾಜಿಕ ಜಾಲತಾಣದ ಪೋಸ್ಟ್ ಮೂಲಕ ತಾನು ಟಿಕೆಟ್ ತೆಗೆದುಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರಲ್ಲದೆ, ಈ ಘಟನೆ ಕುರಿತು ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ಪತ್ರ ಬರೆದಿದ್ದಾರೆ.

ಶಾಸಕರು ಐಪಿಎಲ್ ಟಿಕೆಟ್ ಸ್ವೀಕರಿಸುವುದನ್ನು ಖಂಡಿಸಿರುವ ಸುರೇಶ್ ಕುಮಾರ್ , ಮಾಧ್ಯಮಗಳಲ್ಲಿ ಸುದ್ದಿಯಾಗಿರುವಂತೆ ಪ್ರತಿಯೊಬ್ಬ ಶಾಸಕರಿಗೆ ಎರಡು ಟಿಕೆಟ್ ಹಾಗೂ ಮುಂದಿನ ದಿನಗಳಲ್ಲಿ ಐದು ಟಿಕೆಟ್ ನೀಡುವ ವಿಷಯಕ್ಕೆ ತಮ್ಮ ಸ್ಪಷ್ಟ ವಿರೋಧ ವ್ಯಕ್ತಪಡಿಸಿದ್ದಾರೆ. ಇದು ಸರಿಯಾದ ನಿರ್ಧಾರವಲ್ಲ. ವಿಧಾನಸಭೆಯಲ್ಲಿ ಚರ್ಚೆ ನಡೆದ 24 ಗಂಟೆಗಳಲ್ಲಿ ಸರಕಾರ ತಕ್ಷಣ ಘೋಷಣೆ ಮಾಡಿರುವುದು ಆಶ್ಚರ್ಯಕರ. ಜನಪ್ರತಿನಿಧಿಗಳ ವಿಷಯ ಬಂದಾಗ ಮಾತ್ರ ಕಾರ್ಯ ಕೈಗೊಳ್ಳುವುದರಿಂದ ಸಾರ್ವಜನಿಕ ನಂಬಿಕೆಗೆ ಹೊಣೆ ಬರುತ್ತದೆ. ಆ ಟಿಕೆಟ್ ಅಥವಾ ಪಾಸ್‌ಗಳನ್ನು ನಾನು ಸವಿನಯವಾಗಿ ನಿರಾಕರಿಸುತ್ತೇನೆ. ವಿಐಪಿ ಸಂಸ್ಕೃತಿ ಮುಂದುವರಿದಂತೆ ರಾಜಕಾರಣಿಗಳು ಜನರ ದೃಷ್ಟಿಯಲ್ಲಿ ಇನ್ನಷ್ಟು ಕನಿಷ್ಠರಾಗುತ್ತಾರೆ ಎಂದು ಬರೆದುಕೊಂಡಿದ್ದಾರೆ.

ಅನುದಾನ ಕೊಡಿ

ನಮ್ಮನ್ನು ಜನತೆ ಚುನಾಯಿಸಿರುವುದು, ನಾವು ಶಾಸಕರಾಗಿರುವುದು ನಮ್ಮ ಕ್ಷೇತ್ರದ, ನಮ್ಮ ರಾಜ್ಯದ, ನಮ್ಮ ದೇಶದ ಅಭಿವೃದ್ಧಿ ಕಾರ್ಯದಲ್ಲಿ ಭಾಗಿಯಾಗಲು ಹಾಗೂ ಆ ಕರ್ತವ್ಯವನ್ನು ನಿಭಾಯಿಸಿ ಜನರಿಗೆ ಅನುಕೂಲ ಮಾಡಿಕೊಡಲು. ಐಪಿಲ್ ಟಿಕೆಟ್, ಇನ್ಯಾವುದೋ ಕ್ರಿಕೆಟ್ ಪಂದ್ಯದ ಟಿಕೆಟ್, ಇದೆಲ್ಲಾ ಬೇಡ, ನಮ್ಮ ನಮ್ಮ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಬೇಕಾದ ಆರ್ಥಿಕ ನೆರವು, ಸಾಧನ, ಸಂಪನ್ಮೂಲಗಳನ್ನು ಬಿಡುಗಡೆ ಮಾಡಬೇಕಾಗಿ ರಾಜ್ಯ ಸರಕಾರವನ್ನು ಶಾಸಕ ಹರೀಶ್ ಪೂಂಜಾ ಒತ್ತಾಯಿಸಿದ್ದಾರೆ.

ಇರಾನ್ ಅಣುಸ್ಥಾವರಕ್ಕೇ ಬಿತ್ತು ಇಸ್ರೇಲ್ ಕ್ಷಿಪಣಿ: ವಿಕಿರಣ ಭೀತಿ

← ಮೊದಲ ಪುಟದಿಂದ

ಇಸ್ರೇಲ್‌ನಲ್ಲಿ ಕ್ಷೋಭೆ: ಇರಾನ್ ಶುಕ್ರವಾರ ತಡರಾತ್ರಿ ಇಸ್ರೇಲ್ ಮೇಲೆ 3 ಕ್ಷಿಪಣಿಗಳನ್ನು ಹಾರಿಸಿದೆ. ಜೆರುಸಲೇಮ್ ಮತ್ತು ಟೆಲ್ ಅವಿವ್ ಮೇಲೆ ಅಪ್ಪಳಿಸಿದ ಕ್ಷಿಪಣಿ ಪರಿಣಾಮ 52 ವರ್ಷದ ವ್ಯಕ್ತಿಯೊಬ್ಬ ಮೃತಪಟ್ಟಿದ್ದಾರೆ, ಹಲವರು ಗಾಯಗೊಂಡಿದ್ದಾರೆ. ಇಡೀ ಟೆಲ್ ಅವಿವ್‌ನಲ್ಲಿ ಸಂಪೂರ್ಣ ಕ್ಷೋಭಾತ್ಮಕ ಪರಿಸ್ಥಿತಿ ನೆಲೆಸಿದೆ.ಇರಾನ್ ಕುವೈತ್, ಸೌದಿ ಅರೇಬಿಯಾ ಮತ್ತು ಯುಎಇಯಲ್ಲಿರುವ ಅಮೆರಿಕ ಸೇನಾನೆಲೆಗಳ ಪ್ರಬಲ ದಾಳಿ ನಡೆಸುತ್ತಿದೆ. ಇರಾನ್‌ನ ಖಂಡಾಂತರ ಕ್ಷಿಪಣಿಯೊಂದು ಯುಎಇಯ ಅಬುಧಾಬಿಯಲ್ಲಿರುವ ಖಲೀಫಾ ಆರ್ಥಿಕ ವಲಯದ ಮೇಲೆ ಅಪ್ಪಳಿಸಿದೆ. ಇದನ್ನು ಆಗಸಮಾರ್ಗದಲ್ಲೇ ಚೂರುಚೂರು ಮಾಡಿದ್ದರೂ, ಅದರ ಅವಶೇಷಗಳು ನೆಲಕ್ಕೆ ಅಪ್ಪಳಿಸಿದ ಪರಿಣಾಮ 6 ಮಂದಿಗೆ ಗಾಯವಾಗಿದೆ. ಇದರಲ್ಲಿ ಐವರು ಭಾರತೀಯರು, ಇನ್ನೊಬ್ಬ ಪಾಕಿಸ್ತಾನ ಮೂಲದ ಪ್ರಜೆಯಾಗಿದ್ದಾರೆ. ಗುರುವಾರವಷ್ಟೇ ಕ್ಷಿಪಣಿಯೊಂದರ ಅವಶೇಷ ಬಿದ್ದು ಇಬ್ಬರು ಒಬ್ಬ ಭಾರತೀಯನೂ ಇಬ್ಬರು ಯುಎಇಯಲ್ಲಿ ಮೃತಪಟ್ಟಿದ್ದರು.

10 ಅಮೆರಿಕ ಯೋಧರಿಗೆ ಗಾಯ, ಇಬ್ಬರು ಗಂಭೀರ: ಇರಾನ್ ಸೌದಿ ಅರೇಬಿಯಾದ ಅಮೆರಿಕ ಸೇನಾನೆಲೆ ಮೇಲೆ ದಾಳಿ ಮಾಡಿದ್ದರಿಂದ 10 ಸಿಬ್ಬಂದಿ ಗಾಯಗೊಂಡಿದ್ದಾರೆ. ಇದರಲ್ಲಿ ಇಬ್ಬರ ಪರಿಸ್ಥಿತಿ ಗಂಭೀರವಾಗಿದೆ ಎಂದು ಮೂಲಗಳು ತಿಳಿಸಿವೆ. ಪ್ರಿನ್ಸ್ ಸುಲ್ತಾನ್ ವೈಮಾನಿಕ ಕೇಂದ್ರದ ಮೇಲಾಗಿರುವ ದಾಳಿಯಲ್ಲಿ ಅಮೆರಿಕದ ಹಲವು ವಿಮಾನಗಳಿಗೆ ಹೊಡೆತ ಬಿದ್ದಿದೆ.

ಇನ್ನೂ 2 ಎಲ್‌ಪಿಜಿ ಟ್ಯಾಂಕರ್‌ಗಳು ಭಾರತದತ್ತ

ಇರಾನ್‌ನ ಹೊರ್ಮುಜ್ ಜಲಸಂಧಿ ಯಲ್ಲಿ ಸಿಲುಕಿಕೊಂಡಿದ್ದ ಭಾರತದ ತೈಲ, ಎಲ್‌ಪಿಜಿ ಹಡಗುಗಳು ಒಂದೊಂದಾಗಿ ದೇಶದತ್ತ ಬರುತ್ತಿವೆ. ಕೆಲವು ಹಡಗುಗಳು ನವಮಂಗಳೂರು ಬಂದರಿನಲ್ಲೂ ಎಲ್‌ಪಿಜಿಯನ್ನು ಇಳಿಸಿವೆ. ಇದರ ನಡುವೆ ಒಟ್ಟು 90000 ಮೆಟ್ರಿಕ್ ಟನ್ ಅಡುಗೆ ಅನಿಲ ಹೊಂದಿರುವ ಬಿಡಬ್ಲ್ಯು ಇಎಲ್‌ಎಂ, ಬಿಡಬ್ಲ್ಯು ಟಿವೈಆರ್ ಹಡಗುಗಳು ಸಂಚಾರ ಶುರು ಮಾಡಿವೆ. ಇನ್ನೂ 5 ತೈಲ ಹಡಗುಗಳು ಯುಎಇಯಲ್ಲಿದ್ದು ಹೊರ್ಮುಜ್‌ನಲ್ಲಿ ಸಂಚರಿಸಲು ಅನುಮತಿಗಾಗಿ ಕಾಯುತ್ತಿವೆ.

ಬೈಕ್‌ನಲ್ಲಿ ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆಗಳ ರವಾನೆ

ಚಿಕ್ಕೋಡಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ವೇಳೆ ಪರೀಕ್ಷಾ ಕೇಂದ್ರದ ಸಿಬ್ಬಂದಿ ಎಡವಟ್ಟು ಮಾಡಿರುವ ಘಟನೆ ಬೆಳಗಾವಿ ಜಿಲ್ಲೆಯ ಮೂಡಲಗಿಯಲ್ಲಿ ನಡೆದಿದೆ. ಮೂಡಲಗಿಯ ಉಮಾಭಾಯಿ ಪ್ರೌಢಶಾಲೆ ಪರೀಕ್ಷಾ ಕೇಂದ್ರದಲ್ಲಿ ನಡೆದ ಇಂಗ್ಲಿಷ್ ಪತ್ರಿಕೆ ಪರೀಕ್ಷೆ ನಂತರ ಪರೀಕ್ಷಾ ನಿಯಮ ಉಲ್ಲಂಘಿಸಿ ಉತ್ತರ ಪತ್ರಿಕೆಗಳನ್ನು ಬೈಕ್‌ನಲ್ಲಿ ಸಾಗಣೆ ಮಾಡಿದ ಆರೋಪ ಕೇಳಿ ಬಂದಿದೆ. ಈ ನಡೆ ಶಿಕ್ಷಣ ಇಲಾಖೆ ಮೇಲೆ ಅನುಮಾನ ಮೂಡಿಸಿದೆ.

ಬೈಕ್‌ನಲ್ಲಿ ಜಾಲಿ ರೈಡ್‌ಗೆ ಹೋಗಿದ್ದ ಮೂವರ ಸಾವು

ನೆಲಮಂಗಲ: ಬಿರಿಯಾನಿ ತಿನ್ನಲು ಜಾಲಿ ರೈಡ್ ಹೋಗುತ್ತಿದ್ದ ಮೂವರು ಸಹಪಾಠಿಗಳ ಬೈಕ್‌ಗೆ ಲಾರಿ ಡಿಕ್ಕಿಯಾಗಿ ಸಾವನಪ್ಪಿರುವ ಘಟನೆ ನೆಲಮಂ ಗಲ-ಹಾಸನ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಎಂಜಿನಿಯರಿಂಗ್ ಓದುತ್ತಿದ್ದ ಅಭಿಲಾಷ್ (21), ಮನೋಜ್ (21) ಹಾಗೂ ನವೀನ್ (21) ಮೃತರು. ಬೆಂಗಳೂರಿನ ಪಿಜಿಯೊಂದರಲ್ಲಿ ವಾಸವಾಗಿದ್ದರು. ಶುಕ್ರವಾರ (ಮಾ.27) ರಾತ್ರಿ ಬಿರಿಯಾನಿ ತಿನ್ನಲು ಮೂವರು ಒಂದೇ ಬೈಕ್‌ನಲ್ಲಿ ಕುಣಿಗಲ್ ಕಡೆ ಹೋಗುತ್ತಿದ್ದರು. ಈ ವೇಳೆ ಮಾಗಡಿ ತಾಲೂಕಿನ ಮರೂರು ಹ್ಯಾಂಡ್ ಪೋಸ್ಟ್ ಬಳಿ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

SSLC ಅಂಕಪಟ್ಟಿಯಿಂದ ಹಿಂದಿ ವಿಷಯ ಔಟ್, 525ಕ್ಕೆ ಮಾರ್ಕ್‌ಶೀಟ್– ಶಿಕ್ಷಣ ಸಚಿವ

ಸುದ್ದಿ



153 ಪೊಲೀಸರಿಗೆ ಸಿಎಂ ಪದಕ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಅಸಾಧಾರಣ ಸೇವೆ ಹಾಗೂ ದಕ್ಷತೆ ತೋರಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ 2025ನೇ ಸಾಲಿನ ಮುಖ್ಯಮಂತ್ರಿ ಪದಕ ಪ್ರಕಟವಾಗಿದೆ.

ಜೀವಾವಧಿ ಶಿಕ್ಷೆಗೆ ಒಳಗಾದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಪ್ರಕರಣದ ತನಿಖೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಐಪಿಎಸ್ ಮಹಿಳಾ ಅಧಿಕಾರಿ ಸುಮನ್ ಡಿ ಪನ್ನೇಕರ್ ಹಾಗೂ ಆರು ಮಂದಿ ಐಪಿಎಸ್ ಅಧಿಕಾರಿಗಳು ಒಳಗೊಂಡಂತೆ 153 ಪೊಲೀಸರು ಮುಖ್ಯಮಂತ್ರಿ ಪದಕಕ್ಕೆ ಭಾಜನರಾಗಿದ್ದಾರೆ.

ಏ.2 ರಂದು ಪದಕ ಪ್ರದಾನ: ಪೊಲೀಸ್ ಇಲಾಖೆ ಕಳುಹಿಸಿದ್ದ ಅರ್ಹ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯ ಪ್ರಸ್ತಾವನೆಗೆ ರಾಜ್ಯ ಸರಕಾರ ಶುಕ್ರವಾರ ಅನುಮೋದನೆ ನೀಡಿದೆ. ಏ.2ರಂದು ಬೆಂಗಳೂರಿನಲ್ಲಿ ಪುರಸ್ಕೃತ ಪೊಲೀಸ್ ಅಧಿಕಾರಿಗಳಿಗೆ ಪದಕ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪದಕ ಪುರಸ್ಕೃತ ಪಟ್ಟಿ: ಐಪಿಎಸ್ ಅಧಿಕಾರಿಗಳಾದ ಬಳ್ಳಾರಿ ಎಸ್‌ಪಿ ಡಾ. ಸುಮನ್ ಡಿ.ಪನ್ನೇಕರ್, ಉಡುಪಿ ಎಸ್‌ಪಿ ಡಾ.ಕೆ.ಅರುಣ್, ಯಾದಗಿರಿ ಎಸ್‌ಪಿ ಪೃಥ್ವಿಕ್ ಶಂಕರ್, ಬೆಂಗಳೂರು ಸಂಚಾರ ದಕ್ಷಿಣ ಡಿಸಿಪಿ ಡಾ.ಗೋಪಾಲ ಎಂ.ಬ್ಯಾಕೋಡ, ಹಾಸನ ಎಎಸ್‌ಪಿ-1 ಎಂ.ಕೆ.ತಮ್ಮಯ್ಯ, ಶಿವಮೊಗ್ಗ ಎಎಸ್‌ಪಿ-2 ಎಸ್.ರಮೇಶ್ ಕುಮಾರ್ ಮತ್ತು 12 ಮಂದಿ ಡಿವೈಎಸ್‌ಪಿ ಸೇರಿದಂತೆ ಒಟ್ಟು 153 ಮಂದಿ ಪೊಲೀಸ್ ಅಧಿಕಾರಿಗಳು ಮುಖ್ಯಮಂತ್ರಿ ಪದಕಕ್ಕೆ ಅರ್ಹರಾಗಿದ್ದಾರೆ. ಪದಕ ಪಟ್ಟಿಯಲ್ಲಿ ಅಮಾನತಾದವರು, ಸ್ವಯಂ ನಿವೃತ್ತಿ, ಮರಣ ಹೊಂದಿದ್ದರೆ ಕೂಡಲೇ ಪ್ರಧಾನ ಕಚೇರಿಗೆ ಮಾಹಿತಿ ನೀಡಬೇಕು. ಪದಕ ಪುರಸ್ಕೃತರು ನಿಗದಿತ ಸಮವಸ್ತ್ರ ಧರಿಸಿ ಸಮಾರಂಭದಲ್ಲಿ ಭಾಗವಹಿಸಬೇಕು ಎಂದು ಡಿಜಿಪಿ ಡಾ.ಎಂ.ಎ.ಸಲೀಂ ತಿಳಿಸಿದ್ದಾರೆ.

ಎಸ್‌ಐಟಿ ತಂಡದಲ್ಲಿದ್ದ ಸುಮನ್ ಪನ್ನೇಕರ್: ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣ ಸಂಬಂಧ ಎಸ್‌ಐಟಿ ಮುಖ್ಯಸ್ಥ, ಸಿಐಡಿ ಎಡಿಜಿಪಿ ಬಿ.ಕೆ.ಸಿಂಗ್ ಅವರ ನೇತೃತ್ವದಲ್ಲಿ ಸರಕಾರವು ಎಸ್‌ಐಟಿ ತಂಡ ರಚಿಸಿತ್ತು. ಈ ತಂಡದಲ್ಲಿ ಐಪಿಎಸ್ ಅಧಿಕಾರಿಗಳಾದ ಸುಮನ್ ಡಿ ಪನ್ನೇಕರ್, ಸೀಮಾ ಲಾಟ್ಕರ್ ಕೂಡ ಇದ್ದರು. ಈ ಪ್ರಕರಣ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಕೋರ್ಟ್ ತೀರ್ಪು ನೀಡಿತ್ತು. ಆ ಬಳಿಕ ಮಹಿಳಾ ಅಧಿಕಾರಿಗಳ ತನಿಖೆಯ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿತ್ತು. ಇದೀಗ ಎಸ್ಐಟಿ ತಂಡದಲ್ಲಿದ್ದ ಸುಮನ್ ಪನ್ನೇಕರ್ ಅವರಿಗೆ ಮುಖ್ಯಮಂತ್ರಿ ಪದಕ ಗೌರವ ಸಿಕ್ಕಿದೆ.

ಒಗ್ಗಟ್ಟಿನ ಕೊರತೆಯೇ ಜಗತ್ತಿನ ವಿಭಜನೆಯ ಮೂಲ ಕಾರಣ: ಮೋಹನ್ ಭಾಗವತ್

ಅಹಂನಿಂದ ಜಾಗತಿಕ ಸಂಘರ್ಷ

ಚಿಕ್ಕೋಡಿ: ನಾನು ಎಂಬ ಅಹಂ ಹಾಗೂ ಸ್ವಾರ್ಥದ ಕಾರಣಕ್ಕೆ ಜಾಗತಿಕ ಸಂಘರ್ಷಗಳು ನಡೆಯುತ್ತಿವೆ. ಎಲ್ಲದರಲ್ಲೂ ಸ್ವಾರ್ಥ ಮನೋಭಾವ ಬೆಳೆಸಿಕೊಂಡಿದ್ದು, ಒಗ್ಗಟ್ಟಿನ ಕೊರತೆಯೇ ಜಗತ್ತಿನ ವಿಭಜನೆಯ ಮೂಲ ಕಾರಣ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅಭಿಪ್ರಾಯಪಟ್ಟರು.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಸುಕ್ಷೇತ್ರ ಯಡೂರ ವೀರಭದ್ರ ದೇವಸ್ಥಾನ ಹಾಗೂ ಶ್ರೀ ಕಾಡ ಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಹಿಂದೂ ಧರ್ಮವು ಕೇವಲ ಒಂದು ಧರ್ಮವಲ್ಲ, ಅದು ಹಿಂದೂ ಸ್ವಭಾವ. ಇದಕ್ಕಾಗಿ ಯುವ ಪೀಳಿಗೆ ಸ್ವಹಿತಾಸಕ್ತಿಯ ಜತೆಗೆ ರಾಷ್ಟ್ರೀಯ ಹಿತಾಸಕ್ತಿಯ ಬಗ್ಗೆಯೂ ಯೋಚಿಸಬೇಕಾಗಿದೆ ಎಂದರು.

ಅಹಂಕಾರದಿಂದಾಗಿ ಯುದ್ಧದ ವಾತಾವರಣ ಸೃಷ್ಟಿಯಾಗಿದೆ. ನಮ್ಮ ಹಿಂದೂ ಧರ್ಮ ಎಲ್ಲರ ನಂಬಿಕೆಯನ್ನು ಗೌರವಿಸುವ ಮತ್ತು ಎಲ್ಲರ ಅಭಿವೃದ್ಧಿಗಾಗಿ ಶ್ರಮಿಸುವ ಧರ್ಮ. ಜಗತ್ತು ನನ್ನ ಮನೆ ಎಂಬ ಮನೋಭಾವದಿಂದ ನಾವು ಸಾಮಾಜಿಕ ಕಾರ್ಯಗಳನ್ನು ಮಾಡಬೇಕು. ಧಾರ್ಮಿಕ ಅರಿವು ಮತ್ತು ಸಾಮಾಜಿಕ ಅರಿವಿನ ಮೂಲಕ ಜಗತ್ತು ಹಿಂದೂ ಧರ್ಮವನ್ನು ವಿಶ್ವ ಗುರು ಎಂದು ಪರಿಗಣಿಸುವ ರೀತಿಯಲ್ಲಿ ನಾವು ಕೆಲಸ ಮಾಡಬೇಕು ಎಂದರು.

ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಮಾತನಾಡಿ, ತೀರ್ಥಕ್ಷೇತ್ರ ಯಡೂರಿನ ಇತಿಹಾಸದಲ್ಲಿ ಇದು ಮರೆಯಲಾಗದ ಕ್ಷಣವಾಗಿದೆ ಮತ್ತು ಇಂದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರ ರೂಪದಲ್ಲಿ, ಜ್ಞಾನದ ಕುಂಭಾಭಿಷೇಕ ನಡೆದಿದೆ.

ಕೊರೊನಾ ಸಾಂಕ್ರಾಮಿಕ ರೋಗದ ಸಮಯದಲ್ಲಿ ಸಂಘವು ಜನರಿಗೆ ಸಲ್ಲಿಸಿದ ಸೇವೆ ಶ್ಲಾಘನೀಯ. ಯುವ ಪೀಳಿಗೆ ಡಾ. ಮೋಹನ್ ಭಾಗವತ್ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಬೇಕು. ಸಮಾಜ ಮತ್ತು ದೇಶಕ್ಕಾಗಿ ಕೆಲಸ ಮಾಡುವುದು ತಮ್ಮ ವೃತ್ತಿ ಎಂದು ಅರ್ಥ ಮಾಡಿಕೊಳ್ಳಬೇಕು. ಧಾರ್ಮಿಕ ಅರಿವು ಮತ್ತು ಧರ್ಮದ ರಕ್ಷಣೆ ಅಗತ್ಯ. ಧರ್ಮ ಮತ್ತು ದೇಶವನ್ನು ರಕ್ಷಿಸಿದರೆ, ನಿಜವಾದ ಸಂತೋಷ ಮತ್ತು ತೃಪ್ತಿಯನ್ನು ಸಾಧಿಸಲಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಹುಕೇರಿ ಮಠದ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ, ನೂಲನ ಸರ್ಗೀಶ್ವರ ಮಠದ ಗುರು ಸಿದ್ದೇಶ್ವರ ಸ್ವಾಮೀಜಿ, ಶ್ರೀಕಾಂತ್ ಉಮರಾಣಿ, ಶಿವಲಿಂಗಯ್ಯ ಅಲ್ಲಯ್ಯನವರಮಠ ಉಪಸ್ಥಿತರಿದ್ದರು.



ಚಿಕ್ಕೋಡಿ ತಾಲೂಕಿನ ಸುಕ್ಷೇತ್ರ ಯಡೂರ ವೀರಭದ್ರ ದೇವಸ್ಥಾನ ಹಾಗೂ ಶ್ರೀ ಕಾಡಸಿದ್ದೇಶ್ವರ ಮಠಕ್ಕೆ ಶನಿವಾರ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಭೇಟಿ ನೀಡಿದರು.

> ನಮ್ಮ ಸಮಾಜದಲ್ಲಿ ಅನೇಕ ದೇವರುಗಳು, ವಿವಿಧ ಆಹಾರ ಪದ್ಧತಿ ಮತ್ತು ಆಚರಣೆಗಳಿವೆ. ವಿಭಿನ್ನ ಭೌಗೋಳಿಕ ಹಿನ್ನೆಲೆಯಲ್ಲಿ ನಾವಿದ್ದರೂ, ನಾವೆಲ್ಲರೂ ಒಂದಾಗಿ ಬಾಳುತ್ತಿದ್ದೇವೆ. ಈ ಎಲ್ಲಾ ಭಿನ್ನತೆಗಳನ್ನು ನಾವು ಕೇವಲ ಒಪ್ಪಿಕೊಳ್ಳುವುದಷ್ಟೇ ಅಲ್ಲ, ಗೌರವಿಸುತ್ತೇವೆ. ಎಲ್ಲರ ದಾರಿಗಳೂ ಸರಿಯಾಗಿವೆ. ಯಾರನ್ನೂ ಮತಾಂತರ ಮಾಡುವುದಿಲ್ಲ, ಬದಲಾಗಿ ಎಲ್ಲರನ್ನೂ ಅವರು ಹೇಗಿದ್ದಾರೋ ಹಾಗೆಯೇ ಸ್ವೀಕರಿಸುತ್ತೇವೆ.
> -ಮೋಹನ್ ಭಾಗವತ್
> ಆರ್‌ಎಸ್‌ಎಸ್ ಸರಸಂಘಚಾಲಕ

ಕರ್ನಾಟಕ ಸರ್ಕಾರ

ಸಾರ್ವಜನಿಕ ಆಸ್ಪತ್ರೆ ಶಿಕಾರಿಪುರ, ಶಿವಮೊಗ್ಗ ಜಿಲ್ಲೆ

E-mail: amoghshikaripura@gmail.com Ph: 08187-222412

ಸಂಖ್ಯೆ:ಸಾಆಶಿ/ಅಭಿವೃದ್ಧಿ(2)/ವಿವ/03/2025-26. ದಿ: 24-03-2026

ಇ-ಟೆಂಡರ್ ಪ್ರಕಟಣೆ

ಸಾರ್ವಜನಿಕ ಅಸ್ಪತ್ರೆ ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಇಲ್ಲಿಗೆ 2026-27 ನೇ ಸಾಲಿಗೆ ಔಷಧಿಗಳು, ರಸಾಯನಿಕಗಳು ಹಾಗೂ ವೈದ್ಯಕೀಯ ಉಪಭೋಗ್ಯ ವಸ್ತುಗಳನ್ನು (Consumables) ಖರೀದಿಸುವ ಕುರಿತು ಕರ್ನಾಟಕ ಪಾರದರ್ಶಕ ಅಧಿನಿಯಮ (KTPP) 1999 ರ ನಿಯಮಗಳು ಹಾಗೂ 2000 ರ ಪುಕಾರ ದ್ವಿ- ದಾಖಲಾತಿ ಸಲ್ಲಿಕ ಪದ್ಧತಿಯಲ್ಲಿ ಇ-ಟೆಂಡರ್ ಪುಕಟಣೆ ನೀಡುತ್ತಿದ್ದು, ಆಸಕ್ತ ಟೆಂಡರ್‌ದಾರರು ಭಾಗವಹಿಸಲು ಕೋರಿದೆ.

ಕ್ರ.ಸಂ: 1. **ಟೆಂಡರ್ ಪ್ರಕಟಣೆ ಸಂಖ್ಯೆ :** ಸಂಖ್ಯೆ:ಸಾಆಶಿ/ಅಭಿವೃದ್ಧಿ(2)/ವಿವ/03/2025-26. ದಿ:23-02-2026 **ಟೆಂಡರ್ ವಿವರ :** ಸಾರ್ವಜನಿಕ ಅಸ್ಪತ್ರೆ ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಇಲ್ಲಿಗೆ 2026-27 ನೇ ಸಾಲಿಗೆ ಔಷಧಿಗಳು, ರಸಾಯನಿಕಗಳು ಹಾಗೂ ವೈದ್ಯಕೀಯ ಉಪಭೋಗ್ಯ ವಸ್ತುಗಳನ್ನು (Consumables) ಖರೀದಿಸುವ ಕುರಿತು. **ಟೆಂಡರ್ ದಾಖಲಿಸಲು ನೀಡಲಾದ ಅವಧಿ :** ದಿ :30-03-2026 ರಿಂದ :18-04-2026 ಸಂಜೆ 5-00 ಗಂಟೆಯವರೆಗೆ **ಟೆಂಡರ್ ಅಂದಾಜು ಮೊತ್ತ :** ರೂ. 1.80 ಕೋಟಿ **ಇ.ಎಂ.ಡಿ. ವಿವರ :** ಇ.ಎಂ.ಡಿ. ಮೊತ್ತ ರೂ.2,70,000/ - ಇ-ಪುಕ್ಯೂರ್ ಮೆಂಟ್‌ನಲ್ಲಿ ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇವರನ್ನು ಸಂಪರ್ಕಿಸುವುದು ಅಥವಾ (Website: www.eproc.karnataka.gov.in) ನಲ್ಲಿ ಪಡೆಯಬಹುದಾಗಿದೆ.

ಸಹಿ/-ಆಡಳಿತ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ ಶಿವಮೊಗ್ಗಜಿಲ್ಲೆ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/151/03/2091

ಸಮಾಚಾರ ಸಣ್ಣದಲ್ಲ

ವಿದ್ಯಾರ್ಥಿನಿ ಬಲಿ ಪಡೆದ ನಕಲಿ ವೈದ್ಯ

ರಾಯಚೂರು: ನಕಲಿ ವೈದ್ಯ ನೀಡಿದ ಇಂಜೆಕ್ಷನ್‌ನಿಂದ ಆರೋಗ್ಯದಲ್ಲಿ ಏರುಪೇರಾಗಿ 9ನೇ ತರಗತಿ ವಿದ್ಯಾರ್ಥಿನಿ ಸಾವನ್ನಪ್ಪಿರುವ ಘಟನೆ ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಅಮೀನಗಡ ಗ್ರಾಮದಲ್ಲಿ ನಡೆದಿದೆ. ಇಂಜೆಕ್ಷನ್ ರಿಯಾಕ್ಷನ್‌ನಿಂದ 14 ವರ್ಷದ ವಿದ್ಯಾರ್ಥಿನಿ ಬಿಂದು ಮೃತಪಟ್ಟಿದ್ದಾಳೆ. ಅಮೀನಗಡ ಗ್ರಾಮದ ಬಿಂದು ಜ್ವರ ಹಿನ್ನೆಲೆ ಚಿಕಿತ್ಸೆ ಪಡೆಯುತ್ತಿದ್ದಳು. ನಕಲಿ ವೈದ್ಯನ ಬಳಿ ಇಂಜೆಕ್ಷನ್ ಪಡೆದ ಬಳಿಕ ಔಷಧಿ ರಿಯಾಕ್ಷನ್ ಆಗಿದ್ದು, ಆರೋಗ್ಯದಲ್ಲಿ ಏರುಪೇರಾಗಿ ಸಾವನ್ನಪ್ಪಿದ್ದಾಳೆ. ವಿದ್ಯಾರ್ಥಿನಿ ಸಾವನ್ನಪ್ಪಿದ ಸುದ್ದಿ ಕೇಳಿ ನಕಲಿ ವೈದ್ಯ ಪರಾರಿಯಾಗಿದ್ದಾನೆ. ಸದ್ಯ ಮರಣೋತ್ತರ ಪರೀಕ್ಷೆಗಾಗಿ ವಿದ್ಯಾರ್ಥಿನಿ ಮೃತದೇಹವನ್ನ ಕವಿತಾಳ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ. ಕವಿತಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಕಾರು ಡಿಕ್ಕಿ: ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಸಾವು

ಹಾಸನ: ರಸ್ತೆ ದಾಟುವ ವೇಳೆ ಕಾರು ಡಿಕ್ಕಿಯಾಗಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಾವನ್ನಪ್ಪಿದ ಘಟನೆ ಹೊಳೆನರಸೀಪುರ ತಾಲೂಕಿನ ಕಾಮಸಮುದ್ರದ ಬಳಿಯ ರಾಷ್ಟ್ರೀಯ ಹೆದ್ದಾರಿ 373ರಲ್ಲಿ ನಡೆದಿದೆ. ಮೃತ ವಿದ್ಯಾರ್ಥಿಯನ್ನು ಚಿರಂತ್ (16) ಎಂದು ಗುರುತಿಸಲಾಗಿದೆ. ಪರೀಕ್ಷೆ ಮುಗಿಸಿ ಬಸ್‌ನಲ್ಲಿ ಊರಿಗೆ ಬಂದಿದ್ದ ಬಾಲಕ ರಸ್ತೆ ದಾಟುತ್ತಿದ್ದ. ಈ ವೇಳೆ ವೇಗವಾಗಿ ಬಂದ ಕಾರು ಬಾಲಕನಿಗೆ ಡಿಕ್ಕಿಯಾಗಿದೆ. ಪರಿಣಾಮ ಬಾಲಕ ಸಾವನ್ನಪ್ಪಿದ್ದಾನೆ. ಅತಿಯಾದ ವೇಗ ಹಾಗೂ ಕಾರು ಚಾಲಕನ ಅಜಾಗರೂಕತೆಯಿಂದ ಅಪಘಾತ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ಆರೋಪಿಸಿದ್ದಾರೆ. ಹೊಳೆನರಸೀಪುರ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಅಪಘಾತ ನಡೆದಿದೆ.

ಫೋಟೊಗ್ರಾಫರ್ ಮೇಲೆ ಹಲ್ಲೆ: ಏಳು ಮಂದಿ ಸೆರೆ

ಸಕಲೇಶಪುರ: ಧಾರ್ಮಿಕ ಶಿಷ್ಟಾಚಾರ ಉಲ್ಲಂಘಿಸಿ ದೇಗುಲದ ಆವರಣದಲ್ಲಿ ಮದುವೆ ಪೂರ್ವ ವಿಡಿಯೊ ಚಿತ್ರೀಕರಣ ಮಾಡಲಾಗಿದೆ ಎಂದು ಫೋಟೋಗ್ರಾಫರ್ ಮೇಲೆ ಸ್ಥಳೀಯರ ಗುಂಪೊಂದು ಹಲ್ಲೆ ಮಾಡಿರುವ ಘಟನೆ ಬೆಟ್ಟದ ಮೇಲಿರುವ ಭೈರವೇಶ್ವರ ದೇವಾಲಯದಲ್ಲಿ ನಡೆದಿದೆ. ಬೆಟ್ಟದ ಮೇಲಿರುವ ಭೈರವೇಶ್ವರ ದೇವಾಲಯ ಪರಿಸರದಲ್ಲಿ ಜೋಡಿಯೊಂದರ ಪ್ರಿವೆಡ್ಡಿಂಗ್ ಫೋಟೋ ಶೂಟ್ ನಡೆಯುತ್ತಿತ್ತು. ಈ ವೇಳೆ ಅಲ್ಲಿಗೆ ಬಂದ ಸ್ಥಳೀಯರ ಗುಂಪೊಂದು ಛಾಯಾಗ್ರಾಹಕರ ಮೇಲೆ ಹಲ್ಲೆ ನಡೆಸಿದೆ. ಇದು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು, ಸಾಕಷ್ಟು ಚರ್ಚೆಗೆ ನಾಂದಿ ಹಾಡಿದೆ. ಹಲ್ಲೆ ಮಾಡಿದವರನ್ನು ಮೂಡಿಗೆರೆ ತಾಲೂಕಿನವರು ಎನ್ನಲಾಗಿದ್ದು, ಈ ಸಂಬಂಧ ಏಳು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಸಿಡಿಲು ಬಡಿದು ಮೂವರಿಗೆ ಗಾಯ

ಹಾಸನ: ಜಿಲ್ಲೆಯ ವಿವಿಧೆಡೆ ಭಾರೀ ಮಳೆಯಾಗುತ್ತಿದೆ. ಹಾಸನ, ಸಕಲೇಶಪುರದ ಹಲವೆಡೆ ಗುಡುಗು, ಮಿಂಚು ಸಹಿತ ಮಳೆ ಸುರಿಯುತ್ತಿದೆ. ಸಕಲೇಶಪುರ ತಾಲೂಕಿನ ಹರಗರಹಳ್ಳಿ ಗ್ರಾಮದ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಮೂವರು ಮಹಿಳೆಯರಿಗೆ ಸಿಡಿಲು ಬಡಿದಿದ್ದು, ಒಬ್ಬ ಮಹಿಳೆ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ಕುಂದರಗಿ ಗ್ರಾಮದ ರೂಪ, ಸುಮಿತ್ರ ಮತ್ತು ಜಯಮ್ಮ ಎಂದು ಗುರುತಿಸಲಾಗಿದೆ. ಗಾಯಾಳು ಗಳಲ್ಲಿ ರೂಪ ಅವರ ಸ್ಥಿತಿ ಗಂಭೀರವಾಗಿದೆ. ಈ ಮೂವರು ಗ್ರಾಮದ ದೀನಹಳ್ಳಿ ಕಾಫಿ ತೋಟದಲ್ಲಿ ಔಷಧಿ ಸಿಂಪಡಿಸುತ್ತಿದ್ದರು. ಗಾಯಾಳುಗಳಿಗೆ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಗಂಭೀರವಾಗಿ ಗಾಯಗೊಂಡ ಮಹಿಳೆಯನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಮುಸ್ಲಿಂ ಧ್ವಜ ತೆರವು: ಪ್ರಕ್ಷುಬ್ಧ ಸ್ಥಿತಿ ನಿರ್ಮಾಣ

ಭಟ್ಕಳ: ಇಲ್ಲಿನ ಬಂದರು ರಸ್ತೆ ನ್ಯೂ ಇಂಗ್ಲಿಷ್ ಶಾಲೆಯ ಎದುರು ರಮ್ಜಾನ್ ಹಬ್ಬದ ಅಂಗವಾಗಿ ಸ್ಥಾಪಿಸಲಾದ ಮುಸ್ಲಿಂ ಧ್ವಜವನ್ನು ನಗರಸಭೆ ಅಧಿಕಾರಿಗಳು ತೆರವುಗೊಳಿಸಿದ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿದೆ. ಧ್ವಜ ತೆರವುಗೊಳಿಸಿದ ಕ್ರಮವನ್ನು ವಿರೋಧಿಸಿ ಮುಸ್ಲಿಂ ಸಮುದಾಯದ ಹಲವರು ಸ್ಥಳದಲ್ಲಿ ಜಮಾವಣೆಗೊಂಡು ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಕೆಲಕಾಲ ಪರಿಸ್ಥಿತಿ ತೀವ್ರಗೊಂಡು ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು. ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಡಿವೈಎಸ್‌ಪಿ ಗಿರೀಶ್ ಬಿ, ವೃತ್ತ ನಿರೀಕ್ಷಕ ದಿವಾಕರ್ ಪಿ.ಎಂ ಹಾಗೂ ಪಿ.ಎಸ್.ಐ ನವೀನ್ ನಾಯ್ಕ ಭೇಟಿ ನೀಡಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಪ್ರಯತ್ನಿಸಿದರು. ಅಧಿಕಾರಿ ಗಳು ಸ್ಥಳದಲ್ಲಿದ್ದ ಜನರೊಂದಿಗೆ ಮಾತುಕತೆ ನಡೆಸಿ ಶಾಂತಿ ಕಾಪಾಡುವಂತೆ ಮನವಿ ಮಾಡಿದರು. ಸ್ಥಳದಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜನೆ ಮಾಡಲಾಗಿದೆ.

2 ದಿನಗಳ ಕಾಲ ಬಾಗಲಕೋಟೆಯಲ್ಲಿ ಪ್ರಚಾರ | ಸ್ನೇಹಿತನ ಪುತ್ರನ ಗೆಲುವಿಗಾಗಿ ಪ್ರಯತ್ನ

ನಾಳೆಯಿಂದ ಚುನಾವಣಾ ಅಖಾಡಕ್ಕೆ ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆಡಳಿತಾರೂಢ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಕಣವಾಗಿರುವ ಎರಡೂ ಕ್ಷೇತ್ರದ ಉಪಚುನಾವಣಾ ಪ್ರಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕೃತವಾಗಿ ಧುಮುಕಲಿದ್ದು, ಮೊದಲ ಹಂತದಲ್ಲಿ ಬಾಗಲಕೋಟೆಯಲ್ಲಿ ಎರಡು ದಿನಗಳ ಕಾಲ ವಾಸ್ತವ್ಯ ಹೂಡಿ, ಮೇಟಿ ಪುತ್ರ ಉಮೇಶ್ ಪರವಾಗಿ ಪ್ರಚಾರ ನಡೆಸಲಿದ್ದಾರೆ.

ಪಂಚರಾಜ್ಯ ಚುನಾವಣೆಯ ಹೊತ್ತಿನಲ್ಲಿಯೇ ಉಪಚುನಾವಣೆ ಎದುರಾಗಿದ್ದು, ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಸ್ಸಾಂ ವಿಧಾನಸಭಾ ಚುನಾವಣಾ ಉಸ್ತುವಾರಿ ಹೊತ್ತಿರುವುದರಿಂದ ಆ ರಾಜ್ಯಕ್ಕೂ ಭೇಟಿ ನೀಡಬೇಕಿದೆ. ಆದ್ದರಿಂದ ಬಾಗಲಕೋಟೆ, ದಾವಣಗೆರೆ ಉಪಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದರೂ, ಪೂರ್ಣ ಪ್ರಮಾಣದಲ್ಲಿ ಭಾಗವಹಿಸುವುದು ಅನುಮಾನ ಎನ್ನಲಾಗು ತ್ತಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎರಡೂ ಕ್ಷೇತ್ರಗಳಲ್ಲಿ ನಿರಂತರ ಪ್ರಚಾರ ನಡೆಸಲಿದ್ದಾರೆ ಎನ್ನಲಾಗಿದೆ.

ಮೊದಲ ಹಂತದಲ್ಲಿ ಬಾಗಲಕೋಟೆಯಲ್ಲಿ ಎರಡು ದಿನಗಳ ಕಾಲ ವಾಸ್ತವ್ಯ ಹೂಡಿ ಪ್ರಚಾರ ನಡೆಸಲಿದ್ದಾರೆ. ಇದಾದ ಬಳಿಕ ದಾವಣಗರೆ ದಕ್ಷಿಣದಲ್ಲಿ ಪ್ರಚಾರ ಸಭೆ ನಡೆಸಲಿದ್ದಾರೆ. ಎರಡೂ ಕ್ಷೇತ್ರಗಳಲ್ಲಿ ಮೊದಲ ಹಂತದ ಪ್ರಚಾರದ ಬಳಿಕ ಬಹಿರಂಗ ಪ್ರಚಾರಕ್ಕೆ ತೆರೆ ಬೀಳುವ ಮೊದಲು ಮತ್ತೊಂದು ಸುತ್ತಿನ ಪ್ರಚಾರ ನಡೆಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಗ್ಯಾರಂಟಿ ಯೋಜನೆಗೆ ಕೂಲಿ ಕೇಳಲು ಸಜ್ಜು: ರಾಜ್ಯ ಸರಕಾರ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಘೋಷಿಸಿದ್ದ ಪಂಚ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದೆ. ಈ ಎರಡೂ ಕ್ಷೇತ್ರದಲ್ಲಿ ಶೇ.50ಕ್ಕೂ ಹೆಚ್ಚು ಮಂದಿ ಗ್ಯಾರಂಟಿ ಯೋಜನೆಗಳ ನೇರ ಫಲಾನುಭವಿಗಳಿದ್ದಾರೆ. ಆದ್ದರಿಂದ ಗ್ಯಾರಂಟಿ ಯೋಜನಗಳಿಂದ ಆಗಿರುವ ಆರ್ಥಿಕ ಸಹಾಯವನ್ನು ಮುಂದಿಟ್ಟುಕೊಂಡೇ, ಮತ ನೀಡುವಂತೆ ಮನವಿ ಮಾಡಲು ಕಾಂಗ್ರೆಸ್ ಮುಂದಾಗಿದೆ. ಈ ಕಾರಣಕ್ಕೆ, ಶಾಸಕರು, ಪರಿಷತ್ ಸದಸ್ಯರು, ಸಚಿವರು ಹಾಗೂ ಪಕ್ಷದ ಪದಾಧಿಕಾರಿಗಳ ಪ್ರತ್ಯೇಕ ಸಮಿತಿಗಳನ್ನು ರಚಿಸಿರುವ ಕಾಂಗ್ರೆಸ್, ಈ ಸಮಿತಿಯ ಸದಸ್ಯರು ಮನೆಮನೆಗೆ ತೆರಳಿ ಪಕ್ಷದ ಗ್ಯಾರಂಟಿ ಯೋಜನೆಗಳಿಂದ ಆಗಿರುವ ಲಾಭ, ಆರ್ಥಿಕ ಸಹಾಯದ ಬಗ್ಗೆ ಮಾಹಿತಿ ನೀಡಲು ಪಕ್ಷ ಮುಂದಾಗಿದೆ ಎನ್ನಲಾಗಿದೆ.

ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪ್ರಚಾರ ಮಾಡಿದರು.

> ದಾವಣಗೆರೆ ಹಾಗೂ ಬಾಗಲಕೋಟೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ವಿಶ್ವಾಸವಿದ್ದು, ಸೋಮವಾರ ದಿಂದ ಪ್ರಚಾರ ಕಾರ್ಯದಲ್ಲಿ ಭಾಗಿಯಾಗಿ, ನಂತರ ಏಪ್ರಿಲ್ 5 ರಂದು ಕೇರಳ ರಾಜ್ಯದ ಚುನಾವಣೆಯ ಪ್ರಚಾರಕ್ಕೆ ತೆರಳುತ್ತೇನೆ. ಈ ಹಿಂದೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿತ್ತು. ಇದು ನಮ್ಮ ಮುಂದಿನ ಗೆಲುವಿನ ದಿಕ್ಸೂಚಿಯಾಗಿದೆ. ದಾವಣಗೆರೆಯಲ್ಲಿ ಯಾವುದೇ ಗೊಂದಲವಿಲ್ಲ.
>
> - ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಸ್ಸಾಂ ರಾಜ್ಯದಲ್ಲಿ ಭಾರಿ ಬದಲಾವಣೆ: ಡಿಸಿಎಂ

ಅಸ್ಸಾಂ ವಿಧಾನಸಭಾ ಚುನಾವಣಾ ಉಸ್ತುವಾರಿ ಹೊತ್ತಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಸ್ಸಾಂ ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದು, ಜನರು ನರಳುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರು ಕೊಟ್ಟ ಭರವಸೆಗಳು ಈಡೇರಿಲ್ಲ. ಹೀಗಾಗಿ ಅಸ್ಸಾಂನಲ್ಲಿ ಭಾರಿ ಬದಲಾವಣೆಯಾಗಲಿದೆ ಎಂದು ಹೇಳಿದರು. ಅಸ್ಸಾಂಗೆ ತೆರಳುವ ಮೊದಲು ಮಾತನಾಡಿದ ಅವರು, ಅಸ್ಸಾಂ ಚುನಾವಣಾ ಪ್ರಚಾರಕ್ಕೆ ತೆರಳು ತ್ತಿದ್ದು, ಕೇರಳಕ್ಕೂ ಹೋಗಬೇಕು ಹಾಗೂ ಕರ್ನಾಟಕದ ಉಪಚುನಾವಣೆ ಗಳನ್ನು ನೋಡಿಕೊಳ್ಳಬೇಕು. ಅಸ್ಸಾಂ ರಾಜ್ಯದಲ್ಲಿ ಆಡಳಿತ ಕುಸಿದಿದೆ. ಈ ಕಾರಣಕ್ಕೆ ಅಲ್ಲಿನ ಜನ ಬದಲಾ ವಣೆ ಬಯಸಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ಜನರ ಪ್ರಗತಿಯಾಗಿಲ್ಲ. ಅಸ್ಸಾಂನಲ್ಲಿ ಸಚಿವ ಸಂಪುಟ ಪುನಾರ ಚನೆ ಬಳಿಕ ಅಸ್ಸಾಂ ಬಿಜೆಪಿಯಲ್ಲಿ ಆಂತರಿಕ ಕಲಹ ಹೆಚ್ಚಿದೆ. ಅವರ ಪಕ್ಷದಲ್ಲಿ ಯಾರೂ ಸಂತೋಷವಾಗಿಲ್ಲ. ಬಿಜೆಪಿಗರು ತಮ್ಮ ಪಕ್ಷದಲ್ಲಿ ಅವಕಾಶವಿಲ್ಲ ಎಂದು ಬೇಸರಗೊಂಡಿದ್ದಾರೆ ಎಂದು ತಿಳಿಸಿದರು.

ಸಚಿವ ಜಮೀರ್ ಪ್ರಚಾರಕ್ಕೆ ಬರಲಿದ್ದಾರೆ: ಎಂಬಿಪಾ

ದಾವಣಗೆರೆ ದಕ್ಷಿಣದ ಸಾದಿಕ್ ಬಂಡಾಯ ತಣಿಸಲು ಸಂಧಾನಕ್ಕೆ ಹೋಗಲಿಲ್ಲ ಎನ್ನುವ ಆರೋಪವಿತ್ತು. ಇದರೊಂದಿಗೆ ಉಪಚುನಾವಣಾ ಪ್ರಚಾರದಲ್ಲಿಯೂ ಭಾಗವಹಿಸುವುದಿಲ್ಲ ಎನ್ನುವ ಮಾತುಗಳು ಕೇಳಿ ಬಂದಿತ್ತು. ಈ ಬಗ್ಗೆ ಮಾತನಾಡಿರುವ ಸಚಿವ ಎಂ.ಬಿ.ಪಾಟೀಲ್, ಜಮೀರ್ ಅಹ್ಮದ್ ಖಾನ್ ಅವರಿಗೆ ಕೇರಳ ಜವಾಬ್ದಾರಿ ಇರುವುದರಿಂದ ಸಂಧಾನಕ್ಕೆ ಬಂದಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆ ಎದುರಿಸುತ್ತೇವೆ. ಅವರೂ ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ ಎಂದು ಸ್ಪಷ್ಟಪಡಿಸಿದರು. ದಾವಣಗೆರೆ ದಕ್ಷಿಣ ಉಪಚುನಾವಣೆ ಕಣದಲ್ಲಿ ಬಂಡಾಯವೆದ್ದಿದ್ದ ಸಾದಿಕ್ ಪೈಲ್ವಾನ್ ಅವರನ್ನು ಮನವೊಲಿಸುವಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಯಶಸ್ವಿಯಾಗಿದ್ದು, ಈ ಮೂಲಕ ಬಿಜೆಪಿಗೆ ನಿರಾಸೆಯಾಗಿದೆ. ಪಕ್ಷದಲ್ಲಿದ್ದ ಗೊಂದಲ ಬಗೆಹರಿದಿದೆ. ಎಲ್ಲ ಸಮುದಾಯಗಳ ಬೆಂಬಲದಿಂದ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುತ್ತಾರೆ. ಬಾಗಲಕೋಟೆ, ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್ ಗೆಲ್ಲುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಸಾದಿಕ್ ಪೈಲ್ವಾನ್ ಮನೆಗೆ ಕಾಂಗ್ರೆಸ್ ನಿಯೋಗ ಭೇಟಿ

ದಾವಣಗೆರೆ: ಕಾಂಗ್ರೆಸ್ ಮುಖಂಡ ಸಾದಿಕ್ ಪೈಲ್ವಾನ್ ಅವರ ಮನೆಗೆ ಶನಿವಾರ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್, ಬೈರತಿ ಸುರೇಶ್, ವಿಧಾನಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್, ಶಾಸಕ ರಿಜ್ವಾನ್ ಅರ್ಷದ್, ಪ್ರದೀಪ ಈಶ್ವರ್ ಭೇಟಿ ನೀಡಿ, ನಂತರ ಸಭೆ ನಡೆಸಿದರು.

ಈ ವೇಳೆ ಸಚಿವ ಬೈರತಿ ಸುರೇಶ ಮಾತನಾಡಿ, ಸಾದಿಕ್ ಪೈಲ್ವಾನ್ ಇಡೀ ಕುಟುಂಬ ಕಾಂಗ್ರೆಸ್ ಪಕ್ಷದಲ್ಲಿದೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ಸಲಹೆ ಮೇರೆಗೆ ಸಾಧಿಕ್ ಪೈಲ್ವಾನ್ ಮನೆಗೆ ಭೇಟಿ ನೀಡಿದ್ದೇವೆ. ಕಾಂಗ್ರೆಸ್ ಪಕ್ಷದಲ್ಲಿ ಬಂಡಾಯ ಇಲ್ಲ. ಆಂತರಿಕ ಪ್ರಜಾಪ್ರಭುತ್ವವಿದೆ. ಪೈಲ್ವಾನ್ ಟಿಕೆಟ್ ಕೇಳಿದ್ದರು. ಈಗ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವಾಗಿ ನಿಲ್ಲುತ್ತಾರೆ. ಕಾಂಗ್ರೆಸ್ ಪಕ್ಷ ಗೆಲ್ಲುವುದರಲ್ಲಿ ಯಾವುದೇ ಅನುಮಾನವಿಲ್ಲ. ಕಾರ್ಯಕರ್ತರಲ್ಲಿ ಗೊಂದಲವಿಲ್ಲ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲ್ಲುವುದು ಮಾತ್ರ ನಮ್ಮ ಗುರಿಯಾಗಿದೆ ಎಂದರು.

> ಕಾಂಗ್ರೆಸ್‌ನಲ್ಲಿ ಗೊಂದಲವಿಲ್ಲ, ಒಟ್ಟಾಗಿ ಸಮರ್ಥನ ಗೆಲ್ಲಿಸಲು ಸಂಕಲ್ಪ

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮಾತನಾಡಿ, ಸಣ್ಣ-ಪುಟ್ಟ ಸಮಸ್ಯೆ, ಮನಸ್ತಾಪ ಇದ್ದವು. ನಾಮಪತ್ರ ವೇಳೆ ಅವರನ್ನು ಭೇಟಿ ಮಾಡಲು ಸಾಧ್ಯವಾಗಲಿಲ್ಲ. ಸಿಎಂ ಮತ್ತು ಡಿಸಿಎಂ ಮತ್ತು ಹೈಕಮಾಂಡ ಮಧ್ಯ ಪ್ರವೇಶದಿಂದ ನಮ್ಮ ನಡುವೆ ಇದ್ದ ಸಣ್ಣ ಪಟ್ಟ ಮನಸ್ತಾಪಗಳು ದೂರವಾಗಿವೇ. ನಾವು ಸಹೋದರರಂತೆ ಇದ್ದೇವೆ. 45 ವರ್ಷದಿಂದ ಕಾಂಗ್ರೆಸ್ ಪಕ್ಷದೊಂದಿಗೆ ಅವರ ಫ್ಯಾಮಿಲಿ ಇದೇ. ನಮ್ಮ ಪಕ್ಷದ ಮುಖಂಡರಿಗೆ ಬೇರೆಯವರು ಬಂದು ತಲೆ ಕೆಡಿಸಿದ್ದಾರೆ. ಯಾವುದೇ ಆಸೆ, ಆಮಿಷ ಇಲ್ಲದೇ ನಮ್ಮ ಜತೆ ಇದ್ದಾರೆ. ಪಕ್ಷದ ಎಲ್ಲರೂ ಸೇರಿ ಒಗ್ಗಟ್ಟಿನಿಂದ ಕೆಲಸ ಮಾಡಿ ದಕ್ಷಿಣದಲ್ಲಿ ಗೆದ್ದುಬರೋಣಾ ಎಂದು ಹೇಳಿದರು. ಇದೇ ಸಾದಿಕ್ ಪೈಲ್ವಾನ್ ಮನೆಯಲ್ಲಿ ಊಟ ಸವಿದ ಅವರು ಪೈಲ್ವಾನ್ ಅವರಿಗೆ ಕಬಾಬ್ ತಿನ್ನಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ದಾವಣಗೆರೆಯ ಸಾಧಿಕ್ ಪೈಲ್ವಾನ್ ನಿವಾಸಕ್ಕೆ ಕಾಂಗ್ರೆಸ್ ನಾಯಕರ ನಿಯೋಗ ಶನಿವಾರ ಭೇಟಿ ನೀಡಿತು.

ಆಡಳಿತದ ಹಿಡಿತ ಕಳೆದುಕೊಂಡಿರುವ ಸಿಎಂ

ಬಾಗಲಕೋಟೆ ಭದ್ರತೆಗೆ ಬಿಜೆಪಿ ಬೆಂಬಲಿಸಿ: ಶೆಟ್ಟರ್

ಬಾಗಲಕೋಟೆ: ನಾಮಪತ್ರದ ಸಲ್ಲಿಸಿದ ದಿನವೇ ಮತದಾರರು ವೀರಣ್ಣ ಚರಂತಿಮಠ ಅವರನ್ನು ಜನಪ್ರತಿನಿಧಿಯನ್ನಾಗಿ ಸ್ವೀಕರಿಸಿದ್ದು, ದಾಖಲೆ ಮಟ್ಟದ ಮತದಿಂದ ಗೆದ್ದು ಬರಲಿದ್ದಾರೆ ಎಂದು ಸಂಸದ ಜಗದೀಶ್ ಶೆಟ್ಟರ್ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಪ್ರಚಾರ ಪರ ಮತಯಾಚಿಸಿ ಮಾತನಾಡಿದ ಅವರು, ಪ್ರತಿ ಬಾರಿಯೂ ಶಾಸಕರಾದಾಗ ಆಡಳಿತ ಪಕ್ಷ ಯಾವುದಿದ್ದರೂ ಅಭಿವೃದ್ಧಿ ಯೋಜನೆಗಳ ಹೊಳೆ ಹರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಅದೇ ಕಾರಣಕ್ಕೆ ಜನರು ಅಭಿ ವೃದ್ಧಿ ಹರಿಕಾರ ಎಂದು ಬಿರುದು ಕೊಟ್ಟಿದ್ದು, ಅವರನ್ನು ಗೆಲ್ಲಿಸುವುದರ ಮೂಲಕ ಮತ್ತಷ್ಟು ಕೆಲಸ ಮಾಡಲು ಅವಕಾಶ ನೀಡಬೇಕು.

ಕಾಂಗ್ರೆಸ್ ಸರಕಾರದಿಂದ ಇಡೀ ರಾಜ್ಯವೇ ಅಭಿವೃದ್ಧಿಯ ದಿಕ್ಕು ಕಾಣದೆ ತತ್ತರಿಸಿ ಹೋಗಿದೆ. 3 ವರ್ಷಗಳ ಹಿಂದೆ ಬಿಜೆಪಿ ತಂದ ಯೋಜನೆಗಳು ಕೂಡ ಮುಂದುವರಿಯದೇ ಮೂಲೆ ಸೇರುವಂತೆ ಸರಕಾರ ಮಾಡಿದೆ. ಕಾಂಗ್ರೆಸ್ ಶಾಸಕರೇ ಬೇಸತ್ತು ರಾಜನಾಮೆ ನೀಡುವ ಪರಿಸ್ಥಿತಿ ಎದುರಾಗಿದೆ. ಸಿದ್ದರಾಮಯ್ಯ ಆಡಳಿತದ ಹಿಡಿತ ಕಳೆದುಕೊಂಡಿದ್ದು, ಮಂತ್ರಿಮಂಡಲ ಲೂಟಿ ಮಾಡುವ ಕೆಲಸ ಮಾಡುತ್ತಿದೆ. ಭ್ರಷ್ಟ ಸರಕಾರವಾಗಿ ರಾಜ್ಯದಲ್ಲಿ ಆಡಳಿತ ಮಾಡುತ್ತಿದ್ದು ಇ-ಸ್ವತ್ತು ನೊಂದಣಿಯಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ಇದಕ್ಕೆ ತಕ್ಕ ಉತ್ತರ ನೀಡಲು ಚರಂತಿಮಠ ಅವರನ್ನು ಗೆಲ್ಲಿಸೋಣ. ಜಗತ್ತು ಯುದ್ಧದಿಂದ ತತ್ತರಿಸಿದ್ದರೂ ಭಾರತ ಮೋದಿ ಆಡಳಿತದಿಂದ ಸುರಕ್ಷಿತವಾಗಿದೆ ಎಂದರು.

> ಬಿಜೆಪಿ ಗೆಲ್ಲಿಸಿ ವೀರಣ್ಣ ಚರಂತಿಮಠ ಅವರ ಕೈಬಲಪಡಿಸುವುದು ಎಲ್ಲರ ಕರ್ತವ್ಯ. ಕಾಂಗ್ರೆಸ್ ಗೆ ಬುದ್ದಿ ಕಲಿಸುವ ಸಮಯ ಈಗ ಬಂದಿದೆ ಅದನ್ನು ಬಿಜೆಪಿಗೆ ಮತ ಚಲಾಯಿಸಿ ಸದುಪಯೋಗ ಪಡಿಸಿಕೊಳ್ಳಣ.
>
> -ಜಗದೀಶ್ ಶೆಟ್ಟರ್, ಸಂಸದ

ಬಿಜೆಪಿ ಉಪಚುನಾವಣಾ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು ಮಾತನಾಡಿ, ಮತದಾನ ಸಂವಿಧಾನ ನೀಡಿದ ಹಕ್ಕು ಅದನ್ನು ಪ್ರತಿಯೊಬ್ಬರು ಹಬ್ಬದಂತೆ ಸಂಭ್ರಮಿಸು ಮತದಾನ ಮಾಡಬೇಕು. ಮೂರು ವರ್ಷಗಳ ಅಭಿವೃದ್ಧಿ ಗೋಜಿಗೆ ಹೋಗದ ಕಾಂಗ್ರೆಸ್ ಕೈಬಿಟ್ಟು ಕಮಲ ಗುರುತಿಗೆ ಮತ ನೀಡಿ ಬಿಜೆಪಿಯನ್ನು ಬಲಪಡಿಸುವ ಕರ್ತವ್ಯ ಮತದಾರರದ್ದು ಎಂದರು.

ಮತಯಾಚನೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ, ಮಾಜಿ ಶಾಸಕರಾದ ಕಳಕಪ್ಪ ಬಂಡಿ, ಎಮ್.ಕೆ.ಪಟ್ಟಣಶೆಟ್ಟಿ, ಶಿಲ್ಪಾ ಕುಂದರವಾಡ, ಸುರೇಶ ಕೊಣ್ಣೂರ, ಸೋಮಸಿಂಗ ಲಮಾಣಿ, ಮುದ್ದಣ್ಣ ಕೋಲಾರ, ಬಸವರಾಜ ಪಾಟೀಲ, ಚಂದ್ರಶೇಖರ ಕೊಣ್ಣೂರ, ಎಮ್.ಎ.ಕುಂಬಾರ, ನಿಂಗಪ್ಪ ಕೆಂಜೋಡಿ, ಸಂಗಮ್ಮ ದೇವರಳ್ಳಿ, ಗೌರಮ್ಮ ಹುನಗುಂದ, ಸುವರ್ಣಾ ಬಿರಾದಾರ, ಗೀತಾ ಚೌದರಿ ಸೇರಿ ಗ್ರಾಮದ ಬಿಜೆಪಿ ಕಾರ್ಯ ಕರ್ತರಿದ್ದರು.

ಪತ್ನಿಯ ಕೊಲೆ: ಮೂವರ ಸೆರೆ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲೂಕಿನ ಬಳ್ಳೂರಗಿ ಬಳಿ ನಡೆದಿದ್ದ ಸಯಾಲಿ ಜಾಧವ್ ಎಂಬಾಕೆಯ ಭೀಕರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತಿ ಅಕ್ಷಯ್ ಜಾಧವ್ ಸೇರಿದಂತೆ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ತಿಳಿಸಿದ್ದಾರೆ. ಮೃತ ಸಯಾಲಿ ಮತ್ತು ಅಕ್ಷಯ್ 2022ರಲ್ಲಿ ಪ್ರೀತಿಸಿ ವಿವಾಹವಾಗಿದ್ದರು. ಮದುವೆಯಾದ ಕೆಲವೇ ದಿನಗಳಲ್ಲಿ ಪತಿ ಅಕ್ಷಯ್ ಹಾಗೂ ಆತನ ಪೋಷಕರು ವರದಕ್ಷಿಣೆಗಾಗಿ ಸಯಾಲಿಗೆ ನಿರಂತರ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಿದ್ದರು ಎನ್ನಲಾಗಿದೆ. ಸಯಾಲಿ ತವರು ಮನೆಯಿಂದ ಹಣ ತರದಿದ್ದಕ್ಕೆ ಆಕೆಯನ್ನು ಕೊಲೆ ಮಾಡಲು ಅಕ್ಷಯ್ ಸಂಚು ರೂಪಿಸಿದ್ದನು.

ದರ್ಶನದ ನೆಪದಲ್ಲಿ ಕೃತ್ಯ: ದತ್ತಾತ್ರೇಯ ದರ್ಶನಕ್ಕೆಂದು ಗಾಣಗಾಪುರಕ್ಕೆ ಪತ್ನಿಯನ್ನು ಕರೆತಂದ ಅಕ್ಷಯ್, ಪ್ರಯಾಣದ ವೇಳೆ ಕಾರಿನಲ್ಲಿ ವರದಕ್ಷಿಣೆ ವಿಚಾರವಾಗಿ ಜಗಳ ತೆಗೆದಿದ್ದಾನೆ. ಜಗಳ ವಿಕೋಪಕ್ಕೆ ಹೋದಾಗ ಅಕ್ಷಯ್ ತನ್ನ ಪತ್ನಿ ಸಯಾಲಿಯನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ಮೃತಳ ಕುಟುಂಬಸ್ಥರು ನೀಡಿದ ದೂರಿನನ್ವಯ ಅಫಜಲಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಪತಿ ಹಾಗೂ ಆತನ ತಂದೆ-ತಾಯಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ವರದಕ್ಷಿಣೆ ಕಿರುಕುಳವೇ ಈ ಘೋರ ಕೃತ್ಯಕ್ಕೆ ಮೂಲ ಕಾರಣ ಎಂದು ಎಸ್‌ಪಿ ತಿಳಿಸಿದ್ದಾರೆ.

ಚಿಕ್ಕಮಗಳೂರಲ್ಲಿ ಭಾರೀ ಗಾಳಿ, ಮಳೆ

ಚಿಕ್ಕಮಗಳೂರು: ಮೂಡಿಗೆರೆ ತಾಲೂಕಿನಾದ್ಯಂತ ಭಾರೀ ಮಳೆಯಾಗುತ್ತಿದೆ. ಬಿಸಿಲಿನ ವಾತಾವರಣದ ನಡುವೆ ದಿಢೀರ್ ಶುರುವಾದ ಮಳೆಯಿಂದ ವಾಹನ ಸವಾರರು ಪರದಾಡಿದ್ದಾರೆ. ಚಿಕ್ಕಮಗಳೂರು ನಗರದಲ್ಲೂ ಮಳೆ ಅಬ್ಬರಿಸುತ್ತಿದೆ. ಭಾರೀ ಗಾಳಿ ಜತೆ ಧಾರಾಕಾರವಾಗಿ ಮಳೆ ಸುರಿಯುತ್ತಿದೆ. ಯಾವುದೇ ಮುನ್ಸೂಚನೆ ಇಲ್ಲದೇ ಆರಂಭವಾದ ಮಳೆಯಿಂದ ಜನ ಪರದಾಡುವಂತಾಗಿದೆ. ವಾಹನ ಸವಾರರು ವಾಹನ ಚಾಲನೆ ಮಾಡಲು ಸಾಧ್ಯವಾಗದೆ ಪರದಾಡಿದ್ದಾರೆ. ಬೈಕ್ ಸವಾರರು ಅಂಗಡಿಗಳು, ಬಸ್ ನಿಲ್ದಾಣಗಳ ಆಶ್ರಯ ಪಡೆದಿದ್ದಾರೆ. ಕೆಲವೆಡೆ ಗಾಳಿಯ ಅಬ್ಬರಕ್ಕೆ ಕಬ್ಬಿಣದ ತಗಡುಗಳು ಹಾರಿ ಹೋಗಿವೆ. ಬಿಸಿಲ ಧಗೆಗೆ ಕಂಗೆಟ್ಟಿದ್ದ ರೈತರು ಮಾತ್ರ ಮಳೆ ಬಂದಿದ್ದಕ್ಕೆ ಸಂತಸ ವ್ಯಕ್ತಪಡಿಸಿದ್ದಾರೆ. ಕಾಫಿ ಗಿಡಗಳಿಗೆ ನೀರು ಹಾಯಿಸಲು ಪರದಾಡುತ್ತಿದ್ದ ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿದೆ.

ಹಿಂದಿ ಭಾಷೆ ಕೈಬಿಡುವ ನಿರ್ಧಾರ ಆಘಾತಕಾರಿ

ಬೆಂಗಳೂರು: ಕೇವಲ ರಾಜಕೀಯ ವಿರೋಧಕ್ಕಾಗಿ, ಕೇಂದ್ರ ಸರಕಾರದ ಮೇಲಿನ ದ್ವೇಷಕ್ಕಾಗಿ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟ ಆಡುತ್ತಿರುವ ರಾಜ್ಯ ಸರಕಾರದ ತೀರ್ಮಾನ ವಿವೇಕ ರಹಿತ ಹಾಗೂ ಆಘಾತಕಾರಿ ಎಂದು ಬಿಜೆಪಿ ಹೇಳಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಏಕಾಏಕಿ ಹಿಂದಿ ಭಾಷೆ ಕೈಬಿಡುವ ನಿಲುವು ತೆಗೆದುಕೊಂಡಿರುವುದು ಆಘಾತಕಾರಿ. ಅದರಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ ಸರಕಾರದ ಹಠಾತ್ ನಿಲುವು ಗೊಂದಲಕ್ಕೆ ಕಾರಣವಾಗಿದೆ. ಹಲವು ದಶಕದಿಂದ ದೇಶದಲ್ಲೆ ಮಾದರಿ ಶಿಕ್ಷಣದಲ್ಲಿ ತ್ರಿಭಾಷಾ ನೀತಿ ಹೊಂದಿರುವ ಕರ್ನಾಟಕದಲ್ಲಿ ಯಾವುದೇ ಪೂರ್ವಾಪರ ಚರ್ಚೆ, ಶಿಕ್ಷಣ ತಜ್ಞರ ಸಲಹೆ, ಪ್ರತಿಪಕ್ಷಗಳ ನಿಲುವು ಯಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಏಕಾಏಕಿ ಹಿಂದಿ ಭಾಷೆ ಕೈ ಬಿಡುವ ನಿಲುವು ತೆಗೆದುಕೊಂಡಿರುವುದು ಆಘಾತಕಾರಿ ಬೆಳವಣಿಗೆ. ನಾವು ಕನ್ನಡ ಭಾಷೆಯ ಕಲಿಕೆಗೆ ವಿರೋಧ ವ್ಯಕ್ತಪಡಿಸುತ್ತಿಲ್ಲ. ಕನ್ನಡ ನಮ್ಮ ಮಾತೃಭಾಷೆ. ಕನ್ನಡವು ನಮ್ಮ ಬೋಧನಾ ಭಾಷೆಯಾಗಿ ಜಾಗತಿಕ ದೃಷ್ಟಿಕೋನದಿಂದ ಇಂಗ್ಲಿಷ್ ಕಲಿಕೆಗೂ ನಮ್ಮ ಅಭ್ಯಂತರವಿಲ್ಲ. ಹಾಗೆಯೇ ಕನ್ನಡಿಗರು ಹೊರ ರಾಜ್ಯಗಳಿಗೆ ಉದ್ಯೋಗ ಅರಸಿ ಹೋದಾಗ ಕನಿಷ್ಠಮಟ್ಟದ ಹಿಂದಿ ಭಾಷಾ ಜ್ಞಾನ ಇರಬೇಕಾಗುತ್ತದೆ. ಕೇಂದ್ರ ಸರಕಾರದ ಉದ್ಯೋಗಗಳಿಗೆ ಸ್ಪರ್ಧೆಗೊಳ್ಳುವ ಯುವಕರು ರಾಷ್ಟ್ರಮಟ್ಟದಲ್ಲಿ ಹಿಂದೆ ಬೀಳಬಾರದು ಎಂಬ ಕಾಳಜಿ ನಮ್ಮದು ಎಂದು ಹೇಳಿದ್ದಾರೆ.

> ರಾಜ್ಯದಲ್ಲಿ ಹಲವು ವರ್ಷದಿಂದ ಅನುಸರಿಸಲಾಗುತ್ತಿರುವ ತ್ರಿಭಾಷಾ ಸೂತ್ರವೂ ಕನ್ನಡವನ್ನು ಅಸಮಿತೆಯಾಗಿ, ಇಂಗ್ಲಿಷನ್ನು ಸಂವಹನ ಭಾಷೆಯಾಗಿ ಹಾಗೂ ಹಿಂದಿಯನ್ನು ರಾಷ್ಟ್ರಿಯ ದೃಷ್ಟಿಕೋನದಿಂದ ನೋಡಲಾಗುತ್ತಿದೆ. ಆದಾಗ್ಯೂ ಹಿಂದಿ ಭಾಷೆ ಕೈಬಿಡುವುದಾದರೆ ಇದರ ಬಗೆಗೆ ಭಾಷಾ ತಜ್ಞರು, ಶಿಕ್ಷಣ ತಜ್ಞರು, ಎಲ್ಲ ಭಾಷೆಯ ಸಾಹಿತಿಗಳು ಸೇರಿದಂತೆ ಸಾರ್ವಜನಿಕವಾಗಿ ವ್ಯಾಪಕ ಚರ್ಚೆ ನಡೆಸುವ ಅಗತ್ಯವಿದೆ.
>
> - ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಪೆಟ್ರೋಲ್, ಡೀಸೆಲ್ ಬೆಲೆ ಬಗ್ಗೆ ಡಿಕೆ ಹೇಳಿಕೆ ಹಾಸ್ಯಾಸ್ಪದ

ಮೊದಲು ಕಾಂಗ್ರೆಸ್ ಲೂಟಿ ಹೊಡೆಯುವುದನ್ನು ನಿಲ್ಲಿಸಲಿ

ಬೆಂಗಳೂರು: ಮೊದಲು ನಿಮ್ಮ ಸರಕಾರದ ತೆರಿಗೆ ಲೂಟಿಯನ್ನು ನಿಲ್ಲಿಸಿ, ನಂತರ ಬೇರೆಯವರಿಗೆ ಬುದ್ಧಿ ಹೇಳಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಬಗ್ಗೆ ಡಿಕೆಶಿ ಅವರು ನೀಡಿರುವ ಹೇಳಿಕೆಗಳು ಹಾಸ್ಯಾಸ್ಪದ ಮತ್ತು ವಿಪರ್ಯಾಸದಿಂದ ಕೂಡಿವೆ ಎಂದು ಟೀಕಿಸಿದ್ದಾರೆ. ಕೇಂದ್ರ ಸರಕಾರದತ್ತ ಬೆರಳು ತೋರಿಸುವ ಮುನ್ನ ತಮ್ಮದೇ ಕಾಂಗ್ರೆಸ್ ಸರಕಾರ ಕನ್ನಡಿಗರ ಜೇಬಿಗೆ ಹೇಗೆ ಕತ್ತರಿ ಹಾಕುತ್ತಿದೆ ಎಂಬುದಕ್ಕೆ ಅವರು ಮೊದಲು ಹೇಳಬೇಕು. ಮೇ 2023ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಸಿಎಂ ಮತ್ತು ಡಿಸಿಎಂ ಜೋಡಿ ಜನಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆದು ಗ್ಯಾರಂಟಿಗಳ ವೈಫಲ್ಯ ಮುಚ್ಚಿ ಹಾಕಲು ಪೆಟ್ರೋಲ್, ಡೀಸೆಲ್ ಅನ್ನು ತಮ್ಮ ಪಾಲಿನ ಎಟಿಎಂ ಮಾಡಿಕೊಂಡಿದ್ದಾರೆ ಎಂದಿದ್ದಾರೆ.

ಕಾಂಗ್ರೆಸ್ ಸರಕಾರದ ತೆರಿಗೆ ಲೂಟಿಯ ವರದಿ ಸ್ಪಷ್ಟವಾಗಿದೆ ಎಂದಿರುವ ಅವರು, 2024 ರ ಜೂನ್‌ನಲ್ಲಿ ಪೆಟ್ರೋಲ್ ಬೆಲೆಯನ್ನು ಸುಮಾರು 3 ರು. ಮತ್ತು ಡೀಸೆಲ್ ಬೆಲೆಯನ್ನು 3.5 ರು. ಗೆ ಹೆಚ್ಚಿಸಿದ್ದಲ್ಲದೆ, ಏಪ್ರಿಲ್ 2025 ರಲ್ಲಿ ಮತ್ತೆ ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 2 ರು. ನಷ್ಟು ಹೆಚ್ಚಿಸಿದೆ. ಇದರ ಒಟ್ಟು ಪರಿಣಾಮವೆಂದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಕರ್ನಾಟಕದಲ್ಲಿ ಡೀಸೆಲ್ ಬೆಲೆ ಬರೋಬ್ಬರಿ 5.5 ರು.ಗಳಷ್ಟು ಹೆಚ್ಚಾಗಿದೆ ಎಂದು ಆರೋಪಿಸಿದ್ದಾರೆ.



> ಕೇಂದ್ರ ತೆರಿಗೆಯನ್ನು 10 ರು. ನಷ್ಟು ಕಡಿತಗೊಳಿಸಿ ಜನರಿಗೆ ದೊಡ್ಡ ಮಟ್ಟದ ನೆರವು ನೀಡಿದೆ. ಆದರೆ ನೀವು ಕೇವಲ 10 ಪೈಸೆಯನ್ನೂ ಕಡಿಮೆ ಮಾಡುವ ಮನಸ್ಸು ಮಾಡಿಲ್ಲ. ನಿಮಗೆ ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇದ್ದರೆ, ಮೊದಲು ನೀವು ಏರಿಸಿರುವ ಈ 5.5 ರು. ದರವನ್ನು ವಾಪಸ್ ಪಡೆಯಿರಿ. ಸುಳ್ಳು ಹೇಳುವುದು ನಾಯಕತ್ವವಲ್ಲ. ಜನತೆಗೆ ನಿಮ್ಮ ಹಿಟ್ ಅಂಡ್ ರನ್ ರಾಜಕೀಯ ಚೆನ್ನಾಗಿ ಅರ್ಥವಾಗಿದೆ.
>
> - ಆರ್.ಅಶೋಕ, ಪ್ರತಿಪಕ್ಷ ನಾಯಕ

ಇದು ಅಂತಾರಾಷ್ಟ್ರಿಯ ಮಾರುಕಟ್ಟೆಯ ಏರಿಳಿತವಲ್ಲ, ಬದಲಿಗೆ ಕೇವಲ ರಾಜ್ಯ ಸರಕಾರದ ತೆರಿಗೆ ದಾಹದಿಂದ ಆಗಿರುವ ಬೆಲೆ ಏರಿಕೆ. ಕೇಂದ್ರ ಸರಕಾರದತ್ತ ಬೆರಳು ತೋರಿಸುವ ಶಿವಕುಮಾರ್ ಅವರೇ, ರಾಜ್ಯದ ರೈತರು, ವಾಹನ ಸವಾರರು ಮತ್ತು ಜನಸಾಮಾನ್ಯರಿಗೆ ನಿಮ್ಮ ಸರಕಾರ ನೀಡುತ್ತಿರುವ ಈ ಶಿಕ್ಷೆಗೆ ನಿಮ ಬಳಿ ಉತ್ತರವಿದೆಯೇ ಎಂದು ಪ್ರಶ್ನಿಸಿದ್ದಾರೆ.

12 ಕೋಟಿ ಮೌಲ್ಯದ ಸಿಂಥೆಟಿಕ್ ಡ್ರಗ್ಸ್ ವಶ

ಮೈಸೂರಿನಲ್ಲಿ ಮಿತಿ ಮೀರಿದ ಡ್ರಗ್ಸ್ ದಂಧೆ

ಮೈಸೂರು: ಸಾಂಸ್ಕೃತಿಕ ನಗರಿ ಎಂಬ ಹಣೆಪಟ್ಟಿ ಹೊತ್ತಿದ್ದ ಮೈಸೂರು ಇದೀಗ ಮಾದಕವಸ್ತು ತಯಾರಿಕಾ ಕೇಂದ್ರವಾಗಿದೆ.

ಮಾದಕವಸ್ತು ತಯಾರಿಕೆ ಹಾಗೂ ಮಾರಾಟ ಜಾಲದ ಮೇಲೆ ಮೈಸೂರು ಜಿಲ್ಲೆ ಹಾಗೂ ನಗರ ಪೊಲೀಸರು ಸಮರ ಸಾರಿರುವುದರ ನಡುವೆಯೂ ಕಳೆದ ಆರು ತಿಂಗಳ ಅಂತರದಲ್ಲಿ ಮಾದಕವಸ್ತು ತಯಾರಿಸುವ ಮೂರನೇ ಘಟಕ ಪತ್ತೆಯಾಗಿದೆ. ಈವರೆಗೆ ಮೈಸೂರು ನಗರ ವ್ಯಾಪ್ತಿಯಲ್ಲೇ ಡ್ರಗ್ಸ್ ಜಾಲ ಗ್ರಾಮೀಣ ಭಾಗಕ್ಕೂ ಕಾಲಿಟ್ಟಿದೆ. ಹುಣಸೂರು ತಾಲೂಕಿನ ರತ್ನಪುರಿ-ದಾಸನಪುರ ನಡುವೆ ಇರುವ ತೋಟದ ಮನೆಯಲ್ಲಿ ಅಕ್ರಮವಾಗಿ ಭಾರಿ ಪ್ರಮಾಣದ ಸಿಂಥೆಟಿಕ್ ಡ್ರಗ್ಸ್‌ಗಳನ್ನು ಪ್ಯಾಕ್ ಮಾಡುತ್ತಿದ್ದ ವೇಳೆ ಪೊಲೀಸರು ದಾಳಿ ನಡೆಸಿದ್ದಾರೆ. ಇಬ್ಬರನ್ನು ಬಂಧಿಸಲಾಗಿದ್ದು, ಆರೋಪಿಗಳಿಂದ ವಿವಿಧ ನಮೂನೆಯ 12 ಕೋಟಿ ರು. ಮೌಲ್ಯದ ಡ್ರಗ್ಸ್ ಗಳನ್ನು ಜಪ್ತಿ ಮಾಡಲಾಗಿದೆ.

ಹುಣಸೂರು ನಗರದ ರಹಮತ್ ಮೊಹಲ್ಲಾದ ಇರ್ಫಾನ್ ಎಂಬುವವರಿಗೆ ಸೇರಿದ ತೋಟದಲ್ಲಿ ಕೃತ್ಯ ನಡೆದಿದ್ದು, ಶೆಡ್‌ನಲ್ಲಿ ಶೇಖರಿಸಿಟ್ಟಿದ್ದ ಸುಮಾರು 7.35 ಕೆ.ಜಿ ತೂಕದ Mephedrone ಹಾಗೂ ಸುಮಾರು 41 ಕೆ.ಜಿ ತೂಕದ Drug Precursor ಸೇರಿ ಒಟ್ಟು 48 ಕೆ.ಜಿ ತೂಕದ ಡ್ರಗ್ಸ್ ಪದಾರ್ಥವನ್ನು ವಶಪಡಿಸಿಕೊಳ್ಳಲಾಗಿದೆ. ಪೊಲೀಸರು ದಾಳಿ ನಡೆಸಿದ ವೇಳೆ ಸ್ಥಳದಿಂದ ಪರಾರಿಯಾಗಲೆತ್ನಿಸಿದ ಆರೋಪಿಗಳನ್ನು ಸುಮಾರು 10ಕಿ.ಮೀ.ವರೆಗೆ ಪೊಲೀಸರು ಚೇಸ್ ಮಾಡಿ ನಗರಕ್ಕೆ ಸಮೀಪದ ಸಲೀಂ ಪ್ಯಾಲೆಸ್ ಬಳಿ ಬಂಧಿಸಿದ್ದಾರೆ. ಇನ್ನು ರತ್ನಪುರಿ ಲಾಡ್ಜ್ ಒಂದರಲ್ಲಿ ನಾಲ್ವರು ಕೆಲದಿನಗಳಿಂದ ಹೊರ ರಾಜ್ಯದಿಂದ ಬಂದು ರೂಮ್ ಮಾಡಿಕೊಂಡಿದ್ದು, ಪೊಲೀಸರು ತೋಟಕ್ಕೆ ದಾಳಿ ನಡೆಸುತ್ತಿದ್ದಂತೆ ನಾಪತ್ತೆಯಾಗಿದ್ದಾರೆ ಎಂದು ಗೊತ್ತಾಗಿದೆ. ನಾಪತ್ತೆ ಆದವರ ಪತ್ತೆಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಲಿದೆ

ಪ್ರಸಕ್ತ ವರ್ಷದಿಂದಲೇ ದ್ವಿಭಾಷಾ ನೀತಿ ಜಾರಿ

ಮೈಸೂರು: ಪ್ರಸಕ್ತ ವರ್ಷದಿಂದಲೇ ದ್ವಿಭಾಷಾ ನೀತಿ ಜಾರಿ ಮಾಡಲು ರಾಜ್ಯ ಸರಕಾರ ತೀರ್ಮಾನಿಸಿದೆ ಎಂದುಮ ಸಿಎಂ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಹಿಂದಿ ಭಾಷೆ ಕಡ್ಡಾಯ ಮಾಡಬಾರದು ಎಂದು ಹೇಳಿದ್ದು, ಅದು ಈ ವರ್ಷದಿಂದಲೇ ಜಾರಿಯಲಿರುತ್ತದೆ. ಇದಕ್ಕೆ ವಿರೋಧ, ಪರ ಎಲ್ಲವೂ ಇರುತ್ತದೆ. ಹಿಂದಿ ಕಲಿಯಬಾರದು ಎಂದು ಇಲ್ಲ. ಆದರೆ, ಪರೀಕ್ಷೆ ಕಡ್ಡಾಯ ಆಗಬಾರದು ಅಷ್ಟೇ ಎಂದ ರು. ರಾಜ್ಯದಲ್ಲಿ ಬೈ ಎಲೆಕ್ಷನ್ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಿಎಂ ಅವರು, ಎರಡು ಕಡೆ ನಾವು ಗೆಲ್ಲುತ್ತೇವೆ. ನಾನು ಕೂಡ ಪ್ರವಾಸ ಹೋಗುತ್ತಿದ್ದೇನೆ. ಬಾಗಲಕೋಟೆ-ದಾವಣಗೆರೆ ಎಲ್ಲ ಕಡೆ ಹೋಗುತ್ತೇನೆ ಎಂದರು.

'ಬೈ ಎಲೆಕ್ಷನ್ ಮುಂದಿನ ಚುನಾವಣೆಯ ದಿಕ್ಸೂಚಿಯೇ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಈ ಹಿಂದೆ ಬಿಜೆಪಿ ಇದ್ದಾಗ ನಾವು ಬೈ ಎಲೆಕ್ಷನ್ ಗೆದ್ದಿದ್ದೇವೆ. ನಂತರ ನಮ್ಮ ಸರಕಾರ ಅಧಿಕಾರಕ್ಕೆ ಬಂತು. ಅದು ದಿಕ್ಸೂಚಿನಾ ನೀವೇ ಹೇಳಬೇಕು. ಯಾವ ಎಲೆಕ್ಷನ್ ಆದರೂ ನಾವೇ ಗೆಲ್ಲುತ್ತೇವೆ. 2028ರಲ್ಲೂ ನಾವೇ ಗೆಲ್ಲುತ್ತೇವೆ. ದಾವಣಗೆರೆಯಲ್ಲಿ ಕೂಡ ಯಾವ ಗೊಂದಲ ಇಲ್ಲ ಎಂದರು.

ಹೈ ಕಮಾಂಡ್ ಅವಕಾಶ ಕೊಟ್ಟರೆ ನಾನೇ ಇನ್ನೆರಡು ಬಜೆಟ್ ಮಂಡನೆ ಮಾಡುತ್ತೇನೆ ಎಂಬ ಹೇಳಿಕೆ ಕುರಿತು ಪ್ರತಿಕ್ರಿ ಯಿಸಿ, ಹೈಕಮಾಂಡ್ ಅನುಮತಿಸಿದರೆ ನಾನೇ ಇನ್ನೂ ಎರಡು ಬಜೆಟ್ ಮಂಡನೆ ಮಾಡು ತ್ತೇನೆ. ಎಲ್ಲವು ಹೈಕಮಾಂಡ್‌ಗೆ ಬಿಟ್ಟಿದ್ದು. ಚುನಾವಣೆಗೂ, ಅದಕ್ಕೂ ಸಂಬಂಧವಿಲ್ಲ ಎಂದರು.

ಡ್ರಗ್ಸ್ ವಿರುದ್ಧ ಕ್ರಮ

ನಾವು ಡ್ರಗ್ಸ್ ಮುಕ್ತ ರಾಜ್ಯ ಮಾಡಲು ಕೆಲಸ ಮಾಡುತ್ತಿದ್ದೇವೆ. ಈಗ ಪೊಲೀಸರು ರೇಡ್ ಮಾಡಿದ ವಿಚಾರ ಗೊತ್ತಾಗಿದೆ. ಮುಂಬೈ ಲಿಂಕ್ ಇರಲಿ, ಯಾವುದೇ ಇರಲಿ. ಡ್ರಗ್ಸ್ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಹೇಳಿದ್ದೇನೆ ಎಂದು ಮೈಸೂರಿನಲ್ಲಿ ಡ್ರಗ್ಸ್ ಪತ್ತೆ ವಿಚಾರ ಕುರಿತು ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು. ಮೈಸೂರಿನಲ್ಲಿ ಟ್ರಾಫಿಕ್ ಸಿಗ್ನಲ್ ಸಮಸ್ಯೆ ವಿಚಾರ ಆ ಬಗ್ಗೆ ಚರ್ಚೆ ಮಾಡುತ್ತೇನೆ. ಧಾನಸಭೆಯಲ್ಲಿ ಶಾಸಕರೊಬ್ಬರು ಐಪಿಎಲ್ ಮ್ಯಾಚ್ ಟಿಕೆಟ್ ಕೇಳಿದ ವಿಚಾರ ಕುರಿತು ಪ್ರತಿಕ್ರಿಯಿಸಿ, ಈ ಹಿಂದೆ ಒಂದು ಟಿಕೆಟ್ ಕೊಡುತ್ತಿದ್ದರು. ಈಗ ಎರಡು ಟಿಕೆಟ್ ಕೊಡಲು ಶಾಸಕರು ಕೇಳಿದರು, ಅದರಲ್ಲೇನಿದೆ ಎಂದು ಸಮರ್ಥಿಸಿಕೊಂಡರು.

ಮಂಕಿ ಶೋಲ್ಡರ್ ಕುಡಿದಿದ್ದೀರಾ ಅಂತ ಕೇಳಿ, ನಂತರ ಏನಂದ್ರು ಹೇಳಿ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಹಾದು, ಅಪ್ಪಟ ಕುಡುಕರನ್ನೂ, ''ನೀವು 'ಮಂಕಿ ಶೋಲ್ಡರ್'' ಕುಡಿದಿದ್ದೀರಾ?'' ಎಂದು ಕೇಳಿ. ಅನುಮಾನವೇ ಬೇಡ, ತಕ್ಷಣ ಅವರ ಪ್ರತಿಕ್ರಿಯೆ ವಿಚಿತ್ರವಾಗಿರುತ್ತದೆ. ಕಾರಣ ಅನೇಕರು 'ಮಂಕಿ ಶೋಲ್ಡರ್' ಹೆಸರನ್ನೇ ಕೇಳಿಲ್ಲ. ಮಂಕಿ ಶೋಲ್ಡರ್ (Monkey Shoulder) ಎಂಬುದು ಒಂದು 'ಗುಂಡು' (ಮದ್ಯ, ಲಿಕ್ಕರ್). ಇದು ಸ್ಕಾಟ್ಲೆಂಡ್‌ನ ಪ್ರಸಿದ್ಧ ಬ್ಲೆಂಡೆಡ್ ಮಾಲ್ಟ್ ಸ್ಕಾಚ್ ವಿಸ್ಕಿಗಳಲ್ಲಿ ಒಂದು. ಈ ವಿಸ್ಕಿಯು ತನ್ನ ವಿಶಿಷ್ಟವಾದ ಹೆಸರು ಮತ್ತು ಬಾಟಲಿಯ ಮೇಲಿರುವ ಮೂರು ಲೋಹದ ಕೋತಿಗಳ ಚಿತ್ರದಿಂದಾಗಿ ಜಗತ್ತಿನಾದ್ಯಂತ ಪ್ರಸಿದ್ಧ.

ಹಿಂದಿನ ಕಾಲದಲ್ಲಿ, ವಿಸ್ಕಿ ತಯಾರಿಕೆಯಲ್ಲಿ 'ಮಾಲ್ಟಿಂಗ್' (Malting) ಪ್ರಕ್ರಿಯೆಯು ಸಂಪೂರ್ಣವಾಗಿ ಕೈಯಿಂದಲೇ ನಡೆಯುತ್ತಿತ್ತು. ಬಾರ್ಲಿ ಧಾನ್ಯವನ್ನು ಮೊಳಕೆ ಬರಿಸಲು ದೊಡ್ಡ ನೆಲದ ಮೇಲೆ ಹರಡಲಾಗುತ್ತಿತ್ತು. ಈ ಬಾರ್ಲಿ ಸಮನಾಗಿ ಒಣಗಲು ಮತ್ತು ಗಾಳಿಯಾಡಲು ಕಾರ್ಮಿಕರು ದೊಡ್ಡ ಸಲಿಕೆಗಳನ್ನು ಬಳಸಿ ದಿನಕ್ಕೆ ಹಲವು ಬಾರಿ ಅದನ್ನು ಕೈಯಿಂದಲೇ ತಿರುವು ಹಾಕಬೇಕಿತ್ತು.

ಇದ ಅತ್ಯಂತ ಕಠಿಣ, ತಲೆನೋವಿನ ಕೆಲಸವಾಗಿತ್ತು. ಕಾರ್ಮಿಕರು ಗಂಟೆಗಟ್ಟಲೆ ಬಾಗಿಕೊಂಡು, ಭಾರವಾದ ಸಲಿಕೆಗಳಿಂದ ಧಾನ್ಯವನ್ನು ಎತ್ತಿ ಎಸೆಯುತ್ತಿದ್ದರು. ವರ್ಷಗಟ್ಟಲೆ ಹೀಗೆ ಒಂದೇ ಬದಿಯಲ್ಲಿ ಶ್ರಮ ಹಾಕುವುದರಿಂದ, ಅವರ ಹೆಗಲ ಮೂಳೆ ಮತ್ತು ಸ್ನಾಯುಗಳ ಮೇಲೆ ವಿಪರೀತ ಒತ್ತಡ ಬೀಳುತ್ತಿತ್ತು. ಇದರ ಪರಿಣಾಮವಾಗಿ, ಅವರ ಒಂದು ಹೆಗಲು ಸ್ವಲ್ಪ ಕೆಳಕ್ಕೆ ಜಾರಿ, ಕೈ ಉದ್ದವಾದಂತೆ ಕಾಣುತ್ತಿತ್ತು. ನಡೆಯುವಾಗ ಅವರ ಕೈಗಳು ಕೋತಿಗಳ ಕೈಗಳಂತೆ ಜೋಲಾಡುತ್ತಿದ್ದವು. ಈ ದೈಹಿಕ ಸ್ಥಿತಿಯನ್ನು ಕಾರ್ಮಿಕರು ತಮಾಷೆಯಾಗಿ ಅಥವಾ ಸಂಕೇತವಾಗಿ 'ಮಂಕಿ ಶೋಲ್ಡರ್' (ಕೋತಿಯ ಭುಜ) ಎಂದು ಕರೆಯತೊಡಗಿದರು. ಇದು ಅಂದಿನ ಕಾಲದ ವಿಸ್ಕಿ ಕಾರ್ಮಿಕರು ಅನುಭವಿಸುತ್ತಿದ್ದ ಒಂದು ರೀತಿಯ 'ವೃತ್ತಿಪರ ಗಾಯ' ಆಗಿತ್ತು.

'ವಿಲಿಯಂ ಗ್ರ್ಯಾಂಟ್ ಅಂಡ್ ಸನ್ಸ್' ಕಂಪನಿಯು ತನ್ನ ಹೊಸ ವಿಸ್ಕಿಗೆ ಈ ಹೆಸರನ್ನು ಇಡಲು ನಿರ್ಧರಿಸಿತು, ಅದರ ಹಿಂದೆ ಒಂದು ಉದಾತ್ತ ಉದ್ದೇಶವಿತ್ತು. ಆಧುನಿಕ ಕಾಲದಲ್ಲಿ ಯಂತ್ರಗಳು ಬಂದಿರುವುದರಿಂದ ಈಗ ಯಾರೂ 'ಮಂಕಿ ಶೋಲ್ಡರ್' ಸಮಸ್ಯೆಯಿಂದ ಬಳಲುತ್ತಿಲ್ಲ. ಆದರೆ, ವಿಸ್ಕಿ ಉದ್ಯಮವು ಇಂದು ಈ ಮಟ್ಟಕ್ಕೆ ಬೆಳೆಯಲು ಅಂದು ಬೆವರು ಸುರಿಸಿದ ಆ ಹಳೆಯ ತಲೆಮಾರಿನ ಕಾರ್ಮಿಕರ ತ್ಯಾಗ ಮತ್ತು ಕಠಿಣ ಪರಿಶ್ರಮವೇ ಕಾರಣ.

ಅಂಥ ಅನಾಮಧೇಯ ಕಾರ್ಮಿಕರಿಗೆ ಗೌರವ ಸಲ್ಲಿಸಲು ಮತ್ತು ಅವರ ಪರಂಪರೆಯನ್ನು ನೆನಪಿಸಲು ಈ ವಿಸ್ಕಿಗೆ 'ಮಂಕಿ ಶೋಲ್ಡರ್' ಎಂದು ಹೆಸರಿಡಲಾಯಿತು. ಇದು ಕೇವಲ ಒಂದು ಹೆಸರಲ್ಲ, ಬದಲಾಗಿ ವಿಸ್ಕಿ ಇತಿಹಾಸದ ಒಂದು ಭಾಗವಾಗಿದೆ. ಇದರ ಬಾಟಲಿಯನ್ನು ಬೇರೆ ವಿಸ್ಕಿ ಬಾಟಲಿಗಳಿಗಿಂತ ಸ್ವಲ್ಪ ಭಿನ್ನವಾಗಿ, ಅಗಲವಾದ ಭುಜಗಳನ್ನು ಹೊಂದಿರುವಂತೆ ವಿನ್ಯಾಸಗೊಳಿಸಲಾಗಿದೆ. ಇದು ಆ ಹಳೆಯ ಕಾಲದ ಕೆಲಸಗಾರರ ಭುಜದ ಶಕ್ತಿಯನ್ನು ನೆನಪಿಸುತ್ತದೆ.

ಈ ಬ್ರ್ಯಾಂಡ್ ಲಾಂಚ್ ಮಾಡುವ ಮೊದಲು, ಮಾರ್ಕೆಟಿಂಗ್ ತಜ್ಞರು ''ಇದಕ್ಕೆ 'ಮಂಕಿ ಶೋಲ್ಡರ್' ಅಂತ ಹೆಸರು ಬೇಡ, ಜನರಿಗೆ ಇದು ಒಂದು ಕಾಯಿಲೆಯ ಹೆಸರು ಅಂತ ಅನಿಸಬಹುದು ಅಥವಾ ಮಂಗನ ಹೆಸರು ಕೇಳಿ ನಗಬಹುದು'' ಎಂದು ಹೇಳಿದ್ದರು. ಆದರೆ ಮಾಲೀಕರು ಹಠ ಹಿಡಿದು ಅದೇ ಹೆಸರನ್ನು ಇಟ್ಟರು. ಇಂದು ಅದೇ ವಿಚಿತ್ರವಾದ ಹೆಸರು ಈ ಬ್ರ್ಯಾಂಡ್ ಇಷ್ಟು ಪ್ರಸಿದ್ಧವಾಗಲು ಕಾರಣವಾಗಿದೆ.

ಸಾಮಾನ್ಯವಾಗಿ ಹಳೆಯ ವಿಸ್ಕಿ ಪ್ರೇಮಿಗಳು ''ವಿಸ್ಕಿಗೆ ಐಸ್ ಹಾಕಬೇಡಿ, ನೀರು ಹಾಕಬೇಡಿ'' ಎಂದು ಚರ್ಚೆ ಮಾಡುತ್ತಾರೆ. ಆದರೆ 'ಮಂಕಿ ಶೋಲ್ಡರ್' ಕಂಪನಿಯವರು ಇದಕ್ಕೆ ವಿರುದ್ಧವಾಗಿ ಒಂದು ದೊಡ್ಡ 'ಮಿಕ್ಸರ್ ಟ್ರಕ್' ಅನ್ನು ತಯಾರಿಸಿದರು. ಇದು ನೋಡಲು ಸಿಮೆಂಟ್ ಮಿಕ್ಸರ್ ಥರ ಇರುತ್ತದೆ, ಆದರೆ ಅದರೊಳಗೆ ಸಾವಿರಾರು ಲೀಟರ್ ವಿಸ್ಕಿ ಕಾಕ್ಟೇಲ್ ಇರುತ್ತದೆ. ಅವರು ಇದನ್ನು ಹಬ್ಬಗಳಲ್ಲಿ ಮತ್ತು ಪಾರ್ಟಿಗಳಲ್ಲಿ ಬಳಸಿ, 'ವಿಸ್ಕಿಯನ್ನು ಹೇಗೆ ಬೇಕಾದರೂ ಎಂಜಾಯ್ ಮಾಡಿ' ಎಂದು ಜಗತ್ತಿಗೆ ತೋರಿಸಿಕೊಟ್ಟರು.

'ಮಂಕಿ ಶೋಲ್ಡರ್' ಬಾಟಲಿಯ ಹೆಗಲ ಮೇಲೆ ಮೂರು ಸಣ್ಣ ಲೋಹದ ಕೋತಿಗಳ ಚಿತ್ರವಿರುವುದನ್ನು ನೀವು ಗಮನಿಸಬಹುದು. ಇದು ಕೇವಲ ವಿನ್ಯಾಸವಲ್ಲ, ಇದು ವಿಸ್ಕಿಯ ಮಿಶ್ರಣವನ್ನು (Blend) ಪ್ರತಿನಿಧಿಸುತ್ತದೆ. ಮಂಕಿ ಶೋಲ್ಡರ್ ಎಂಬುದು 'ಬ್ಲೆಂಡೆಡ್ ಮಾಲ್ಟ್' ವಿಸ್ಕಿ. ಅಂದರೆ, ಇದನ್ನು ಸ್ಕಾಟ್ಲೆಂಡ್‌ನ ಸ್ಪೇಸೈಡ್ (Speyside) ಪ್ರಾಂತ್ಯದ ಮೂರು ಪ್ರಸಿದ್ಧ ಸಿಂಗಲ್ ಮಾಲ್ಟ್ ಡಿಸ್ಟಿಲರಿಗಳಿಂದ ಪಡೆಯಲಾದ ವಿಸ್ಕಿಗಳನ್ನು ಬೆರೆಸಿ ತಯಾರಿಸಲಾಗುತ್ತದೆ- ಮೊದಲನೆಯದು 'ಗ್ಲೆನ್ಫಿಡಿಚ್', ಎರಡನೆಯದು 'ದ ಬೆಲ್ವೆನಿ' ಹಾಗೂ ಮೂರನೆಯದು, 'ಕಿನಿನ್ವಿ'. ಈ ಮೂರು ಪ್ರಸಿದ್ಧ ಡಿಸ್ಟಿಲರಿಗಳ ಸಮ್ಮಿಲನವನ್ನು ಸೂಚಿಸಲು ಬಾಟಲಿಯ ಮೇಲೆ ಮೂರು ಕೋತಿಗಳ ಲಾಂಛನವನ್ನು ಬಳಸಲಾಗಿದೆ.

'ಮಂಕಿ ಶೋಲ್ಡರ್'ನ ವಿಶಿಷ್ಟ ಗುಣಗಳೇನು? ಈ ವಿಸ್ಕಿಯು ಸಾಂಪ್ರದಾಯಿಕವಾಗಿದ್ದರೂ, ತನ್ನ ಆಲೋಚನೆಯಲ್ಲಿ ಆಧುನಿಕವಾಗಿದೆ. ಇದು ಅತ್ಯಂತ ಮೃದುವಾಗಿದ್ದು, ವೆನಿಲ್ಲಾ, ಕಿತ್ತಳೆ ಹಣ್ಣು ಮತ್ತು ಜೇನುತುಪ್ಪದ ಸ್ವಾದವನ್ನು ಹೊಂದಿದೆ. ಇದರಲ್ಲಿ ಹೊಗೆಯ ವಾಸನೆ (Smokiness) ಕಡಿಮೆ ಇರುವುದರಿಂದ ಹೊಸದಾಗಿ ವಿಸ್ಕಿ ಕುಡಿಯುವವರಿಗೂ ಇದು ಇಷ್ಟವಾಗುತ್ತದೆ. ಸಾಮಾನ್ಯವಾಗಿ ಸ್ಕಾಚ್ ವಿಸ್ಕಿಯನ್ನು ನೇರವಾಗಿ ಅಥವಾ ಐಸ್ ಜತೆ ಕುಡಿಯಬೇಕು ಎಂಬ ನಿಯಮವಿದೆ. ಆದರೆ 'ಮಂಕಿ ಶೋಲ್ಡರ್' Mix it Up ಎಂಬ ಘೋಷಣೆಯೊಂದಿಗೆ ಬಂದಿದೆ. ಇದನ್ನು ಕಾಕ್‌ಟೇಲ್‌ಗಳಲ್ಲಿ ಬಳಸಲು ಅತ್ಯುತ್ತಮ ಎಂದು ಪರಿಗಣಿಸಲಾಗುತ್ತದೆ. ಮೊದಲ ಬಾರಿಗೆ ಈ ವಿಸ್ಕಿಯನ್ನು ತಯಾರಿಸಿದಾಗ 27 ಬೇರೆ ಬೇರೆ ಮಿಶ್ರಣಗಳನ್ನು ಪರೀಕ್ಷಿಸಲಾಗಿತ್ತು. ಕೊನೆಗೆ 27ನೇ ನಂಬರ್‌ನ ಮಿಶ್ರಣ ಅತ್ಯುತ್ತಮವಾಗಿ ಬಂದಿದ್ದರಿಂದ ಇಂದಿಗೂ ಇದನ್ನು ತಯಾರಿಸುವಾಗ ಅದೇ ಫಾರ್ಮುಲಾವನ್ನು ಬಳಸಲಾಗುತ್ತದೆ.

ಸಾಮಾನ್ಯವಾಗಿ ಸ್ಕಾಚ್ ವಿಸ್ಕಿಗಳನ್ನು ಕುಡಿಯುವಾಗ ಅದಕ್ಕೆ ಏನನ್ನೂ ಬೆರೆಸಬಾರದು ಎಂಬ ನಿಯಮವಿತ್ತು (Sipping it neat). ಆದರೆ 'ಮಂಕಿ ಶೋಲ್ಡರ್' ಕಂಪನಿಯವರು, ''ನಮ್ಮ ವಿಸ್ಕಿಯನ್ನು ನೀವು ಕಾಕ್‌ಟೇಲ್ ಮಾಡಿಯಾದರೂ ಕುಡಿಯಿರಿ ಅಥವಾ ಸೋಡಾ ಹಾಕಿಯಾದರೂ ಕುಡಿಯಿರಿ, ಒಟ್ಟಿನಲ್ಲಿ ಎಂಜಾಯ್ ಮಾಡಿ'' ಎಂದು ಪ್ರಚಾರ ಮಾಡಿದರು. ಈ ಮೂಲಕ ಅವರು ವಿಸ್ಕಿ ಕುಡಿಯುವ ಹಳೆಯ ಸಂಪ್ರದಾಯವನ್ನೇ ಬದಲಿಸಿದರು.

ಇಂದು 'ಮಂಕಿ ಶೋಲ್ಡರ್' ವಿಶ್ವದ 'ಅತ್ಯಂತ ಟ್ರೆಂಡಿ' ಸ್ಕಾಚ್ ಬ್ರ್ಯಾಂಡ್ ಎಂದು ಗುರುತಿಸಿಕೊಂಡಿದೆ. ಬಾರ್ ಟೆಂಡರ್‌ಗಳ ನೆಚ್ಚಿನ ವಿಸ್ಕಿ ಇದಾಗಿದ್ದು, ಇದು ಹಳೆಯ ಸಂಪ್ರದಾಯವಾದಿ ವಿಸ್ಕಿ ಜಗತ್ತಿಗೆ ಒಂದು ಹೊಸ ಮತ್ತು ಚುರುಕಾದ ಮೆರುಗನ್ನು ನೀಡಿದೆ. ಅನೇಕರು 'ಮಂಕಿ 47' (Monkey 47- ಇದು ಒಂದು ಜಿನ್ ಬ್ರ್ಯಾಂಡ್) ಮತ್ತು 'ಮಂಕಿ ಶೋಲ್ಡರ್' ಒಂದೇ ಕಂಪನಿ ಎಂದು ಅಂದುಕೊಳ್ಳುತ್ತಾರೆ. ಆದರೆ ಇವೆರಡಕ್ಕೂ ಯಾವುದೇ ಸಂಬಂಧವಿಲ್ಲ. 'ಮಂಕಿ ಶೋಲ್ಡರ್' ತನ್ನ ಹೆಸರನ್ನು ಹಳೆಯ ಕೆಲಸಗಾರರ ಶ್ರಮದಿಂದ ಪಡೆದರೆ, 'ಮಂಕಿ 47' ತನ್ನ ಹೆಸರನ್ನು ಒಬ್ಬ ಬ್ರಿಟಿಷ್ ಅಧಿಕಾರಿ ಸಾಕಿದ ಮಂಗನಿಂದ ಪಡೆದಿದೆ. ಇದು ಮದ್ಯದ ಲೋಕದ ಒಂದು ಕುತೂಹಲಕಾರಿ ಗೊಂದಲ.

'ಮಂಕಿ ಶೋಲ್ಡರ್' ವಿಸ್ಕಿ ಪ್ರಪಂಚದಲ್ಲಿ ಒಂದು ಕೂಲ್ ಮತ್ತು ಮಾಡರ್ನ್ ಬ್ರ್ಯಾಂಡ್ ಆಗಿ ಗುರುತಿಸಿಕೊಂಡಿದೆ. ಸಾಮಾನ್ಯವಾಗಿ ಹಳೆಯ ಕಾಲದ ಶ್ರೀಮಂತರು ಅಥವಾ ಸಂಪ್ರದಾಯವಾದಿ ಪ್ರಸಿದ್ಧ ವ್ಯಕ್ತಿಗಳು ಬಹಳ ವರ್ಷಗಳಷ್ಟು ಹಳೆಯದಾದ 'ಸಿಂಗಲ್ ಮಾಲ್ಟ್' ವಿಸ್ಕಿಗಳನ್ನು ಇಷ್ಟಪಟ್ಟರೆ, ಇತ್ತೀಚಿನ ಯುವ ತಲೆಮಾರಿನ ಸೆಲೆಬ್ರಿಟಿಗಳು ಮತ್ತು ಕ್ರಿಯೇಟಿವ್ ಫೀಲ್ಡ್‌ನಲ್ಲಿರುವವರು 'ಮಂಕಿ ಶೋಲ್ಡರ್' ಅನ್ನು ಇಷ್ಟಪಡುತ್ತಾರೆ. ನಿಮಗೆ ಆಶ್ಚರ್ಯವಾಗಬಹುದು, ಆದರೆ ಈ ವಿಸ್ಕಿಯ ಅತಿ ದೊಡ್ಡ ಅಭಿಮಾನಿಗಳು ಪ್ರಸಿದ್ಧ ಬಾರ್ ಟೆಂಡರ್‌ಗಳೇ! ಜಿಮ್ ಮೀಹನ್‌ನಂಥ ಪ್ರಪಂಚದ ನಂಬರ್ ಒನ್ ಮಿಕ್ಸಾಲಜಿಸ್ಟ್‌ಗಳು 'ಮಂಕಿ ಶೋಲ್ಡರ್' ಅನ್ನು ತಮ್ಮ ಮೊದಲ ಆಯ್ಕೆಯನ್ನಾಗಿ ಇಟ್ಟುಕೊಂಡಿದ್ದಾರೆ. ಯಾಕೆಂದರೆ ಇದು ಯಾವುದೇ ಕಾಕ್‌ಟೇಲ್ ಜತೆ ಅದ್ಭುತವಾಗಿ ಬೆರೆಯುತ್ತದೆ.

ಹಲವು ಹಾಲಿವುಡ್ ಪಾರ್ಟಿಗಳಲ್ಲಿ ಮತ್ತು 'ಬ್ಯಾಕ್‌ಸ್ಟೇಜ್' ಲಾಂಜ್‌ಗಳಲ್ಲಿ 'ಮಂಕಿ ಶೋಲ್ಡರ್' ಕಾಣಿಸಿಕೊಳ್ಳುತ್ತದೆ. ವಿಶೇಷವಾಗಿ ಬ್ರಿಟಿಷ್ ನಟರು ಮತ್ತು ಪಾಪ್ ಗಾಯಕರು (ಉದಾಹರಣೆಗೆ ಎಡ್ ಶೀರನ್‌ನಂಥ ಯುವ ಕಲಾವಿದರು) ಹೆಚ್ಚು ಗಂಭೀರವಲ್ಲದ, ಆದರೆ ಸ್ಟೈಲಿಶ್ ಆಗಿರುವ ಈ ಬ್ರ್ಯಾಂಡ್ ಅನ್ನು ಇಷ್ಟಪಡುತ್ತಾರಂತೆ. ಇತ್ತೀಚಿನ ದಿನಗಳಲ್ಲಿ ಇನ್ಸ್ಟಾಗ್ರಾಮ್ ಮತ್ತು ಯೂಟ್ಯೂಬ್‌ನಲ್ಲಿ ಪ್ರಸಿದ್ಧರಾಗಿರುವ 'ಲೈಫ್‌ಸ್ಟೈಲ್' ಬ್ಲಾಗರ್‌ಗಳಿಗೆ 'ಮಂಕಿ ಶೋಲ್ಡರ್' ನೆಚ್ಚಿನ ಬ್ರ್ಯಾಂಡ್. ಇದರ ಬಾಟಲಿ ವಿನ್ಯಾಸ ಫೋಟೋಗಳಿಗೆ ತುಂಬಾ ಚೆನ್ನಾಗಿ ಕಾಣಿಸುವುದರಿಂದ, ಇದು ಯುವ ಸೆಲೆಬ್ರಿಟಿಗಳ ನಡುವೆ ಫೇಮಸ್ ಆಗಿದೆ.

ಒಂದು ವಿಸ್ಕಿಯ ಹೆಸರು ಕೇಳಲು ವಿಚಿತ್ರವಾಗಿದ್ದರೂ, ಅದರ ಹಿಂದೆ ಒಂದು ಸುದೀರ್ಘ ಇತಿಹಾಸ ಮತ್ತು ಕಾರ್ಮಿಕರ ಬೆವರಿನ ಕಥೆಯಿದೆ ಎಂಬುದು 'ಮಂಕಿ ಶೋಲ್ಡರ್'ನ ವಿಶೇಷ. ಈ 'ಮಂಕಿ ಶೋಲ್ಡರ್' ಕಥೆ ನಮಗೆ ಒಂದು ಪಾಠವನ್ನೂ ಕಲಿಸುತ್ತದೆ- 'ಕಷ್ಟಪಟ್ಟು ಕೆಲಸ ಮಾಡುವವರ ಗುರುತು ಎಂದಿಗೂ ಅಳಿಯುವುದಿಲ್ಲ'.

ಮಂಕಿ ಶೋಲ್ಡರ್ ಬಗ್ಗೆ ತಮಾಷೆ

'ಮಂಕಿ ಶೋಲ್ಡರ್' ಹೆಸರೇ ಸ್ವಲ್ಪ ವಿಚಿತ್ರವಾಗಿರುವುದರಿಂದ, ಅದರ ಬಗ್ಗೆ ಕೆಲವು ತಮಾಷೆಗಳಿವೆ.

ಹೆಸರಿನ ಮಹಿಮೆ

ಹೆಂಡತಿ: ಏನ್ರೀ ಅದು, ದಿನಾ ಕುಡಿದು ಬಂದು ಮಂಗನ ಥರ ಆಡ್ತೀರಾ?

ಗಂಡ: ಅದಕ್ಕೇ ಕಣೇ ಇವತ್ತು ಬ್ರ್ಯಾಂಡ್ ಬದಲಾಯಿಸಿದ್ದೇನೆ, 'ಮಂಕಿ ಶೋಲ್ಡರ್' ಕುಡಿದಿದ್ದೇನೆ. ಈಗ ಮಂಗನ ಥರ ಆಡಲ್ಲ, ಮಂಗನ್ನ ಹೆಗಲ ಮೇಲೆ ಕೂರಿಸಿಕೊಂಡಿರೋ ಥರ ಫೀಲ್ ಆಗ್ತಿದೆ ಅಷ್ಟೇ!

ಬಾರ್‌ನಲ್ಲಿ ಸಂಭಾಷಣೆ

ಗ್ರಾಹಕ: ಸರ್, ಒಂದು 'ಮಂಕಿ ಶೋಲ್ಡರ್' ಕೊಡಿ.
ಬಾರ್ ಟೆಂಡರ್: ಸರ್, ಅದು ಸ್ವಲ್ಪ ಕಾಸ್ಟ್ಲಿ.
ಗ್ರಾಹಕ: ಪರವಾಗಿಲ್ಲ ಕೊಡಿ, ಜೀವನ ಪೂರ್ತಿ ಸಂಸಾರ ಅನ್ನೋ ಮಂಗನ್ನ ಹೆಗಲ ಮೇಲೆ ಹೊತ್ತು ಸಾಕಾಗಿದೆ. ಇವತ್ತು ಅಟ್‌ಲೀಸ್ಟ್ ಈ ಮಂಗನ ಶೋಲ್ಡರನ್ನಾದರೂ ಸವರಿ ಟೇಸ್ಟ್ ಮಾಡ್ತೇನೆ.

ಪ್ರಾಣಿ ಸಂಗ್ರಹಾಲಯದ ಕಥೆ

ಒಬ್ಬ ವ್ಯಕ್ತಿ 'ಮಂಕಿ ಶೋಲ್ಡರ್' ಕುಡಿದು ಮೃಗಾಲಯಕ್ಕೆ ಹೋಗಿದ್ದನಂತೆ. ಕೋತಿಗಳ ಪಂಜರದ ಮುಂದೆ ನಿಂತು ಅಳಲು ಶುರುಮಾಡಿದ. ಪಕ್ಕದಲ್ಲಿದ್ದವನು ಕೇಳಿದ, ''ಯಾಕೆ ಅಳ್ತಿದ್ದೀಯಾ?''. ಅದಕ್ಕವನು ಹೇಳಿದ, ''ನನ್ನ ಹೆಗಲ ಮೇಲೆ ಇರಬೇಕಾದ ಕೋತಿನ ಯಾರೋ ಪಂಜರದಲ್ಲಿ ಹಾಕಿದ್ದಾರೆ ಅನ್ಸುತ್ತೆ, ಅದಕ್ಕೇ ಬಾಟಲಿ ಖಾಲಿಯಾದ್ರೂ ನನಗೆ ಕಿಕ್ ಹತ್ತುತ್ತಿಲ್ಲ!''

ಕುಡುಕರ ಫಿಲಾಸಫಿ

ಒಬ್ಬ ಕುಡುಕ ಇನ್ನೊಬ್ಬನಿಗೆ ಹೇಳಿದ: ನೋಡು ಮಗಾ, ಲೈಫ್‌ನಲ್ಲಿ ಏನೇ ಪ್ರಾಬ್ಲಂ ಬಂದ್ರೂ, ಹೆಗಲ ಮೇಲೆ ಕೋತಿ ಇರಲಿ (ಮಂಕಿ ಶೋಲ್ಡರ್), ಆದ್ರೆ ತಲೆ ಮೇಲೆ ಕೋತಿ ಕೂರೋಕೆ ಬಿಡಬಾರದು!

ಪಕ್ಕದಲ್ಲಿದ್ದವನು ಕೇಳಿದ: ಅಂದ್ರೆ ಏನು?

ಅದಕ್ಕವನು ಹೇಳಿದ: ಬಾಟಲಿ ಕೈಯಲ್ಲಿ ಇರಲಿ, ಆದ್ರೆ ಹೆಂಡತಿ ಕೈಗೆ ಸಿಕ್ಕಿಬೀಳಬೇಡ ಅಂತ!

ವಿಚಿತ್ರ ಹೆಸರಿನ 'ಗುಂಡು'ಗಳು

ದೇವರು ತಯಾರಿಸಿದ ಅತ್ಯಂತ ಅನುಪಮ ಮತ್ತು ಅದ್ಭುತ ಸೃಷ್ಟಿಗಳಲ್ಲಿ ವೈನ್ ಕೂಡ ಒಂದು ಎಂದು ವೈನ್ ಪ್ರಿಯರು ಅಭಿಮಾನದಿಂದ ಹೇಳುವುದನ್ನು ಕೇಳಿರಬಹುದು. ವೈನ್ ತಯಾರಿಸುವುದು ಎಷ್ಟು ಕುಶಲವಾದ ಕಸುಬೋ, ಅವುಗಳಿಗೆ ಹೆಸರಿಡುವುದೂ ಅಷ್ಟೇ ಕುಶಲವಾದದ್ದು. ವೈನ್ ತಯಾರಿಕೆ ಎನ್ನುವುದು ವಿಜ್ಞಾನ ಮತ್ತು ಕಲೆಯ ಸಮ್ಮಿಶ್ರಣವಾದರೆ, ಅದಕ್ಕೆ ಹೆಸರಿಡುವುದು ಒಂದು ಪ್ರಬಲವಾದ ಮಾರ್ಕೆಟಿಂಗ್ ತಂತ್ರ.

ವೈನ್ ತಯಾರಿಕೆಯನ್ನು 'ವಿನಿಫಿಕೇಶನ್' (Vinification) ಎನ್ನಲಾಗುತ್ತದೆ. ಇದು ಕೇವಲ ರಸ ತೆಗೆಯುವ ಕೆಲಸವಲ್ಲ, ಬದಲಾಗಿ ಹಂತ ಹಂತದ ಜಾಗರೂಕತೆಯ ಪ್ರಕ್ರಿಯೆ. ಮಣ್ಣಿನ ಗುಣ, ಹವಾಮಾನ ಮತ್ತು ಭೌಗೋಳಿಕ ಪರಿಸರಗಳು ದ್ರಾಕ್ಷಿಯ ರುಚಿಯನ್ನು ನಿರ್ಧರಿಸುತ್ತವೆ. ಒಬ್ಬ ಕುಶಲ ತಯಾರಕ ಮೊದಲು ಈ ನೈಸರ್ಗಿಕ ಅಂಶಗಳನ್ನು ಅರ್ಥಮಾಡಿಕೊಳ್ಳುತ್ತಾನೆ. ಸಕ್ಕರೆಯನ್ನು ಆಲ್ಕೋಹಾಲ್

ಆಗಿ ಪರಿವರ್ತಿಸುವಲ್ಲಿ ಯೀಸ್ಟ್‌ನ ಪಾತ್ರ ದೊಡ್ಡದು. ಇಲ್ಲಿ ತಾಪಮಾನದಲ್ಲಿ ಒಂದು ಡಿಗ್ರಿ ವ್ಯತ್ಯಾಸವಾದರೂ ವೈನ್‌ನ ರುಚಿ ಕೆಡಬಹುದು. ಓಕ್ ಮರದ ಪೀಪಾಯಿಗಳಲ್ಲಿ ವೈನ್ ಅನ್ನು ವರ್ಷಗಳ ಕಾಲ ಇಡಲಾಗುತ್ತದೆ. ಮರದ ಸುವಾಸನೆ ವೈನ್‌ಗೆ ಸೇರಿ ಅದು 'ಬಾಡಿ' ಮತ್ತು ಟೆಕ್ಸ್‌ಚರ್' ಪಡೆಯುತ್ತದೆ. ವಿವಿಧ ತಳಿಯ ದ್ರಾಕ್ಷಿ ರಸಗಳನ್ನು ಸರಿಯಾದ ಪ್ರಮಾಣದಲ್ಲಿ ಬೆರೆಸಿ ಒಂದು ವಿಶಿಷ್ಟ ರುಚಿಯನ್ನು ಸೃಷ್ಟಿಸುವುದು ವೈನ್ ಮಾಸ್ಟರ್‌ನ ಅತಿ ದೊಡ್ಡ ಕಲೆ.

ವೈನ್ ಬಾಟಲಿಯ ಮೇಲಿರುವ ಹೆಸರು ಗ್ರಾಹಕನ ಮೇಲೆ ಮೊದಲ ಪ್ರಭಾವ ಬೀರುತ್ತದೆ. ಹೀಗಾಗಿ ವೈನ್‌ಗೆ ಅತ್ಯಂತ ಜಾಗರೂಕವಾಗಿ ಹೆಸರಿಡುತ್ತಾರೆ. ವೈನ್ ಅನ್ನು ಕುಡಿಯುವವರು ವಿಶೇಷ ವ್ಯಕ್ತಿಗಳಾಗಿರುವುದರಿಂದ, ಅವುಗಳಿಗೆ ವಿಶೇಷವಾದ ಹೆಸರನ್ನು ಇಡುವುದು ಶತಮಾನಗಳಿಂದ ಅನುಸರಿಸಿಕೊಂಡು ಬಂದ ಪದ್ಧತಿ. ಕೆಲವೊಮ್ಮೆ ವೈನ್ ತಯಾರಿಸಿದ ಬಳಿಕ ಅದಕ್ಕೆ ಏನೆಂದು ನಾಮಕರಣ ಮಾಡಬೇಕೆಂದು ಸಾವಿರಾರು ಜನರನ್ನು ಕೇಳುವುದುಂಟು. ಆ ಕಾರಣಕ್ಕಾಗಿಯೇ ದೊಡ್ಡ ದೊಡ್ಡ ಪಾರ್ಟಿಗಳನ್ನು ಏರ್ಪಡಿಸುತ್ತಾರೆ.

1990ರ ದಶಕದ ಕೊನೆಯಲ್ಲಿ ಫ್ರೆಂಚ್ ವೈನ್ ತಯಾರಕ ಥಿಯೆರಿ ಬೌಡಿನ್ ಮತ್ತು ಬ್ರಿಟಿಷ್ ವೈನ್ ವ್ಯಾಪಾರಿ ಗೈ ಆಂಡರ್ಸನ್ ಸೇರಿ ಒಂದು ಪ್ರಯೋಗ ಮಾಡಿದರು. ಯೀಸ್ಟ್‌ನೊಂದಿಗೆ ದೀರ್ಘಕಾಲ ಶೇಖರಿಸಿಟ್ಟ ವೈನ್ ಅನ್ನು ರುಚಿ ನೋಡಿದಾಗ, ಅದರ ಗಾಢವಾದ ಮತ್ತು ಶ್ರೀಮಂತ ರುಚಿಯನ್ನು ಕಂಡು ಥಿಯೆರಿ ಅವರು ಬ್ರಿಟಿಷ್ ಶೈಲಿಯ ಸ್ಲ್ಯಾಂಗ್ ಬಳಸಿ Now, that's a fat bastard ಎಂದು ಉದ್ಗರಿಸಿದರು. ಮುಂದೆ ಅದಕ್ಕೆ ಫ್ಯಾಟ್ ಬಾಸ್ಟರ್ಡ್ ಎಂದೇ ಹೆಸರಿಡಲಾಯಿತು.

ಅಮೆರಿಕದ ಕ್ಯಾಲಿಫೋರ್ನಿಯಾದ ಸ್ಟೋನ್ ಬ್ರೂಯಿಂಗ್ 1997ರಲ್ಲಿ ಒಂದು ಬಿಯರನ್ನು ಮಾರುಕಟ್ಟೆಗೆ ತಂದಿತು. ಅದರ ಹೆಸರು Arrogant Bastard Ale. ಹೆಸರೇ ಸೂಚಿಸುವಂತೆ ಈ ಬಿಯರ್ ತುಂಬಾ ಒರಟಾಗಿ ವರ್ತಿಸುತ್ತದೆ. ಇದರ ಬಾಟಲಿಯ ಮೇಲೆ ಇರುವ ಲೇಬಲ್ ಗ್ರಾಹಕರಿಗೆ ಸವಾಲು ಹಾಕುತ್ತದೆ. ಅಲ್ಲಿ ಹೀಗೆ ಬರೆಯಲಾಗಿದೆ- This is an aggressive beer. You probably won't like it. It is quite doubtful that you have the taste or sophistication to be able to appreciate an ale of this quality and depth. ಇದನ್ನು ಬಿಯರ್ ಲೋಕದ ಒಂದು 'ಬಂಡಾಯ' ಅಂತಾರೆ. ಯಾಕೆಂದರೆ ಸಾಮಾನ್ಯವಾಗಿ ಕಂಪನಿಗಳು 'ನಮ್ಮ ಉತ್ಪನ್ನ ಅದ್ಭುತವಾಗಿದೆ, ದಯವಿಟ್ಟು ಖರೀದಿಸಿ' ಎಂದು ಕೇಳಿಕೊಳ್ಳುತ್ತವೆ. ಆದರೆ ಅರೋಗೆಂಟ್ ಬಾಸ್ಟರ್ಡ್ ಬ್ರ್ಯಾಂಡ್ 'ಇದು ನಿಮಗಾಗಿ ಅಲ್ಲ, ಇದನ್ನು ಕುಡಿಯುವ ತಾಕತ್ತು ನಿಮಗಿಲ್ಲ' ಎಂದು ಹೇಳುವ ಮೂಲಕ ಜನರ ಕುತೂಹಲವನ್ನು ಕೆರಳಿಸಿತು. ಈ 'ರಿವರ್ಸ್ ಸೈಕಾಲಜಿ' ವಿಪರೀತ ಯಶಸ್ಸು ಕಂಡಿತು.

ಇದರ ಬಾಟಲಿಯ ಮೇಲೆ 'ಗಾರ್ಗೋಯ್ಲ್' ಎಂಬ ವಿಚಿತ್ರ ಪ್ರಾಣಿಯ ಚಿತ್ರವಿದೆ. ಪುರಾಣಗಳ ಪ್ರಕಾರ ಗಾರ್ಗೋಯ್ಲ್‌ಗಳು ಕೆಟ್ಟ ಶಕ್ತಿಗಳಿಂದ ರಕ್ಷಣೆ ನೀಡುತ್ತವೆ. ಇಲ್ಲಿ ಈ ಲೋಗೋ 'ಕಳಪೆ ಗುಣಮಟ್ಟದ ಬಿಯರ್‌ಗಳಿಂದ ನಿಮ್ಮನ್ನು ರಕ್ಷಿಸುತ್ತೇನೆ' ಎಂಬ ಅರ್ಥವನ್ನು ನೀಡುತ್ತದೆ.

ಇದೆಂಥ ಹೆಸರು?!

ವೈನ್ ಲೋಕದಲ್ಲಿ ಅತ್ಯಂತ ತಮಾಷೆಯ ಮತ್ತು ವಿಲಕ್ಷಣ ಹೆಸರಿನ ವೈನ್ ಇದೆ. ಅದರ ಹೆಸರು ಓಲ್ಡ್ ಫಾರ್ಟ್!

ಇದು ಗಂಭೀರವಾದ ವೈನ್ ಸಂಸ್ಕೃತಿಯನ್ನು ಸ್ವಲ್ಪ ಲೇವಡಿ ಮಾಡುವ ಉದ್ದೇಶದಿಂದ ಹುಟ್ಟಿಕೊಂಡಿದ್ದು. ಇಂಗ್ಲಿಷ್‌ನಲ್ಲಿ 'Old Fart' ಎನ್ನುವ ಪದವನ್ನು ಸಾಮಾನ್ಯವಾಗಿ 'ತುಂಬಾ ಹಳೆಯ ವಿಚಾರದ ಅಥವಾ ವಿಚಿತ್ರವಾಗಿ ವರ್ತಿಸುವ ವಯಸ್ಸಾದ ವ್ಯಕ್ತಿ' ಎಂಬ ಅರ್ಥದಲ್ಲಿ ತಮಾಷೆಯಾಗಿ ಬಳಸಲಾಗುತ್ತದೆ. ವೈನ್ ಲೋಕವು

ಸಾಮಾನ್ಯವಾಗಿ ತುಂಬಾ ಗಂಭೀರ ಮತ್ತು ಶ್ರೀಮಂತಿಕೆಯ ಸಂಕೇತವೆಂದು ಪರಿಗಣಿಸಲ್ಪಡುತ್ತದೆ. ಆದರೆ, ಈ ಬ್ರ್ಯಾಂಡ್ ಆ ಗಂಭೀರತೆಯನ್ನು ಬದಿಗಿಟ್ಟು, ವೈನ್ ಕುಡಿಯುವುದನ್ನು ಒಂದು ಮೋಜಿನ ವಿಷಯವನ್ನಾಗಿ ಮಾಡಿದೆ.

ಈ ವೈನ್ ತನ್ನ ರುಚಿಗಿಂತ ತನ್ನ ಹೆಸರಿನಿಂದಲೇ ಹೆಚ್ಚು ಮಾರಾಟವಾಗುತ್ತದೆ. ಸ್ನೇಹಿತರ ನಿವೃತ್ತಿ ಸಮಾರಂಭಕ್ಕೆ, 50 ಅಥವಾ 60ನೇ ವರ್ಷದ ಹುಟ್ಟುಹಬ್ಬಕ್ಕೆ ತಮಾಷೆಯ ಉಡುಗೊರೆಯಾಗಿ ನೀಡಲು ಜನರು ಇದನ್ನು ಹೆಚ್ಚಾಗಿ ಖರೀದಿಸುತ್ತಾರೆ. ಪಾರ್ಟಿಗಳಲ್ಲಿ ಸಂಭಾಷಣೆಯನ್ನು ಆರಂಭಿಸಲು ಇದು ಅತ್ಯುತ್ತಮ ಬಾಟಲಿ.

ಎಲೆಯಡಕೆಯ ಸುಸಂಸ್ಕೃತ ಸಸ್ಯಶಾಸ್ತ್ರೀಯ ಸಂಯೋಗ

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಮಿತಾಭ್ ಬಚ್ಚನ್‌ನ 'ಡಾನ್' ಚಿತ್ರದ ಹಾಡನ್ನೊಮ್ಮೆ ನೆನಪಿಸಿಕೊಳ್ಳಿ. ಅದೇ- ''ಓ ಖಾಯಿಕೇ ಪಾನ್ ಬನಾರಸ್ ವಾಲಾ... ಖುಲೀ ಜಾಯೇ ಬಂದ್ ಅಕಲ್ ಕಾ ತಾಲಾ...'' ಬುದ್ಧಿಶಕ್ತಿಯ ಬೀಗ ತೆರೆಯುತ್ತದಂತೆ ಬನಾರಸ್ ಪಾನ್ ತಿಂದವರಿಗೆ. ಕೊಲ್ಕತ್ತಾ ಮೀಠಾ ಪಾನ್ ತಿಂದವರಿಗೂ ಹಾಗೇ ಆಗುತ್ತದೇನೋ. ನಮ್ಮ ಮೈಸೂರು ವೀಳ್ಯದೆಲೆಯೇನು ಕಡಿಮೆಯೇ? ಎಲ್ಲ ಬಗೆಯ ಪಾನ್‌ಗಳದೂ Pan-India ಭರ್ಜರಿ ಪ್ರದರ್ಶನವೇ. ಪಾನ್ ಎನ್ನಿ, ಬೀಡಾ ಎನ್ನಿ, ಎಲೆಯಡಿಕೆ ಎನ್ನಿ ಅಥವಾ ಸುಸಂಸ್ಕೃತವಾಗಿ ತಾಂಬೂಲ ಎನ್ನಿ, ನಮ್ಮ ಆಚಾರ-ವಿಚಾರ-ಆಹಾರ ಪರಂಪರೆಗಳಲ್ಲಿ ಅದರ ಮೆರುಗು ಅನನ್ಯ, ಅಸಾಮಾನ್ಯ. ನಾವು ಸವಿದರಷ್ಟೇ ಸಾಲದು ದೇವರೂ ಸವಿಯಲೆಂಬ ಆಶಯದಿಂದ ಪೂಜೆಯಲ್ಲಿ ನೈವೇದ್ಯ ಸಮರ್ಪಣೆ ಬಳಿಕ ''ಮುಖವಾಸನಾರ್ಥೇ ಪೂಗೀಫಲ ತಾಂಬೂಲಂ ಸಮರ್ಪಯಾಮಿ'' ಎಂದು ದೇವರಿಗೂ 'ಸುಪಾರಿ' ಕೊಡುವವರು ನಾವು (ಅಪಾರ್ಥ ಮಾಡ್ಕೊಳ್ಳೇಡಿ)!

ಇಂತಿರುವ ತಾಂಬೂಲ ಸಂಸ್ಕೃತಿಯು ಆರಂಭವಾದದ್ದು ಎಲ್ಲಿ, ಯಾವಾಗ? ಶತಮಾನಗಳಿಂದಲೂ ಅದು ಮುಂದುವರಿದುಕೊಂಡು ಬಂದಿದ್ದು ಹೇಗೆ? ದೇವತಾರ್ಚನ, ಭೋಜನ, ಆತಿಥ್ಯ, ಸತ್ಕಾರಗಳು ತಾಂಬೂಲ ಇಲ್ಲದೆ ಅಪರಿಪೂರ್ಣ ಎನಿಸುವುದು ಏಕೆ? ಹಿತಮಿತವಾದ ತಾಂಬೂಲ ಚರ್ವಣವು ಒಂದು ಸುಸಂಸ್ಕೃತ ಹವ್ಯಾಸ (ಚಟ ಅಲ್ಲ) ಎಂದಾದದ್ದು ಹೇಗೆ? ತಾಂಬೂಲವೆಂದು ಜಗಿಯುವ ವೀಳ್ಯದೆಲೆ, ಸುಣ್ಣ ಅಡಕೆ ಅಷ್ಟೇ ಅಲ್ಲದೆ ಐಚ್ಛಿಕವಾಗಿ ಸೇರಿಸಿಕೊಳ್ಳುವ ಇತರ ಸುಗಂಧದ್ರವ್ಯಗಳು (ತಂಬಾಕು ಅಲ್ಲ) ನಮ್ಮ ದೇಹದ ಮತ್ತು ಮನಸ್ಸಿನ ಆರೋಗ್ಯಕ್ಕೆ ಪೂರಕವೇ? ಮಾರಕವೇ? ಎಂಬಿತ್ಯಾದಿ ಪ್ರಶ್ನೆಗಳನ್ನು ನೀವು ಯಾವತ್ತಾದರೂ ಕೇಳಿಕೊಂಡಿದ್ದೀರಾ? ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದೀರಾ? ಇಲ್ಲ ಅಥವಾ ಹೌದು ಅಂತಾದರೂ ಇವೆಲ್ಲ ಪ್ರಶ್ನೆಗಳಿಗೆ ಉತ್ತರವನ್ನೂ, ಅನೇಕ ಸ್ವಾರಸ್ಯಕರ ಮಾಹಿತಿಗಳನ್ನೂ ಕನ್ನಡದಲ್ಲಿ ವಿವರಿಸುವ ಬೃಹತ್ ಗ್ರಂಥವೊಂದು ಇಂದು (ರವಿವಾರ, 29 ಮಾರ್ಚ್ 2026) ಬೆಂಗಳೂರಿನಲ್ಲಿ ಲೋಕಾರ್ಪಣೆಯಾಗುತ್ತಿದೆ. 'ತಾಂಬೂಲರಾಗ' ಎಂದು ಅದರ ಹೆಸರು. ಗ್ರಂಥದ ಸಂಪಾದಕರು ನಮ್ಮೂರಿನವರು, ನನ್ನೊಬ್ಬ ಹಿರಿಯ ಹಿತೈಷಿ. ತಾಂಬೂಲ, ಅದಕ್ಕಿಂತಲೂ ಹೆಚ್ಚಾಗಿ ಈ ರೀತಿಯ ಸ್ವಾರಸ್ಯಕರ ಮಾಹಿತಿ, ನನಗೂ ಇಷ್ಟವೇ ಎಂದು ಅವರಿಗೆ ಚೆನ್ನಾಗಿ ಗೊತ್ತು. ಆದ್ದರಿಂದಲೇ ಇರಬೇಕು- ದೂರದೇಶದಲ್ಲಿರುವ ನನಗೆ ಪುಸ್ತಕದ್ದೊಂದು ಪ್ರಿವಿಲೆಜ್ಡ್ ಪ್ರಿವ್ಯೂ ಒದಗಿಸಿದ್ದಾರೆ! ಅಂಥ ಪ್ರೀತಿಯ ತಾಂಬೂಲವನ್ನು ನಾನೊಬ್ಬನೇ ಜಗಿಯುವುದು (ಸವಿಯುವುದು) ತರವಲ್ಲ ಎಂದು ಜಗದಗಲ ದಾಟಿಸುತ್ತಿದ್ದೇನೆ, ಇಂದಿನ ತಿಳಿರುತೋರಣವನ್ನು ತಾಂಬೂಲರಾಗದ್ದೇ ಕೆಲ ತಾನ-ತಂತುಗಳಿಂದ ಸಿಂಗರಿಸುವ ಮೂಲಕ.

''ತಾಂಬೂಲವನ್ನು ಕುರಿತಂತೆ ಋಷಿ-ಮುನಿಗಳು, ಘನವಿದ್ವಾಂಸರು ಬರೆದ ಸಂಸ್ಕೃತ ಶ್ಲೋಕಗಳ ಅರ್ಥವನ್ನು ವಿದ್ಯಾರತ್ನ ಅ. ರಾ.ಪಂಚಮುಖಿಯವರು 'ತಾಂಬೂಲ' ಎಂಬೊಂದು ಕನ್ನಡ ಕೃತಿಯಲ್ಲಿ ಮತ್ತು ಬಹುಶ್ರುತ ವಿದ್ವಾಂಸ ದ್ವಾರಕಾಪ್ರಸಾದ ಶಾಸ್ತ್ರಿಯವರು 'ತಾಂಬೂಲಮಂಜರಿ' ಎಂಬ ಹಿಂದಿ ಕೃತಿಯಲ್ಲಿ ಈ ಹಿಂದೆ ಪ್ರಕಟಿಸಿ ತಾಂಬೂಲಪ್ರಿಯರಿಗೆ ವಿಸ್ತೃತವಾದ ಅರಿವನ್ನು ನೀಡುವಲ್ಲಿ ಮಹದುಪಕಾರ ಮಾಡಿದ್ದಾರೆ. ಈ ಇಬ್ಬರೂ ವಿದ್ವಾಂಸರಿಗೂ ತಾಂಬೂಲಪ್ರಿಯರು ಕೃತಜ್ಞರಾಗಿರಬೇಕು. ಈ ಎರಡೂ ಕೃತಿಗಳಲ್ಲಿ ಸಾಂಪ್ರದಾಯಿಕ ತಾಂಬೂಲವು ಒಳಗೊಂಡಿರುವ ವೀಳ್ಯದೆಲೆ, ಅಡಕೆ, ಸುಣ್ಣ, ಖದಿರಸಾರ, ಲತಾಕಸ್ತೂರಿ, ಸುವರ್ಣದಲ, ಏಲಕ್ಕಿ, ಲವಂಗ, ಜಾಯಿಕಾಯಿ, ಶುಂಠಿ, ಬಾದಾಮಿ, ಕೊಬ್ಬರಿ, ದಾಲ್ಚೀನಿ, ಕರ್ಪೂರವೇ ಮೊದಲಾದ ಇಪ್ಪತ್ತೊಂದು ಬಗೆಯ ದ್ರವ್ಯಗಳನ್ನು ಕುರಿತಾದ ವಿಸ್ತೃತ ಮಾಹಿತಿ ಇದೆ. ಆದರೆ ಈ ಕೃತಿಗಳು ಈಗಿನವರ ಓದಿಗೆ ಸುಲಭವಾಗಿ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಇವೆರಡೂ ಕೃತಿಗಳನ್ನು ಮೂಲ ಆಧಾರವಾಗಿಟ್ಟುಕೊಂಡು ರಚಿಸಿದ ಸಂಪಾದಿತ ಕೃತಿ ತಾಂಬೂಲರಾಗ. ತಾಂಬೂಲ ಮೆಲ್ಲುವುದು, ಎಲೆಯಡಕೆ ಹಾಕುವುದು ಒಂದು ಸುಸಂಸ್ಕೃತ ಹವ್ಯಾಸವಲ್ಲವೆಂದು ಮೂಗು ಮುರಿಯುವವರಿಗೆ ತಾಂಬೂಲದ ಪೌರಾಣಿಕ ಐತಿಹಾಸಿಕ ಸಾಮಾಜಿಕ ಪರಂಪರೆಯನ್ನು ತಿಳಿಸುತ್ತ, ಆಯುರ್ವೇದೀಯ ಮಹತ್ತ್ವವನ್ನು ಮನದಟ್ಟು ಮಾಡುವುದೇ ಈ ಗ್ರಂಥರಚನೆಯ ಉದ್ದೇಶ. ಇದನ್ನು ಅಧ್ಯಯನ ಮಾಡಿ ತಂಬಾಕುರಹಿತ ತಾಂಬೂಲವನ್ನು ಮೆಲ್ಲುವಲ್ಲಿ ಮುಂದಿನ ಪೀಳಿಗೆ ಮನ ಮಾಡಲಿ ಎನ್ನುವುದು ನಮ್ಮ ಆಶಯ. ತಾಂಬೂಲ ಸಂಸ್ಕೃತಿಯನ್ನು ಉಳಿಸಿ ಬೆಳೆಸೋಣ; ತಾಂಬೂಲ ಪ್ರಿಯರಾಗೋಣ'' ಎಂಬ ನಿವೇದನೆಯ 'ವೀಳ್ಯ'ವನ್ನು ಕೊಟ್ಟು ಓದುಗರನ್ನು ವಾಚನಾನುಸಂಧಾನಕ್ಕೆ ಆಹ್ವಾನಿಸಿದ್ದು ಚೆನ್ನಾಗಿದೆ.

ಹಾಗೆಯೇ ಮುಂದೆ ಒಂದುಕಡೆ ಬರುವ ಈ ಟಿಪ್ಪಣಿ- ''ಒಂದು ಕಾಲಕ್ಕೆ ಮನೆಯ ಚಾವಡಿ, ಶುಭಸಮಾರಂಭಗಳ ಚಪ್ಪರದಡಿಯ ತಟ್ಟೆಗಳಲ್ಲಿ ವಿರಾಜಿಸುತ್ತಿದ್ದ ತಾಂಬೂಲದ ಪರಿಕರಗಳು ಇಂದು 'ರೆಡಿ-ಟು-ಈಟ್' ಆದ ಪಾನ್‌ಬೀಡಾಗಳಾಗಿ ಮಾರುಕಟ್ಟೆಯನ್ನು ಪ್ರವೇಶಿಸಿವೆ. ನಗರಗಳ ಯಾವುದೇ ಖಾನಾವಳಿ ಅಥವಾ ಉಪಾಹಾರಗೃಹಗಳ ಮುಂದೆ ಅರಳಿನಿಂತ ಕೊಡೆಯ ಕೆಳಗೊಬ್ಬ ಪಾನ್‌ವಾಲಾ ಇದ್ದೇ ಇರುತ್ತಾನೆ. ನಮ್ಮ ಆಯ್ಕೆಯ ಎಲೆಗೆ ಸುಣ್ಣ ಸವರಿ ಅಡಕೆ ಚೂರುಗಳೊಂದಿಗೆ ಪರಿಮಳ ದ್ರವ್ಯಗಳನ್ನು ಬೆರೆಸಿ ತ್ರಿಕೋನಾಕೃತಿಯಲ್ಲಿ ಅದನ್ನು ಮಡಚಿ ನಮ್ಮ ಕೈಗೆ ನೀಡುವ ಅವನ ಕೈಚಳಕಕ್ಕೆ ಬೆರಗಾಗಲೇಬೇಕು. ಈ ಪಾನ್‌ವಾಲಾ ಈಗೀಗ ವಿವಾಹಸಮಾರಂಭಗಳ ಔತಣಕೂಟದಲ್ಲೂ ಠಾಕುಠೀಕಾದ ವಸ್ತ್ರಸಂಹಿತೆಯೊಂದಿಗೆ ಕಾಣಿಸತೊಡಗಿದ್ದಾನೆ. ಇಂಥ ಪಾನ್‌ಬೀಡಾಗಳು ಗೋವಿಂದ್ ಬೀಡಾ, ಕಪೂರ್ ಬೀಡಾ, ಕುಲ್ಫಿ ಬೀಡಾ, ಕತರ್ ಬೀಡಾ, ಮೋಂದ್ ಬೀಡಾ, ಗೋಂದ್ ಬೀಡಾ ಮುಂತಾದ ತರಹೇವಾರಿ ಹೆಸರುಗಳಿಂದ ಕರೆಯಲ್ಪಡುತ್ತವೆ. ಹೆಣ್ಣು ಗಂಡಿನ ಸಮಾಗಮದ ಸಮಯಕ್ಕಾಗಿಯೇ 'ಸುಖ್ ಪಲ್ಲಂಗ್' ಎನ್ನುವ ಪಾನ್‌ಬೀಡಾ ಈಗ ಮಾರುಕಟ್ಟೆಯಲ್ಲಿದ್ದು ಅದರ ಬೆಲೆ ಕೆಲವು ಸಾವಿರಗಳಷ್ಟಿದೆಯಂತೆ! ಒಟ್ಟಾರೆಯಾಗಿ ಈ ಪಾನ್‌ಬೀಡಾ ಉದ್ಯಮವು ಕಡಿಮೆ ಬಂಡವಾಳದ ಹೆಚ್ಚು ಗಳಿಕೆಯನ್ನು ನೀಡುವ ಉದ್ಯಮವಾಗಿ ಭಾರತದಲ್ಲಿ ಸ್ಥಾಪಿತಗೊಂಡಿದೆ...'' ಇದೊಂದೇ ಸಾಕು ಓದುಗರ ಮನದಲ್ಲಿ ಪಾನ್‌ಬೀಡಾ ವಿಶ್ವರೂಪ ದರ್ಶನ ಮಾಡಿಸಲಿಕ್ಕೆ. ಪುಸ್ತಕದಲ್ಲಿ ಪ್ರಸ್ತಾವಿಸದಿದ್ದರೂ- ಪಾನ್‌ವಾಲಾ ತನ್ನ ಕೈಯೊರೆಸುವ ಬಟ್ಟೆ, ಅದರ ವರ್ಣಸಂಕರ, ಜ್ವಾಲಾಮುಖಿ ಪಾನ್ ಧಗಧಗ ಉರಿಯುವಾಗಲೇ ಗ್ರಾಹಕರು ಬಾಯಿಯೊಳಗೆ ಹಾಕಿಕೊಳ್ಳುವುದು... ಮುಂತಾದ ವಿಶೇಷ ದೃಶ್ಯಗಳೂ ಕಣ್ಮುಂದೆ ಬರಲಿಕ್ಕೆ.

ತಾಂಬೂಲ, ಅದರ ಗುಣಪ್ರಯೋಜನಗಳು, ವೀಳ್ಯದೆಲೆ, ಅಡಕೆ, ಸುಣ್ಣ ಮತ್ತು ಸುಗಂಧದ್ರವ್ಯಗಳಲ್ಲಿ ಒಂದೊಂದರ ವಿಶೇಷತೆ, ತಾಂಬೂಲವನ್ನು ಯಾವಾಗ ಮೆಲ್ಲಬೇಕು ಮತ್ತು ಯಾವಾಗ/ಎಲ್ಲಿ ಮೆಲ್ಲಬಾರದು, ಯಾರು ಮೆಲ್ಲಬಹುದು ಮತ್ತು ಯಾರಿಗೆ ನಿಷೇಧ, ಯಾರಿಗೆ ಕೊಡುವ ತಾಂಬೂಲದಲ್ಲಿ ಎಷ್ಟು ವೀಳ್ಯದೆಲೆಗಳಿರಬೇಕು, ಎಲೆಗೆ ಸುಣ್ಣವನ್ನು ಯಾವ ಬೆರಳಿಂದ ಹಚ್ಚಬೇಕು... ಇತ್ಯಾದಿ ಪ್ರತಿಯೊಂದು ವಿವರಗಳಿರುವ ಸಂಸ್ಕೃತ ಶ್ಲೋಕಗಳು ಮತ್ತು ಅವುಗಳ ಕನ್ನಡ ಅನುವಾದ ಈ ಪುಸ್ತಕದಲ್ಲಿವೆ. ಅಷ್ಟೇ ಅಲ್ಲ, ಶ್ಲೋಕಗಳಲ್ಲಿ ಬರುವ ಸಂಸ್ಕೃತ ಪದಗಳನ್ನು ಕನ್ನಡ ಸಮಾನಾರ್ಥದೊಡನೆ ಅಕಾರಾದಿ ಪಟ್ಟಿಯಲ್ಲಿ ಕೊಡಲಾಗಿದೆ. ಧನ್ವಂತರೀ, ತ್ರಿಮಲ್ಲಟೀಕಾ, ರಾಜನಿಘಂಟು, ಯೋಗಮಾಲಾ, ಸ್ಕಂದಪುರಾಣ, ಶಾರ್ಙ್ಗಧರ ಪದ್ಧತಿ, ಬೃಹತ್ಸಂಹಿತಾ, ಸುಶ್ರುತ ಸಂಹಿತಾ, ಮಾನಸೋಲ್ಲಾಸ... ಹೀಗೆ ಬೇರೆಬೇರೆ ಆಕರಗಳಿಂದ ಕೆಲವು ಶ್ಲೋಕಗಳ ಪಾಠಾಂತರ ಹೇಗಿದೆ ಎಂಬುದನ್ನೂ ದಾಖಲಿಸಿದ್ದಿದೆ. ಆ ಮಟ್ಟಿಗೆ ಇದನ್ನು ತಾಂಬೂಲ ಜ್ಞಾನಗಂಗೋತ್ರಿ ಎನ್ನಲಿಕ್ಕಡ್ಡಿಯಿಲ್ಲ. ಉದಾಹರಣೆಗೆ, ತಾಂಬೂಲದ ತ್ರಯೋದಶ (13) ಪ್ರಯೋಜನಗಳನ್ನು ಬಣ್ಣಿಸುವ ಈ ಶ್ಲೋಕವನ್ನು ಗಮನಿಸಿ: ''ತಾಂಬೂಲಂ ಕಟುತಿಕ್ತಮುಷ್ಣಮಧುರಂ ಕ್ಷಾರಂ ಕಷಾಯಾನ್ವಿತಂ। ವಾತಘ್ನಂ ಕಫನಾಶನಂ ಕ್ರಿಮಿಹರಂ ದುರ್ಗಂಧಿ ನಿರ್ನಾಶನಮ್। ವಕ್ತ್ರಸ್ಯಾಭರಣಂ ವಿಶುದ್ಧಿಕರಣಂ ಕಾಮಾಗ್ನಿಸಂದೀಪನಂ। ತಾಂಬೂಲಸ್ಯ ಸಖೇ ತ್ರಯೋದಶ ಗುಣಾಃ ಸ್ವರ್ಗೇಽಪಿ ತೇ ದುರ್ಲಭಾಃ'' (ತಾಂಬೂಲವು ಖಾರ, ಹುಳಿ, ಸಿಹಿ, ಕಹಿ, ಉಪ್ಪು, ಮತ್ತು ಒಗರೆಂಬ ಷಡ್ರಸಗಳನ್ನು ಹೊಂದಿದೆ. ಅದು ದೇಹದೊಳಗಿನ ವಾತಸಂಬಂಧಿ ತೊಂದರೆಗಳನ್ನು ನೀಗಿಸಿ ಕಫವನ್ನು ಹೋಗಲಾಡಿಸಿ, ಬಾಯಿಯೊಳಗಿನ ದುರ್ವಾಸನೆಯನ್ನು ಕಳೆದು, ಜಠರದಲ್ಲಿರುವ ಕ್ರಿಮಿಗಳನ್ನು ನಾಶಮಾಡುತ್ತದೆ. ತಾಂಬೂಲವನ್ನು ಮೆಲ್ಲುವುದರಿಂದ ತುಟಿಗಳು ಕೆಂಪಗಾಗುವ ಕಾರಣದಿಂದ ಅದನ್ನು ಮಾತುಗಾರನ ಆಭರಣವೆಂದು ಬಣ್ಣಿಸಲಾಗಿದೆ. ತಾಂಬೂಲವು ರತಿಪೂರ್ವ ಕಾಮವನ್ನು ಉದ್ದೀಪಿಸುತ್ತದೆ. ಗೆಳೆಯನೇ ಇಂಥ ಹತ್ತರ ಮೇಲ್ಮೂರು ಗುಣಗಳು ತಾಂಬೂಲಕ್ಕಿವೆ. ಇದು ಸ್ವರ್ಗದಲ್ಲಿಯೂ ದುರ್ಲಭವಾಗಿದೆ!).

ಊಟ ಆಗಿ ಕೈತೊಳೆದ ಕೂಡಲೇ ನೀವು ತಾಂಬೂಲ ಮೆಲ್ಲುತ್ತೀರಾದರೆ ತಪ್ಪು! ''ಭುಕ್ತ್ವಾನ್ನಂ ಸಲಿಲಂ ಪೀತ್ವಾ ಗೃಹೀತ್ವಾ ಬಹುಭೇಷಜಮ್। ಪ್ರತೀಕ್ಷ್ಯ ಘಟಿಕಾಮೇಕಾಂ ತಾಂಬೂಲಂ ಭಕ್ಷಯೇನ್ನರಃ॥'' ಅಂದರೆ ಭೋಜನ, ದಾಹಶಮನಕ್ಕಾಗಿ ನೀರು, ಔಷಧಾದಿಗಳನ್ನು ಸೇವಿಸಿ ಕನಿಷ್ಠ ಒಂದು ಗಳಿಗೆ (24 ನಿಮಿಷ) ಅಂತರವನ್ನಿರಿಸಿ ತಾಂಬೂಲವನ್ನು ಸೇವಿಸಬೇಕೆಂದು ಹೇಳಲಾಗಿದೆ. ಹಾಗೆಯೇ, ಹಾಲನ್ನು ಕುಡಿದ ತತ್‌ಕ್ಷಣ ತಾಂಬೂಲವನ್ನು ಸೇವಿಸಬಾರದು. ಎಲ್ಲಿಯವರೆಗೆ ನಾಲಗೆಯಲ್ಲಿ ಹಾಲಿನ ಸ್ವಾದವಿರುವುದೋ ಅಲ್ಲಿಯವರೆಗೆ. ಅದಕ್ಕೂ ಒಂದು ಶ್ಲೋಕವಿದೆ: ''ತಾಂಬೂಲಂ ನೈವ ಸೇವೇತ ಕ್ಷೀರಂ ಪೀತ್ವಾತು ಮಾನವಃ। ಯಾವತ್ತು ಸ್ವದತೇ ಕ್ಷೀರಂ ತಾವದೇವೇತಿ ನಿರ್ಣಯಃ॥''. ಈಗ ನೀವಿದನ್ನು ಕೆ.ಎಸ್ ನರಸಿಂಹಸ್ವಾಮಿಯವರ ''ರಾಯರು ಬಂದರು ಮಾವನ ಮನೆಗೆ ರಾತ್ರಿಯಾಗಿತ್ತು...'' ಹಾಡಿಗೆ ಅನ್ವಯಿಸಿ ಗಮನಿಸಬೇಕು. ಅದರ ಒಂದು ಚರಣದಲ್ಲಿ ''ಚಿಗುರೆಲೆ ಬಣ್ಣದ ಅಡಕೆಯ ತಂದಳು ನಾದಿನಿ ನಗುನಗುತ'' ಎಂದು ಮೊದಲಿಗೆ, ಆಮೇಲಷ್ಟೇ ''ಬಿಸಿಬಿಸಿ ಹಾಲಿನ ಬಟ್ಟಲು ತಂದರು ಅಕ್ಕರೆಯಲಿ ಮಾವ'' ಎಂದು ಬರುತ್ತದೆ. ಅಂದರೆ, ರಾಯರು ಎಲೆಯಡಕೆ ಜಗಿದಾದ ಮೇಲೆ ಕೂಡಲೇ ಹಾಲು ಕುಡಿಯಲಿಕ್ಕಡ್ಡಿಯಿಲ್ಲ. ಅಷ್ಟಾದರೂ ಪಾಪ ಮಡದಿಯ ಸದ್ದೇ ಇರಲಿಲ್ಲ ಎನ್ನುವುದು ಬೇರೆಮಾತು. ಹೀಗೆ, ತಾಂಬೂಲವರ್ಣನೆಯ ಗುಂಗಿನಲ್ಲಿರುತ್ತಲೇ ಮನಸ್ಸು ಬೇರೆ ಹತ್ತುಹಲವು ರೋಚಕ ಸಂಗತಿಗಳನ್ನೂ ಮೆಲ್ಲುವಂತೆ ಮಾಡುವುದು ಈ ತಾಂಬೂಲರಾಗದ ಇನ್ನೊಂದು ಹಿರಿಮೆ ಎಂದು ನನಗನಿಸಿತು.

ಇನ್ನು ಈ ಗ್ರಂಥರಚನೆಯ ಹಿಂದಿರುವ ವ್ಯಕ್ತಿಶಕ್ತಿಗಳ ಬಗ್ಗೆಯೂ ಒಂದೆರಡು ಪ್ಯಾರಾ (ಪ್ರೀತಿಭರಿತ ಅಂತಲೂ ಅರ್ಥೈಸಿಕೊಳ್ಳಿ) ಬರೆಯುತ್ತೇನೆ. ಸಂಪಾದಕರು ನಮ್ಮೂರಿನವರು ಎಂದೆನಷ್ಟೆ? ಅವರ ಹೆಸರು ದಿವಾಕರ ಡೋಂಗ್ರೆ. ನಮ್ಮೂರ ಹೆಸರಿಗೇ 'ವ' ಅಕ್ಷರ ಸೇರಿಸಿ 'ಮಾಳವ' ಎಂದು ಕಾವ್ಯನಾಮ. ನಾಲ್ಕೈದು ದಶಕಗಳಿಂದ ಬೆಂಗಳೂರುನಿವಾಸಿ. ಲೇಖಕ, ಕವಿ, ಸಂಘಟನಕಾರ. ಮುದ್ರಣಕ್ಷೇತ್ರದಲ್ಲಿ ತರಬೇತಿ ಪಡೆದು ಒಂದು ಪ್ರಕಾಶನ ಸಂಸ್ಥೆಯನ್ನೂ ನಡೆಸಿದವರು. ಚಿತ್ಪಾವನ ಸಮುದಾಯದ 'ಭಾರ್ಗವವಾಣಿ' ನಿಯತಕಾಲಿಕೆಯ ಸಂಪಾದಕರಾಗಿ ಕೆಲಕಾಲ ಸೇವೆ ಸಲ್ಲಿಸಿದವರು. ಕನ್ನಡದಲ್ಲಿ ಮೂರು ಕಾದಂಬರಿಗಳು, ಚಿತ್ಪಾವನಿ ಭಾಷೆಯಲ್ಲಿ ಹಾಸ್ಯಲೇಖನಗಳು, ಕಥೆ-ಕವಿತೆ ಅಲ್ಲದೇ ಟಿವಿ-ವಾಹಿನಿಗಳಿಗಾಗಿ ಮರಾಠಿ ಧಾರಾವಾಹಿಗಳ ಕನ್ನಡ ಅನುವಾದ ಹೀಗೆ ಸಾಕಷ್ಟು ಸಾಹಿತ್ಯಕೃಷಿ ಮಾಡಿದವರು. ಅಷ್ಟಾಗಿಯೂ ಈ ತಾಂಬೂಲರಾಗದ ಮಟ್ಟಿಗೆ ತನ್ನದು ಸೃಷ್ಟಿ ಅಲ್ಲ, ಸಂಗ್ರಹಣೆ ಮತ್ತು ಸಂಕಲನ ಮಾತ್ರ ಎಂಬ ವಿನೀತಭಾವ ತೋರಿದ್ದಾರೆ. ಸಂಸ್ಕೃತ ಶ್ಲೋಕಗಳ ನಿಖರತೆಯನ್ನು ಅವಲೋಕಿಸಿ ತಿದ್ದಿತೀಡುವಿಕೆ ಮಾಡಿ ಯೋಗ್ಯವಾದೊಂದು ಮುನ್ನುಡಿಯನ್ನೂ ಬರೆದುಕೊಟ್ಟವರು ಡಾ. ಸೂರ್ಯ ಹೆಬ್ಬಾರ್. ಇವರು ಸಂಸ್ಕೃತ ವಿದ್ವಾಂಸರು, ಪ್ರಾಧ್ಯಾಪಕರು, ಅಷ್ಟಾವಧಾನಿ ಮತ್ತು ಬೆಂಗಳೂರಿನಿಂದ ಪ್ರಕಟವಾಗುವ 'ಸಂಭಾಷಣ ಸಂದೇಶ' ಸಂಸ್ಕೃತ ಪತ್ರಿಕೆಯ ಸಹಸಂಪಾದಕರು. ಗ್ರಂಥಕ್ಕೆ ತೂಕ ತಂದ ಇನ್ನೊಬ್ಬ ಸಂಸ್ಕೃತ ವಿದ್ವಾಂಸ ಡಾ. ಎಂ. ಸುದರ್ಶನ ಚಿಪಳೂಣಕರ್. ಮೂಲತಃ ಕಾರ್ಕಳ ಸಮೀಪದ ದುರ್ಗದವರು. ಶೃಂಗೇರಿಯ ಕೇಂದ್ರೀಯ ಸಂಸ್ಕೃತ



ವಿಶ್ವವಿದ್ಯಾಲಯದಿಂದ ಶಾಸ್ತ್ರೀ ಮತ್ತು ಆಚಾರ್ಯ ಪದವಿ, ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದಿಂದ ಹಸ್ತಪ್ರತಿ ಶಾಸ್ತ್ರದಲ್ಲಿ ಎಂ.ಫಿಲ್ ಪದವಿ, ಕಾವ್ಯಪ್ರಕಾಶ ಗ್ರಂಥದ ಹಸ್ತಪ್ರತಿರೂಪದ ಅಧ್ಯಯನಕ್ಕೆ ವಿದ್ಯಾವಾರಿಧಿ (ಪಿಎಚ್‌ಡಿ) ಪದವಿ. ಪ್ರಸ್ತುತ ಕೇರಳದ ಚಿನ್ಮಯ ವಿಶ್ವವಿದ್ಯಾಪೀಠದಲ್ಲಿ ಸಹಾಚಾರ್ಯರಾಗಿ ಮತ್ತು 'ಲಿಂಗ್ವಿಸ್ಟಿಕ್ಸ್ ಆ್ಯಂಡ್ ಲಿಟರರಿ ಸ್ಟಡೀಸ್' ವಿಭಾಗದ ಮುಖ್ಯಸ್ಥರಾಗಿ ಸೇವೆ. ತಾಂಬೂಲಚರ್ವಣದ ನಡುವೆ ಗ್ರಾಮೀಣ ಜನರಲ್ಲಿನ ಜೀವನಾನುಭವಗಳು ಕೌಟುಂಬಿಕ ಸಂಗತಿಗಳ ಆದಾನಪ್ರದಾನದ ವಿಚಾರಗಳನ್ನು ಆಧುನಿಕ ಕಾಲಕ್ಕೆ ಅನ್ವಯವಾಗುವ ಶ್ಲೋಕಗಳ ರೂಪದಲ್ಲಿ ಮಂಡಿಸಿರುವುದು ಇವರ ಕೊಡುಗೆ. ತಾಂಬೂಲ ಸಂಸ್ಕೃತಿಯನ್ನು ಲಘುವಾಗಿ ಕಾಣುವ ನಗರವಾಸಿ ಯುವಕನೋರ್ವನಿಗೆ ನೆರೆಮನೆಯ ಯಜಮಾನ ಮತ್ತು ಅವನ ಮಗಳು ತಾಂಬೂಲದ ಮಹತ್ತ್ವವನ್ನು ತಿಳಿಸುತ್ತಾರೆ. ಮುಂದೆ ಕೆಲ ದಿನಗಳಲ್ಲಿ ಆ ಯುವಕನು ಅದೇ ಯುವತಿಯಲ್ಲಿ ಅನುರಕ್ತನಾಗಿ ವಿವಾಹ ನಿಶ್ಚಯವಾಗುತ್ತದೆ. ಅವರಿಬ್ಬರ ಹೆತ್ತವರು ತಾಂಬೂಲವನ್ನು ವಿನಿಮಯ ಮಾಡಿಕೊಳ್ಳುವ ಸರಸ ಸನ್ನಿವೇಶದ ಶ್ಲೋಕಗಳಿವು.

ಹಾಗಿದ್ದರೆ ಇದೊಂದು ಬರೀ ಸಂಸ್ಕೃತಭೂಯಿಷ್ಠ ಗ್ರಂಥ ಇರಬಹುದು, ನಮಗೆಲ್ಲ ತಲೆಮೇಲಿಂದ ಹಾದು ಹೋಗುವಂಥದಿರಬಹುದು ಅಂದುಕೊಳ್ಳಬೇಡಿ! 'ತಾಂಬೂಲರಾಗ'ದ ದ್ವಿತೀಯಾರ್ಧದಲ್ಲಿ ಬೇರೆಯೇ ರೀತಿಯಲ್ಲಿ ಮೌಲ್ಯವರ್ಧನ ಮಾಡಿರುವವರು ಸಸ್ಯಶಾಸ್ತ್ರದ ಪ್ರಾಧ್ಯಾಪಕ ಗಣೇಶ ಶೆಂಡ್ಯೆ. ಔಷಧೀಯ ಸಸ್ಯವಿಜ್ಞಾನ, ಸಸ್ಯಶಾಸ್ತ್ರ ಮತ್ತು ರಸಾಯನಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವೀಧರ. ಸಸ್ಯಜನ್ಯ ಔಷಧಿ ಮತ್ತು ಸೌಂದರ್ಯವರ್ಧಕಗಳ ತಯಾರಿಕೆ ಕಂಪನಿಯಲ್ಲಿ ಸಂಶೋಧನೆ ಮತ್ತು ಗುಣಮಟ್ಟ ಪರೀಕ್ಷೆ, ತದನಂತರ ಉಜಿರೆ ಧ.ಮಂ. ಸ್ವಾಯತ್ತ ಮಹಾವಿದ್ಯಾಲಯದಲ್ಲಿ ಸಸ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪನ, ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಇಲಾಖೆ ನಡೆಸುವ ಪ್ರಾಧ್ಯಾಪಕ ನೇಮಕಾತಿ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ಏಳನೇ ಸ್ಥಾನ, ಪ್ರಸ್ತುತ ಚಿಕ್ಕಮಗಳೂರಿನ ಐಡಿಎಸ್‌ಜಿ ಸರಕಾರಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ. ತಾಂಬೂಲದ ಪ್ರಧಾನ ಘಟಕಗಳಾದ ವೀಳ್ಯದೆಲೆ, ಅಡಕೆ, ಸುಣ್ಣ, ಮತ್ತಿತರ ಸುಗಂಧದ್ರವ್ಯಗಳ ಸಸ್ಯಶಾಸ್ತ್ರೀಯ ಮತ್ತು ಔಷಧೀಯ ಗುಣಗಳನ್ನು ವೈಜ್ಞಾನಿಕ ವಿಶ್ಲೇಷಣೆಯೊಂದಿಗೆ ಎಳೆಎಳೆಯಾಗಿ ವಿವರಿಸಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ತಾಂಬೂಲವನ್ನು 'ಕೇವಲ ಮೆಲ್ಲುವುದಲ್ಲ, ಅರಿತು ಮೆಲ್ಲೋಣ' ಎಂಬ ಅವರ ಧೋರಣೆ/ಕಳಕಳಿ ಓದುಗರಿಗೆ ಆಪ್ತವೆನಿಸುತ್ತದೆ. ತಂಬಾಕುರಹಿತ ತಾಂಬೂಲದಿಂದ ಯಾವುದೇ ಹಾನಿಯಿಲ್ಲ ಎಂಬ ಅಭಯವನ್ನೂ ನೀಡುತ್ತದೆ. ಅವರ ಕನ್ನಡ ಭಾಷೆ, ಪದಸಂಪತ್ತು, ನಿರೂಪಣಾಶೈಲಿ ಸಹ ಉತ್ಕೃಷ್ಟ. 'ಎಲೆಅಡಕೆಯ ರಾಗರಂಜಿತ ಪರಂಪರೆ', 'ಪೂರ್ವಕ್ಕೆ ನಿಕಟವೀ ಪೂಗರಸ', 'ಭುಜಗಲತೆಯ ದಶಾವತಾರಗಳು', 'ಸುಣ್ಣ: ವಕ್ರೀಭವನಗೊಂಡ ಸಪ್ತಸಾಗರಗಳ ಹೊಳಪು', 'ಏಲಕ್ಕಿ: ತಾಂಬೂಲದ ಸುವಾಸನೆಯ ಅರಸಿ', 'ಲವಂಗ: ಸುಗಂಧಲೋಕದ ಸಾರ್ವಭೌಮ' ಮುಂತಾಗಿ ಒಂದೊಂದು ಶೀರ್ಷಿಕೆಯೂ ಆಕರ್ಷಕ. ''ದಿವಾಕರ ಡೋಂಗ್ರೆಯವರು ಸಂಶೋಧಕ ಹೃದಯದ ಕವಿ; ಗಣೇಶ ಶೆಂಡ್ಯೆಯವರು ಕವಿಹೃದಯದ ಸಂಶೋಧಕ. ಇಬ್ಬರೂ ಸೇರಿ ಹೊರತಂದ ಈ ಕೃತಿ ತಾಂಬೂಲ ರಸದಂತೆ ಸರ್ವತೋಮುಖವಾಗಿ ನಮ್ಮನ್ನು ರಂಜಿಸುತ್ತದೆ'' ಮುನ್ನುಡಿಯ ಷರಾ ಅಕ್ಷರಶಃ ಒಪ್ಪತಕ್ಕ ಮಾತು.

ತಾಂಬೂಲರಾಗ ಅಲ್ಲದೆ ದಿವಾಕರ ಡೋಂಗ್ರೆಯವರ ಮತ್ತೆರಡು ಕೃತಿಗಳು- 'ಗಾಂಧಾರಿ' ಪೌರಾಣಿಕ ಕಾದಂಬರಿ, 'ಕಥಾ ಷೋಡಶಿ' ಕಥಾಸಂಕಲನ ಸಹ ಇಂದು ಬಿಡುಗಡೆಯಾಗುತ್ತವೆ. ಅವು ನನ್ನ ಚಹದ ಕಪ್ಪಲ್ಲ ಎಂದು ಅವರಿಗೂ ಗೊತ್ತು, ತಾಂಬೂಲರಾಗವನ್ನಷ್ಟೇ ನನಗೆ ರುಚಿತೋರಿಸಿದ್ದಾರೆ. ಬೆಂಗಳೂರಿನಲ್ಲಿ ಜಯನಗರದ ವಿವೇಕ ಆಡಿಟೋರಿಯಂನಲ್ಲಿ ಬೆಳಗಿಂದ ಸಂಜೆವರೆಗೂ ಕಾರ್ಯಕ್ರಮ. ಪುಸ್ತಕ ಲೋಕಾರ್ಪಣೆಯ ವೇದಿಕೆಯಲ್ಲಿ 'ಪದ್ಮಭೂಷಣ' ಶತಾವಧಾನಿ ಡಾ. ರಾ.ಗಣೇಶ ಇರುತ್ತಾರೆ. ಕನ್ನಡದ ಖ್ಯಾತ ಲೇಖಕಿ, ನನಗೂ ಆತ್ಮೀಯರಾದ ಜಯಶ್ರೀ ದೇಶಪಾಂಡೆ ಸಹ ಇರುತ್ತಾರೆ. ಭೋಜನಾನಂತರ ಭಾವಗೀತೆಗಳ ಗಾಯನ, ರಂಗವಲ್ಲಿ ಕೈಚಳಕ, ತಾಂಬೂಲರಾಗಕ್ಕೆ ಮುಖಪುಟ ರಚಿಸಿದ ದಾವಣಗೆರೆಯ ಶಾಂತಯ್ಯ ಪರಡಿಮಠರಿಂದ ಚಿತ್ರರಚನೆ, ಚಿತ್ಪಾವನ ಯಕ್ಷಮಿತ್ರರಿಂದ 'ಶ್ರೀಕೃಷ್ಣ ಸಂಧಾನ' ಯಕ್ಷಗಾನ ತಾಳಮದ್ದಳೆ... ಹೀಗೆ ಕಾರ್ಯಕ್ರಮವೈವಿಧ್ಯ. ಥೇಟ್ ತಾಂಬೂಲದಂತೆಯೇ ಸರ್ವತೋಮುಖ ಮನೋರಂಜನೆ. ತಾಂಬೂಲ ಸೇವನೆಯೂ ಇದ್ದೇ ಇರುತ್ತದೆಂದು ಬೇರೆ ಹೇಳಬೇಕಿಲ್ಲವಷ್ಟೆ? ಕಾರ್ಯಕ್ರಮದ ಬಗ್ಗೆ, ಕೃತಿಗಳ ಬಗ್ಗೆ, ಮುಖ್ಯವಾಗಿ ತಾಂಬೂಲರಾಗವನ್ನು ನೀವೂ ಸವಿಯಬೇಕೆಂದು ನನ್ನ ಆಶಯವಾದ್ದರಿಂದ ಪುಸ್ತಕದ ಲಭ್ಯತೆಯ ಬಗ್ಗೆ ನೀವು ದಿವಾಕರ ಡೋಂಗ್ರೆಯವರನ್ನೇ ಸಂಪರ್ಕಿಸಬೇಕು. ದೂರವಾಣಿ: +916360916937. ಮಿಂಚಂಚೆ: dongremalava70@gmail.com ಬನಾರಸ್ ಪಾನ್ ತಿಂದರೆ ಬುದ್ಧಿಶಕ್ತಿಯ ಬೀಗ ತೆರೆಯುತ್ತದೆಂದು ಡಾನ್ ಹಾಡಿದ್ದನಷ್ಟೆ? ತಾಂಬೂಲರಾಗ ಓದಿದರೆ ತಾಂಬೂಲದ ಬಗೆಗಿನ ಅರಿವೆಂಬ ತಿಜೋರಿಯ ಬೀಗ ತೆರೆಯುತ್ತದೆಂದು ಈಗ ನಾನ್ ಹೇಳ್ತಿದ್ದೇನೆ!

ಸುಸಂಸ್ಕೃತ ಶ್ರೀರಾಮಚಂದ್ರನೇ ನಿಜವಾದ ಜಂಟ್ಲ್‌ಮನ್



ವಿದ್ಯಮಾನ

ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಭಾರತದ ಪೌರಾಣಿಕ ಪಾತ್ರಗಳಲ್ಲಿ ಶ್ರೀರಾಮನಷ್ಟು ಜನಪ್ರಿಯವಾದ ಪಾತ್ರ ಇನ್ನೊಂದಿಲ್ಲವೆಂತಲೇ ಹೇಳಬಹುದು. ಹಾಗೆಯೇ, ಶ್ರೀರಾಮನಷ್ಟು ವಿಮರ್ಶೆಗೊಳಗಾದ ಪಾತ್ರವೂ ಇನ್ನೊಂದಿರಲಿಕ್ಕಿಲ್ಲ, ಹಾಗಾಗಿಯೇ ಶ್ರೀರಾಮ ಭಾರತೀಯ ಮನಸ್ಸುಗಳಲ್ಲಿ ಇಂದಿಗೂ ರಾರಾಜಿಸುತ್ತಿದ್ದಾನೆ, ಯುಗಾಂತರಗಳಾದರೂ ತನ್ನ ಪ್ರಸ್ತುತತೆಯನ್ನು ಇನ್ನೂ ಉಳಿಸಿಕೊಂಡಿದ್ದಾನೆ. ಇವೆಲ್ಲ ಹಾಗೆ ಸುಮ್ಮನೆ ಆಗಿದ್ದಲ್ಲ ಅಥವಾ ಕೇವಲ ದೈವಲೀಲೆಯಿಂದ ಆಗಿದ್ದಲ್ಲ. ಮಾನುಷ ಯತ್ನದಿಂದಲೇ ಆಗಿರುವಂಥದ್ದು ಎನ್ನುವುದನ್ನು ನಾವು ಗಮನಿಸಬೇಕು. ಶ್ರೀರಾಮನಿಗೆ ಒಪ್ಪುವ ಅನ್ವರ್ಥನಾಮವೆಂದರೆ 'ಗುಣಧಾಮ' ಎನ್ನುವುದು. ಹೀಗೆಂದರೆ ಸಕಲ ಸದ್ಗುಣಗಳಿಗೆ ಆಶ್ರಯಭೂತನಾದವನು ಎಂದರ್ಥ. ಮರ್ಯಾದಾ ಪುರುಷೋತ್ತಮ, ಧರ್ಮದ ಪ್ರತಿರೂಪ ('ರಾಮೋ ವಿಗ್ರಹವಾನ್ ಧರ್ಮಃ' ಎನ್ನುವ ಮಾರೀಚೋಕ್ತಿ) ಮುಂತಾದ ಕೀರ್ತಿಗಳು ಆತನ ಸುಸಂಸ್ಕೃತ ನಡುವಳಿಕೆಗಳಿಂದಲೇ ಆರ್ಜಿಸಿಕೊಂಡಂಥವುಗಳು.

ಶ್ರೀರಾಮ ನವಮಿಯ ಸುಸಂದರ್ಭದಲ್ಲಿ ಅನುಸರಣೀಯವಾಗಿರುವ ಶ್ರೀರಾಮ ಗುಣಗಳನ್ನು ಪರಿಭಾವಿಸಬೇಕು ಎನ್ನುವುದು ನನ್ನ ಸಂಕಲ್ಪವಾಗಿತ್ತು. ಇಡಿಯಾಗಿ ರಾಮಾಯಣವನ್ನು ಓದಲಾಗದ, ಓದಿದರೂ ಪೂರ್ತಿ ಅರ್ಥಮಾಡಿಕೊಳ್ಳಲಾಗದ, ಅಲ್ಲಿ ಇಲ್ಲಿ ಕೇಳಿ-ನೋಡಿ ಶ್ರೀರಾಮನ ಕುರಿತಾಗಿ ಅಭಿಮಾನ ಬೆಳೆಸಿಕೊಂಡಿರುವ ನಮ್ಮಂಥವರಿಗೆ ಘನೀಭೂತವಾದ ಶ್ರೀರಾಮಗುಣ ಘೃತವನ್ನು ಬಡಿಸುವವರಾರು? ಅವನನ್ನು ಮಾತ್ರ ನಮಗೆ ಪರಿಚಯಿಸುವವರಾರು ಎನ್ನುವ ವಿಚಾರ ಬಂದಾಗ, ನನಗೆ ನೆನಪಾಗಿದ್ದು, ದಿವಂಗತ ಡಾ. ಕೆ. ಎಸ್.ನಾರಾಯಣಾಚಾರ್ಯರ 'ರಾಮಾಯಣ ಸಾಹಸ್ರೀ' ಗ್ರಂಥಮಾಲಿಕೆ. ಈ ಮಧ್ಯದಲ್ಲಿ ಕನ್ನಡ ಸಾರಸ್ವತ ಲೋಕದ ಆಚಾರ್ಯ ಪುರುಷ ಡಿ.ವಿ. ಗುಂಡಪ್ಪನವರ 'ಸಂಸ್ಕೃತಿ' ಎನ್ನುವ ಪುಸ್ತಕವನ್ನು ಓದುವ ಮನಸಾಯ್ತು. ಅದರಲ್ಲಿ, 'ಜಂಟ್ಲ್‌ಮನ್' ಯಾರು ಎನ್ನುವುದನ್ನು ಡಿವಿಜಿಯವರು ವಿಶ್ಲೇಷಿಸುತ್ತಾ, ಶ್ರೀಮದ್ರಾಮಾಯಣದಲ್ಲಿ ಆದಿಕವಿ ವಾಲ್ಮೀಕಿ ತೋರಿಸಿದ ಶ್ರೀರಾಮಗುಣಗಳ ವರ್ಣನೆಯನ್ನೇ ಮಾಡಿದ್ದಾರೆ. ಅವರ ಪ್ರಕಾರ ಶ್ರೀರಾಮನೇ ಕಾಲಾತೀತವಾದ 'ಜಂಟ್ಲ್‌ಮನ್' ಆಗಿದ್ದಾನೆ. ಅದಕ್ಕೆ ಅವರು ಪುಸ್ತಕದಲ್ಲಿ ಅನೇಕ ಆಧಾರ ವಾಕ್ಯಗಳನ್ನೂ ಪುಷ್ಕಳವಾಗಿ ಒದಗಿಸಿದ್ದಾರೆ. ತಾತ್ವಿಕಾಗಿ ಭಿನ್ನತೆ ಇಲ್ಲದಿದ್ದರೂ, ಡಿವಿಜಿಯವರು ಡಾ. ಕೆ.ಎಸ್. ನಾರಾಯಣಾಚಾರ್ಯರಿಗಿಂತ ಸ್ವಲ್ಪ ವಿಭಿನ್ನವಾಗಿ ಇಲ್ಲಿ ವಿಮರ್ಶಿಸಿದ್ದಾರೆ. ಡಿವಿಜಿಯವರು ಕಂಡ 'ಜಂಟ್ಲ್‌ಮನ್' ಶ್ರೀರಾಮನನ್ನು ಹಾಗೂ ಅವನ ಗುಣವಿಶೇಷಗಳನ್ನು ಅವರದೇ ಭಾಷೆಯಲ್ಲಿ (ಸಂಕ್ಷಿಪ್ತವಾಗಿಯಾದರೂ) ನಿಮಗೆ ಹೇಳುವ ಪ್ರಯತ್ನ ನನ್ನದು.

ಹಾಗಾದರೆ ಸುಸಂಸ್ಕೃತನೆಂಥವನು ಎಂದು ಕೇಳುವುದಾದರೆ 5 ಲಕ್ಷಣಗಳನ್ನು ಹೇಳಬಹುದು. ಆತನಿಗೆ ಸ್ವಸ್ಥಾನ ಪರಿಜ್ಞಾನ, ಪರೇಂಗಿತ ಪರಿಗ್ರಹಣ. ಸ್ವಾರ್ಥ ನಿಯಮನ, ಸಮನ್ವಯ ದೃಷ್ಟಿ ಹಾಗೂ ಸರಸತೆ ಎನ್ನುವ ಐದು ಗುಣಗಳಿರಬೇಕಾಗುತ್ತದೆ. ಈ ಐದೂ ಗುಣಗಳನ್ನು ನಾವು ಶ್ರೀರಾಮನಲ್ಲಿ ಬಹುವಾಗಿ ಕಾಣಬಹುದು. ಸುಸಂಸ್ಕೃತನು ತನ್ನ ಸುತ್ತಮುತ್ತಣವರ ಮಾತುಕತೆಗಳಲ್ಲಿಯೂ, ನಡವಳಿಕೆಗಳಲ್ಲಿಯೂ ಇರುವ ವಕ್ರವಿಕಾರಗಳ ವಿಷಯದಲ್ಲಿ ಸಮ್ಮತಿಪಟ್ಟಿರುವವನಲ್ಲ, ಆದರೆ ಅವರನ್ನು ತಿದ್ದಬೇಕೆಂದು ದುಡುಕುವವನೂ ಅಲ್ಲ. ಅವನು ಯಾವಾಗಲೂ ತನ್ನನ್ನು ತಾನು ತಿದ್ದಿಕೊಳ್ಳುವ ಮತ್ತು ತನಗೆ ಬೇಕಾದವರನ್ನು ಮಾತ್ರ ತಿದ್ದುವ ಯೋಚನೆಯಲ್ಲಿಯೇ ಇರುತ್ತಾನೆ. ಆದರೆ ಆ ತಿದ್ದುವ ಪರಿಪಾಟಿಯಲ್ಲಿ ಒರಟಾಟವಿರದು. ಹಠದ ಕೂಗು ಅವನ ಬಾಯಿಂದ ಹೊರಡದು, ಕೆಂಗಣ್ಣೂ, ಕಡಿಹಲ್ಲೂ ಅವನ ಮುಖದಲ್ಲಿ ತೋರವು. ಅಸಮ್ಮತಿ ತಿಳಿಸುವುದು ಅವಶ್ಯವಾದಾಗ, ಬಿಚ್ಚುನುಡಿ ಅನಿವಾರ್ಯವಾದಾಗ, ಅವನು ಎಷ್ಟು ಮಟ್ಟಿನ ಬಿಸಿ ಬಿರುಸುಗಳು ಸಾಕಾದಾವೋ ಅಷ್ಟನ್ನು ಮಾತ್ರ ತೋರಿಸಿಯಾನೇ ಹೊರತು ಮನಸ್ವೀ ರೇಗಾಟವಾಡನು ಮತ್ತು ತನ್ನ ಮಾತಿನಿಂದಾಗಲಿ ನಡತೆಯಿಂದಾಗಲಿ ಆದ ನೋವನ್ನು ಬೇಗ ಮರೆಯಿಸುತ್ತಾನೆ. ಮಗುವನ್ನು ಶಿಕ್ಷಿಸುವಲ್ಲಿ ತಾಯಿ ಹೇಗೆ ನಡೆದಾಳೋ, ಗಂಡನನ್ನು ದಂಡಿಸುವಲ್ಲಿ ಸಾಧ್ವಿ ಹೇಗೆ ನಡೆದಾಳೋ, ಹಾಗೆ ಲೋಕವೃತ್ತಕ್ಕೆ ತನ್ನ ಪ್ರತಿವೃತ್ತದಿಂದ ಉತ್ತರ ಕೊಡುವವನು ಸುಸಂಸ್ಕೃತನು. ಇತರರ ಗಟ್ಟಿಗಂಟಲು ಅವನಿಂದ ಬೊಬ್ಬೆ ಹಾಕಿಸದು; ಇತರರ ಕೆಟ್ಟಮೋರೆ ಅವನ ಪ್ರಸನ್ನತೆಯನ್ನು ಹಾರಿಸದು ಎನ್ನುತ್ತಾರೆ ಗುಂಡಪ್ಪನವರು.

ಭವಭೂತಿಯ 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ, ಲೋಕೋತ್ತರಾಣಾಂ ಚೇತಾಂಸಿ ಕೋಹಿ ವಿಜ್ಞಾತುಮರ್ಹತಿ' ಎನ್ನುವ ವಾಕ್ಯವನ್ನು ಸ್ಮರಿಸುತ್ತಾ ಸುಸಂಸ್ಕೃತನೊಬ್ಬ ಹೇಗಿರುತ್ತಾನೆ ಎನ್ನುವುದನ್ನು ತಿಳುಹುತ್ತಾರೆ. ವಾಲ್ಮೀಕಿಗಳೂ ಶ್ರೀರಾಮನ ವಿಷಯದಲ್ಲಿ ಇದೇ ಮಾತನ್ನು ಬೇರೆ ಶಬ್ದಗಳಿಂದ ವಿವರಿಸುತ್ತಾರೆ. 'ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ ಪ್ರಿಯದರ್ಶನಃ ಕಾಲಾಗ್ನಿ ಸದೃಶಃ ಕ್ರೋಧೇ ಕ್ಷಮಯಾ ಪೃಥಿವೀ ಸಮಃ'- ಅಂದರೆ ಶ್ರೀರಾಮನು ಪರಾಕ್ರಮದಲ್ಲಿ ವಿಷ್ಣುವಿನಂಥವನು; ಆದರೂ ಕಣ್ಣಿಗೆ ಚಂದ್ರನಂತೆ ತಂಪು. ಕೋಪಗೊಂಡಾಗ ಅನನು ಪ್ರಲಯಾಗ್ನಿ ಆದರೆ ಕ್ಷಮಿಸುವುದರಲ್ಲಿ ಭೂಮಾತೆಯಂತೆ.



ಶ್ರೀರಾಮನ ವಿಷಯದಲ್ಲಿ ವಾಲ್ಮೀಕಿಗಳು ತೋರಿಸಿದ, ಹೇಳಲೇಬೇಕಾದ ಒಂದಿಷ್ಟು ಆದರ್ಶಗಳನ್ನು ಗುಂಡಪ್ಪನವರು ಪಟ್ಟಿಮಾಡುತ್ತಾರೆ: ಆತನು ಯಾವಾಗಲೂ ಶಾಂತಸ್ವಭಾವದವನು. ಸಂಭಾಷಣೆಯನ್ನು ತಾನೇ ಮೊದಲು ಪ್ರಾರಂಭ ಮಾಡುವವನು ಮತ್ತು ಮೃದುವಾಗಿ ಮಾತಾಡುವವನು. ಬಿರುಸಾಗಿ ಮಾತನಾಡಿದವರಿಗೆ ಮರುಬಿರುಸನ್ನು ನುಡಿಯದವನು. ಎಂದೋ ತನಗೆ ಮಾಡಿದ್ದ ಯಾವುದೋ ಒಂದು ಉಪಕಾರವನ್ನು ಯಾವಾಗಲೂ ನೆನಪಿಸಿಕೊಂಡು ಸಂತೋಷಪಡುತ್ತಾನೆ. ನೂರು ಅಪಕಾರಗಳು ತನಗಾಗಿದ್ದರೂ ಅದನ್ನು ನೆನೆಯುವುದೇ ಇಲ್ಲ; ಆತನು ದೀನರಲ್ಲಿ ಸದಾ ಸಹಾನುಭೂತಿಯುಳ್ಳವನು, ಧರ್ಮವನ್ನ ತಿಳಿದವನು, ತನ್ನ ಮೇಲೆ ಹಿಡಿತವಿರಿಸಿಕೊಂಡವನು, ಶುಚಿಯುಳ್ಳವನು. ಕುಲಕ್ಕೆ ತಕ್ಕ ಬುದ್ಧಿ ಸಂಪತ್ತುಳ್ಳವನು, ತನ್ನ ಕ್ಷತ್ರಿಯ ಧರ್ಮವನ್ನು ಗೌರವಿಸುವವನು. ಶುಭ ಗುಣಗಳಿಗೆ ಆಕರಪ್ರಾಯನು, ಸಾಧು, ಧೀರನು, ಸತ್ಯಭಾಷಿ, ಸರಳನು. ಧರ್ಮಾರ್ಥಗಳನ್ನು ಬಲ್ಲವರಿಂದ ಕಲಿತವನು. ಧರ್ಮ ಅರ್ಥ ಕಾಮಗಳೆಂಬ ಪುರುಷಾರ್ಥಗಳ ತತ್ವವನ್ನರಿತವನು, ಸ್ಮೃತಿಶಕ್ತಿ ಪ್ರತಿಭಾಶಕ್ತಿ ಸಂಪನ್ನನು. ಲೋಕನೀತಿಗಳಲ್ಲಿಯೂ ಸಮಾಜದ ಸಂಕೇತ ಸಂಪ್ರದಾಯಗಳಲ್ಲಿಯೂ ಅವುಗಳ ಮರ್ಮವರಿತು ನಡೆಯುವವನು. ನಿಶ್ಚಲವಾದ ಭಗವದ್ಭಕ್ತಿಯುಳ್ಳವನು, ಸ್ಥಿರವಾದ ವಿವೇಕವಿಜ್ಞಾನಗಳುಳ್ಳವನು, ಕೆಟ್ಟದ್ದನ್ನೊಪ್ಪದವನು ಹಾಗೂ ಕೆಟ್ಟದ್ದನ್ನು ನುಡಿಯದವನು. ಸೋಮಾರಿತನವಿಲ್ಲದವನು, ಶಾಸ್ತ್ರ ನಿಪುಣನು, ಕೃತ್ಯಾಕೃತ್ಯ ವಿವೇಕಿ, ಇತರರ ಅಂತರಂಗವನ್ನು ಊಹಿಸಿ ಕಂಡವನು. ದಂಡಿಸುವುದರಲ್ಲಿಯೂ ಅನುಗ್ರಹಿಸುವುದರಲ್ಲಿಯೂ ನ್ಯಾಯವನ್ನು ನಡೆಸಲು ಶಕ್ತನು. ಜನರನ್ನು ಸಂಪಾದಿಸಿಕೊಳ್ಳುವುದರಲ್ಲಿಯೂ ಹದ್ದಿನಲ್ಲಿರಿಸುವುದರಲ್ಲಿಯೂ ಅದಕ್ಕೆ ತಕ್ಕ ಸ್ಥಾನ, ಕಾಲ ಸಂದರ್ಭಗಳನ್ನರಿತವನು. ಆದಾಯದ ಕೆಲಸಗಳಲ್ಲಿ ಉಪಾಯಶಾಲಿ, ವ್ಯಯವಿಚಾರವನ್ನು ನೋಡಿಕೊಳ್ಳುವುದರಲ್ಲಿ ಜಾಗರೂಕನು. ಶಾಸ್ತ್ರಜ್ಞ ಸಭೆಯಲ್ಲಿಯೂ, ಪಂಡಿತ ಪಾಮರರು ಕಲಿತುಕೊಂಡಿರುವಲ್ಲಿಯೂ ಶ್ರೇಷ್ಠತೆ ಪಡೆದಿರುವವನು. ಅರ್ಥ (ಧನ)ವನ್ನೂ ಧರ್ಮವನ್ನೂ ಶೇಖರಮಾಡಿ ಸುಖಪಡುವುದರಲ್ಲಿ ಆಲಸ್ಯವಿಲ್ಲದೆ ದಕ್ಷನಾಗಿರುವವನು. ಹೊಟ್ಟೆಕಿಚ್ಚಿಲ್ಲದವನು, ಕೋಪವನ್ನು ಗೆದ್ದವನು, ಗರ್ವವಿಲ್ಲದವನು, ಅನ್ಯರ ಅಭಿವೃದ್ಧಿಗೆ ಕರುಬದವನು. ಯಾವ ಪ್ರಾಣಿಯನ್ನೂ ಅವಮಾನ ಪಡಿಸದವನು, ಧರ್ಮತತ್ತ್ವವನ್ನೂ ತನ್ನ ಪ್ರತಿಜ್ಞೆಯನ್ನೂ ಮರೆತು ಆಯಾ ಕ್ಷಣಕ್ಕೆ ಸರಿಯೆನಿಸಿದಂತೆ ನಡೆಯುವವನಲ್ಲ. ನಿರಹಂಕಾರ, ವಿನಯ, ಸೌಜನ್ಯ, ಪರೇಂಗಿತಚಿಂತನೆ, ಲೋಕಹಿತದೃಷ್ಟಿ, ತತ್ವವಿವೇಕ, ಅಧ್ಯಾತ್ಮ ನಿಷ್ಠೆ ಇವೇ ಮೊದಲಾದ ಗುಣ ಶೀಲ ಸೌಂದರ್ಯಗಳೆಲ್ಲವೂ ಶ್ರೀರಾಮನಲ್ಲಿ ಅಡಕವಾಗಿವೆ. ಸಂಸ್ಕೃತಿಯ ಸ್ವರೂಪವೆಂಥದ್ದೆಂಬುದನ್ನು ಮನಗಾಣಬಯಸುವವರು ಆದಿಕವಿ ಚಿತ್ರಿಸಿರುವ ಶ್ರೀರಾಮನ ಚಿತ್ರಪಟವನ್ನು ನೋಡುವಲ್ಲಿ ಮನನಮಾಡಲಿ ಎನ್ನುತ್ತಾರೆ ಡಿವಿಜಿ.

ಇಂಥಾ ಗುಣರಾಶಿಯುಳ್ಳವನಾದ ಆದರ್ಶಪುರುಷ ಶ್ರೀರಾಮನ ನಾಮವನ್ನು ನೆರೆನಂಬಿ, 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎಂದು ಸಾಧನೆ ಮಾಡುವ ಮಹನೀಯರುಗಳು ನಮ್ಮ ದೇಶದಲ್ಲಿ ಅನೇಕ ಜನ ಆಗಿಹೋಗಿದ್ದಾರೆ ಹಾಗೂ ಈಗಲೂ ಇದ್ದಾರೆ.

ಶ್ರೀರಾಮನಾಮದ ಮಹಿಮೆಯನ್ನು ಹೇಳುವ ಕಥೆಯೊಂದಿದೆ: ದಕ್ಷಿಣ ದೇಶದ ಪದ್ಮನಾಭ ಪಂಡಿತ ಎನ್ನುವವರು ಶ್ರೀ ಕ್ಷೇತ್ರ ಕಾಶಿಯಲ್ಲಿ ನಾಮನಿಷ್ಠ ಸಂತ ಕಬೀರದಾಸರ ಶಿಷ್ಯರಾಗಿ ಅವರ ಸೇವೆ ಮಾಡಿಕೊಂಡಿದ್ದರು. ಪದ್ಮನಾಭ ಪಂಡಿತರು ಒಮ್ಮೆ ಗಂಗಾ ತಟದಲ್ಲಿ ಸಂಚರಿಸುತ್ತಿದ್ದಾಗ, ಭಯಂಕರ ಕುಷ್ಟರೋಗದಿಂದ ಬಳಲುತ್ತಿದ್ದವನೊಬ್ಬ ರೋಗಮುಕ್ತಿಗೆ ಏನು ಮಾಡುವುದು ಎಂದು ತಿಳಿಯದೇ ರೋದಿಸುತ್ತಿದ್ದ. ಶ್ರೀನಾಮ ಸಾಧಕರಾಗಿದ್ದ ಪದ್ಮನಾಭ ಪಂಡಿತರಿಗೆ ಅವನ ಮೇಲೆ ಕನಿಕರವುಂಟಾಗಿ, ಮೂರು ಬಾರಿ ಶ್ರೀರಾಮ ತಾರಕ ಮಂತ್ರವನ್ನು ಜಪಿಸುತ್ತಾ ಗಂಗೆಯಲ್ಲಿ ಮುಳುಗೇಳುವ ಪರಿಹಾರವನ್ನು ಆತನಿಗೆ ಸೂಚಿಸಿದರು. ಹೀಗೆ ಮಾಡುವುದರಿಂದ ನಿನಗೆ ಖಂಡಿತ ರೋಗದಿಂದ ಸಂಪೂರ್ಣ ಮುಕ್ತಿಯಾಗುತ್ತದೆ ಎಂದರು. ಪದ್ಮನಾಭ ಪಂಡಿತರ ಸೂಚನೆಯಂತೆ ಮೂರುಬಾರಿ ತಾರಕಮಂತ್ರಯುಕ್ತವಾಗಿ ಗಂಗೆಯಲ್ಲಿ ಮುಳುಗೆದ್ದ ರೋಗಿಗೆ ಕ್ಷಣಾರ್ಧದಲ್ಲಿ ಮೈಮೇಲಿನ ಕುಷ್ಠವೆಲ್ಲಾ ಸಂಪೂರ್ಣ ಮಾಯವಾಗಿಹೋಯಿತು. ಗುರುಗಳಾದ ಕಬೀರರಲ್ಲಿಗೆ ಬಂದ ಪದ್ಮನಾಭ ಪಂಡಿತರು ಗಂಗಾತಟದಲ್ಲಿ ನಡೆದ ಘಟನೆಯನ್ನೆಲ್ಲಾ ಉತ್ಸಾಹದಿಂದ ವಿವರಿಸಿದರು. ಕುಷ್ಠರೋಗಿಯ ಮೇಲೆ ತಾರಕಮಂತ್ರ ಮಾಡಿದ ಪವಾಡವನ್ನು ಕಬೀರರಿಗೆ ವರ್ಣಿಸಿದರು.

ಈ ಘಟನೆಯಿಂದ ಸಂತೋಷಪಡುವ ಬದಲು ಕಬೀರದಾಸರು ಪಂಡಿತರ ಕುರಿತು ಸ್ವಲ್ಪ ರುಷ್ಟರೇ ಆದರು. ತಾನು ಸಿದ್ಧಿಸಿಕೊಂಡಿದ್ದ ನಾಮದ ಮಹಿಮೆಯನ್ನು ಅನ್ಯರ ಸಂಕಟ ಪರಿಹಾರಕ್ಕೆ ಪ್ರಕಟ ಮಾಡಿದ್ದರಿಂದ, ಗುರುಗಳಾದ ಕಬೀರರು ಮೆಚ್ಚುಗೆ ಸೂಚಿಸುತ್ತಾರೆ ಎಂದುಕೊಂಡಿದ್ದ ಪದ್ಮನಾಭ ಪಂಡಿತರಿಗೆ ಸ್ವಾಭಾವಿಕವಾಗಿ ನಿರಾಸೆಯಾಯಿತು.

ಆಗ ಪದ್ಮನಾಭ ಪಂಡಿತರಿಗೆ ಕಬೀರರು ಹೇಳಿದ್ದು, ಶ್ರೀರಾಮ ತಾರಕ ಮಂತ್ರವನ್ನು ಕೇವಲ ಒಂದು ಬಾರಿ ಜಪಿಸಿದರೂ ಈ ಕ್ಷುಲ್ಲಕ ರೋಗ ನಿವಾರಣೆಯಾಗುತ್ತಿತ್ತು. ಹಾಗೆ ನೋಡಿದರೆ, ಮೂರು ಬಾರಿ ಏಕೆ? ಒಂದು ಸಲವೂ ಪಠಿಸುವ ಅಗತ್ಯವಿರಲಿಲ್ಲ, ಕೇವಲ ಶ್ರೀನಾಮದ ಆಭಾಸವಾದರೂ (ನಾಮಾಭಾಸ- ಮರ ಎಂದರೂ ಅದರಲ್ಲಿ ರಾಮ ಶಬ್ದವಿರುವುದರಿಂದ ಅಷ್ಟೇ ಸಾಕಾಗುತ್ತದೆ) ಮನುಷ್ಯನ ಇಷ್ಟಾರ್ಥ ಸಿದ್ಧಿಯಾಗುವುದರಲ್ಲಿ ಸಂಶಯವಿರುವುದಿಲ್ಲ. ಶ್ರೀನಾಮಕ್ಕೆ ಅಷ್ಟು ಶಕ್ತಿ ಇರುವಾಗ, ನೀನು ಅವರಿಗೆ ಮೂರು ಬಾರಿ ಜಪಿಸುವಂತೆ ಹೇಳಿ ಶ್ರೀನಾಮಕ್ಕೇ ಅವಮಾನ ಮಾಡಿದ ಹಾಗಾಯ್ತು ಎಂದರಂತೆ.

ಈಕುರಿತು ಏಕಪಕ್ಷದೃಷ್ಟಿ ಸರಿಯಲ್ಲ, ಶ್ರೀರಾಮಗುಣಗಳ ಜೀವನಾನ್ವಯವಾಗದ ಹೊರತು, ಮಾಡಬಾರದ ಅನಾಚಾರಗಳನ್ನು ಮಡುತ್ತಾ ಸುಮ್ಮನೇ ನಾಮಜಪ ಮಾಡುವುದರಿಂದ ಏನೂ ಪ್ರಯೋಜನವಾಗದು ಎನ್ನುವುದು ಡಿವಿಜಿಯವರ ಅಭಿಮತ. ಅದಕ್ಕೆ ಪುಷ್ಟೀಕರಣವಾಗಿ ಉತ್ತಮ ಉದಹರಣೆಯೊಂದನ್ನು ಅವರು ನೀಡುತ್ತಾರೆ. ಹಲವು ವರ್ಷಗಳ ಹಿಂದೆ ಉತ್ತರದೇಶದಲ್ಲಿ ಲವಣಾನಂದ ಸ್ವಾಮಿಗಳೆಂಬವರು ಒಬ್ಬರಿದ್ದರು. ಅವರ ವಾದವೇನೆಂದರೆ, ಉಪ್ಪೊಂದೇ ಲೋಕದಲ್ಲಿ ಸಂಜೀವನಿ; ಉಪ್ಪು ತಿನ್ನುತ್ತಿದ್ದರೆ ಎಲ್ಲ ವ್ಯಾಧಿಗಳೂ ವಾಸಿಯಾಗುತ್ತವೆ; ಬೇರೆ ಯಾವ ಔಷಧವೂ ಕೆಲಸಕ್ಕೆ ಬಾರದು' ಎಂಬುದು. ಹಾಗೆಯೇ ರಾಮಭಕ್ತರು ಕೆಲವರಿರುತ್ತಾರೆ. ನೀವು ಯಾವ ತಪ್ಪುಮಾಡಿರಲಿ, ನಿಮಗೆ ಏನು ಬೇಕಾಗಿರಲಿ, 'ರಾ' 'ಮ' ಈ ಎರಡು ಅಕ್ಷರಗಳನ್ನು ನುಡಿದುಬಿಟ್ಟರೆ ಎಲ್ಲ ದುಃಖಗಳೂ ತೊಲಗಿ ಎಲ್ಲ ಇಷ್ಟಗಳೂ ಕೈಗೂಡುತ್ತವೆ. ಹೀಗೆಂದು ಡಾಂಭಿಕ ರಾಮನಾಮೋಪಾಸಕರ ವಾದ. ಕವಿಯೊಬ್ಬ ಹೀಗೆ ಹೇಳಿದ್ದಾನೆ 'ವನೇಚರಾಮೋ ವಸುಚಾಪಹರಾಮಃ ನದೀಂತರಾಮೋ ನಭಯಂ ಸ್ಮರಾಮಃ, ಇತೀರಯಂತೋಪಿ ವನೇ ಕಿರಾತಾಃ ಮುಕ್ತಿಂಗತಾ ರಾಮಪದಾನುಸಂಗಾತ್' ಕಾಡಿನಲ್ಲಿ ಬೇಡರು ಹೀಗೆ ಹೇಳಿಕೊಂಡು ಹೋಗುತ್ತಿದ್ದರು: ಅಡವಿಯಲ್ಲಿ (ಚರಾಮಃ) ತಿರುಗಾಡುತ್ತಿರೋಣ; ಸಿಕ್ಕಿದ ಪ್ರಯಾಣಿಕರ ಒಡವೆ ವಸ್ತ್ರಗಳನ್ನು (ಅಪಹರಾಮಃ) ಅಪಹರಿಸೋಣ, ಆಮೇಲೆ ನದಿಯನ್ನು (ತರಾಮಃ) ದಾಟಿಬಿಡೋಣ. ಆಗ ನಮಗೆ ಭಯದ (ಸ್ಮರಾಮಃ) ಚಿಂತೆ ಬೇಕಿಲ್ಲ. ಹೀಗೆಂದು ಹೇಳುತ್ತಾ ನಡೆಯುತ್ತಿದ್ದ ಚೋರರೂ 'ರಾಮ ರಾಮ' ಎಂಬ ಪದ ಬಾಯಲ್ಲಿ ನುಡಿಯುತ್ತಿದ್ದ ಕಾರಣ ಅವರಿಗೆ ಮುಕ್ತಿದೊರೆಯಿತು ಎನ್ನುವುದು ಈ ಶ್ಲೋಕದ ತಾತ್ಪರ್ಯ. ಇದು ರಾಮಭಕ್ತಿಯ ಅತಿರೇಕ.

ಈ ಪದ್ಯವನ್ನು ಕೇವಲ ಶಬ್ದ ಚಮತ್ಕಾರದ ದೃಷ್ಟಿಯಿಂದ ಮೆಚ್ಚಿಕೊಳ್ಳಬೇಕಾದದ್ದೇ ಸರಿ ಆದರೆ, ಮುಕ್ತಿಗೆ ನಿರ್ವಿಚಾರಭಕ್ತಿಯಷ್ಟೇ ಸಾಲುತ್ತದೆಯೆ? ವಿಚಾರವೂ ತದನುಸಾರಿಯಾದ ಜೀವವರ್ತನೆಯೂ ಅಲ್ಲಿ ಸೇರಬೇಡವೆ? ಎನ್ನುವುದು ಡಿವಿಜಿಯವರ ಚಿಂತನೆ.

ರಾಮನ ನಾಮಕೀರ್ತನೆ ಸುಲಭದ್ದು, ಕಿವಿಗೂ ಇಂಪು, ಅವನ ವನವಾಸ, ಸತ್ಯನಿಷ್ಠೆ, ರಾಜಧರ್ಮದ ಪಾಲನೆ ಊಹೆಗೂ ನಿಲುಕದ್ದು. ಆದ್ದರಿಂದ ಮನಸ್ಸು ಸುಲಭವಾದ ಶ್ರೀರಾಮ ಭಜನೆಯೆಡೆಗೆ ಹೋಗುತ್ತದೆ; ರಾಮನ ದೃಢ ಪ್ರತಿಜ್ಞೆಯನ್ನು ಜ್ಞಾಪಕಕ್ಕೂ ತಂದುಕೊಳ್ಳುವುದಿಲ್ಲ. ಯಾವುದು ಸುಲಭವೋ ಅದನ್ನು ಗ್ರಹಿಸುವುದು ಸ್ವಾಭಾವಿಕ. ಪುಣ್ಯದ ಫಲ ಎಲ್ಲರಿಗೂ ಬೇಕು ಆದರೆ ಪುಣ್ಯಾರ್ಜನೆಗೆ ಬೇಕಾದ ಕಷ್ಟದ ಪೂರ್ವಸಿದ್ಧತೆ ಯಾರಿಗೂ ಬೇಡ, ಅಂತೆಯೇ ಶ್ರೀರಾಮ, ಅವನ ನಾಮ, ಕಥೆ ಬೇಕು, ಆದರೆ ಅವನು ನಡೆದು ತೋರಿಸಿದ ರಾಮಾಯಣದ ಮಾರ್ಗ ಮಾತ್ರ ಯಾರಿಗೂ ಬೇಡ. ಇದು ಶ್ರೀರಾಮ ಭಕ್ತಿಯಾಗಲಾರದು ಎನ್ನುವುದು ಡಿವಿಜಿಯವರ ಮತವಷ್ಟೆ, ಸಂತ ಕಬೀರದಾಸರ ನಾಮನಿಷ್ಠೆಯ ಬಗ್ಗೆ ತಕರಾರಲ್ಲ.

ಈ ಲೇಖನ, ಗುಣವಂತ (ಜಂಟ್ಲ್‌ಮನ್) ಶ್ರೀರಾಮನಿಗೂ, ಅವನನ್ನು ನಮಗಾಗಿ ಉಳಿಸಿಟ್ಟ ರಾಮಾಯಣ ಮಹಾಕಾವ್ಯಕ್ಕೂ, ಅದರ ರಚಯಿತರಾದ ವಾಲ್ಮೀಕಿ ಮಹರ್ಷಿಗಳಿಗೂ ಹಾಗೂ ಶ್ರೀ ರಾಮ ತತ್ವಾನುಯಾಯಿ ನಿಜಸಾಧಕರಿಗೂ ಸಮರ್ಪಣೆ.

ಮಹಿಳೆಯರು ಕಾರ್ಯಕ್ಷೇತ್ರದಲ್ಲಿ ತುಮುಲಕ್ಕೆ ಒಡ್ಡಿಕೊಳ್ಳಬೇಕಿಲ್ಲ

ಯಾವುದೇ ಹಬ್ಬ-ಹರಿದಿನಗಳು, ಸಮಾರಂಭಗಳು ಬರಲಿ ಅಲ್ಲಿ ಮಹಿಳೆಯರ ಪರಿಶ್ರಮವಿರಲೇಬೇಕು; ಮೇಜಿನ ಮೇಲಿನ ನ್ಯಾಪ್‌ಕಿನ್‌ಗಳನ್ನು ಸೂಕ್ತ ಶೈಲಿಯಲ್ಲಿ ಅಲಂಕರಿಸಿರಬೇಕು, ಟೊಮೇಟೋಗಳನ್ನು ರೋಸೆಟ್‌ಗಳಾಗಿ ಕತ್ತರಿಸಿ ಹೋಳುಮಾಡಿರಬೇಕು ಹೀಗೆ ನಿರೀಕ್ಷೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಮತ್ತೊಂದೆಡೆ, ನಮ್ಮಲ್ಲಿ ಎದ್ದುಕಾಣುವಂತಿರುವ ನ್ಯೂನತೆಗಳನ್ನು ನೆನಪಿಸುವುದೂ ನಮ್ಮ ಸುತ್ತಮುತ್ತಲಿನ ಮಹಿಳೆಯರೇ ಆಗಿರುತ್ತಾರೆ!

ಹೊರಸೂಸುವ ಮನ

ಸುಸಾನ್ ಥಾಮಸ್
vveditoped@gmail.com

ನನ್ನ ಅಜ್ಜಿಯರು, ಚಿಕ್ಕಮ್ಮ-ದೊಡ್ಡಮ್ಮಂದಿರು, ಹಿರಿಯ ಸಹೋದ್ಯೋಗಿಗಳು ಮತ್ತು ಗೆಳತಿಯರು ಹೀಗೆ ನನ್ನ ಸುತ್ತಮುತ್ತಲಿನ ಮಹಿಳೆಯರಿಂದ ನಾನು ಸಾಕಷ್ಟು ಕಲಿತಿರುವೆ. ಇಂದು ಬೋರ್ಡ್ ರೂಮ್, ಪೌಡರ್ ರೂಮ್, ಡ್ರಾಯಿಂಗ್ ರೂಮ್‌ಗಳಲ್ಲಿ ಕಾಣಿಸಿಕೊಳ್ಳುವ ಓರ್ವ ಹಿರಿಯ ಮಹಿಳೆಯಾಗಿ, ಯುವತಿಯರಿಗೆ ಒಂದು ಸರಳ ಮಂತ್ರವನ್ನು ತಿಳಿಸಲು ನಾನು ಬಯಸುತ್ತೇನೆ. ಅದೇನೆಂದರೆ, ನಾನು ಇದುವರೆಗೂ ಕಲಿತದ್ದೆಲ್ಲವೂ ವಾಡಿಕೆಯ ಮಾರ್ಗದಲ್ಲಿ ಅಲ್ಲ, ಬದಲಿಗೆ ನಿಖರವಾಗಿ ಅದರ ವಿರುದ್ಧದ ಮಾರ್ಗದಲ್ಲಿ. ಅದೆಂದರೆ, 'ನಮ್ಮ ಮಾತು, ಚಹರೆ, ವರ್ತನೆಗಳು ಇನ್ನೊಬ್ಬರ ಮೇಲೆ ಪ್ರಭಾವ ಬೀರುವಂತಿರಬೇಕು' ಎಂಬಂಥ ನಿರಂತರ ಆಗ್ರಹ ಅಥವಾ ನಿರೀಕ್ಷೆಯಿಂದ ಹೊರಬರಬೇಕು ಎಂಬುದು. ಯಾರನ್ನೋ ಮೆಚ್ಚಿಸಬೇಕು ಎಂಬ ಗ್ರಹಿಕೆಯಲ್ಲಿ ಎಂತೆಂಥದೋ ಲೇಪಗಳನ್ನು ಚರ್ಮದ ಮೇಲೆ ಮೆತ್ತಿಕೊಂಡು ಗಂಟೆಗಟ್ಟಲೆ ತೋಯಿಸಿಕೊಂಡು ಕೂರಬೇಡಿ. ''ನೀವು ಧರಿಸುವ ಪ್ರತಿಯೊಂದು ಉಡುಗೆ-ತೊಡುಗೆಯೂ ಪರಸ್ಪರ ಹೊಂದಿಕೆಯಾಗುವಂತಿರಬೇಕು, ನಿಮ್ಮ ಪ್ರತಿಯೊ ಂದು ಅರ್ಜಿ ಅಥವಾ ಕಾಗದಪತ್ರವನ್ನೂ ಇದುವರೆಗೂ ಯಾರೂ ನೋಡಿರದ ಅಕ್ಷರ ವಿನ್ಯಾಸದಲ್ಲಿ (ಅಂದರೆ ಫಾಂಟ್‌ಗಳಲ್ಲಿ) ರೂಪಿಸಬೇಕು ಮತ್ತು ನೀವು ಉಣ್ಣುವ ಪ್ರತಿಯೊಂದು ತಿಂಡಿ-ತಿನಿಸು, ಊಟವೂ ಸಾಕಷ್ಟು ಅಲಂಕಾರಿಕವಾಗಿರಬೇಕು'' ಎಂದು ನಿಮಗೆ ಯಾರಾದರೂ ಹೇಳಿದ್ದರೆ, ಅಂಥ ಕಸರತ್ತುಗಳನ್ನು ತಕ್ಷಣವೇ ಬಿಟ್ಟುಬಿಡಿ. ಪರಿಪೂರ್ಣತೆಯ ಹುಕಿಯನ್ನು ಕೈಬಿಟ್ಟು, ನಿಮ್ಮನ್ನು ನೀವು ಸರಿಪಡಿಸಿಕೊಳ್ಳಲೆಂದು ನಿಮ್ಮ ದೈಹಿಕ-ಮಾನಸಿಕ ವ್ಯವಸ್ಥೆಯನ್ನು ರೀಬೂಟ್ ಮಾಡಿಕೊಳ್ಳಿ. ಮತ್ತಾರನ್ನೋ ಮೆಚ್ಚಿಸಬೇಕು ಎಂಬ ಹರಸಾಹಸದ ಬಲಿಪಶುವಾಗುವ ಬದಲು, ನಿಮಗೆ ಇಷ್ಟವಾಗುವ ರೀತಿಯಲ್ಲಿ ಹಗುರವಾದ ಮತ್ತು ಸರಾಗವಾದ ಅನುಭವವನ್ನು ನೀಡುವಂಥ ಉಡು ಪನ್ನು ಧರಿಸಿ.

ಕಾಲೇಜಿನ ಪ್ರತಿಯೊಂದು ಕಾರ್ಯಕ್ರಮ, ಪ್ರತಿಯೊಂದು ಸಭೆ-ಸಮ್ಮೇಳನ, ಪ್ಯಾನಲ್ ಚರ್ಚೆ, ಪಾಲ್ಗೊಳ್ಳುವ ಪ್ರತಿಯೊಂದು ಪ್ರಸ್ತುತಿ ಹೀಗೆ ಬಹುತೇಕ ಸಂದರ್ಭಗಳಲ್ಲಿ ನನಗೆ ಸ್ಪಷ್ಟವಾಗಿ ಕಾಣಬರುವ ಸಂಗತಿಯೆಂದರೆ, 'ಇಂಥ ಬಾಬತ್ತಿನಲ್ಲಿ ಮಹಿಳೆಯರು ಒಂದಿಷ್ಟು ಹೆಚ್ಚುವರಿ ಕಸರತ್ತುಗಳನ್ನು ಮಾಡುತ್ತಾರೆ' ಎಂಬುದು. ಭಾವನೆಗಳು, ಸಂಪನ್ಮೂಲಗಳು ಮತ್ತು ಸಮಯವನ್ನು ಹೇರಳವಾಗಿ ವ್ಯಯಿಸುವ ಮೂಲಕ ಅತೀವ ಪ್ರದರ್ಶನಾತ್ಮಕತೆಗೆ ಒಡ್ಡಿಕೊಂಡು ಮಹಿಳೆಯರು ಮತ್ತೊಬ್ಬರನ್ನು ಪ್ರಭಾವಿಸುತ್ತಾರೆ ಎಂಬುದೊಂದು ಸ್ಥಾಪಿತ ಗ್ರಹಿಕೆಯಾಗಿದೆ. ಇದಕ್ಕೆ ಪುಷ್ಟಿ ನೀಡುವಂತೆ, ಯೋಜನೆಯ ಪ್ರಸ್ತುತಿಯ ಸಂದರ್ಭದಲ್ಲಿ 'ಕಿಟನ್ ಹೀಲ್ಸ್' ಪಾದರಕ್ಷೆಗಳನ್ನು ಧರಿಸಿರುವಿಕೆ, ಪರಿಪೂರ್ಣತೆಯು ಮುಕ್ಕಾಗದ ರೀತಿಯಲ್ಲಿ ಸೀರೆಯನ್ನು ಭರ್ಜರಿಯಾಗಿ ಉಡುವಿಕೆ, ತ್ವಚೆಯು ಥಳಥಳ ಮಿನುಗುತ್ತಿರಬೇಕೆಂಬ ಹಪಹಪಿಯಲ್ಲಿ ತರಹೇವಾರಿ ಕ್ರೀಮುಗಳನ್ನು ಮೆತ್ತಿಕೊಳ್ಳುವಿಕೆ ಹಾಗೂ ಮಾಡಿಕೊಂಡ ಮೇಕಪ್ ಸಾಕಾಗುತ್ತಿಲ್ಲವೇನೋ ಎಂದೇ ಚಿಂತಿಸುತ್ತಿರುವಿಕೆ ಹೀಗೆ ಸಾಗುತ್ತದೆ ಕೆಲ ಮಹಿಳೆಯರ ಇಂಥ ಕಸರತ್ತುಗಳು.

ಯಾವುದೇ ಹಬ್ಬ-ಹರಿದಿನಗಳು, ಸಮಾರಂಭಗಳು ಬರಲಿ ಅಲ್ಲಿ ಮಹಿಳೆಯರ ಪರಿಶ್ರಮ ಮಡುಗಟ್ಟಿರಲೇಬೇಕು; ಮೇಜಿನ ಮೇಲಿನ ನ್ಯಾಪ್‌ಕಿನ್‌ಗಳನ್ನು ಸೂಕ್ತವಾದ ಶೈಲಿಯಲ್ಲಿ ಅಲಂಕರಿಸಿರಬೇಕು, ಟೊಮೇಟೋಗಳನ್ನು ರೋಸೆಟ್‌ಗಳಾಗಿ ಕತ್ತರಿಸಿ ಹೋಳುಮಾಡಿರಬೇಕು ಹೀಗೆ ನಿರೀಕ್ಷೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಮತ್ತೊಂದೆಡೆ, ನಮ್ಮಲ್ಲಿ ಎದ್ದುಕಾಣುವಂತಿರುವ ನ್ಯೂನತೆ/ಕೊರತೆಗಳನ್ನು ನೆನಪಿಸುವುದೂ ನಮ್ಮ ಸುತ್ತಮುತ್ತಲಿನ ಮಹಿಳೆಯರೇ. ಒಂದು ವೇಳೆ ಕಣ್ಣಿನ ಹುಬ್ಬುಗಳನ್ನು ಥ್ರೆಡಿಂಗ್ ಮಾಡಿಕೊಳ್ಳದಿರುವುದು ಕಂಡಲ್ಲಿ ಅದನ್ನೇ ದಿಟ್ಟಿಸುತ್ತಾ ನೋಡುವವರಿದ್ದಾರೆ ಅಥವಾ 'ನೀವು ಸಲಾಡನ್ನು ತಯಾರಿಸಿಲ್ಲವೇಕೆ?' ಎಂದು ದೂರುವವರಿದ್ದಾರೆ. ಅಂದರೆ, ಯಾವ ಕೆಲಸವು ಅಪೂರ್ಣವಾಗಿದೆಯೇ ಅದರ ಕಡೆಗೆ ಹದ್ದಿನಕಣ್ಣು ಬೀರುವುದು ಬಹುತೇಕ ಮಹಿಳೆಯರ ಜಾಯಮಾನ. ಇಲ್ಲಿ ಎದುರಾಗುವ ಅಪಾಯವೆಂದರೆ, ಅನಗತ್ಯವಾದ ಸಣ್ಣಪುಟ್ಟ ವಿಷಯಗಳ ಕಡೆಗೇ ಬೆವರು ಸುರಿಸುತ್ತಾ ಹೋಗುವ ನಾವು, ಆ ಭರಾಟೆಯಲ್ಲಿ ಮಹತ್ತರ ದೃಶ್ಯದ ವೀಕ್ಷಣೆಯನ್ನೇ ತಪ್ಪಿಸಿಕೊಳ್ಳುತ್ತೇವೆ. ಆದ್ದರಿಂದ, ಇಂಥ ಜಂಜಾಟಗಳಿಗೆ ಒಡ್ಡಿಕೊಳ್ಳುವ ಬದಲು ನಿರಾಳರಾಗಿರಲೆಂದು ಯಾವುದಾದರೊಂದು ಆರೋಗ್ಯಕರ ಹವ್ಯಾಸದಲ್ಲಿ ತೊಡಗಿಸಿಕೊಂಡು ಅದರಲ್ಲೇ ಮುಂದುವರಿದರೆ, ನೀವು ಜವಾಬ್ದಾರರಲ್ಲದ ವಿಷಯಗಳಿಗೆ ಸಂಬಂಧಿಸಿ ತಪ್ಪಿತಸ್ಥ ಭಾವನೆಯನ್ನು ಅನುಭವಿಸುವುದು ತಪ್ಪುತ್ತದೆ. ಹವ್ಯಾಸದಲ್ಲಿ ತೊಡಗಿಸಿಕೊಂಡಾಗ, ಅದರಲ್ಲಿ ಪರಿಪೂರ್ಣತೆಯನ್ನು ದಕ್ಕಿಸಿಕೊಳ್ಳಲು ಇನ್ನೂ ಎಷ್ಟೊಂದು ಶ್ರಮಪಡುವುದಿದೆ ಎಂಬುದು ನಿಮಗೆ ಅರಿವಾಗಿ, ಕೌಶಲದ ಮತ್ತು ವ್ಯಕ್ತಿತ್ವದ ಔನ್ನತ್ಯಕ್ಕೆ ಅದು ಇಂಬುನೀಡುತ್ತದೆ.

ಭಾರತದಲ್ಲಿ ಮೇಕಪ್ ಸಾಮಗ್ರಿಗಳ ಬ್ರ್ಯಾಂಡ್‌ಗಳು ಇನ್ನಿಲ್ಲದಂತೆ ಹಬ್ಬುತ್ತಿವೆ; ಹೆಚ್ಚುತ್ತಿರುವ ಅಭದ್ರತೆ ಮತ್ತು ಸಾಮಾಜಿಕ ಮಾಧ್ಯಮಗಳಿಂದ ಪ್ರಚೋದಿಸಲ್ಪಟ್ಟಿರುವ ಅವಾಸ್ತವಿಕ ಸೌಂದರ್ಯದ ಮಾನದಂಡಗಳಿಗೂ ಈ ಹಬ್ಬುವಿಕೆಗೂ ಸಂಬಂಧವಿದೆ ಎನ್ನಲಡ್ಡಿಯಿಲ್ಲ. ವೃತ್ತಿ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಸಭೆಯೊಂದರ ದಿನಾಂಕವು ನಿಗದಿಯಾಗುತ್ತಿದ್ದಂತೆ, ಆ ದಿನದಂದು ನಮ್ಮ ತಲೆಗೂದಲು ಮಂಕಾಗದಂತೆ ನೋಡಿಕೊಳ್ಳಲು ಏನೆಲ್ಲಾ ಉಪಚಾರವನ್ನು ಮಾಡಿಕೊಳ್ಳಬೇಕು ಎಂಬುದರ ಕಡೆಗೇ ಮನಸ್ಸು ತಳಮಳಿಸತೊಡಗುತ್ತದೆ. ಸಭೆಯಲ್ಲಿ ವಿಷಯ ಸಂಬಂಧವಾಗಿ ನೀಡಬೇಕಾಗುವ ಪ್ರಸ್ತುತಿಗಿಂತ ಇಂಥ ಅಮುಖ್ಯ ವಿಷಯದ ಕಡೆಗೇ ಗಮನಹರಿಸುವಂತಾಗುತ್ತದೆ.

'ಸೂಪರ್‌ವುಮನ್' ಎಂಬ ಮಾದರಿಯನ್ನು ನಾವು ತೀರಾ ಗಂಭೀರ ಆಯಾಮದೆಡೆಗೆ ತಿರುಗಿಸಿಬಿಟ್ಟಿದ್ದೇವೆ; ಆದರೆ ನಿಜಾರ್ಥದ ಮನುಷ್ಯರಂತೆ ನಡೆದುಕೊಳ್ಳಲು ನಮಗೆ ಸಾಕಷ್ಟು ಸಮಯವಿದೆ, ಶಕ್ತಿಯಿದೆ ಮತ್ತು ಚಿಂತನೆಗೆ ಅವಕಾಶವಿದೆ ಎಂಬುದನ್ನೇ ಮರೆತುಬಿಟ್ಟಿದ್ದೇವೆ. ಕಚೇರಿಯ ಕೆಲಸವನ್ನು ಮುಗಿಸಿಕೊಂಡು ಮುಂಬೈ ಲೋಕಲ್ ಟ್ರೇನುಗಳಲ್ಲಿ ಮನೆಗೆ ಮರಳುತ್ತಿರುವ ಉದ್ಯೋಗಸ್ಥ ಮಹಿಳೆಯರು ಅಲ್ಲಿಯೇ ತರಕಾರಿಯನ್ನು ಕತ್ತರಿಸಿಕೊಂಡು ಹೋಗುವುದನ್ನು ನೋಡಿದಾಗ, ನಮ್ಮ 'ಸೂಪರ್‌ಮಾಮ್'ಗಳ ಪರಿಕಲ್ಪನೆಗೆ ಪುಷ್ಟಿ ದೊರಕುತ್ತದೆ ಎನ್ನಬೇಕು. ಕಚೇರಿಗಳಲ್ಲಿ ಮಹಿಳೆಯರು ಕೆಲಸ ಮಾಡುತ್ತಿರುವಾಗ ಅಲ್ಲಿನ ಸೋಫಾದಲ್ಲಿ ಅವರ ಮಕ್ಕಳು ನಿದ್ರಿಸುತ್ತಿರುವ ಚಿತ್ರಗಳು ಮಹಿಳಾ ಸಬಲೀಕರಣದ ನಿದರ್ಶನಗಳಲ್ಲ, ಬದಲಿಗೆ ಅವು ಸಾಂಸ್ಥಿಕ ವೈಫಲ್ಯದ ಉದಾಹರಣೆಗಳೆನಿಸಿಕೊಳ್ಳುತ್ತವೆ.

ನನ್ನೊಂದಿಗೆ ಕಾರ್ಯ ನಿರ್ವಹಿಸುವ ಸ್ಟೆನೋಗ್ರಾಫರ್ ಒಬ್ಬಾಕೆಯು, ದೆಹಲಿಯಲ್ಲಿ ಕೃತಕ ಬುದ್ಧಿಮತ್ತೆ (ಎಐ) ಸಂಬಂಧಿತ ಶೃಂಗಸಭೆಯು ಉದ್ಘಾಟನೆಯಾದ ದಿನದಂದು ಕಚೇರಿಗೆ ಒಂದು ಗಂಟೆಯಷ್ಟು ತಡವಾಗಿ ಆಗಮಿಸಿದಾಗ, ಆಕೆಯ ಕಂಗಳು ಕೊಳಗಳೇ ಆಗಿಬಿಟ್ಟಿದ್ದವು; 'ಕರ್ತವ್ಯದ ನಿಭಾವಣೆಯಲ್ಲಿ ನಾನು ವಿಫಲಳಾದೆ' ಎಂಬ ಅಪರಾಧಿ ಭಾವನೆಯೇ ಅದಕ್ಕೆ ಕಾರಣವಾಗಿತ್ತು. ಆದರೆ, ಆಕೆಯ ಪುರುಷ ಸಹೋದ್ಯೋಗಿಯು ಮಾರ್ಗಮಧ್ಯದಲ್ಲಿ ತನಗೆ ಒದಗಿದ ಸಂಚಾರ ದಟ್ಟಣೆ ಮತ್ತು ಸಾರಿಗೆ ವ್ಯವಸ್ಥೆಯಲ್ಲಿನ ಅಡಚಣೆಗಳ ಕುರಿತು ದೂಷಿಸುತ್ತಲೇ ಕಚೇರಿಯ ಒಳಗೆ ಹೆಜ್ಜೆಯಿಡುತ್ತಾ ಬಂದರು. ಮಹಿಳೆಯರು ಬೇಗನೆ ದೂಷಣೆಗೆ ಒಳಗಾಗುತ್ತಾರೆ ಅಥವಾ ಆರೋಪವನ್ನು ಹೊತ್ತುಕೊಳ್ಳುತ್ತಾರೆ ಹಾಗೂ ಈ ಸಂಬಂಧವಾಗಿ ಅತಿಯಾಗಿ ವಿವರಿಸಲು ಮುಂದಾಗುತ್ತಾರೆ.

ಆದರೆ, ಮತ್ತೊಂದು ಬದಿಯಲ್ಲಿದ್ದು ಈ ಚಟುವಟಿಕೆಗಳನ್ನೆಲ್ಲ ಗಮನಿಸುವ ಹಿರಿಯ ಮಹಿಳೆಯಾದ ನಾನು, ನನ್ನ ಸುತ್ತಮುತ್ತಲೂ ಕಾರ್ಯನಿರ್ವಹಿಸುವ ಮಹಿಳೆಯರಿಗಾಗಿ ನಿಯಮಗಳಲ್ಲಿ ಒಂದಿಷ್ಟು ಸಡಿಲಿಕೆಯನ್ನು ನೀಡುವುದುಂಟು. ''ನಿಮ್ಮ ಉಡುಪಿಗೆ ಈ ದುಪ್ಪಟ್ಟಾ ಏಕೆ ಹೊಂದಿಕೆಯಾಗುತ್ತಿಲ್ಲ? ಇವತ್ತೇಕೆ ನೀವು ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು ಬಂದಿಲ್ಲ'' ಅಂತೆಲ್ಲಾ ನಾನು ಯಾರನ್ನೂ ಪ್ರಶ್ನಿಸಲು ಹೋಗುವುದಿಲ್ಲ. ಪೋಷಕರಿಗೆ ಮಕ್ಕಳಿಂದ ಅಡಚಣೆಗಳು ಒದಗುವುದು ಸರ್ವೇಸಾಮಾನ್ಯವಾದ ಸಂಗತಿ ಎಂಬುದು ನನಗೆ ಗೊತ್ತಿದೆ. ನಾನಾಗಲೀ ಅಥವಾ ನನ್ನಂಥ ಮತ್ತೊಬ್ಬ ಮಹಿಳೆಯಾಗಲೀ ಪ್ರತಿಯೊಂದು ಅರ್ಜಿ ನಮೂನೆಯಲ್ಲೂ ಉಲ್ಲೇಖಿಸಿರುವ 'ಲಿಂಗ' ಎಂಬ ವಿಭಾಗದಲ್ಲಿ 'ಮಹಿಳೆ' ಎಂದೇ ಬರೆಯಬೇಕಾಗುವುದರಿಂದ, ಮತ್ತೊಬ್ಬ ಮಹಿಳೆಯ ಮುಖದಲ್ಲಿನ ಮೊಡವೆಗಳ ಬಗ್ಗೆಯಾಗಲೀ ಅಥವಾ ಆಕೆ ಯಾವಾಗ ಮಕ್ಕಳನ್ನು ಮಾಡಿಕೊಳ್ಳಲಿದ್ದಾಳೆ ಎಂಬುದರ ಬಗ್ಗೆಯಾಗಲಿ ನಾನು ಕಮೆಂಟ್ ಮಾಡಲು ಹೋಗಬಾರದು; ಇದು ಇತರ ಮಹಿಳೆಯರ ವಿಷಯದಲ್ಲಿ ನಾನು ತಳೆಯುವ ಧೋರಣೆ.

ಕಚೇರಿಯಲ್ಲಿನ ಓರ್ವ ಹಿರಿಯ ಮಹಿಳೆಯಾಗಿ ನಾನು ಕಿರಿಯರಿಗೆ ಹೇಳಲು ಬಯಸುವುದೇನೆಂದರೆ- ಇಲ್ಲಿ 'ನೈತಿಕ ಬೆಂಗಾಡು' ಎನ್ನುವಂಥದ್ದೇನೂ ಇಲ್ಲ ಮತ್ತು ಬದುಕೆಂಬುದು ಎಲ್ಲರ ವಿಷಯದಲ್ಲೂ ಒಂದೇ ತೆರನಾಗಿರುವುದಿಲ್ಲ. ಉದ್ಯೋಗಸ್ಥರ ಸರಪಳಿಯಲ್ಲಿ ಯಾರು ಸರಿಯಾದ ವ್ಯಕ್ತಿ ಎಂಬುದು ಸೂಕ್ತ ಸಮಯದಲ್ಲಿ ಸಂಬಂಧಪಟ್ಟವರ ಗಮನಕ್ಕೆ ಬರುವುದರಿಂದ, ಯಥೋಚಿತ ಗೌರವ ಮತ್ತು ಮಾನ್ಯತೆ ಅಂಥವರಿಗೆ ದಕ್ಕುತ್ತದೆ. ಕೆಲವೊಮ್ಮೆ ಅಷ್ಟೊಂದು ಅರ್ಹರಲ್ಲದ ಪುರುಷರೂ, ಮಹಿಳೆಯರೂ ಇಂಥ ಗೌರವಕ್ಕೆ ಪಾತ್ರರಾಗಬಹುದು. ಅದರ ಬಗ್ಗೆ ತಲೆಕೆಡಿಸಿಕೊಳ್ಳಬಾರದು. ಈ ಬದುಕಿನಲ್ಲಿ ನಾವು ನಿಯಂತ್ರಿಸಬಹುದಾದ ಮಿಕ್ಕ ಸಂಗತಿಗಳು ಸಾಕಷ್ಟಿವೆ. ಆದ್ದರಿಂದ, ನಿಮ್ಮೊಳಗೆ ಇರುವುದನ್ನು, ಅಂದರೆ ನಿಮ್ಮ ಮನಸ್ಸನ್ನು ನಿಯಂತ್ರಿಸಿ.

ಕಚೇರಿಗಳಲ್ಲಿ ಸಲ್ಲದ ರಾಜಕೀಯವು ನಡೆಯುವುದು ನಿಜ. ಪಿತೃಪ್ರಭುತ್ವದ ಮೇಲೆ ಹೇರಲ್ಪಟ್ಟ ಕುಟುಂಬ ಶ್ರೇಣಿಗಳು, ಬೇರೆಲ್ಲಿಯೂ ಕಾಣಬರದಷ್ಟು ಹೆಚ್ಚು ಗುಂಪುಗಾರಿಕೆಯನ್ನು ಬೆಳೆಸುವುದಿದೆ. ಹಾಗಂತ ನೀವು ವಿಚಲಿತರಾಗದೆ, ಸ್ಥಿರತೆಯನ್ನು ಕಾಯ್ದುಕೊಳ್ಳಬೇಕು ಮತ್ತು ಶಾಂತರಾಗಿರಬೇಕು. ಮರೆಯದಿರಿ, ಇದು ಮನಸ್ಸಿನ ತರಬೇತಿಗೆ ಸಂಬಂಧಿಸಿದ ಬಾಬತ್ತು. ಅದನ್ನು ಬಿಟ್ಟು, ಬೇಡದ ಸಂಗತಿಗಳ ಕುರಿತು ಮತ್ತೆ ಮತ್ತೆ ಮಾತನಾಡುವುದು, ಪರರೊಂದಿಗೆ ಅದನ್ನು ಅತಿಯಾಗಿ ಹಂಚಿಕೊಳ್ಳುವುದು, ಮನದ ಹತಾಶೆಗಳನ್ನು ಕೋಪೋದ್ರಿಕ್ತ ಭಾವದಲ್ಲಿ ಹೊರಹಾಕುವುದು ಮುಂತಾದ ನಡೆಗಳಿಗೆ ಒಡ್ಡಿಕೊಂಡರೆ, ಅದು ನಿಮ್ಮ ದೌರ್ಬಲ್ಯದ ಸಂಕೇತವಾಗುತ್ತದೆ.

ಸಾಂಸ್ಥಿಕ ನಾಯಕತ್ವದ ಪಾತ್ರಗಳಲ್ಲಿ ಹೆಚ್ಚೆಚ್ಚು ಮಹಿಳೆಯರು ಕಾಣಿಸಿಕೊಳ್ಳಬೇಕಾದ್ದು ಇಂದಿನ ಅಗತ್ಯವಾಗಿದೆ. ಆದ್ದರಿಂದ ನಾವು ಅನಗತ್ಯ ವಿಷಯಗಳಿಗೆ ತಲೆಕೆಡಿಸಿಕೊಳ್ಳುವುದರ ಬದಲು ನಿರಾಳರಾಗಿದ್ದುಕೊಂಡು, ನಾಯಕತ್ವದ ಪಾತ್ರದ ಗುರಿ ಸಾಧನೆಯ ಕಡೆಗೆ ಗಮನ ಹರಿಸಬೇಕಿದೆ. ಅತಿಯಾಗಿ ವಿವರಿಸುವುದಾಗಲೀ/ಸ್ಪಷ್ಟೀಕರಣ ನೀಡುವುದಾಗಲೀ, ಕ್ಷಮೆ ಯಾಚಿಸುವುದಾಗಲೀ, ಪ್ರತಿಯೊಂದು ವಿಷಯಕ್ಕೂ ಗಡಸು ಪ್ರತಿಕ್ರಿಯೆ ತೋರುವುದಾಗಲೀ ನಮ್ಮ ವರ್ತನೆಯಾಗುವುದು ಬೇಡ. ನಮ್ಮೆಡೆಗೆ ಯಾರಾದರೂ ಅಗೌರವ ತೋರುತ್ತಿದ್ದಾರೆಂದರೆ, ಅಂಥ ಕ್ಷಣದಿಂದ ದೂರವಿರುವುದು ನಮ್ಮ ನಿರ್ಧಾರವಾಗಬೇಕು.

(ಲೇಖಕಿ ಐಆರ್‌ಎಸ್ ಅಧಿಕಾರಿ. ಪ್ರಸ್ತುತ ಆದಾಯ ತೆರಿಗೆ ಪ್ರಧಾನ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ)

ಇರಾನ್-ಇಸ್ರೇಲ್‌ನ ನಾವು ಏನಂತ ಬಯ್ತಿದ್ದೀವಿ?: 'ಗ್ಯಾಸ್' ಹೋಲ್ಸ್

ಸಿನಿಗನ್ನಡ

ತುಂಟರಗಾಳಿ

ಹರಿ ಪರಾಕ್
vveditoped@gmail.com

ಅಂತೂ ಇಂತೂ 'ಲವ್ ಮಾಕ್ಟೇಲ್ 3' ಕಥೆಗೆ ಸಂಬಂಧಪಟ್ಟಂತೆ ಡಾರ್ಲಿಂಗ್ ಕೃಷ್ಣ ಮತ್ತು ರಾಘವೇಂದ್ರ ನಾಯಕ್- ಗುರು ದೇಶಪಾಂಡೆ ಅವರ ಜಗಳ ತಾರ್ಕಿಕ ಅಂತ್ಯಕ್ಕೆ ಬಂದಿದೆ. ಇಬ್ಬರೂ ಕ್ಷಮೆ ಕೇಳಿಕೊಂಡಿದ್ದಾರೆ. ಇಬ್ಬರೂ ಒಂದೇ ಘಟನೆಯಿಂದ ಸ್ಫೂರ್ತಿ ಪಡೆದಿದ್ದಾರೆ ಅಷ್ಟೇ ಅಂತ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜಯಮಾಲಾ ಹೇಳಿಕೆ ನೀಡಿ ಪ್ರಕರಣಕ್ಕೆ ಮುಕ್ತಾಯ ಹಾಡಿದ್ದಾರೆ. ಆದರೂ ಈ ಪ್ರಕರಣವನ್ನು ಅವಲೋಕಿಸಿದರೆ ಸುಖಾಸುಮ್ಮನೆ ಡಾರ್ಲಿಂಗ್ ಕೃಷ್ಣ ಅವರ ಸುಖವನ್ನು ಹಾಳುಮಾಡೋಕೆ ರಾಘವೇಂದ್ರ ನಾಯಕ್ ಪ್ರಯತ್ನಪಟ್ಟಿದ್ದಾರಾ ಅನ್ನಿಸಿದರೆ ತಪ್ಪೇನಿಲ್ಲ. ಯಾಕಂದ್ರೆ ಇದೇ ರಾಘವೇಂದ್ರ ನಾಯಕ್ ಅನ್ನುವ ಬರಹಗಾರ ಹೇಳುವಂತೆ ಕೃಷ್ಣ ಅವರು ಸೀನ್ ಕದ್ದಿಲ್ಲ, ಚಿತ್ರಕಥೆ ಕದ್ದಿಲ್ಲ, ಸಂಭಾಷಣೆ ಕದ್ದಿಲ್ಲ. ಹಾಗಾದ್ರೆ, ಕದ್ದಿರೋದು ಏನು ಅಂದ್ರೆ, ಅದು ಕಥೆಯ ಒನ್‌ಲೈನ್. ಆದರೆ ಇಲ್ಲಿ ಉಲ್ಲೇಖಿಸಬೇಕಾದ ವಿಚಾರ ಅಂದ್ರೆ, ಆ ಕಥೆ ಯಾರಪ್ಪನ ಆಸ್ತಿಯೂ ಅಲ್ಲ. ಅದು ವ್ಯಕ್ತಿಯೊಬ್ಬನ ಜೀವನದಲ್ಲಿ ನಡೆದ ಸತ್ಯಘಟನೆ. ಹಾಗಾಗಿ ಅದನ್ನು ತಗೊಂಡು ಯಾರು ಬೇಕಾದರೂ ಸಿನಿಮಾ ಮಾಡಬಹುದು. ಆದರೆ ಆ ಕಥೆ ನನ್ನದು ಅಂತ ಹೇಳೋ ಹಕ್ಕು ಯಾರಿಗೂ ಇಲ್ಲ. ಆ ವ್ಯಕ್ತಿಯನ್ನು ಸಂಪರ್ಕ ಮಾಡಿ ನಿನ್ನ ಕಥೆಯನ್ನು ಸಿನಿಮಾ ಮಾಡುತ್ತೇವೆ ಅಂತ ಹೇಳಿ ಅವನಿಗೆ ದುಡ್ಡು ಕೊಟ್ಟು ಹಕ್ಕುಗಳನ್ನು ಖರೀದಿ ಮಾಡಿದ್ದರೆ ಮಾತ್ರ ಯಾರಾದರೂ ಆ ಕಥೆ ನನ್ನದು ಅಂತ ಹೇಳಿಕೊಳ್ಳಬಹುದು. ಆದರೆ ಇಲ್ಲಿ ಹಾಗಾಗಿಲ್ಲ. ಹಾಗಾಗಿ ಕಥೆ ಯಾರದ್ದೂ ಅಲ್ಲ. ಇದೊಂದೇ ಪಾಯಿಂಟ್‌ನಿಂದ ಕೃಷ್ಣ ಅವರು ರಾಘವೇಂದ್ರ ನಾಯಕ್ ಅವರ ಬಾಯಿ ಮುಚ್ಚಿಸಬಹುದಾಗಿತ್ತು. ಈಗ ಅದೇ ಆಗಿದೆ. ಪ್ರಕರಣ ಸುಖಾಂತ್ಯ ಕಂಡಿದೆ. ಇದು ಹೊಸದಾಗಿ ಅಪಾಯಿಂಟ್ ಆದ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜನಯಮಾಲಾ ಅವರ ಸಾಧನೆ ಅಂದ್ರೆ ತಪ್ಪೇನಿಲ್ಲ ಬಿಡಿ.

ಲೂಸ್ ಟಾಕ್

▶▶ ಕಾಮನ್‌ಮ್ಯಾನ್

- **ಏನ್ ಸರ್, ಯಾಕೋ ಮುಖ ಒಂಥರಾ ಇದೆ, ಏನ್ ಸಮಾಚಾರ?**
- ಅಯ್ಯೋ ಫುಲ್ ಗ್ಯಾಸ್ ಟ್ರಬಲ್ ಕಣ್ರೀ
- **ಅಸಿಡಿಟಿ ಸಮಸ್ಯೆ ಎಲ್ಲರಿಗೂ ಇದ್ದಿದ್ದೇ, ಬೇರೆ ಏನಾದ್ರು ಇದ್ರೆ ಹೇಳಿ**
- ಅದಲ್ಲರೀ, ಯುದ್ಧದಿಂದಾಗಿ ಗ್ಯಾಸ್ ಸಿಗದೆ ಟ್ರಬಲ್ ಆಗಿದೆ ಅಂದಿದ್ದು.
- **ಓ, ಹಂಗೆ. ಸರಿ, ನಿಮ್ಮ ಪ್ರಕಾರ ಯುದ್ಧ ಯಾವಾಗ ನಿಲ್ಲಬಹುದು?**
- ಅಯ್ಯೋ, ನಿಂತ್ರೆ ಸಾಕಾಗಿದೆ. ನಮಗೂ ಗ್ಯಾಸ್ ಸಿಲಿಂಡರ್ ಕ್ಯೂನಲ್ಲಿ ನಿಂತು ನಿಂತು ಸಾಕಾಗಿದೆ.
- **ಸರಿ ಹೋಗ್ಲಿ ಬಿಡಿ, ನಿಮ್ಮ ಏರಿಯಾಗೆ ಹೊಸ ಹುಡುಗಿ ಬಂದಿದ್ದಾಳಂತೆ, ನೋಡಿದ್ರಾ?**
- ಇನ್ನೂ ನೋಡಿಲ್ಲ, ನೋಡ್ತೀನಿ ಬಿಡಿ. ಎಲ್ ಹೋಗ್ತಾಳೆ. ಊರಿಗೆ ಬಂದವಳು ಗ್ಯಾಸಿಗೆ ಬರದೇ ಇರ್ತಾಳಾ?
- **ಸರಿ, ಈ ಥರ ಎಲ್ಲರಿಗೂ ತೊಂದರೆ ಕೊಟ್ಟು ಯುದ್ಧ ಮಾಡೋರನ್ನ ಏನಂತ ಬಯ್ತೀರಾ?**
- ಗ್ಯಾಸ್ ಹೋಲ್ಸ್

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಬಾರ್‌ನಲ್ಲಿ ಖೇಮು ಫುಲ್ ಪರೇಶಾನ್ ಆಗಿ ಕೂತಿದ್ದ. ಅಲ್ಲಿಗೆ ಅವನ ಆತ್ಮೀಯ ಗೆಳೆಯ ಸೋಮು ಬಂದ. ''ಯಾಕೋ ಖೇಮು, ಏನಾಯ್ತು?'' ಅಂತ 5ನೇ ಪೆಗ್ ಏರಿಸುತ್ತಿದ್ದ ಖೇಮುವನ್ನು ಕೇಳಿದ. ಅದಕ್ಕೆ ಖೇಮು ತುಂಬಾ ಗಂಭೀರವಾಗಿ ''ನಾನೊಂದು ಗಂಭೀರ ಸಮಸ್ಯೆಯಲ್ಲಿ ಸಿಕ್ಕಿಕೊಂಡಿದ್ದೀನಿ'' ಅಂದ. ''ಏನದು?'' ಅಂತ ಸೋಮು ಕೇಳಿದ್ದಕ್ಕೆ ಖೇಮು ಹೇಳಿದ ''ನನ್ನ 4 ವರ್ಷದ ಮಗ ಮರಿಖೇಮು ನಮ್ ಅಪಾರ್ಟ್‌ಮೆಂಟ್‌ನಲ್ಲಿರೋ 18 ವರ್ಷದ ಹುಡುಗಿಯೊಬ್ಬಳನ್ನ ಪ್ರೆಗ್ನೆಂಟ್ ಮಾಡ್ಬಿಟ್ಟಿದಾನೆ''. ಸೋಮುಗೆ ಆಶ್ಚರ್ಯ, ''ಕುಡಿದು ಟೈಟ್ ಆಗಿ ನಿಂಗೆಲ್ಲೋ ಹುಚ್ಚು ಹಿಡಿದಿದೆ. 4 ವರ್ಷದ ಮಗ ಅಂತೀಯಾ, ಅದೆಂಗೆ ಸಾಧ್ಯ? ಇಂಪಾಸಿಬಲ್'' ಅಂದ. ಅದಕ್ಕೆ ಖೇಮು ''ನಿಜ ಕಣೋ, ಹುಚ್ಚು ಹಿಡಿತೀರೋದಕ್ಕೆ ಟೈಟ್ ಆಗಿರೋದು, ಇಟ್ಸ್ ಪಾಸಿಬಲ್' ಅಂದ. ''ಅದು ಸರಿ, ಅವನೇ ಆ ಹುಡುಗೀನ ಪ್ರೆಗ್ನೆಂಟ್ ಮಾಡಿರೋದು ಅನ್ನೋ ಬಗ್ಗೆ ಪ್ರೂಫ್ ಏನಿದೆ ನಿನ್ನತ್ರ?'' ಅಂತ ಕೇಳಿದ ಸೋಮು. ಅದಕ್ಕೆ ಖೇಮು ಹೇಳಿದ ''ಪ್ರೂಫ್ ಇದೆ ಮಗಾ, ಬಡ್ಡಿಮಗ ಮರಿಖೇಮು, ನಾನು ಮನೆಯಲ್ಲಿ ಇಲ್ಲದೇ ಇದ್ದಾಗ ನನ್ನ ವಾರ್ಡ್‌ರೋಬ್‌ಲ್ಲಿದ್ದ ಎಲ್ಲಾ ಕಾಂಡೋಮ್‌ಗಳಿಗೂ ಎಲ್ಲಂದ್ರಲ್ಲೇ ಪಿನ್ ತಗೊಂಡು ಚುಚ್ ಬಿಟ್ಟಿದಾನೆ''.

ಲೈನ್ ಮ್ಯಾನ್

- **ಬಾಕ್ಸಿಂಗ್ ರೆಫ್ರಿಯನ್ನ ಏನಂತ ಕರೀಬಹುದು?**
- ಪಂಚ್-ಆಯ್ತಿ ಸದಸ್ಯ
- **ವ್ಯತ್ಯಾಸ**
- ಸಣ್ಣವರಿದ್ದಾಗ ಜೋಲಿ ರೈಡ್
- ದೊಡ್ಡವರಾದ ಮೇಲೆ ಜಾಲಿ ರೈಡ್
- **ಹಂಪ್‌ಗಳೇ ಜಾಸ್ತಿ ಇದ್ದು 'ಹಾಳು ಬಿದ್ದ' ರಸ್ತೆ**
- ಹಂಪಿ
- **ಜೇನುಹುಳ ಮನೆಯನ್ನ ಮೇಲಿಂದ ಕೆಳಗೆ ಕಟ್ಟುತ್ತೆ.**
- 'ಮನೆಯನ್ನ ಮೇಲಿಂದ ಕೆಳಗೆ ಕಟ್‌ಬೋದು ಪಕ್ಕಾ ವಾಸ್ತು ಪ್ರಕಾರ' ಅಂದ ಯೋಗರಾಜ್ ಭಟ್ರ ಮಾತು ಸುಳ್ಳಲ್ಲ ಬಿಡಿ
- **ಟೀ ಅಂಗಡಿ ಮುಂದೆ 'ಸಾಲುಗಟ್ಟಿ' ನಿಂತು ಸ್ಮೋಕ್ ಮಾಡುವವರನ್ನು ಏನಂತಾರೆ?**
- 'ಚೈನ್' ಸ್ಮೋಕರ್ಸ್
- **ವಿರುದ್ಧ ಪದವೂ ಸಮಾನಾರ್ಥಕ ಪದ ಆಗಬಹುದು ಎಂಬುದಕ್ಕೆ ಉದಾಹರಣೆ**
- ಚೈನ್ ಸ್ಮೋಕರ್ಸ್‌ಗಳೆಲ್ಲ 'ಬೇಚೈನ್' ಸ್ಮೋಕರ್ಸ್‌ಗಳಾಗಿರುತ್ತಾರೆ
- **ಕೈ ತೊಳಕೊಂಡು ಮುಟ್ಟಬೇಕು ಅನ್ನೋದಕ್ಕೆ ಒಂದು ಉದಾಹರಣೆ?**
- ಸೋಪು!
- **ಹಬ್ಬ ಪದದ ಸ್ತ್ರೀ ಲಿಂಗ ಏನು?**
- ಗಂಡ.
- ಅದೆಂಗೆ? ನಪುಂಸಕ ಪದಕ್ಕೆ ಸ್ತ್ರೀ ಲಿಂಗ ಇರುತ್ತಾ ಅಂತ ಬೈಬೇಡಿ.
- ಹಬ್ಬದ ಸ್ತ್ರೀ ಲಿಂಗ ಹಬ್ಬಿ- Hubby
- **ಶೇಕ್ ಶರ್ಮಾ ಅವರ ಇತ್ತೀಚಿನ ಫಾರ್ಮ್ ನೋಡಿದವರ ಮಾತು**
- ಅಭಿ 'ಶೇಖ್' ಶರ್ಮಾ ಇಂಡಿಯಾ ಬದಲು 'ಅರಬ್' ಕಂಟ್ರಿಗೆ ಆಡ್ಬೇಕು..

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:72

ಸಮಾಚಾರ ಸಣ್ಣದಲ್ಲ

ಪುದುಚೇರಿ: ಕಾಂಗ್ರೆಸ್ ತೊರೆದ ಎವಿಎಸ್

ಪುದುಚೇರಿ: ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿನ ವಿಧಾನಸಭಾ ಚುನಾವಣೆಗೆ ದಿನಗಣನೆ ಶುರುವಾಗಿದ್ದು, ಪ್ರದೇಶ ಕಾಂಗ್ರೆಸ್ ಸಮಿತಿ(ಪಿಸಿಸಿ) ಮಾಜಿ ಅಧ್ಯಕ್ಷ ಎ.ವಿ.ಸುಬ್ರಮಣಿಯನ್ ಪಕ್ಷದ ಎಲ್ಲಾ ಹುದ್ದೆಗಳಿಗೂ ರಾಜೀನಾಮೆ ನೀಡಿದ್ದಾರೆ. ವೈಯಕ್ತಿಕ ಕಾರಣಗಳಿಂದಾಗಿ ರಾಜೀನಾಮೆ ನೀಡುತ್ತಿರುವ ಎಂದು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಿ.ವೈತಿಲಿಂಗಂ ಅವರಿಗೆ ಸುಬ್ರಮಣಿಯನ್ ಶುಕ್ರವಾರ ಪತ್ರ ಬರೆದಿದ್ದಾರೆ. ವಿಧಾನಸಭೆ ಚುನಾವಣೆಗೆ ಪಕ್ಷದ 16 ಅಭ್ಯರ್ಥಿಗಳ ಪಟ್ಟಿಯನ್ನು ವೈಥಿಲಿಂಗಂ ಬಿಡುಗಡೆ ಮಾಡಿದ ಬೆನ್ನಲ್ಲೇ ಸುಬ್ರಮಣಿಯನ್ ರಾಜೀನಾಮೆ ನಿರ್ಧಾರ ಪ್ರಕಟವಾಗಿದೆ.

ನಟ ವಿಜಯ್ ಟಿವಿಕೆ ಪಕ್ಷದ ರ‍್ಯಾಲಿಗೆ ಅಡ್ಡಿ

ಚೆನ್ನೈ: ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಸಂಸ್ಥಾಪಕ ನಾಯಕ-ಖ್ಯಾತ ಚಿತ್ರನಟ ಜೋಸೆಫ್ ವಿಜಯ್ ಪರಂಬವೂರ್‌ನಲ್ಲಿ ರ‍್ಯಾಲಿ ನಡೆಸಲು ರಾಜ್ಯ



ಸರಕಾರದಿಂದ ಅನುಮತಿ ಸಿಕ್ಕಿಲ್ಲ. ಕ್ರಮಬದ್ಧವಾದ ರೀತಿಯಲ್ಲಿ ಟಿವಿಕೆ ಪಕ್ಷದವರು ಅರ್ಜಿ ಸಲ್ಲಿಸಿಲ್ಲ. ಹಾಗಾಗಿ ಪರಂಬವೂರ್‌ನಲ್ಲಿ ರ‍್ಯಾಲಿ ನಡೆಸುವುದಕ್ಕೆ ಅನುಮತಿ ಕೋರಿ ಟಿವಿಕೆ ಪಕ್ಷ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂದು ತಮಿಳುನಾಡು ಸರಕಾರದ ಸಚಿವರೊಬ್ಬರು ತಿಳಿಸಿದ್ದಾರೆ. ಈ ಸಂಬಂಧ ಮಾಹಿತಿ ಮಾತುಕತೆ ನಡೆಸಲು ರಾಜ್ಯದಲ್ಲಿನ ಮುಖ್ಯ ಚುನಾವಣಾ ಅಧಿಕಾರಿಯನ್ನು ಶನಿವಾರ ಮಧ್ಯಾಹ್ನ ನಟ ವಿಜಯ್ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ರ‍್ಯಾಲಿಗೆ ಅನುಮತಿ ನೀಡದೇ ಇರುವ ಸರಕಾರದ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ. ಒಂದೆಡೆ, ಕೇಂದ್ರದ ಸೆನ್ಸಾರ್ ಮಂಡಳಿ ನಟ ವಿಜಯ್ ನಟನೆಯ ಬಹು ನಿರೀಕ್ಷಿತ ಚಲನಚಿತ್ರ 'ಜನನಾಯಕನ್' ಬಿಡುಗಡೆಗೆ ತಡೆಯೊಡಿದ್ದರೆ, ಇನ್ನೊಂದೆಡೆ ರಾಜ್ಯ ಸರಕಾರದಿಂದ ವಿಜಯ್ ರ‍್ಯಾಲಿಗೆ ಅನುಮತಿ ನಿರಾಕರಿಸಲಾಗಿದೆ. ಈ ವಿಚಾರಗಳೆರಡೂ ತಮಿಳುನಾಡಿನಲ್ಲಿ ಜಾಲತಾಣದಲ್ಲಿ ಭಾರೀ ಚರ್ಚೆಯನ್ನು ಹುಟ್ಟುಹಾಕಿವೆ.

ಎಂಜಿನ್‌ನಲ್ಲಿ ಸಮಸ್ಯೆ: ಇಂಡಿಗೊ ಲ್ಯಾಂಡಿಂಗ್

ದೆಹಲಿ: ವಿಶಾಖಪಟ್ಟಣಂನಿಂದ ಶನಿವಾರ ದೆಹಲಿಗೆ ತೆರಳಿದ 161 ಪ್ರಯಾಣಿಕರಿದ್ದ ಇಂಡಿಗೊ ಬೋಯಿಂಗ್ 737-800 ವಿಮಾನದಲ್ಲಿ ದಿಢೀರ್ ಎಂಜಿನ್ ವೈಫಲ್ಯ ಕಾಣಿಸಿಕೊಂಡಿದ್ದರಿಂದ ಆತಂಕ ಸೃಷ್ಟಿಯಾಗಿತ್ತು. ಪರಿಣಾಮ ದೆಹಲಿ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 'ತುರ್ತುಸ್ಥಿತಿ' ಘೋಷಿಸಲಾಗಿತ್ತು. ಬಳಿಕ ವಿಮಾನ ನಿಲ್ದಾಣದ ರನ್ ವೇ 28ರಲ್ಲಿ ಹೈ ಅಲರ್ಟ್ ಘೋಷಿಸಿ, ತ್ವರಿತಗತಿಯಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಅಗ್ನಿಶಾಮಕ ವಾಹನಗಳನ್ನು ಸ್ಥಳಕ್ಕೆ ರವಾನಿಸಲಾಗಿತ್ತು. ಕಡೆಗೆ ವಿಮಾನ ಬೆಳಿಗ್ಗೆ 11ರ ವೇಳೆ ಸುರಕ್ಷಿತವಾಗಿ ಇಳಿಯಿತು. ಎಲ್ಲಾ ಪ್ರಯಾಣಿಕರು ಯಾವುದೇ ತೊಂದರೆಯಿಲ್ಲದೆ ವಿಮಾನದಿಂದ ಇಳಿದು ನಿರ್ಗಮಿಸಿದರು ಎಂದು ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಮೋದಿಗೆ ಟ್ರಂಪ್ ಕರೆ ವೇಳೆ ಮಸ್ಕ್ ಹಾಜರಿ?

ವಾಷಿಂಗ್ಟನ್: ಮಾ.26ರಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರೆ ಮಾಡಿ ಇರಾನ್ ಯುದ್ಧ, ಹೊರ್ಮುಜ್ ಜಲಸಂಧಿ ಬಿಕ್ಕಟು ಕುರಿತು ಮಾತುಕತೆ ನಡೆಸಿದಾಗ ವಿಶ್ವದ ಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಕೂಡಾ ಭಾಗವಹಿಸಿದ್ದರು ಎಂಬ ಮಾಹಿತಿ ಅಮೆರಿಕ ಪ್ರಮುಖ ಮಾಧ್ಯಮ ಸಂಸ್ಥೆ ವರದಿಯಿಂದ ತಿಳಿದುಬಂದಿದ್ದು, ಜಾಗತಿಕ ಮಟ್ಟದ ಚರ್ಚೆಗೆ ಗ್ರಾಸವಾಗಿತ್ತು. ಟ್ರಂಪ್, ನಂತರದಲ್ಲಿ ಮೋದಿ ಅವರಿಗೆ ಮೊದಲ ಬಾರಿಗೆ ಕರೆ ಮಾಡಿದ್ದಾರೆ. ಎರಡು ಪ್ರಮುಖ ದೇಶಗಳ ನಾಯಕರ ನಡುವಿನ ಮಹತ್ವದ ಮಾತುಕತೆ ವೇಳೆ, ಅದೂ ಯುದ್ಧ ಸಂದರ್ಭ ಮಸ್ಕ್ ಭಾಗಿಯಾಗಿದ್ದು ಶಿಷ್ಟಾಚಾರದ ದೊಡ್ಡ ಉಲ್ಲಂಘನೆ ಎಂಬ ವಿರೋಧ ವ್ಯಕ್ತವಾಗಿತ್ತು.

ಸ್ಪಷ್ಟನೆ: ಆದರೆ, ಟ್ರಂಪ್-ಮೋದಿ ಫೋನ್ ಸಂಭಾಷಣೆ ವೇಳೆ ಉದ್ಯಮಿ ಮಸ್ಕ್ ಉಪಸ್ಥಿತರಿರಲಿಲ್ಲ ಎಂದು ಭಾರತ ಸರಕಾರ ಶನಿವಾರ ಸಂಜೆ ಸ್ಪಷ್ಟಪಡಿಸಿದೆ. ಮೋದಿ-ಟ್ರಂಪ್ ದೂರವಾಣಿ ಮಾತುಕತೆಯನ್ನು ಅಮೆರಿಕದ ಶ್ವೇತ ಭವನ 'ಬಲು ಫಲಪ್ರದ ಮಾತುಕತೆ' ಎಂದು ಬಣ್ಣಿಸಿದೆ.

ಎನ್‌ಸಿಆರ್: ಇನ್ನೊಂದು ಅಂ.ವಿಮಾನ ನಿಲ್ದಾಣ

ದೆಹಲಿ: ದೆಹಲಿಯಲ್ಲಿನ ರಾಷ್ಟ್ರ ರಾಜಧಾನಿ ಪ್ರದೇಶ(ಎನ್‌ಸಿಆರ್)ಕ್ಕೆ ಹೊಸದಾಗಿ ಮತ್ತೊಂದು ಅಂತಾರಾಷ್ಟ್ರೀಯ ವಿಮಾನ ಸೌಲಭ್ಯ ಲಭ್ಯವಾಗಿದೆ. ಇದು ಎನ್‌ಸಿಆರ್‌ನಲ್ಲಿನ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿದೆ. 11,200 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿರುವ 'ನೊಯಿಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ'ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಮಧ್ಯಾಹ್ನ ಲೋಕಾರ್ಪಣೆ ಮಾಡಿದರು. ಈ ಸಂದರ್ಭ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಉಪ ಮುಖ್ಯಮಂತ್ರಿಗಳು, ಸಚಿವ ಸಂಪುಟ ಸಹೋದ್ಯೋಗಿಗಳು ಹಾಜರಿದ್ದರು. ಉತ್ತರ ಪ್ರದೇಶದ ಗೌತಮ ಬುದ್ಧ ನಗರದಲ್ಲಿನ ಜೇವರ್ ಪ್ರದೇಶಕ್ಕೆ ಸಮೀಪದಲ್ಲಿರುವ ಈ ನೂತನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ವಾರ್ಷಿಕ 1.20 ಕೋಟಿ ಪ್ರಯಾಣಿಕರನ್ನು ನಿರ್ವಹಣೆ ಮಾಡುವಷ್ಟು ವಿಶಾಲ ವಾಗಿದೆ ಹಾಗೂ ಜಾಗತಿಕ ಮಟ್ಟದ ಸೌಲಭ್ಯಗಳಿಂದ ಅತ್ಯಾಧುನಿಕವಾಗಿ ನಿರ್ಮಾಣಗೊಂಡಿದೆ. ದೆಹಲಿಯಿಂದ 75 ಕಿಮೀ ದೂರದಲ್ಲಿದೆ. ಯಮುನಾ ಎಕ್ಸ್‌ಪ್ರೆಸ್ ವೇಗೆ ಸಮೀಪವಾಗಿದೆ. ಈ ವಿಮಾನ ನಿಲ್ದಾಣದ ಲೋಕಾರ್ಪಣೆಯಿಂದ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ಒತ್ತಡ ಬಹಳಷ್ಟು ತಗ್ಗಲಿದೆ ಎಂದು ಅಂದಾಜು ಮಾಡಲಾಗಿದೆ.

ಶುಕ್ರವಾರ ಇಡೀ ರಾತ್ರಿ ಸುರಿದ ಹಿಮದಲ್ಲಿ ಹಲವು ವಾಹನ ಸಿಲುಕಿದ ಶಂಕೆ | ರಾತ್ರಿ ಹಿಮಪಾತದಲ್ಲಿ ಹಲವರಿಗೆ ಗಾಯ, ಸಾವಿನ ಸಂಖ್ಯೆ ಏರುವ ಭೀತಿ | ದೊಡ್ಡ ಯಾಂತ್ರಿಕ ವಾಹನಗಳನ್ನು ಬಳಸಿಕೊಂಡು ಹಿಮ ತೆರವು ಕಾರ್ಯ | ಶ್ರೀನಗರ-ಲೇಹ್, ಭಾದೇರ್ವಾಹ್-ಪಠಾಣ್‌ಕೋಟ್ ಸಂಪರ್ಕ ಹೆದ್ದಾರಿಗಳು ಬಂದ್

ಜಮ್ಮು-ಕಾಶ್ಮೀರದಲ್ಲಿ ಭಾರೀ ಹಿಮಪಾತ: 7 ಜೀವಬಲಿ

ಶ್ರೀನಗರ: ಜಮ್ಮು-ಕಾಶ್ಮೀರದಲ್ಲಿ ಶುಕ್ರವಾರ ರಾತ್ರಿ ಭಾರೀ ಹಿಮಪಾತವಾಗಿದ್ದು, ರಾಜಧಾನಿ ನಗರ ಶ್ರೀನಗರ ಮತ್ತು ಲೇಹ್ ಹೆದ್ದಾರಿಯಲ್ಲಿನ ಝೋಜಿಲಾ ಪಾಸ್ ಬಳಿ ಹಲವಾರು ವಾಹನಗಳು ಹಿಮದ ರಾಶಿಯಡಿ ಸಿಲುಕಿಕೊಂಡಿದ್ದರಿಂದ 10 ವರ್ಷದ ಬಾಲಕ ಸೇರಿದಂತೆ 7 ಜನರು ದುರ್ಮರಣಕ್ಕೀಡಾದರು. ಇತರೆ ಐವರು ಗಾಯಗೊಂಡಿದ್ದು, ಅವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಡೀ ರಾತ್ರಿ ಭಾರೀ ಪ್ರಮಾಣದಲ್ಲಿ ಹಿಮ ಸುರಿದಿದ್ದರಿಂದ ಶ್ರೀನಗರ-ಲೇಹ್ ನಗರಗಳನ್ನು ಸಂಪರ್ಕಗೊಳಿಸುವ ಪ್ರಮುಖ ಹೆದ್ದಾರಿ ಹಾಗೂ ದೋಡಾ ಜಿಲ್ಲೆಯಲ್ಲಿನ ಭಾದೇರ್ವಾಹ್-ಪಠಾಣ್ ಕೋಟ್ ಹೆದ್ದಾರಿಯ ರಸ್ತೆಗಳಲ್ಲಿ 4-5 ಅಡಿಗಳಷ್ಟು ಎತ್ತರಕ್ಕೆ ಹಿಮ ಆವರಿಸಿದೆ.

ಶುಕ್ರವಾರ ರಾತ್ರಿ 7 ಜೀವಗಳು ಹಿಮಪಾತಕ್ಕೆ ಬಲಿಯಾಗಿರುವ ಹಿನ್ನೆಲೆ ಮುನ್ನೆಚ್ಚರಿಕೆ ಕ್ರಮವಾಗಿ ಶ್ರೀನಗರ-ಲೇಹ್ ಮತ್ತು ಭಾದೇರ್ವಾಹ್-ಪಠಾಣ್ ಕೋಟ್ ಹೆದ್ದಾರಿಯನ್ನು ಶನಿವಾರ ಬಂದ್ ಮಾಡಲಾಗಿದ್ದು, ಹಿಮ ತೆರವುಗೊಳಿಸುವವರೆಗೂ ವಾಹನ ಸಂಚಾರಕ್ಕೆ ಅವಕಾಶವಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

7 ಜನರ ದುರ್ಮರಣ ಕಾರಣದಿಂದಾಗಿ ಈ ಬಾರಿ ಹೆದ್ದಾರಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ ಎಂದಿರುವ ಅಧಿಕಾರಿಗಳು, ಈ ಹಿಮದ ರಾಶಿಯಲ್ಲಿ ಸಣ್ಣ ಗಾತ್ರದ ಕೆಲವು ಕಾರುಗಳು ಸಿಲುಕಿಕೊಂಡಿರುವ ಸಾಧ್ಯತೆ ಇದೆ. ಹಾಗಾಗಿ ಆದಷ್ಟು ಬೇಗ ಹಿಮದ ರಾಶಿ ತೆರವುಗೊಳಿಸಬೇಕಿದೆ ಎಂದಿದ್ದಾರೆ.

ಶ್ರೀನಗರ-ಲೇಹ್ ಮತ್ತು ಭಾದೇರ್ವಾಹ್-ಪಠಾಣ್‌ಕೋಟ್ ಹೆದ್ದಾರಿಯಲ್ಲಿ ರಸ್ತೆಯ ಮೇಲೆಲ್ಲಾ 3-4 ಅಡಿಗಳಷ್ಟು ಎತ್ತರವಾಗಿ ಹಿಮ

ಶುಕ್ರವಾರ ರಾತ್ರಿ ಹಿಮಪಾತದಲ್ಲಿ ಶ್ರೀನಗರ-ಲೇಹ್ ಸಂಪರ್ಕದ ಹೆದ್ದಾರಿಯಲ್ಲಿ ಹಿಮ ಆವರಿಸಿದ್ದು, ದೊಡ್ಡ ಯಂತ್ರದ ಮೂಲಕ ಹಿಮ ತೆರವು ಕಾರ್ಯಾಚರಣೆ ನಡೆದಿದೆ.

ಮತ್ತೆ ಹಿಮಪಾತ: ಹವಾಮಾನ ಇಲಾಖೆ ಮುನ್ಸೂಚನೆ

ಜಮ್ಮು-ಕಾಶ್ಮೀರ ಮತ್ತು ಲಡಾಕ್ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸೋಮವಾರದವರೆಗೂ ಹಿಮಪಾತ ಮುಂದುವರಿಯಲಿದೆ. ಏಪ್ರಿಲ್ 3-4ರಂದು ಕೂಡಾ ಮಳೆ ಮತ್ತು ಹಿಮಪಾತವಾಗುವ ಸಾಧ್ಯತೆ ಎಂದು ಶ್ರೀನಗರ ಹವಾಮಾನ ಕೇಂದ್ರದ ನಿರ್ದೇಶಕ ಮುಖ್ತಾರ್ ಅಹಮದ್ ಶನಿವಾರ ಮುನ್ಸೂಚನೆ ನೀಡಿದ್ದಾರೆ.

ಆವರಿಸಿರುವುದರಿಂದ ದೊಡ್ಡ ಯಾತ್ರಿಕ ವಾಹನಗಳನ್ನು ಬಳಸಿಕೊಂಡು ಹಿಮದ ರಾಶಿ ತೆರವುಗೊಳಿಸುವ ಕಾರ್ಯ ತ್ವರಿತಗತಿಯಲ್ಲಿ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಮುಖ ಹೆದ್ದಾರಿಯೇ ಬಂದ್ ಆಗಿರುವುದರಿಂದ ಎರಡೂ ಪಾರ್ಶ್ವದಲ್ಲಿ ಸರಕು ಸಾಗಣೆ ಟ್ರಕ್‌ಗಳು, ಪ್ರಯಾಣಿಕರ ಬಸ್, ವ್ಯಾನ್‌ಗಳು, ಕಾರು-ಜೀಪ್‌ಗಳು ಸೇರಿದಂತೆ ಸಾವಿರಾರು ವಾಹನಗಳು ಮುಂದೆ ಚಲಿಸಲಾಗದೇ, ಹಿಂದಕ್ಕೂ ಹೋಗಲಾಗದೇ ಸಾಲುಗಟ್ಟಿ ನಿಲುಗಡೆಯಾಗಿವೆ. ಚಾಲಕ ವರ್ಗದವರು, ಪ್ರಯಾಣಿಕರು ಸೇರಿ ಸಾವಿರಾರು ಜನರು ಮಾರ್ಗ ಮಧ್ಯೆ ಕಷ್ಟಕ್ಕೆ ಸಿಲುಕಿದ್ದಾರೆ.

ಹಿಮಪಾತದಲ್ಲಿ ಕಾಣೆಯಾದವರಿಗಾಗಿ ಶೋಧ

ಶ್ರೀನಗರ-ಲೇಹ್ ಹೆದ್ದಾರಿಯಲ್ಲಿ ಶುಕ್ರವಾರ ರಾತ್ರಿಯ ಹಿಮಪಾತದಲ್ಲಿ ಕಾರುಗಳು ಸೇರಿದಂತೆ ಹಲವು ಸಣ್ಣ ಪ್ರಮಾಣದ ವಾಹನಗಳು ಸಿಲುಕಿ ಹಿಮದಲ್ಲಿ ಮುಚ್ಚಿಹೋಗಿರುವ ಭೀತಿ ಎದುರಾಗಿದೆ. ಪ್ರದೇಶದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಹಾಗಾಗಿ, ಭಾರತೀಯ ಸೇನಾಪಡೆಯ ಯೋಧರು, ಕೇಂದ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್), ಜಮ್ಮು-ಕಾಶ್ಮೀರ ಪೊಲೀಸರು, ಲಡಾಕ್ ಪೊಲೀಸ್ ಇಲಾಖೆ, ರಾಜ್ಯದ ಪ್ರಾಕೃತಿಕ ವಿಕೋಪ ಪರಿಹಾರ ತಂಡ(ಎಸ್‌ಡಿಆರ್‌ಎಫ್), ಬಾರ್ಡರ್ ರೋಡ್ ವರ್ಕ್ಸ್ ಸಂಸ್ಥೆ(ಬಿಆರ್‌ಒ) ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿವಿಧ ಎಂಜಿನಿಯರಿಂಗ್ ವಿಭಾಗದ ಸರಕಾರಿ ಸಿಬ್ಬಂದಿಗಳನ್ನು ಬಳಸಿಕೊಂಡು ಸಮರೋಪಾದಿಯಲ್ಲಿ ಶೋಧ ಕಾರ್ಯ ನಡೆಸಲಾಗುತ್ತಿದೆ. ಕಾರ್ಗಿಲ್ ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೂ ತಕ್ಷಣವೇ ಸ್ಥಳಕ್ಕೆ ತೆರಳಿ ಶೋಧ ಕಾರ್ಯದ ಉಸ್ತುವಾರಿ ವಹಿಸುವಂತೆ ನಿರ್ದೇಶನ ನೀಡಿದ್ದೇನೆ ಎಂದು ಲಡಾಕ್‌ನ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಜಮ್ಮು-ಕಾಶ್ಮೀರದ ದೋಡಾ ಜಿಲ್ಲೆಯ ಭಾದೇರ್‌ವಾಹ್-ಪಠಾಣ್‌ಕೋಟ್ ಹೆದ್ದಾರಿಯಲ್ಲಿ ರಸ್ತೆಯ ಮೇಲೆ 4-5 ಅಡಿಗಳಷ್ಟು ಹಿಮ ಆವರಿಸಿದ್ದು, ತೆರವು ಕಾರ್ಯಾಚರಣೆ ಶನಿವಾರ ನಡೆದಿದೆ.

ಶ್ರೀನಗರ-ಲೇಹ್ ಹೆದ್ದಾರಿಯಲ್ಲಿನ ಹಿಮದ ರಾಶಿ ತೆರವಾಗಿ ರಸ್ತೆಯು ಸಂಚಾರಕ್ಕೆ ಯೋಗ್ಯವಾದ ಬಳಿಕ ವಾಹನಗಳ ಸಂಚಾರಕ್ಕೆ ಅನುಮತಿ ನೀಡಲಾಗುವುದು ಎಂದೂ ಅಧಿಕಾರಿಗಳು ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ.

ಸಿಎಂ ಸಂತಾಪ: ಶುಕ್ರವಾರ ರಾತ್ರಿಯ ಹಿಮಪಾತಕ್ಕೆ 7 ಮಂದಿ ಬಲಿಯಾಗಿರುವುದಕ್ಕೆ ಜಮ್ಮು-ಕಾಶ್ಮೀರ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಜೆಇಎಂ 500, ಹಿಜ್ಬುಲ್ 1500 ಉಗ್ರರು

ಪಾಕ್ ಉಗ್ರ ದೇಶ: ಅಮೆರಿಕ

ವಾಷಿಂಗ್ಟನ್: ಇದೇ ಮೊದಲ ಬಾರಿಗೆ ಪಾಕಿಸ್ತಾನವನ್ನು ಭಯೋತ್ಪಾದಕ ದೇಶ ಎಂದು ಅಮೆರಿಕ ಗುರುತಿಸಿದೆ. ಅಷ್ಟೇ ಅಲ್ಲದೇ, ಭಾರತದ ವಿರುದ್ಧದ ಭಯೋತ್ಪಾದನಾ ಸಂಘಟನೆಗಳಿಗೆ ಪಾಕಿಸ್ತಾನ ಆಶ್ರಯ ನೀಡುತ್ತಲೇ ಬಂದಿದೆ ಎಂದು ಸಂಶೋಧನಾ ವರದಿಯಲ್ಲಿ ಅಮೆರಿಕ ಸ್ಪಷ್ಟವಾಗಿ ಹೇಳಿದೆ.

ಭಾರತ 2025ರ ಮೇ ತಿಂಗಳಲ್ಲಿ 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆ ಕೈಗೊಂಡ ನಂತರದಲ್ಲಿಯೂ ಪಾಕಿಸ್ತಾನ ಭಾರತಕ್ಕೆ ವಿರುದ್ಧ ವಾಗಿಯೇ ಕಾರ್ಯನಿರ್ವಹಿಸುವ ಭಯೋತ್ಪಾದಕ ಗುಂಪುಗಳಿಗೆ ಆಶ್ರಯ ನೀಡುವುದನ್ನು ಮುಂದುವರೆಸಿದೆ ಎಂದು ಅಮೆರಿಕದ ಯುವ ಕಾಂಗ್ರೆಸ್(ಸಂಸತ್) ಸಂಶೋಧನೆಯ(ಸಿಆರ್ ಎಸ್) ವರದಿ ನೇರವಾಗಿ ಇದೇ ಮೊದಲ ಬಾರಿಗೆ ಹೇಳಿದೆ.

ಜೈಶ್ ಎ ಮೊಹಮ್ಮದ್(ಜೆಇಎಂ) ಉಗ್ರ ಸಂಘಟನೆ ಪಾಕಿಸ್ತಾನದಲ್ಲಿ 500 ಸಶಸ್ತ್ರ ಉಗ್ರರಿಗೆ ತರಬೇತಿಕೊಟ್ಟು ಭಯೋತ್ಪಾದಕ ಕೃತ್ಯ ನಡೆಸುವುದಕ್ಕಾಗಿ ಸಮಯ ಕಾಯುತ್ತಿದೆ. ಹಿಜ್ಬುಲ್ ಮುಜಾಹಿದ್ದೀನ್ 1500 ಉಗ್ರರನ್ನು ಶಸ್ತ್ರ ಸಮೇತ ಸಿದ್ಧವಾಗಿರಿಸಿಕೊಂಡಿದೆ. ಪಾಕಿಸ್ತಾನ ನೆಲದಲ್ಲಿ ವೃದ್ಧಿಯಾಗುತ್ತಲೇ ಇರುವ ಭಯೋತ್ಪಾದಕ ಗುಂಪುಗಳನ್ನು ಇಲ್ಲವಾಗಿಸುವ ಭಾರತದ ಕಾರ್ಯಾಚರಣೆಗಳು ವಿಫಲವಾಗಿವೆ. ಏ.22ರ ಪಹಲ್ಗಾಮ್ ಉಗ್ರ ದಾಳಿ ಬಳಿಕ ಪಾಕಿಸ್ತಾನದ ಉಗ್ರರ ನೆಲೆಗಳ ಮೇಲೆ ಭಾರತ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಡೆಸಿತ್ತು. ಆದರೆ, ಪಾಕ್ ಮಾತ್ರ ತನ್ನ ನೆಲದಲ್ಲಿ ಉಗ್ರರಿಗೆ ನೆಲೆ ಕಲ್ಪಿಸಿಕೊಟ್ಟಿಲ್ಲ ಎಂದೇ ಮೊಂಡುವಾದ ಮಾಡಿತ್ತು. ಮೇ 10ರಂದು ಪಾಕ್ ಸೇನಾಧಿಕಾರಿ ಮನವಿ ಮೇರೆಗೆ ಭಾರತ ಆಪರೇಷನ್ ಸಿಂಧೂರ್‌ಗೆ ಅಲ್ಪವಿರಾಮ ನೀಡಿದ್ದರೂ ಪಾಕ್ ಮಾತ್ರ ಭಾರತದ ವಿರುದ್ಧ ಕತ್ತಿ ಮಸೆಯುವುದು ನಿಲ್ಲಿಸಿಲ್ಲ.

ಮಾ.25ರ ಸಿಆರ್‌ಎಸ್‌ನ 'ಇನ್‌ಫೋಕಸ್' ವರದಿ ಲಷ್ಕರ್-ಎ-ತಯ್ಯಬಾ(ಎಲ್‌ಇಟಿ), ಜೈಶ್-ಎ-ಮೊಹಮ್ಮದ್(ಜೆಇಎಂ), ಹರಕತ್-ಉಲ್ ಜಿಹಾದ್ ಇಸ್ಲಾಮಿ(ಎಚ್‌ಯುಜಿಐ), ಹರಕತ್ ಉಲ್-ಮುಜಾಹಿದೀನ್ (ಎಚ್‌ಯುಎಂ) ಮತ್ತು ಹಿಜ್ಬುಲ್ ಮುಜಾಹಿದ್ದೀನ್ (ಎಚ್‌ಎಂ) ಸೇರಿದಂತೆ 15 ಉಗ್ರ ಸಂಘಟನೆಗಳು ಪಾಕ್‌ನಲ್ಲಿವೆ ಎಂದಿದೆ. ಈ ಉಗ್ರ ಸಂಘಟನೆಗಳನ್ನು ಅಮೆರಿಕ ಸರಕಾರವೂ 'ವಿದೇಶಿ ಉಗ್ರ ಸಂಘಟನೆ'ಗಳೆಂದು ಘೋಷಿಸಿದೆ.

ಅಚ್ಚರಿ: ಸದ್ಯ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಆಸಿಫ್ ಮುನೀರ್ ಬಲು ಆಪ್ತವಾಗಿದ್ದಾರೆ. ಅದರಲ್ಲೂ ಇರಾನ್ ವಿರುದ್ಧ ಫೆ.28ರಂದು ಆರಂಭಿಸಿದ ಯುದ್ಧವನ್ನು ಹೇಗಾದರೂ ಕೊನೆಗೊಳಿಸಲು ಯತ್ನಿಸುತ್ತಿರುವ ಟ್ರಂಪ್‌ಗೆ ಸಂಧಾನದ ಮಾರ್ಗದಲ್ಲಿ ನೆರವಾಗುತ್ತಿರುವ ಈ ಇಬ್ಬರೂ ಪಾಕ್ ಪ್ರಭೃತ್ತಿಗಳ ವಿರುದ್ಧವಾಗಿಯೇ ಇರುವ ಈ ಸಂಶೋಧನಾ ವರದಿಯನ್ನು ಅಮೆರಿಕ ಸಂಸತ್ತು ಪ್ರಕಟಿಸಿರುವುದು ಆಶ್ಚರ್ಯಕರವಾಗಿದೆ.

ಯುಎಇ ಕೈಗಾರಿಕೆಗೆ ಇರಾನ್ ಡ್ರೋನ್: 5 ಭಾರತೀಯರಿಗೆ ಗಾಯ

ಅಬುಧಾಭಿ: ಇರಾನ್ ಶನಿವಾರ ನಡೆಸಿದ ಸರಣಿಯೋಪಾದಿ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಯಿಂದಾಗಿ ಯುನೈಟೆಡ್ ಅರಬ್ ಎಮಿರೇಟ್ (ಯುಎಇ) ಕೈಗಾರಿಕಾ ವಲಯದಲ್ಲಿ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಘಟನೆಯಲ್ಲಿ ಐವರು ಭಾರತೀಯರು ಸೇರಿದಂತೆ 6 ಮಂದಿ ಗಾಯಗೊಂಡಿದ್ದಾರೆ ಎಂದು

ತಿಳಿದುಬಂದಿದೆ. ಎಮಿರೇಟ್ಸ್‌ನ ಖಲೀಫಾ ಆರ್ಥಿಕ ವಲಯ, ಕೈಗಾರಿಕಾ ಪ್ರದೇಶದ ಮೇಲೆ ಇರಾನ್ ದಾಳಿ ನಡೆಸಿದೆ. ಹಲವೆಡೆ ಡ್ರೋನ್‌ಗಳು ಅಪ್ಪಳಿಸಿ ಸ್ಫೋಟಗೊಂಡಿವೆ. ಕ್ಷಿಪಣಿಗಳಿಂದಲೂ ಭಾರೀ ಪ್ರಮಾಣದಲ್ಲಿ ದಾಳಿಯಾಗಿದ್ದು, ಹಲವೆಡೆ ಬೆಂಕಿ ಹೊತ್ತಿ ಉರಿಯುತ್ತಿದೆ. ವಿವಿಧೆಡೆ ನಡೆದ ಈ ದಾಳಿಗಳಲ್ಲಿ ಭಾರತದ ಐವರು ನಾಗರಿಕರು ಮತ್ತೊಬ್ಬ ಬೇರೆ ದೇಶದ ಕಾರ್ಮಿಕ ಗಾಯಗೊಂಡಿದ್ದಾರೆ ಎಂದು ಯುಎಇ ಸರಕಾರದ ಮಾಧ್ಯಮ ಕಚೇರಿ ಸುದ್ದಿಸಂಸ್ಥೆಗೆ ಶನಿವಾರ ಮಾಹಿತಿ ನೀಡಿದೆ. ಇರಾನ್‌ನ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ವಾಯು ರಕ್ಷಣಾ ವ್ಯವಸ್ಥೆ ತಡೆದು ನಾಶಪಡಿಸುವ ಕಾರ್ಯದಲ್ಲಿ ಯುಎಇ ವಾಯುಪಡೆ ತೊಡಗಿಸಿಕೊಂಡಿದೆ. ಖಂಡಾಂತರ ಕ್ಷಿಪಣಿಯೊಂದರ ಅವಶೇಷಗಳು ನೆಲಕ್ಕೆ ಬಿದ್ದ ಪರಿಣಾಮ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣವೇ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಿಯಂತ್ರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇರಾನ್ ಕ್ಷಿಪಣಿಯಲ್ಲಿ ಭಾರತಕ್ಕೆ ಧನ್ಯವಾದ

ಟೆಹರಾನ್: ಇಸ್ರೇಲ್ ಮೇಲೆ ಶುಕ್ರವಾರ ಖಂಡಾಂತರ ಕ್ಷಿಪಣಿಗಳಿಂದ ಇರಾನ್ ಭಾರೀ ದಾಳಿ ನಡೆಸಿದೆ. ಅಚ್ಚರಿ ಎಂದರೆ, ದಾಳಿಗೆ ಬಳಿಸಿದ ಕ್ಷಿಪಣಿಗಳ ಮೇಲೆ ಭಾರತ, ಜರ್ಮನಿ, ಸ್ಪೇನ್, ಪಾಕಿಸ್ತಾನದ ಜನರಿಗೆ ಧನ್ಯವಾದ ಎಂದು ಪ್ರತ್ಯೇಕವಾಗಿ ಸಂದೇಶಗಳನ್ನು ಬರೆಯಲಾಗಿದೆ.

'ಥ್ಯಾಂಕ್ಯು ದಿ ಪೀಪಲ್ ಆಫ್ ಇಂಡಿಯ'(ಭಾರತದ ಜನತೆಗೆ ಧನ್ಯವಾದ) ಎಂದು ಇಂಗ್ಲಿಷ್‌ನಲ್ಲಿ ಸಂದೇಶವನ್ನು ಕ್ಷಿಪಣಿಢ ಬಿಳಿ ಕವಚದ ಮೇಲೆ ನೀಲಿ ಶಾಯಿಯಿಂದ ಬರೆಯಲಾಗಿದೆ. ಜರ್ಮನಿ ಜನರಿಗೆ ಧನ್ಯವಾದ, ಸ್ಪೇನ್ ಜನತೆಗೆ ಧನ್ಯವಾದ, ಪಾಕಿಸ್ತಾನ ಜನತೆಗೆ ಧನ್ಯವಾದ ಎಂದೂ ಕ್ಷಿಪಣಿ ಕವಚದ ಮೇಲೆ ಬರೆಯಲಾಗಿದೆ. 'ಗ್ರಾ್ಯಟಿಟ್ಯೂಡ್ ಫ್ರಂಮ್ ಇರಾನ್ ಏರೋಸ್ಪೇಸ್ ಫೋರ್ಸ್ ಟು ದ ಪೀಪಲ್ ಆಫ್ ಸ್ಪೇನ್, ಪಾಕಿಸ್ತಾನ್, ಇಂಡಿಯ ಅಂಡ್ ಜರ್ಮನಿ ಫಾರ್ ದ ಸಪೋರ್ಟ್ ಅಂಡ್ ಸಾಲಿಡಾರಿಟಿ; ಎಸ್ಪೆಷಲಿ



ಡ್ಯೂರಿಂಗ್ ದಿ 83ರದ ವೇವ್ ಆಫ್ ಮಿಸೈಲ್ ರೆಸ್ಪಾನ್ಸ್ ಟು ಯುಎಸ್ ಅಂಡ್ ಇಸ್ರೇಲ್' ಎಂಬ ಸಂದೇಶ ಬರೆಯಲಾಗಿದೆ. ಕ್ಷಿಪಣಿ ಮೇಲಿನ ಬರಹಗಳ ಫೋಟೋ ತೆಗೆದು 'ಎಕ್ಸ್' ಖಾತೆಯಲ್ಲಿ ಹಂಚಿಕೊಳ್ಳಲಾಗಿದೆ.

ಈ ಸಂದೇಶವನ್ನು ಮುಂಬೈನಲ್ಲಿರುವ ಇರಾನ್ ಕಾನ್ಸುಲೇಟ್ ಜನರಲ್ ಕಚೇರಿಯೂ ಜಾಲತಾಣದಲ್ಲಿ ಹಂಚಿಕೊಂಡಿದೆ. ಇರಾನ್ ವಾಯುಪಡೆ ಹೀಗೇಕೆ ಸಂದೇಶ ಬರೆದಿದೆ ಎಂಬುದಕ್ಕೆ ಸ್ಪಷ್ಟ ವಿವರಣೆ ಲಭ್ಯವಾಗಿಲ್ಲ.

ಕರ್ನಾಟಕ ಗಗನಯಾನ ಸೌಲಭ್ಯ ವೈವಿಧ್ಯ

ಕರ್ನಾಟಕ ರಾಜ್ಯದಲ್ಲಿ ಒಟ್ಟು 17 ವಿಮಾನ ನಿಲ್ದಾಣಗಳು ಕಾರ್ಯ ಚಟುವಟಿಕೆಯಲ್ಲಿವೆ. ಅವುಗಳಲ್ಲಿ 9 ಸಾರ್ವಜನಿಕ ಬಳಕೆಗೂ, 2 ಖಾಸಗಿ ಬಳಕೆಗೆ ಲಭ್ಯವಿದ್ದರೆ, 6 ವಿಮಾನ ನಿಲ್ದಾಣ-ರನ್ ವೇಗಳು ರಕ್ಷಣಾ ವಲಯಕ್ಕೆ ಸೀಮಿತವಾಗಿವೆ. ಉಳಿದಂತೆ ಕೇಂದ್ರ ಸರಕಾರದಿಂದ ನಿರ್ಮಾಣವಾಗುತ್ತಿರುವ 3 ನೂತನ ವಿಮಾನ ನಿಲ್ದಾಣಗಳು ಸದ್ಯದಲ್ಲಿಯೇ ಕಾರ್ಯಾರಂಭ ಮಾಡಲಿವೆ. 1 ವಿಮಾನ ನಿಲ್ದಾಣ ಆರಂಭದ ನಿರ್ಮಾಣ ಹಂತದಲ್ಲಿದ್ದರೆ, ಇನ್ನೊಂದು ಯೋಜನೆಯ ಹಂತದಲ್ಲಿದೆ. ಮತ್ತೊಂದಕ್ಕೆ ಜಾಗದ ಶೋಧ ಮತ್ತು ಸಮೀಕ್ಷೆ ನಡೆಯುತ್ತಿದೆ. ಈ 6 ವಿಮಾನ ನಿಲ್ದಾಣಗಳು ಚಟುವಟಿಕೆ ಆರಂಭಿಸಿದ ಬಳಿಕ ರಾಜ್ಯದಲ್ಲಿ ಒಟ್ಟು 15 ವಿಮಾನ ನಿಲ್ದಾಣಗಳು ಸಾರ್ವಜನಿಕ ಬಳಕೆಗೆ ಲಭ್ಯವಿರುವಂತಾಗಲಿದೆ.

ರನ್ ವೇ ತುದಿಯಲ್ಲಿ ಮೇಲಕ್ಕೆ ಜಿಗಿದು ಆಕಾಶದತ್ತ ಹಾರುತ್ತಿರುವ ವಿಮಾನ

ಸರಕಾರಿ ಮತ್ತು ಖಾಸಗಿ ವಿಮಾನ ನಿಲ್ದಾಣಗಳು

ಹೆಸರು	ಶ್ರೇಣಿ	ಒಡೆತನ	ಸ್ಥಳ	ಕೋಡ್
ಕೆಂಪೇಗೌಡ ವಿ.ನಿಲ್ದಾಣ	ಅಂತಾರಾಷ್ಟ್ರೀಯ	ಸರಕಾರಿ	ದೇವನಹಳ್ಳಿ	ಬಿಎಲ್ ಆರ್
ಮಂಗಳೂರು ವಿ.ನಿಲ್ದಾಣ	ಅಂತಾರಾಷ್ಟ್ರೀಯ	ಸರಕಾರಿ	ಬಜಪೆ	ಐಎಕ್ಸ್‌ಇ
ಬೆಳಗಾವಿ	ವಿ.ನಿಲ್ದಾಣ	ದೇಶೀ	ಸರಕಾರಿ	ಸಾಂಬ್ರಾ
ಹುಬ್ಬಳ್ಳಿ ವಿ.ನಿಲ್ದಾಣ	ದೇಶೀ	ಸರಕಾರಿ ಹುಬ್ಬಳ್ಳಿ	ಎಚ್‌ಬಿಎಕ್ಸ್	ಐಎಕ್ಸ್‌ಜಿ
ಮೈಸೂರು ವಿ.ನಿಲ್ದಾಣ	ದೇಶೀ	ಸರಕಾರಿ	ಮಂಡಕಳ್ಳಿ	ಎಂಐಕ್ಯು
ಕಲಬುರಗಿ ವಿ.ನಿಲ್ದಾಣ	ದೇಶೀ	ಸರಕಾರಿ	ಕಲಬುರಗಿ	ಜಿಬಿಐ
ಶಿವಮೊಗ್ಗ ವಿ.ನಿಲ್ದಾಣ	ದೇಶೀ	ಸರಕಾರಿ	ಶಿವಮೊಗ್ಗ	ಆರ್‌ಕ್ಯುವೈ
ಜಿಂದಾಲ್ ವಿಜಯನಗರ ವಿ.ನಿಲ್ದಾಣ	ದೇಶೀ	ಖಾಸಗಿ	ತೋರಣಗಲ್ಲು	ವಿಡಿವೈ
ಬೀದರ್ ವಿ.ನಿಲ್ದಾಣ	ದೇಶೀ	ಸಿವಿಲ್ ಎನ್‌ಕ್ಲೇವ್	ಬೀದರ್	ಐಎಕ್ಸ್‌ಎಕ್ಸ್
ಹರಿಹರ ವಿ.ನಿಲ್ದಾಣ	ದೇಶೀ	ಖಾಸಗಿ	ಹರಿಹರ	-
ಬಾಲ್ದೋಟಾ ವಿ.ನಿಲ್ದಾಣ	ದೇಶೀ	ಖಾಸಗಿ	ಕೊಪ್ಪಳ	-

ರಕ್ಷಣಾ ಇಲಾಖೆಗೆ ಸೇರಿದವು

ಎಚ್‌ಎಎಲ್ ವಿ.ನಿಲ್ದಾಣ	ತರಬೇತಿ	ರಕ್ಷಣಾ ಇಲಾಖೆ	ಬೆಂಗಳೂರು	-
ಯಲಹಂಕ ವಿ.ನಿಲ್ದಾಣ	ತರಬೇತಿ	ರಕ್ಷಣಾ ಇಲಾಖೆ	ಯಲಹಂಕ	-
ಜಕ್ಕೂರು ವಿ.ನಿಲ್ದಾಣ	ತರಬೇತಿ	ಸರಕಾರಿ	ಬೆಂಗಳೂರು	-
ಬೀದರ್ ವಿ.ನಿಲ್ದಾಣ	ತರಬೇತಿ	ವಾಯುಪಡೆ	ಬೀದರ್	-
ಸಾಂಬ್ರಾ ವಿ.ನಿಲ್ದಾಣ	ತರಬೇತಿ	ರಕ್ಷಣಾ ಇಲಾಖೆ	ಸಾಂಬ್ರಾ	-
ಚಿತ್ರದುರ್ಗ ವಿ.ನಿಲ್ದಾಣ	ಪ್ರಯೋಗಾರ್ಥ	ರಕ್ಷಣಾ ಇಲಾಖೆ	ಚಿತ್ರದುರ್ಗ	-

ಸಿದ್ಧತೆಯಲ್ಲಿರುವ ವಿ.ನಿಲ್ದಾಣಗಳು

ಹಾಸನ ವಿ.ನಿಲ್ದಾಣ	ಅಂತಾರಾಷ್ಟ್ರೀಯ	ಸರಕಾರಿ	ಹಾಸನ	-
ಕಾರವಾರ ವಿ.ನಿಲ್ದಾಣ	ದೇಶೀ	ಸರಕಾರಿ	ಕಾರವಾರ	-
ರಾಯಚೂರು	ದೇಶೀ	ಸರಕಾರಿ	ರಾಯಚೂರು	-
ಬಿಜಾಪುರ ವಿ.ನಿಲ್ದಾಣ	ದೇಶೀ	ಸರಕಾರಿ	ವಿಜಯಪುರ	ನಿರ್ಮಾಣ ಹಂತ
ಚಿಕ್ಕಮಗಳೂರು ವಿ.ನಿಲ್ದಾಣ	ದೇಶೀ	ಸರಕಾರಿ	ಚಿಕ್ಕಮಗಳೂರು	ಯೋಜನೆ ಹಂತ
ಬೆಂ.2ನೇ ವಿ.ನಿಲ್ದಾಣ	ಅಂತಾರಾಷ್ಟ್ರೀಯ	ಸರಕಾರಿ	ಸ್ಥಳ ನಿಗದಿ	ಸಮೀಕ್ಷಾ ಹಂತ

ಮುರ್ಷಿದಾಬಾದ್‌ನಲ್ಲಿ ಸೆ.144 ಜಾರಿ, 12 ಮಂದಿ ಸೆರೆ | ಪೊಲೀಸ್ ಪಥ ಸಂಚಲನ

ಪ.ಬಂಗಾಳ: ರಾಮನವಮಿ ಮೆರವಣಿಗೆಗೆ ಕಲ್ಲು-ಗಾಯ

ಕೋಲ್ಕತ್ತ: ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಜಂಗೀಪುರದಲ್ಲಿ ಶುಕ್ರವಾರ ಸಂಜೆ ಶ್ರೀ ರಾಮನವಮಿ ಮೆರವಣಿಗೆ ಸಾಗಿದ್ದಾಗ ಅನ್ಯಧರ್ಮದವರು ಮೆರವಣಿಗೆ ಮೇಲೆ ಮರೆಯಿಂದ ಕಲ್ಲೆಸೆದಿದ್ದು, ಮೆರವಣಿಗೆಯಲ್ಲಿ ಸಾಗಿದ್ದ ರಾಮ ಭಕ್ತರಲ್ಲಿ 15 ಮಂದಿ ಗಾಯಗೊಂಡಿದ್ದಾರೆ. ಕಲ್ಲೇಟಿನಿಂದ ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಕಲ್ಲೆಸೆತ ಮತ್ತು ಹಿಂಸೆ ಕಾರಣವಾದ ಹಿನ್ನೆಲೆ 12 ಜನರನ್ನು ಬಂಧಿಸಲಾಗಿದೆ.

ಮುರ್ಷಿದಾಬಾದ್‌ನ ರಘುನಾಥಗಂಜ್‌ನಲ್ಲಿ ಮೆರವಣಿಗೆ ಸಾಗಿದ್ದಾಗ ಮುಸ್ಲಿಮ್ ಯುವಕರ ಗುಂಪು ಮೆರವಣಿಗೆಗೆ ವಿರೋಧ ವ್ಯಕ್ತಪಡಿಸಿದೆ. ಪರಿಣಾಮ ಎರಡೂ ಧರ್ಮದವರ ಮಧ್ಯೆ ವಾಗ್ವಾದ ಶುರುವಾಗಿ ಸಂಘರ್ಷಕ್ಕೆ ಕಾರಣವಾಗಿದೆ. ಬಳಿಕ ಹಿಂಸಾಚಾರಕ್ಕಿಳಿದ ಯುವಕರ ಗುಂಪು ಕಲ್ಲೆಸೆಯಲಾರಂಭಿಸಿದೆ.

ಘರ್ಷಣೆ ವೇಳೆ ಅಂಗಡಿಗಳ ಮೇಲೆಯೂ ದಾಳಿ ಮಾಡಿದ್ದು, ಕೈಗೆ ಸಿಕ್ಕ ವಸ್ತುಗಳನ್ನು ಲೂಟಿ ಮಾಡಿ ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ. ಈ ವೇಳೆ ಹಲವು ವ್ಯಕ್ತಿಗಳು ಗಾಯಗೊಂಡಿದ್ದಾರೆ. ಪ್ರದೇಶದಲ್ಲಿನ ಸಾರ್ವಜನಿಕ-ಖಾಸಗಿ ಆಸ್ತಿಗಳಿಗೆ ಹಾನಿಯಾಗಿದೆ.

ಪರಿಸ್ಥಿತಿ ವಿಕೋಪಕ್ಕೆ ತಿರುಗಿದ್ದರಿಂದ ಸೆಕ್ಷನ್ 144 ಜಾರಿ ಮಾಡಲಾಗಿದೆ. ಲಾಠಿ ಪ್ರಹಾರ ನಡೆಸಿ ಗುಂಪನ್ನು ಚದುರಿಸಲಾಗಿದೆ. ಪ್ರದೇಶದಲ್ಲಿ ಸದ್ಯ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ. ಹಿಂಸಾಗ್ರಸ್ತ ಪ್ರದೇಶದಲ್ಲಿ ಅರೆ ಸೇನಾಪಡೆ, ಮೀಸಲು ಪೊಲೀಸ್ ಸೇರಿದಂತೆ ದೊಡ್ಡ ಸಂಖ್ಯೆಯಲ್ಲಿ ಭದ್ರತಾ ಪಡೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಉದ್ವಿಗ್ನತೆಯಿದ್ದ ಪ್ರದೇಶದಲ್ಲಿ ಪೊಲೀಸರು ಪಥ ಸಂಚಲನ ನಡೆಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಶನಿವಾರ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ. ಹಿಂಸಾಚಾರಕ್ಕೆ ಕಾರಣವಾದ 12 ಜನರನ್ನು ಬಂಧಿಸಲಾಗಿದ್ದು, ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ತ.ನಾ ವಿಧಾನಸಭೆ ಚುನಾವಣೆ: ಬಿ.ಎಲ್.ಸಂತೋಷ್ ಸಭೆಗೂ ಅಣ್ಣಾಮಲೈ ಗೈರು

ಕ್ಷೇತ್ರ ನಿಗದಿಗೆ ಅಣ್ಣಾಮಲೈ ಅತೃಪ್ತಿ-ಸ್ಪರ್ಧೆಗೆ ಹಿಂದೇಟು

ಚೆನ್ನೈ: ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ರಾಜ್ಯ ಘಟಕದ ಪ್ರಮುಖ ನಾಯಕ ಕೆ.ಅಣ್ಣಾಮಲೈ ಸ್ಪರ್ಧಿಸುವ ಸಾಧ್ಯತೆಯಿಲ್ಲ ಎಂದು ಪಕ್ಷದ ಮೂಲಗಳಿಂದ

ತಿಳಿದುಬಂದಿದೆ.

ಎನ್‌ಡಿಎ ಮೈತ್ರಿ ಕೂಟದ ಅತಿದೊಡ್ಡ ಪಕ್ಷವಾದ ಬಿಜೆಪಿಗೇ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಪಳನಿಸ್ವಾಮಿ ಕೇವಲ 27 ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದ್ದಾರೆ. ಬಿಜೆಪಿಗೆ ಹಂಚಿಕೆಯಾದ ಕ್ಷೇತ್ರಗಳಲ್ಲಿ ತಂಜಾವೂರು ಮತ್ತು ಗಂಧರ್ವಕೊಟ್ಟೈ ಕ್ಷೇತ್ರಗಳು ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಮೀಸಲಾಗಿವೆ. 2021ರ ಚುನಾವಣೆಯಲ್ಲಿ ಡಿಎಂಕೆ ಮತ್ತು ಅದರ ಮಿತ್ರ ಪಕ್ಷವಾಗಿದ್ದ ಸಿಪಿಎಂ ತಂಜಾವೂರು ಮತ್ತು ಗಂಧರ್ವಕೊಟ್ಟೈ ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದವು. ಗಂಧರ್ವಕೊಟ್ಟೈನಲ್ಲಿ ಕ್ಷೇತ್ರದ ಜನರಿಗೆ ಪರಿಚಿತವಾದ, ಗೆಲ್ಲಬಹುದಾದ ಅಭ್ಯರ್ಥಿ ಬಿಜೆಪಿಯಲ್ಲಿಲ್ಲ ಎನ್ನಲಾಗಿದೆ. ಕೊಯಮತ್ತೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆರು ವಿಧಾನಸಭಾ ಕ್ಷೇತ್ರಗಳಿದ್ದು, ಅದರಲ್ಲಿ ಕೊಯಮತ್ತೂರು ಉತ್ತರ ಕ್ಷೇತ್ರವೂ ಇದೆ. ಅದು ಬಿಜೆಪಿಗೆ ಹಂಚಿಕೆಯಾಗಿದೆ. ಕೊಯಮತ್ತೂರು ಜಿಲ್ಲೆಯಲ್ಲಿ ಬಿಜೆಪಿಗೆ 1 ಸ್ಥಾನವನ್ನಷ್ಟೇ ನೀಡಲಾಗಿದೆ. ಅಣ್ಣಾಮಲೈ ಸಿಂಗನಲ್ಲೂರು ಅಥವಾ ಕಾವುಂಡಂಪಾಳಯಂ ಕ್ಷೇತ್ರದಿಂದ ಸ್ಪರ್ಧಿಸಲು ಆಸಕ್ತಿ ತೋರಿದ್ದಾರೆ ಎನ್ನಲಾಗಿದೆ. ಆದರೆ ಇವೆರಡೂ ಕ್ಷೇತ್ರಗಳು ಬಿಜೆಪಿ ಪಕ್ಷಕ್ಕೆ ನೀಡಲಾಗಿಲ್ಲ. ಹಾಗಾಗಿ ಅಣ್ಣಾಮಲೈ ಸ್ಪರ್ಧೆ ಕಷ್ಟ ಎನ್ನುವಂತಹ ಸ್ಥಿತಿಯಿದೆ.ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ(ಸಂಘಟನೆ) ಬಿ.ಎಲ್.ಸಂತೋಷ್ ಅಧ್ಯಕ್ಷತೆಯಲ್ಲಿ ಗುರುವಾರ ಚೆನ್ನೈನಲ್ಲಿನ ಪಕ್ಷದ ಕಚೇರಿಯಲ್ಲಿ ಸಭೆ ನಡೆದಿದ್ದು, ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಮತ್ತು ಚುನಾವಣೆ ಸಿದ್ಧತೆಗೆ ಸಂಬಂಧಿಸಿ ಚರ್ಚಿಸಲು ಸಭೆ ಕರೆಯಲಾಗಿತ್ತು. ಆದರೆ ಅಣ್ಣಾಮಲೈ ಸಭೆಗೆ ಬಂದಿರಲಿಲ್ಲ. ಒಂದೆರಡು ದಿನದಲ್ಲಿ 27 ಕ್ಷೇತ್ರಗಳಿಗೂ ಅಭ್ಯರ್ಥಿ ಪಟ್ಟಿ ಪ್ರಕಟಿಸಲಾಗುವುದು. ಅಣ್ಣಾಮಲೈ ಚುನಾವಣೆಯಲ್ಲಿ ಸ್ಪರ್ಧಿಸಿ ವಿಧಾನಸಭೆ ಪ್ರವೇಶಿಸುತ್ತಾರೆ ಎಂದು ವನತಿ ಹೇಳಿದ್ದಾರೆ.

ಅಣ್ಣಾಮಲೈ 2021ರ ವಿಧಾನಸಭೆ ಚುನಾವಣೆಯಲ್ಲಿ ಅರವಕುರಿಚಿ ಕ್ಷೇತ್ರದಿಂದ, 2024ರ ಲೋಕಸಭಾ ಚುನಾವಣೆಯಲ್ಲಿ ಕೊಯಮತ್ತೂರು ಕ್ಷೇತ್ರದಲ್ಲಿ ಸ್ಪರ್ಧಿಸಿ ಪರಾಜಿತರಾಗಿದ್ದಾರೆ.

ಅದಲು ಬದಲು ಸಾಧ್ಯತೆ

ತಂಜಾವೂರು ಕ್ಷೇತ್ರವನ್ನು ಎಐಎಡಿಎಂಕೆ ಮರಳಿ ತನ್ನ ವಶಕ್ಕೆ ತೆಗೆದುಕೊಳ್ಳುವ ಬಗ್ಗೆ ಆಸಕ್ತಿ ವ್ಯಕ್ತಪಡಿಸಿದೆ ಎನ್ನಲಾಗಿದೆ. ಕೆಲ ಕ್ಷೇತ್ರಗಳನ್ನು ಎಐಎಡಿಎಂಕೆ ಮತ್ತು ಬಿಜೆಪಿ ಅದಲು ಬದಲು ಮಾಡಿಕೊಳ್ಳುವ ಅಗತ್ಯವಿದೆ ಎಂಬ ಚರ್ಚೆ ನಡೆದಿದೆ ಎನ್ನಲಾಗಿದೆ.

ESTD 1943

Maha Rashtra Apex Corporation Limited

Registered Office : 3rd Floor, Front Wing, North Block, Manipal Centre, # 47 Dickenson Road, Bengaluru - 560 001, Karnataka, India. Tel : +91 820 2571 021 / 024 / 4031 3131, Fax : +91 820 257 1112, E-mail : mracl.ho@manipal.com, Website : https://www.maharashtraapex.com
Contact Person : Jamsheed Minoo Panday, Company Secretary and Compliance Officer,
Corporate Identification Number : L85110KA1943PLC001177

Manipal Est. 1925

NOTICE

This advertisement is for information purposes only and neither constitutes an offer or an invitation or a recommendation to purchase, to hold or sell securities nor for publication, distribution or release directly or indirectly outside India. This is not an announcement for the offer document. All capitalized terms used herein and not defined herein shall have the meaning assigned to them in the Letter of Offer dated March 11, 2026 (the "Letter of Offer" or "LOF") filed with BSE Limited ("BSE"), and also filed with the Securities and Exchange Board of India ("SEBI") for information and dissemination on the SEBI's website pursuant to the proviso to Regulation 3 of the SEBI (Issue of Capital and Disclosure Requirements) Regulations, 2018 ("SEBI ICDR Regulations")

MAHA RASHTRA APEX CORPORATION LIMITED

Maha Rashtra Apex Corporation Limited (our "**Company**" or the "**Issuer**") was originally incorporated as "Maharashtra Apex Bank Limited" on April 26, 1943 as a public company under the Companies Act, 1913 with the Additional Assistant Registrar of Joint Stock Companies. A certificate of commencement of business dated May 5, 1943 was issued by Additional Assistant Registrar of Joint Stock Companies. Subsequently, the name of our Company was changed to "Maharashtra Apex Corporation Limited", and a fresh certificate of incorporation dated September 2, 1995 was issued by the Registrar of Companies. Further, the name of our Company was again changed to "Maha Rashtra Apex Corporation Limited" and a fresh certificate of incorporation dated March 22, 1996 was issued by the Registrar of Companies, Karnataka at Bangalore. For details in relation to the changes in name and registered office of our Company, see "General Information" beginning on page 33.

Registered Office : 3rd Floor, Front Wing, North Block, Manipal Centre, # 47 Dickenson Road, Bengaluru - 560 001, Karnataka, India,
Tel. : +91 820 2571 021 / 024 / 4031 3131, Fax : +91 820 257 1112,
E-mail : mracl.ho@manipal.com, Website : https://www.maharashtraapex.com,
Contact Person : Jamsheed Minoo Panday, Company Secretary and Compliance Officer,
Corporate Identification Number : L85110KA1943PLC001177

OUR PROMOTERS : JAYA S. PAI, TONSE SUDHAKAR PAI, SHEELA PAI, VARADA S. PRABHU AND T. SATISH U. PAI, FOR PRIVATE CIRCULATION TO THE ELIGIBLE EQUITY SHAREHOLDERS OF MAHA RASHTRA APEX CORPORATION LIMITED ONLY. WE HEREBY CONFIRM THAT NONE OF OUR PROMOTERS OR DIRECTORS IS A WILFUL DEFAULTER AS ON DATE OF THIS LETTER OF OFFER.

ISSUE OF UPTO 1,40,91,896* EQUITY SHARES OF FACE VALUE RS. 10 EACH ("RIGHTS EQUITY SHARES") OF OUR COMPANY FOR CASH AT A PRICE OF RS. 10 (TEN) PER EQUITY SHARE (THE "ISSUE PRICE"), AGGREGATING UPTO RS. 1,409.19 LAKHS ON A RIGHTS BASIS TO THE EXISTING EQUITY SHAREHOLDERS OF OUR COMPANY IN THE RATIO OF (1) (ONE) RIGHTS EQUITY SHARE FOR EVERY (1) (ONE) FULLY PAID-UP EQUITY SHARE HELD BY THE EXISTING EQUITY SHAREHOLDERS ON THE RECORD DATE, THAT IS ON FRIDAY, MARCH 20, 2026 (THE "ISSUE"). THE ISSUE PRICE OF THE EQUITY SHARES IS (1) (ONE) TIME OF THE VALUE OF THE EQUITY SHARES. FOR FURTHER DETAILS, PLEASE REFER TO THE CHAPTER TITLED "TERMS OF THE ISSUE" ON PAGE 56 OF THIS LETTER OF OFFER.

**Assuming full subscription. Subject to finalization of the Basis of Allotment.*

Notice To Eligible Equity Shareholders Of Our Company Issue Programme

Issue Opens on	Last Date for on Market Renunciation*	Issue Closes On#
Thursday, April 02, 2026	Friday, April 24, 2026	Thursday, April 30, 2026

**Eligible Equity Shareholders are requested to ensure that renunciation through off-market transfer is completed in such a manner that the Rights Entitlements are credited to the demat account of the Renouncee(s) on or prior to the Issue Closing Date.*

#The Rights Issue committee will have the right to extend the Issue Period as it may determine from time to time but not exceeding 30 (thirty) days from the Issue Opening Date (inclusive of the Issue Opening Date). Further, no withdrawal of Application shall be permitted by any Applicant after the Issue Closing Date.

ASBA*	**Simple, Safe, Smart way of application – Make use of it!!!**	*Application Supported by Blocked Amount (ASBA) is a better way of applying to issues by simply blocking the fund in the bank account. For further details, check section on ASBA below.

Facilities for application in this Issue

ASBA Facility :

In accordance with Regulation 76 of the SEBI ICDR Regulations, the SEBI Master Circular and the ASBA Circulars, all Investors desiring to make an Application in this Issue are mandatorily required to use the ASBA process. Investors should carefully read the provisions applicable to such Applications before making their Application through ASBA. For details refer to "Terms of the Issue - Making of an application through the ASBA process" on page 59 of the Letter of Offer.

Please note that subject to SCSBs complying with the requirements of the SEBI circular bearing reference number CIR/CFD/DIL/13/2012 dated September 25, 2012, within the periods stipulated therein, Applications may be submitted at the Designated Branches of the SCSBs. Further, in terms of the SEBI circular bearing reference number CIR/CFD/DIL/1/2013 dated January 2, 2013, it is clarified that for making Applications by SCSBs on their own account using ASBA facility, each such SCSB should have a separate account in its own name with any other SEBI registered SCSB(s). Such account shall be used solely for the purpose of making an Application in this Issue and clear demarcated funds should be available in such account for such an Application.

Credit of Rights Entitlements in Demat Accounts of Eligible Equity Shareholders

Pursuant to provisions of the SEBI ICDR Regulations and the SEBI Rights Issue Circulars and in terms of the Letter of Offer, the Rights Entitlements of the Eligible Equity Shareholders will be credited in their respective demat account and shall be admitted for trading on the Stock Exchange under the ISIN No. INE843B20013 subject to requisite approvals. For details of credit of the Rights Entitlements, see "Terms of the Issue - Credit of Rights Entitlements in demat accounts of Eligible Equity Shareholders" on page 69 of the Letter of Offer.

Please note that in accordance with Regulation 77A of the SEBI ICDR Regulations read with the SEBI Rights Issue Circulars, the credit of Rights Entitlements and Allotment of Rights Equity Shares shall be made in dematerialised form only. Accordingly, Eligible Equity Shareholders holding Equity Shares in physical form as on Record Date and desirous of subscribing to Equity Shares in this Issue are advised to furnish the details of their demat account to the Registrar or our Company, no later than two clear Working Days prior to the Issue Closing Date, to enable the credit of their Rights Entitlements in their respective demat accounts at least one day before the Issue Closing Date. The Shareholder who failed to provide their demat details in the stipulated time then their rights entitlement shall lapse and shall not be eligible to apply in this issue.

Eligible Equity Shareholders, can also obtain the details of their respective Rights Entitlements from the website of the Registrar (i.e., https://purvashare.com/investor-service/rights-issue) by entering their DP ID and Client ID or folio number (for Eligible Equity Shareholders, who hold Equity Shares in physical form as on Record Date) and PAN. The link for the same shall also be available on the website of our Company (i.e., https://www.maharashtraapex.com/.

In this regard, our Company has made necessary arrangements with NSDL and CDSL for crediting of the Rights Entitlements to the demat accounts of the Eligible Equity Shareholders, in a dematerialized form. A separate ISIN for the Rights Entitlements has also been generated which is ISIN No. INE843B20013The said ISIN shall remain frozen (for debit) until the Issue Opening Date. The said ISIN shall be suspended for transfer by the Depositories post the Issue Closing Date.

Prior to the Issue Opening Date, the Rights Entitlements of those Eligible Equity Shareholders, among others, who hold Equity Shares in physical form, and whose demat account details are not available with our Company or the Registrar, shall be credited in a demat suspense account opened by our Company.

Procedure for Application : In accordance with Regulation 76 of the SEBI ICDR Regulations, the SEBI ICDR Master Circular and the ASBA Circulars, all Investors desiring to make an Application in this Issue are mandatorily required to use the ASBA process. Investors should carefully read the provisions applicable to such Applications before making their Application through ASBA. For details of procedure for application by the resident eligible shareholders holding equity shares in physical form as on record date, please see "Procedure for application by eligible equity shareholders holding equity shares in physical form" on page 63 of the Letter of Offer.

Procedure for Application through the ASBA Process : Investors desiring to make an Application in this Issue through ASBA process, may submit the Application Form to the Designated Branch of the SCSB or online/electronic Application through the website of the SCSBs (if made available by such SCSB) for authorising such SCSB to block Application Money payable on the Application in their respective ASBA Accounts. Investors should ensure that they have correctly submitted the Application Form, and have provided an authorisation to the SCSB, via the electronic mode, for blocking funds in the ASBA Account equivalent to the Application Money mentioned in the Application Form, as the case may be, at the time of submission of the Application. For the list of banks which have been notified by SEBI to act as SCSBs for the ASBA process, please refer towww.sebi.gov.in/sebiweb/other/OtherAction.do?doRecognisedFpi=yes&intmId=34. For details on Designated Branches of SCSBs collecting the Application Form, please refer the above-mentioned link.

Application by Eligible Equity Shareholders Holding Equity Shares in Physical Form : Please note that in accordance with Regulation 77A of the SEBI ICDR Regulations read with the SEBI Rights Issue Circulars, the credit of Rights Entitlements and Allotment of Equity Shares shall be made in dematerialised form only. Accordingly, Eligible Equity Shareholders holding Equity Shares in physical form as on Record Date and desirous of subscribing to Equity Shares in this Issue are advised to furnish the details of their demat account to the Registrar or our Company at least two Working Days prior to the Issue Closing Date, to enable the credit of their Rights Entitlements in their respective demat accounts at least one day before the Issue Closing Date

PLEASE NOTE THAT THE ELIGIBLE EQUITY SHAREHOLDERS WHO HOLD EQUITY SHARES IN PHYSICAL FORM AS ON RECORD DATE AND WHO HAVE NOT FURNISHED THE DETAILS OF THEIR RESPECTIVE DEMAT ACCOUNTS TO THE REGISTRAR OF OUR COMPANY ATLEAST TWO WORKING DAYS PRIOR TO THE ISSUE CLOSING DATE, SHALL NOT BE ELIGIBLE TO MAKE AN APPLICATION FOR RIGHTS EQUITY SHARES AGAINST THEIR RIGHTS ENTITLEMENTS WITH RESPECT TO THE EQUITY SHARES HELD IN PHYSICAL FORM.

Allotment of Rights Equity Shares in Dematerialised Form : Please note that the Rights Equity Shares applied for in this issue can be allotted only in dematerialised form and to the same depository account in which our equity shares are held by such Investor on the Record Date.

Credit of Rights Entitlements in demat accounts of Eligible Equity Shareholders : In accordance with Regulation 77A of the SEBI ICDR Regulations read with the SEBI Master Circular, the credit of Rights Entitlements and Allotment of Rights Equity Shares shall be made in dematerialized form only. Prior to the Issue Opening Date, our Company shall credit the Rights Entitlements to **(i)** the demat accounts of the Eligible Equity Shareholders holding the Equity Shares in dematerialised form; and **(ii)** a demat escrow account opened by our Company, for the Eligible Equity Shareholders which would comprise Rights Entitlements relating to **(a)** Equity Shares held in a demat escrow account pursuant to Regulation 39 of the SEBI Listing Regulations; or **(b)** Equity Shares held in the account of IEPF authority; or **(c)** the demat accounts of the Eligible Equity Shareholder which are frozen or suspended for debit or credit or details of which are unavailable with our Company or with the Registrar on the Record Date; or **(d)** credit of the Rights Entitlements returned / reversed / failed; or **(e)** the ownership of the Equity Shares currently under dispute, including any court proceedings.

Applications on Plain Paper under ASBA Process : An Eligible Equity Shareholder, in India who is eligible to apply under the ASBA process may make an Application to subscribe to this Issue on plain paper in terms of Regulation 78 of SEBI ICDR Regulations in case of non-receipt of Application Form as detailed above. In such cases of nonreceipt of the Application Form through physical delivery (where applicable) and the Eligible Equity Shareholder, not being in a position to obtain it from any other source may make an Application to subscribe to this Issue on plain paper with the same details as per the Application Form that is available on the website of the Registrar, or the Stock Exchanges. An Eligible Equity Shareholder, shall submit the plain paper Application to the Designated Branch of the SCSB for authorising such SCSB to block Application Money in the said bank account maintained with the same SCSB. Applications on plain paper will not be accepted from any Eligible Equity Shareholder, who has not provided an Indian address.

Alternatively, Eligible Equity Shareholders may also use the Application Form available online on the websites of our Company, the Registrar to the Issue or the Stock Exchanges to provide requisite details.

Please note that in terms of Regulation 78 of SEBI ICDR Regulations, the Eligible Equity Shareholders, who are making the Application on plain paper shall not be entitled to renounce their Rights Entitlements and should not utilize the Application Form for any purpose including renunciation even if it is received subsequently.

The Application on plain paper, duly signed by the Eligible Equity Shareholder, including joint holders, in the same order and as per specimen recorded with his/her/their bank, must reach the office of the Designated Branch of the SCSB before the Issue Closing Date and should contain the following particulars:

1. Name of our Company, being Maha Rashtra Apex Corporation Limited; **2.** Name and address of the Eligible Equity Shareholder, including joint holders (in the same order and as per specimen recorded with our Company or the Depository); **3.** Folio number (in case of Eligible Equity Shareholders, who hold Equity Shares in physical form as on Record Date)/DP and Client ID; **4.** Except for Applications on behalf of the Central or State Government, the residents of Sikkim and the officials appointed by the courts, PAN of the Eligible Equity Shareholder and for each Eligible Equity Shareholder, in case of joint names, irrespective of the total value of the Equity Shares applied for pursuant to this Issue; **5.** Number of Equity Shares held as on Record Date; **6.** Allotment option – only dematerialised form; **7.** Number of Rights Equity Shares entitled to; **8.** Number of Rights Equity Shares applied for within the Rights Entitlements; **9.** Number of Additional Rights Equity Shares applied for, if any (applicable only if entire Rights Entitlements have been applied for); **10.** Total number of Rights Equity Shares applied for; **11.** Total Application amount paid at the rate of Rs. 10 per Rights Equity Share; **12.** Details of the ASBA Account such as the SCSB account number, name, address and branch of the relevant SCSB; **13.** In case of non-resident Eligible Equity Shareholders, making an application with an Indian address, details of the NRE / FCNR / NRO account such as the account number, name, address and branch of the SCSB with which the account is maintained; **14.** Authorisation to the Designated Branch of the SCSB to block an amount equivalent to the Application Money in the ASBA Account; **15.** Signature of the Eligible Equity Shareholder, (in case of joint holders, to appear in the same sequence and order as they appear in the records of the SCSB); and **16.** All such Eligible Equity Shareholders, shall be deemed to have made the representations, warranties and agreements set forth in *"Restrictions on Purchases and Resales - Representations, Warranties and Agreements by Purchasers"* on page 83 of the Letter of Offer, and shall include the following:

"I/We understand that neither the Rights Entitlements nor the Rights Equity Shares have been, or will be, registered under the U.S. Securities Act of 1933, as amended (the "U.S. Securities Act"), or any United States state securities laws, and may not be offered, sold, resold or otherwise transferred within the United States or to the territories or possessions thereof (the "United States"), except pursuant to an exemption from, or in a transaction not subject to, the registration requirements of the U.S. Securities Act.

I/We understand the Rights Equity Shares referred to in this application are being offered and sold in "offshore transactions" in compliance with Regulation S under the U.S. Securities Act ("Regulation S") to Eligible Equity Shareholders located in jurisdictions where such offer and sale of the Rights Equity Shares is permitted under laws of such jurisdictions.

I/We understand that the Issue is not, and under no circumstances is to be construed as, an offering of any Rights Equity Shares or Rights Entitlements for sale in the United States, or as a solicitation therein of an offer to buy any of the said Rights Equity Shares or Rights Entitlements in the United States.

I/We confirm that I am/ we are (a) not in the United States and eligible to subscribe for the Rights Equity Shares under applicable securities laws, (b) complying with laws of jurisdictions applicable to such person in connection with the Issue, and (c) understand that neither the Company, nor the Registrar, or any other person acting on behalf of the Company will accept subscriptions from any person, or the agent of any person, who appears to be, or who the Company, the Registrar, or any other person acting on behalf of the Company have reason to believe is in the United States or is outside of India and ineligible to participate in this Issue under the securities laws of their jurisdiction.

I/We will not offer, sell or otherwise transfer any of the Rights Equity Shares which may be acquired by us in any jurisdiction or under any circumstances in which such offer or sale is not authorized or to any person to whom it is unlawful to make such offer, sale or invitation. I/ We satisfy, and each account for which I/ we are acting satisfies, (a) all suitability standards for investors in investments of the type subscribed for herein imposed by the jurisdiction of my/our residence, and (b) is eligible to subscribe and is subscribing for the Rights Equity Shares and Rights Entitlements in compliance with applicable securities and other laws of our jurisdiction of residence.

I/We hereby make the representations, warranties, acknowledgments and agreements set forth in the section of the Letter of Offer titled "Restrictions on Purchases and Resales" on page 83 of the Letter of Offer.

I/We acknowledge that the Company, their affiliates and others will rely upon the truth and accuracy of the foregoing representations and agreements."

In cases where Multiple Application Forms are submitted for Applications pertaining to Rights Entitlements credited to the same demat account including cases where an Investor submits Application Forms along with a plain paper Application, such Applications shall be liable to be rejected.

Investors are requested to strictly adhere to these instructions. Failure to do so could result in an Application being rejected, with our Company, and the Registrar not having any liability to the Investor. The plain paper Application format will be available on the website of the Registrar at https://www.purvashare.com/.

Our Company, and the Registrar shall not be responsible if the Applications are not uploaded by the SCSB or funds are not blocked in the Investors' ASBA Accounts on or before the Issue Closing Date.

Last date for Application : The last date for submission of the duly filled in the Application Form or a plain paper Application is Thursday, April 30, 2026, i.e., Issue Closing Date. Our Board or any committee thereof may extend the said date for such period as it may determine from time to time, subject to the Issue Period not exceeding 30 days from the Issue Opening Date (inclusive of the Issue Opening Date).

If the Application Form is not submitted with an SCSB, uploaded with the Stock Exchange and the Application Money is not blocked with the SCSB, on or before the Issue Closing Date or such date as may be extended by our Board or any committee thereof, the invitation to offer contained in the Letter of Offer shall be deemed to have been declined and our Board or any committee thereof shall be at liberty to dispose of the Equity Shares hereby offered, as set out in the section entitled "Terms of the Issue - Basis of Allotment" on page 76 of the Letter of Offer.

Procedure for Renunciation : The Eligible Equity Shareholders may renounce the Rights Entitlements, credited to their respective demat accounts, either in full or in part (a) by using the secondary market platform of the Stock Exchange (the "**On Market Renunciation**"); or (b) through an off-market transfer (the "**Off Market Renunciation**"), during the Renunciation Period. The Investors should have the demat Rights Entitlements credited / lying in his/her own demat account prior to the renunciation. The trades through On Market Renunciation and Off Market Renunciation will be settled by transferring the Rights Entitlements through the depository mechanism. Investors may be subject to adverse foreign, state or local tax or legal consequences as a result of trading in the Rights Entitlements. Investors who intend to trade in the Rights Entitlements should consult their tax advisor or stock-broker regarding any cost, applicable taxes, charges and expenses (including brokerage) that may be levied for trading in Rights Entitlements.

Please note that the Rights Entitlements which are neither renounced nor subscribed by the Investors on or before the Issue Closing Date shall lapse and shall be extinguished after the Issue Closing Date.

a. On Market Renunciation

The Eligible Equity Shareholders may renounce the Rights Entitlements, credited to their respective demat accounts by trading/selling them on the secondary market platform of the Stock Exchange through a registered stock-broker in the same manner as the existing Equity Shares of our Company.

In this regard, in terms of provisions of the SEBI ICDR Regulations and the SEBI Master Circular, the Rights Entitlements credited to the respective demat accounts of the Eligible Equity Shareholders shall be admitted for trading on the Stock Exchange under ISIN: INE843B20013 subject to requisite approvals. Prior to the Issue Opening Date, our Company will obtain the approval from the Stock Exchange for trading of Rights Entitlements. No assurance can be given regarding the active or sustained On Market Renunciation or the price at which the Rights Entitlements will trade. The details for trading in Rights Entitlements will be as specified by the Stock Exchange from time to time.

The Rights Entitlements are tradable in dematerialized form only. The market lot for trading of Rights Entitlements is 1 (one) Rights Entitlements.

The On Market Renunciation shall take place only during the Renunciation Period for On Market Renunciation, i.e., from Thursday, April 02, 2026, To Friday, April 24, 2026 (both days inclusive).

The Investors holding the Rights Entitlements who desire to sell their Rights Entitlements will have to do so through their registered stock-brokers by quoting the ISIN No. INE843B20013 and indicating the details of the Rights Entitlements they intend to trade. The Investors can place order for sale of Rights Entitlements only to the extent of Rights Entitlements available in their demat account.

The On Market Renunciation shall take place electronically on secondary market platform of BSE under automatic order matching mechanism and on 'T+2 rolling settlement basis', where 'T' refers to the date of trading. The transactions will be settled on trade-for-trade basis. Upon execution of the order, the stock-broker will issue a contract note in accordance with the requirements of the Stock Exchange and the SEBI.

b. Off Market Renunciation

The Eligible Equity Shareholders may renounce the Rights Entitlements, credited to their respective demat accounts by way of an off-market transfer through a depository participant. The Rights Entitlements can be transferred in dematerialised form only.

Eligible Equity Shareholders are requested to ensure that renunciation through off-market transfer is completed in such a manner that the Rights Entitlements are credited to the demat account of the Renouncees on or prior to the Issue Closing Date to enable Renouncees to subscribe to the Rights Equity Shares in the Issue.

The Investors holding the Rights Entitlements who desire to sell their Rights Entitlements will have to do so through their registered stock-brokers by quoting the ISIN: INE843B20013and indicating the details of the Rights Entitlements they intend to trade. The Investors can place order for sale of Rights Entitlements only to the extent of Rights Entitlements available in their demat account.

The On Market Renunciation shall take place electronically on secondary market platform of BSE under automatic order matching mechanism and on 'T+2 rolling settlement basis', where 'T' refers to the date of trading. The transactions will be settled on trade-for-trade basis. Upon execution of the order, the stock-broker will issue a contract note in accordance with the requirements of the Stock Exchange and the SEBI.

The instructions for transfer of Rights Entitlements can be issued during the working hours of the depository participants.

The detailed rules for transfer of Rights Entitlements through off-market transfer shall be as specified by the NSDL and CDSL from time to time.

Listing and trading of the Equity Shares to be issued pursuant to this Issue

The existing Equity Shares are listed and traded on BSE (Scrip Code: 523384) and NSE (Symbol: MAHAPEXLTD) under the ISIN: INE843B01013. The Rights Equity Shares shall be credited to a temporary ISIN which will be frozen until the receipt of the final listing / trading approvals from the Stock Exchange. Upon receipt of such listing and trading approvals, the Rights Equity Shares shall be debited from such temporary ISIN and credited to the new ISIN for the Rights Equity Shares and thereafter be available for trading and the temporary ISIN shall be permanently deactivated in the depository system of CDSL and NSDL.

Disclaimer clause of BSE : "It is to be distinctly understood that the permission given by BSE Limited should not in any way be deemed or construed that the Letter of Offer has been cleared or approved by BSE Limited, nor does it certify the correctness or completeness of any of the contents of the Letter of Offer. The investors are advised to refer to the Letter of Offer for the full text of the Disclaimer clause of the BSE Limited under the heading "Other regulatory and Statutory Disclosures- Disclaimer Clause of BSE" on page 52 of the Letter of Offer."

Disclaimer clause of NSE : "It is to be distinctly understood that the permission given by NSE should not in any way be deemed or construed that the Letter of Offer has been cleared or approved by NSE nor does it certify the correctness or completeness of any of the contents of the Letter of Offer. The investors are advised to refer to the Letter of Offer for the full text of the disclaimer clause of NSE, under the heading "Other regulatory and Statutory Disclosures- Disclaimer Clause of NSE" on page 52 of the Letter of Offer."

Availability of issue materials : In accordance with the SEBI ICDR Regulations, the Letter of Offer, the Application Form, the Rights Entitlement Letter and other Issue material will be sent/ dispatched only to the Eligible Equity Shareholders who have provided an Indian address to our Company. In case such Eligible Equity Shareholders have provided their valid e-mail address, the Letter of Offer, the Application Form, the Rights Entitlement Letter and other Issue material will be sent only to their valid e-mail address and in case such Eligible Equity Shareholders have not provided their valid e-mail address, then the Application Form, the Rights Entitlement Letter and other Issue material will be physically dispatched, on a reasonable effort basis, to the Indian addresses provided by them.

Investors can access the Letter of Offer, and the Application Form (provided that the Eligible Equity Shareholder is eligible to subscribe to the Rights Equity Shares under applicable laws) on the websites of:

(i) our Company at https://www.maharashtraapex.com/; **(ii)** the Registrar at www.purvashare.com; **(iii)** the Stock Exchange at www.bseindia.com **(iv)** National Stock Exchange at https://www.nseindia.com/

Allotment Account Bank – ICICI Bank Limited.
Bankers to the issue and Refund Bank – ICICI Bank Limited
For Risk Factors and other details, kindly refer page No. 20 of the Letter of Offer.

REGISTRAR TO THE ISSUE	COMPANY SECRETARY AND COMPLIANCE OFFICER
Purva Sharegistry **PURVA SHAREGISTRY (INDIA) PRIVATE LIMITED** 9, Shiv Shakti Indl. Estt., J. R. Boricha Marg. Lower Parel, Mumbai - 400 011, Maharashtra, India. **Telephone :** 022-41343264 / 49614132, **Facsimile :** N.A. **E-mail :** support@purvashare.com, **Website :** www.purvashare.com **Investor grievance :** support@purvashare.com, **Contact Person :** Ms. Deepali Dhuri **SEBI Registration Number :** INR000001112, **Validity of Registration :** Permanent	**Jamsheed Minoo Panday** 3rd Floor, Front Wing North Block, Manipal Centre, # 47 Dickenson Road, Bengaluru - 560 001, Karnataka, India, **Tel. :** +91 820 2571 021 / 024 / 4031 3131 **Fax :** +91 820 257 1112 **E-mail :** jmp@manipal.com **Website :** https://www.maharashtraapex.com Investor may contact the Registrar to the Issue or the Company Secretary and Compliance Officer for any pre-Issue or post-Issue related matters. All grievances relating to the ASBA process may be addressed to the Registrar to the Issue, with a copy to the SCSB, giving complete details such as name, address, contact number(s), e-mail address of the sole/ first holder, folio number or demat account of the Applicant, number of Equity Shares applied for, amount blocked, ASBA Account number and the Designated Branch of the SCSB where the Application Form, or the plain paper application, as the case may be, was submitted by the ASBA Investors. For details on the ASBA process, see "Terms of the Issue" on page 56 of the Letter of Offer.

For Maha Rashtra Apex Corporation Limited
On behalf of the Board of Directors
Sd/-
Jamsheed Minoo Panday
Company Secretary & Compliance Officer

Place : Bangalore
Date : March 29, 2026

MAHA RASHTRA APEX CORPORATION LIMITED, is proposing, subject to market conditions and other considerations, to make a rights issue of its Equity Shares, and has filed a Letter of Offer with Stock Exchanges on March 11, 2026. The Letter of Offer is available on the website of SEBI at www.sebi.gov.in,the website of the stock exchange at www.bseindia.com, the Company website at www.maharashtraapex.com and the website of registrar at www.purvashare.com. Potential investors should note that investment in equity shares involves a high degree of risk and are requested to refer to the Letter of Offer filed with the SEBI and the stock exchanges, including the section titled "Risk Factors" on Page 20 of the Letter of Offer, for details of the same, when available.

This announcement has been prepared for publication in India and may not be released in any other jurisdiction. Accordingly, any person who acquires Rights Entitlements or Rights Equity Shares will be deemed to have declared, warranted and agreed that at the time of subscribing for Rights Equity Shares or Rights Entitlements such person is not and will not be in the United States and/or in other restricted jurisdictions. The Rights Equity Shares of the Company have not been and will not be registered under the United States Securities Act, 1933, as amended (the "Securities Act") or any other jurisdiction which have any restrictions in connection with offering, issuing and allotting Rights Equity Shares within its jurisdiction and/or to its citizens. The offering to which LOF relates is not and under no circumstances is to be constructed as an offering of any Rights Equity Shares or Rights Entitlements for sale in the United States or any other jurisdiction other than India or as a solicitation therein of an offer to buy any of the said Rights Equity Shares or Rights Entitlements.

ಸಮಾಚಾರ ಸಣ್ಣದಲ್ಲ

ಕಪ್ಪು ಪಟ್ಟಿ ಧರಿಸಿ ಆಡಿದ ಆಟಗಾರರು

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಶನಿವಾರ ನಡೆದ ಆರ್‌ಸಿಬಿ-ಹೈದರಾಬಾದ್ ನಡುವಿನ ಐಪಿಎಲ್ ಉದ್ಘಾಟನಾ ಪಂದ್ಯದ ವೇಳೆ ಕಳೆದ ವರ್ಷ ನಡೆದ ಭೀಕರ ಕಾಲ್ತುಳಿತದಿಂದ ಮೃತಪಟ್ಟ ಅಭಿಮಾನಿಗಳಿಗೆ ಗೌರವ ಸಮರ್ಪಿಸುವ ಸಲುವಾಗಿ ಎರಡೂ ತಂಡದ ಆಟಗಾರರು ಆಟವಾಡುವ ವೇಳೆ ಕಪ್ಪು ತೋಳುಪಟ್ಟಿ ಧರಿಸಿ ಮೈದಾನಕ್ಕಿಳಿದಿದ್ದರು. ಆಟ ಆರಂಭವಾಗುವ ಮುನ್ನ ಎಲ್ಲಾ ಆಟಗಾರರರೂ ಸೇರಿದಂತೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೇರಿದ್ದ ಎಲ್ಲರೂ ಅಗಲಿದ ಕ್ರಿಕೆಟ್ ಪ್ರೇಮಿಗಳಿಗೆ ಎರಡು ನಿಮಿಷ ಮೌನ ಪ್ರಾರ್ಥನೆಯನ್ನೂ ಸಲ್ಲಿಸಿದರು. ಆರ್‌ಸಿಬಿ-ಹೈದರಾಬಾದ್ ಆಟ ನಡೆಯುವ ವೇಳೆ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹನ್ನೊಂದು ಆಸನಗಳನ್ನು ಖಾಲಿ ಬಿಡುವ ಮೂಲಕ ಮೃತರಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಮತ್ತು ಆರ್‌ಸಿಬಿ ಗೌರವ ಸಮರ್ಪಣೆ ಮಾಡಿತ್ತು.

ವಿರಾಟ್ ಕೊಹ್ಲಿ ವಿಶಿಷ್ಟ ದಾಖಲೆ

ಬೆಂಗಳೂರು: ಶನಿವಾರ ಇಲ್ಲಿ ನಡೆದ ಸನ್ ರೈಸರ್ಸ್ ವಿರುದ್ಧದ ಪಂದ್ಯದ ಮೂಲಕ ಆರ್‌ಸಿಬಿ ತಂಡದ ಹಿರಿಯ ಆಟಗಾರ ವಿರಾಟ್ ಕೊಹ್ಲಿ ವಿಶಿಷ್ಟ ದಾಖಲೆ ಬರೆದಿದ್ದಾರೆ. ಐಪಿಎಲ್ ಇತಿಹಾಸದಲ್ಲಿ ಆರಂಭದಿಂದ ಈ ಸಲದ 19 ಆವೃತ್ತಿಯ ವರೆಗೂ ಒಂದೇ ತಂಡವನ್ನು ಪ್ರತಿನಿಧಿಸಿರುವ ಏಕೈಕ ಆಟಗಾರನೆಂಬ ಹೆಗ್ಗಳಿಕೆ ಅವರು ಪಾತ್ರರಾದರು. 2008ರಲ್ಲಿ ಪ್ರಾರಂಭಗೊಂಡ ಚೊಚ್ಚಲ ಐಪಿಎಲ್‌ನಲ್ಲಿ ಆರ್‌ಸಿಬಿ ತಂಡಕ್ಕೆ ಸಾಮಾನ್ಯ ಓರ್ವ ಆಟಗಾರನಾಗಿ ಆಯ್ಕೆಗೊಂಡ ವಿರಾಟ್ ಕೊಹ್ಲಿ, ನಂತರ ತನ್ನ ಉತ್ತಮ ಬ್ಯಾಟಿಂಗ್‌ನಿಂದಾಗಿ ಆರ್‌ಸಿಬಿಯ ಪ್ರಮುಖ ಅಟಗಾರನಾಗಿ ಕಾಣಿಸಿಕೊಂಡರು. ಆರಂಭದ ಆವೃತ್ತಿಗಳಲ್ಲಿ ಅನಿಲ್ ಕುಂಬ್ಳೆ ಸಾರಥ್ಯದಲ್ಲಿ ಬೆಂಗಳೂರು ಪರ ಬ್ಯಾಟ್ಸ್‌ಮ್ಯಾನ್ ಆಗಿ ಆಡಿದ್ದ ಕೊಹ್ಲಿ 2013ರ ಬಳಿಕ ಆರ್‌ಸಿಬಿ ತಂಡದ ನಾಯಕನಾಗಿ ನೇಮಕಗೊಂಡು 2021ರ ವರೆಗೆ ತಂಡವನ್ನು ಮುನ್ನಡೆಸಿದ್ದರು. ಓರ್ವ ಯಶಸ್ವಿ ಬ್ಯಾಟ್ಸ್‌ಮ್ಯಾನ್ ಆಗಿ ಐಪಿಎಲ್‌ನಲ್ಲಿ ಉತ್ತಮ ಸಾಧನೆ ಮಾಡಿರುವ ಕೊಹ್ಲಿಗೆ ಕಪ್ ಗೆಲ್ಲುವ ಕನಸು 2025ರಲ್ಲಿ ನನಸಾಗಿತ್ತು.

ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದ ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್

ಡಫಿ, ಶೆಫರ್ಡ್ ಮಾರಕ ಬೌಲಿಂಗ್ | ಹೈದರಾಬಾದ್‌ಗೆ ಸೋಲು

ತವರಲ್ಲಿ ಆರ್‌ಸಿಬಿ ಶುಭಾರಂಭ

ಬೆಂಗಳೂರು: ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಶನಿವಾರ ನಡೆದ ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ಅತಿಥೇಯ ಆರ್‌ಸಿಬಿ ತಂಡವು ಸನ್ ರೈಸರ್ಸ್ ಹೈದರಾಬಾದ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿ ಈ ಐಪಿಎಲ್ ಆವೃತ್ತಿಯಲ್ಲಿ ಶುಭಾರಂಭ ಮಾಡಿತು. 202 ರನ್‌ಗಳ ಗೆಲುವಿನ ಗುರಿ ಪಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ದೇವದತ್ ಪಡಿಕ್ಕಲ್ ಮತ್ತು ವಿರಾಟ್ ಕೊಹ್ಲಿಯ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಸಾವಿರಾರು ಅಭಿಮಾನಿಗಳ ಎದುರು ಸುಲಭ ಗೆಲುವನ್ನು ದಾಖಲಿಸಿತು.

ಆರ್‌ಸಿಬಿಯ ಆರಂಭ ಉತ್ತಮವಾಗಿರಲಿಲ್ಲ. ತಂಡದ ಸ್ಕೋರ್ ಕೇವಲ 9 ರನ್ ಆಗಿದ್ದಾಗ ಆರಂಭಿಕ ಬ್ಯಾಟ್ಸ್‌ಮ್ಯಾನ್ ಫಿಲ್ ಸಾಲ್ಟ್ ಅವರು ಉನಾದ್ಕತ್ ಅವರ ಬೌಲಿಂಗ್‌ನಲ್ಲಿ ಪೆವಿಲಿಯನ್ ಸೇರಿದರು. ಆದರೆ ಆ ಬಳಿಕ ವಿರಾಟ್ ಕೊಹ್ಲಿ-ದೇವದತ್ ಪಡಿಕ್ಕಲ್ 2ನೇ ವಿಕೆಟ್‌ಗೆ 95 ರನ್‌ಗಳ ಆಕರ್ಷಕ ಜತೆಯಾಟವಾಡಿದರು. 26 ಬಾಲ್‌ಗಳನ್ನು ಎದುರಿಸಿ 61 ರನ್ ಬಾರಿಸಿದ ಪಡಿಕ್ಕಲ್ ಇನ್ನಿಂಗ್ಸ್‌ನಲ್ಲಿ 4 ಸಿಕ್ಸರ್ ಮತ್ತು 7 ಬೌಂಡರಿಗಳಿದ್ದವು. ಬಳಿಕ ಕೊಹ್ಲಿ-ಪಾಟೀದಾರ್ ಜೋಡಿ ತಂಡಕ್ಕಾಗಿ 53 ರನ್‌ಗಳ ಜತೆಯಾಟವಾಡಿದರು. 12 ಬಾಲ್‌ಗಳಲ್ಲಿ 31 ರನ್ ಗಳಿಸಿದ್ದ ಪಾಟೀದಾರ್ ಡೇವಿಡ್ ಪೇನ್ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು.

ಮುಂದಿನ ಬಾಲ್‌ನಲ್ಲೇ ಜಿತೇಶ್ ಶರ್ಮಾ ಅವರು ಯಾವುದೇ ರನ್ ಗಳಿಸದೆ ಡೇವಿಡ್ ಪೇನ್ ಅವರಿಗೆ ವಿಕೆಟ್ ಒಪ್ಪಿಸಿದರು. ಅದಾದ ಬಳಿಕ ವಿರಾಟ್ ಕೊಹ್ಲಿ-ಟಿಮ್ ಡೇವಿಡ್ ಜೋಡಿ ಆರ್‌ಸಿಬಿಯನ್ನು ಸುಲಭ ಜಯದತ್ತ ಕೊಂಡೊಯ್ದರು. ಕೇವಲ 26 ಬಾಲ್‌ಗಳನ್ನು ಎದುರಿಸಿದ ಕೊಹ್ಲಿ 69 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರ ಇನ್ನಿಂಗ್ಸ್‌ನಲ್ಲಿ 5 ಬೌಂಡರಿ ಮತ್ತು 5 ಸಿಕ್ಸರ್ ಇದ್ದವು. ಟಿಮ್ ಡೇವಿಡ್ 10 ಬಾಲ್ ಎದುರಿಸಿ 16 ರನ್ ಗಳಿಸಿ ಅಜೇಯರಾಗುಳಿದರು. ಆರ್‌ಸಿಬಿ ತಂಡವು 15.4 ಓವರ್‌ಗಳಲ್ಲಿ 4 ವಿಕೆಟ್‌ಗೆ 203 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಹೈದರಾಬಾದ್ ಪರ ಡೇವಿಡ್ ಪೇನ್ 2 ವಿಕೆಟ್ ಪಡೆದರೆ ಉನಾದ್ಕತ್ ಮತ್ತು ಹರ್ಷ್ ದುಬೆ ತಲಾ 1 ವಿಕೆಟ್ ಪಡೆದರು.

ಟಾಸ್ ಗೆದ್ದ ಆರ್‌ಸಿಬಿ ಫೀಲ್ಡಿಂಗ್ ಆಯ್ದುಕೊಂಡು ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಬ್ಯಾಟಿಂಗ್ ಆಹ್ವಾನಿಸಿತು. ಆದರೆ ಹೈದರಾಬಾದ್ ತಂಡ ನಿರೀಕ್ಷಿತ ಆರಂಭ ಪಡೆಯಲಿಲ್ಲ. ಆರ್‌ಸಿಬಿ ಪರ ಪದಾರ್ಪಣೆ ಮಾಡಿದ ಜೇಕಬ್ ಡಫಿ ಪವರ್ ಪ್ಲೇನಲ್ಲೇ ಮೂರು ವಿಕೆಟ್ ಪಡೆದು ಹೈದರಾಬಾದ್‌ಗೆ ಆಘಾತ ನೀಡಿದರು. ಸ್ಫೋಟಕ ಬ್ಯಾಟರ್‌ಗಳಾದ ಅಭಿಷೇಕ್ ಶರ್ಮಾ (7), ಟ್ರಾವಿಸ್ ಹೆಡ್ (11) ಹಾಗೂ ನಿತೀಶ್ ಕುಮಾರ್ ರೆಡ್ಡಿಯನ್ನು ಡಫಿ ಔಟ್ ಮಾಡಿ ಪೆವಿಲಿಯನ್‌ಗೆ ಕಳುಹಿಸಿದರು.

4ನೇ ವಿಕೆಟ್ ಜತೆಯಾಟದಲ್ಲಿ ಜತೆಯಾದ ಇಶಾನ್ ಕಿಶನ್ ಹಾಗೂ ಹೆನ್ರಿಚ್ ಕ್ಲಾಸೆನ್ 97 ರನ್ ಗಳಿಸಿ ಚೇತರಿಕೆ ನೀಡಿದರು. ಈ ಅಪಾಯಕಾರಿ ಜೋಡಿಯನ್ನು ರೊಮ್ಯಾರಿಯೋ ಶೆಫರ್ಡ್ ಬೇರ್ಪಡಿಸಿದರು. ಉತ್ತಮವಾಗಿ ಆಡುತ್ತಿದ್ದ ಕ್ಲಾಸೆನ್ 22 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸರ್ ಸಹಿತ 31 ರನ್ ಗಳಿಸಿ ಸಾಲ್ಟ್ ಹಿಡಿದ ಅದ್ಭುತ ಕ್ಯಾಚ್‌ಗೆ ಔಟ್ ಆದರು. ನಂತರ ಬಂದ ಸಲೀಲ್ ಅರೋರಾ ಕೇವಲ 9 ರನ್ ಗಳಿಸಿ ಸುಯಾಶ್ ಶರ್ಮಾಗೆ ವಿಕೆಟ್ ಒಪ್ಪಿಸಿದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಮತ್ತೊಂದು ಕಡೆ ಅಬ್ಬರಿಸಿದ ನಾಯಕ ಇಶಾನ್ ಕಿಶನ್ 38 ಎಸೆತಗಳಲ್ಲಿ 8 ಬೌಂಡರಿ, 5 ಸಿಕ್ಸರ್‌ಗಳ ಸಹಿತ 80 ರನ್ ಗಳಿಸಿದರು. ಶತಕದತ್ತ ದಾಟುತ್ತಿದ್ದ ಅವರನ್ನು ಆರ್‌ಸಿಬಿಗೆ ಶನಿವಾರ ಪದಾರ್ಪಣೆ ಮಾಡಿದ ಅಭಿನಂದನ್ ಸಿಂಗ್ ಪೆವಿಲಿಯನ್ ಸೇರಿಸಿ ಹೈದರಾಬಾದ್ ತಂಡದ ಬೃಹತ್ ಮೊತ್ತಕ್ಕೆ ತಡೆಯೊಡ್ಡಿದರು.

ಅನಿಕೇತ್ ವರ್ಮಾ ಕೊನೆಯಲ್ಲಿ ಅಬ್ಬರಿಸಿ 18 ಎಸೆತಗಳಲ್ಲಿ 3 ಬೌಂಡರಿ, 4 ಸಿಕ್ಸರ್‌ಗಳ ಸಹಿತ 43 ರನ್ ಗಳಿಸಿ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು.

ಇಶಾನ್ ಕಿಶನ್: 3000 ಐಪಿಎಲ್ ರನ್ಸ್

ಸನ್ ರೈಸರ್ಸ್ ಹೈದರಾಬಾದ್ ತಂಡದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಹಾಗೂ ನಾಯಕ ಇಶಾನ್ ಕಿಶನ್ ಅವರು ಐಪಿಎಲ್ ಟೂರ್ನಿ ಯಲ್ಲಿ 3000 ರನ್‌ಗಳನ್ನು ಪೂರ್ಣಗೊಳಸಿದ್ದಾರೆ. ಅವರು ಈ ದಾಖಲೆ ಬರೆಯಲು ಒಟ್ಟು 120 ಪಂದ್ಯಗಳ 113 ಇನಿಂಗ್ಸ್‌ಗಳನ್ನು ಆಡಿದ್ದಾರೆ.

ಕೊಹ್ಲಿ-ಪಡಿಕ್ಕಲ್: ಗೆಲುವಿನ ರೂವಾರಿ. ▶▶ ಚಿತ್ರ: ಸುಧಾಕರ್ ದೇವರಾಜ್

ಅಂಪೈರ್ ವಿರುದ್ಧ ಕ್ಲಾಸೆನ್ ಆಕ್ರೋಶ

ಶನಿವಾರ ನಡೆದ ಪಂದ್ಯದಲ್ಲಿ ಹೆನ್ರಿಚ್ ಕ್ಲಾಸೆನ್ ಅವರ ಕ್ಯಾಚ್ ವಿವಾದವನ್ನು ಹುಟ್ಟು ಹಾಕಿದೆ. ಅಲ್ಲದೆ ಅಭಿಮಾನಿಗಳು ಕೂಡ ಸೋಶಿಯಲ್ ಮೀಡಿಯಾದಲ್ಲಿ ಇದರ ಬಗ್ಗೆ ಭಾರೀ ಚರ್ಚೆಗಳನ್ನು ನಡೆಸಿದ್ದಾರೆ. ದಕ್ಷಿಣ ಆಫ್ರಿಕಾ ಆಟಗಾರ ಪುಲ್ ಶಾಟ್ ಹೊಡೆ ದಾಗ ಫಿಲ್ ಸಾಲ್ಟ್ ಬೌಂಡರಿ ಲೈನ್‌ಗೆ ಸನಿಹದಲ್ಲಿ ಕ್ಯಾಚ್ ಪಡೆದು ನೆಲಕ್ಕೆ ಉರುಳಿದರು. ಈ ವೇಳೆ ಅವರು ಬೌಂಡರಿ ಲೈನ್‌ಗೆ ತಾಗಿರುವ ರೀತಿ ಕಂಡು ಬರುತ್ತಿದ್ದರು. 3ನೇ ಅಂಪೈರ್ ಹಲವು ಬಾರಿ ವಿಡಿಯೊ ರೀಪ್ಲೆ ನೋಡುವ ಮೂಲಕ ಫಿಲ್ ಸಾಲ್ಟ್ ಪಡೆದ ಕ್ಯಾಚ್ ಸರಿಯಾಗಿದೆ ಎಂದು ಪರದೆಯ ಮೇಲೆ ಪ್ರಕಟಿಸಿದರು. ಆದರೆ ಹೆನ್ರಿಚ್ ಕ್ಲಾಸೆನ್‌ಗೆ ಈ ತೀರ್ಪು ತೃಪ್ತಿ ನೀಡಲಿಲ್ಲ. ಅವರು ಡ್ರೆಸ್ಸಿಂಗ್ ರೂಂಗೆ ತೆರಳುವ ಹಾದಿಯಲ್ಲಿ ಎದುರಾದ ನಾಲ್ಕನೇ ಅಂಪೈರ್ ಬಳಿ ತಮ್ಮ ಅಸಮಾಧಾನವನ್ನು ಹೊರ ಹಾಕಿದರು.

ವಾಂಖೆಡೆಯಲ್ಲಿ ಐಪಿಎಲ್ 2ನೇ ಪಂದ್ಯ

ಪಾಂಡ್ಯ ಪಡೆಗೆ ರಹಾನೆ ಬಳಗವನ್ನು ಮಣಿಸುವ ತವಕ

ಮುಂಬೈಗಿಂದು ಕೋಲ್ಕತ್ತಾ ಸವಾಲು

ಮುಂಬೈ: ಇಲ್ಲಿನ ವಾಂಖೆಡೆ ಮೈದಾನದಲ್ಲಿಂದು ನಡೆಯುವ ಐಪಿಎಲ್‌ನ 2ನೇ ಪಂದ್ಯದಲ್ಲಿ ಅತಿಥೇಯ ಮುಂಬೈ ಇಂಡಿಯನ್ಸ್ ತಂಡವು ಕೋಲ್ಕತ್ತಾವನ್ನು ಎದುರಿಸಲಿದೆ.

5 ಬಾರಿ ಐಪಿಎಲ್ ಚಾಂಪಿಯನ್ ಆಗಿರುವ ಬಲಿಷ್ಠ ಮುಂಬೈ ತಂಡವು ಈ ಸಲ ಹಾರ್ದಿಕ್ ಪಾಂಡ್ಯ ನಾಯಕತ್ವದಲ್ಲಿ ಕಣಕ್ಕಿಳಿಯುತ್ತಿದೆ. ಭಾರತ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ, ಟಿ20 ನಾಯಕ ಸೂರ್ಯಕುಮಾರ್, ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ, ತಿಲಕ್ ವರ್ಮಾ, ದೀಪಕ್ ಚಹಾರ್, ಶಾರ್ದೂಲ್ ಠಾಕೂರ್ ಮಾತ್ರವಲ್ಲದೆ, ವಿದೇಶದ ಪ್ರಮುಖ ಆಟಗಾರರಾದ ಕ್ವಿಂಟನ್ ಡಿ ಕಾಕ್, ಮಿಚ್ಚೆಲ್ ಸ್ಯಾಂಟ್ನರ್, ಕಾರ್ಬಿನ್ ಬಾಷ್, ರಿಯಾನ್ ರಿಕೆಲ್ಟನ್, ವಿಲ್ ಜಾಕ್ಸ್ ಮುಂತಾದ ಬಲಿಷ್ಠ ಆಟಗಾರರೊಂದಿಗೆ ಈ ಬಾರಿ ಐಪಿಎಲ್‌ನಲ್ಲಿ ಅತ್ಯಂತ ಬಲಿಷ್ಠ ತಂಡ ಎನಿಸಿದೆ.

ಇತ್ತೀಚೆಗೆ ಮುಗಿದ ಟಿ20 ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್, ತಂಡದಲ್ಲಿದ್ದ ಹಾರ್ದಿಕ್ ಪಾಂಡ್ಯ, ಜಸ್ಪ್ರೀತ್ ಬುಮ್ರಾ, ತಿಲಕ್ ವರ್ಮಾ ಈ ಐಪಿಎಲ್‌ನ ಆರಂಭದಿಂದಲೇ ತಮ್ಮ ಅಮೋಘ ಆಟ ಪ್ರದರ್ಶಿಸುವ ಆತ್ಮವಿಶ್ವಾಸದಲ್ಲಿದ್ದಾರೆ. ಮೊದಲ ಪಂದ್ಯವು ತವರಿನಂಗಳದಲ್ಲಿ ನಡೆಯುತ್ತಿರುವ ಕಾರಣ ಪ್ರೇಕ್ಷಕರ ಹೆಚ್ಚಿನ ಬೆಂಬಲವೂ ಮುಂಬೈ ಪಾಲಿಗೆ ಸಹಜ.

ಕಳೆದ ಒಂದು ವಾರದಿಂದ ಆಟಗಾರೆಲ್ಲರೂ ವಾಂಖೆಡೆ ಸ್ಟೇಡಿಯಂನಲ್ಲಿ ತರಬೇತಿ ನಿರತರಾಗಿದ್ದು, ಈ ಸಲದ ಕಪ್ ಗೆಲ್ಲುವ ನೆಚ್ಚಿನ ತಂಡಗಳ ಪೈಕಿ ಮುಂಬೈ ಕೂಡಾ ಒಂದು ಎಂಬುದು ಕ್ರಿಕೆಟ್‌ಪ್ರೇಮಿಗಳ ನಿರೀಕ್ಷೆಯಾಗಿದೆ. ಹಾಗಾಗಿ ಈ ಪಂದ್ಯದಲ್ಲಿ ಕೋಲ್ಕತ್ತಾ ತಂಡವನ್ನು ಸುಲಭವಾಗಿ ಮಣಿಸುವ ಆತುರ ಮುಂಬೈ ತಂಡಕ್ಕಿದೆ.

ಈ ಬಾರಿಯ ಐಪಿಎಲ್‌ನಲ್ಲಿ ಅಜಿಂಕ್ಯ ರಹಾನೆ ನಾಯಕತ್ವದ ಕೋಲ್ಕತ್ತಾ ನೈಟ್ ರೈರ್ಸ್ (ಕೆಕೆಆರ್) ತಂಡ ಕೂಡಾ ಬಲಿಷ್ಠವಾಗಿದೆ. ಮೂರು ಬಾರಿಯ ಐಪಿಎಲ್ ವಿಜೇತ ತಂಡವಾದ ಕೆಕೆಆರ್‌ನಲ್ಲಿ ಭಾರತ ತಂಡದ ಪ್ರತಿಭಾನ್ವಿತ ಬ್ಯಾಟ್ಸ್‌ಮ್ಯಾನ್ ರಿಂಕು ಸಿಂಗ್ ಇದ್ದಾರೆ. ಉಳಿದಂತೆ ಸುನಿಲ್ ನರೈನ್, ಮನೀಷ್ ಪಾಂಡೆ, ನವದೀಪ್ ಸೈನಿ ಉತ್ತಮ ಪ್ರದರ್ಶನ ನೀಡಬಲ್ಲ ಭಾರತೀಯ ಆಟಗಾರರಿದ್ದರೆ, ಫಿನ್ ಅಲೆನ್, ರಚಿನ್ ರವೀಂದ್ರ ಮತ್ತಿತರ ಮಿಂಚಬಲ್ಲ ವಿದೇಶಿ ಆಟಗಾರರೂ ಇದ್ದಾರೆ.

ಕಳೆದ ಐಪಿಎಲ್‌ನಲ್ಲಿ ಆಡಿದ 14 ಪಂದ್ಯಗಳ ಪೈಕಿ ಕೇವಲ 5 ಪಂದ್ಯಗಳನ್ನು ಮಾತ್ರ ಗೆದ್ದ ಕೆಕೆಆರ್ ತಂಡವು ಪ್ಲೇ ಆಫ್‌ಗೆ ಅರ್ಹತೆ ಪಡೆಯದೆ ತೀರಾ ಕಳಪೆ ಸಾಧನೆ ಮಾಡಿತ್ತು. ಆದರೆ ಈ ವರ್ಷ ಉತ್ತಮ ಸಾಧನೆಯತ್ತ ಗಮನಹರಿಸಿ ಕಳೆದ ಒಂದು ವಾರದಿಂದ ಕೋಲ್ಕತ್ತಾದ ತವರು ಮೈದಾನದಲ್ಲಿ ಬೆವರಿಳಿಸಿ ತರಬೇತಿ ಪಡೆದಿದೆ.

ಬಲಾಬಲ

ಎರಡೂ ತಂಡಗಳ ಮುಖಾಮುಖಿ ದಾಖಲೆ ನೋಡುವಾಗ ಮುಂಬೈ ತಂಡವೇ ಮುಂದಿದೆ. 35 ಪಂದ್ಯಗಳ ಪೈಕಿ ಮುಂಬೈ ಇಂಡಿಯನ್ಸ್ ಗರಿಷ್ಠ 24 ಪಂದ್ಯಗಳನ್ನು ಜಯಿಸಿದೆ, ಕೋಲ್ಕತ್ತಾ 11 ಪಂದ್ಯಗಳನ್ನು ಮಾತ್ರ ಗೆದ್ದಿದೆ.

ಇಂದಿನ ಪಂದ್ಯ

ಮುಂಬೈ	VS	ಕೋಲ್ಕತ್ತಾ
ಸ್ಟೇಡಿಯಂ	:	ವಾಂಖೆಡೆ ಕ್ರೀಡಾಂಗಣ ಮುಂಬೈ
ಸಮಯ	:	ರಾ. 7 ಗಂಟೆ
ನೇರ ಪ್ರಸಾರ	:	ಜಿಯೋ ಹಾಟ್‌ಸ್ಟಾರ್

ಕಳೆದ ಬಾರಿಯ ಟೂರ್ನಿಯಲ್ಲಿ 4ನೇ ಸ್ಥಾನ ಪಡೆದು ಪ್ಲೇ ಆಫ್ ಅವಕಾಶ ಪಡೆದಿದ್ದ ಮುಂಬೈ ತಂಡವು ತನ್ನ ತವರಿನಲ್ಲಿ ಕೋಲ್ಕತ್ತಾ ವಿರುದ್ಧ ಇಂದು ಯಾವ ರೀತಿಯ ಪ್ರದರ್ಶನ ನೀಡಲಿದೆ ಎಂಬ ಕುತೂಹಲ ಕ್ರಿಕೆಟ್‌ಪ್ರೇಮಿಗಳದ್ದಾಗಿದೆ.

ಪಿಚ್ ರಿಪೋರ್ಟ್: ಮುಂಬೈನ ವಾಂಖೆಡೆ ಕ್ರೀಡಾಂಗಣದ ಪಿಚ್ ಹಿಂದಿನಿಂದೂ ಬ್ಯಾಟಿಂಗ್ ಸ್ನೇಹಿಯಾಗಿದೆ. ಎಷ್ಟೇ ದೊಡ್ಡ ಮೊತ್ತವಾದರೂ ಇಲ್ಲಿ ಚೇಸಿಂಗ್ ನಡೆಸಬಹುದಾಗಿದೆ. ಸಣ್ಣ ಬೌಂಡರಿಗಳು ಮತ್ತು ವೇಗದ ಔಟ್ ಫೀಲ್ಡ್ ಬ್ಯಾಟ್ಸ್‌ಮನ್‌ಗಳ ಸ್ವರ್ಗವಾಗಬಹುದು. ಬೌಲರ್‌ಗಳು ಹೊಸ ಬೌಲ್‌ನಲ್ಲಿ ಕೊಂಚ ಹಿಡಿತ ಸಾಧಿಸಬಹುದು. ಮೈದಾನವು ಸಮುದ್ರಕ್ಕೆ ಹತ್ತಿರದಲ್ಲಿರುವುದರಿಂದ, ಸಮುದ್ರದ ತಂಗಾಳಿಯು ಬೌಲರ್‌ಗಳಿಗೆ ಇನ್ನಿಂಗ್ಸ್‌ನ ಆರಂಭದಲ್ಲಿ ಉತ್ತಮ ಪ್ರಮಾಣದ ಸ್ವಿಂಗ್ ಪಡೆಯಲು ಸಹಾಯ ಮಾಡಬಹುದೆಂಬ ನಿರೀಕ್ಷಿಸಲಾಗುತ್ತದೆ.

ವಿಟಾಕೀಸ್

ಕೆಂಡದ ಸೆರಗಿನಲ್ಲಿ ಭೂಮಿ ಶೆಟ್ಟಿ

ಬಿಗ್‌ಬಾಸ್ ಖ್ಯಾತಿಯ ಭೂಮಿ ಶೆಟ್ಟಿ ವಿಭಿನ್ನ ಅವತಾರದಲ್ಲಿ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಭೂಮಿ, ಕೆಂಡದ ಸೆರಗು ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ರಾಕಿ ಸೋಮ್ಲಿ ನಿರ್ದೇಶಿಸಿರುವ ಕೆಂಡದ ಸೆರಗು ಚಿತ್ರವು ಸಾಮಾಜಿಕ ಸಂದೇಶದೊಂದಿಗೆ ಕ್ರೈಂ ಥ್ರಿಲ್ಲರ್ ಅಂಶಗಳನ್ನೂ ಒಳಗೊಂಡಿರುವ ವಿಭಿನ್ನ ಕಥೆಯಾಗಿದೆ. ಮಹಿಳೆಯ ಆತ್ಮ ಗೌರವ ಮತ್ತು ಹೋರಾಟದ ಕಥೆಯ ಜತೆಗೆ ಇಂದಿನ ಸಮಾಜದಲ್ಲಿ ಕೆಲವು ಯುವತಿಯರು ಎದಿರಿಸುತ್ತಿರುವ ಮೋಸ ಮತ್ತು ಅಪಾಯಗಳನ್ನೂ ತೋರಿಸಲಾಗಿದೆ. ಕಥೆಯ ಒಂದು ಭಾಗದಲ್ಲಿ ಯುವತಿಯೊಬ್ಬಳು ಪ್ರೀತಿಯ ಹೆಸರಿನಲ್ಲಿ ಮೋಸಕ್ಕೆ ಒಳಗಾಗುತ್ತಾಳೆ. ತಪ್ಪಾದ ವ್ಯಕ್ತಿಯ ಮೇಲೆ ನಂಬಿಕೆ ಇಡುವುದರಿಂದ ಅವಳ ಜೀವನದ ದಿಕ್ಕೇ ಬದಲಾಗುತ್ತದೆ. ಇದರಿಂದ ಸಂಕಷ್ಟಕ್ಕೆ ಸಿಲುಕುತ್ತಾಳೆ. ಅಂತಹ ಸಂದರ್ಭದಲ್ಲಿ ಶಕ್ತಿಶಾಲಿ ಮಹಿಳಾ ಪೊಲೀಸ್ ಅಧಿಕಾರಿ ಆಕೆಯ ಸಹಾಯಕ್ಕೆ ಧಾವಿಸಿ, ದುಷ್ಟರನ್ನು ಮಟ್ಟಹಾಕಿ ಸಂಕಷ್ಟದಿಂದ ಪಾರು ಮಾಡುತ್ತಾಳೆ. ಸಾಮಾಜಿಕ ಸಂದೇಶ, ಭಾವನಾತ್ಮಕ ಕಥೆ ಮತ್ತು ರೋಚಕ ಘಟನೆಗಳ ಜತೆಗೆ ಕೆಂಡದ ಸೆರಗು ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸುತ್ತದೆ. ಪೊಲೀಸ್ ಅಧಿಕಾರಿಯಾಗಿ ಮಾಲಾಶ್ರೀ ಕಾಣಿಸಿಕೊಂಡಿದ್ದು, ಪವರ್‌ಫುಲ್ ಪಾತ್ರ ನಿರ್ವಹಿಸಿದ್ದಾರೆ. ಶೋಭಿತಾ, ಪ್ರತಿಮಾ ಠಾಕೂರ್, ಮೋಹನ್ ಕುಮಾರ್, ವರ್ಧನ್, ಯಶ್ ಶೆಟ್ಟಿ, ಸಿಂಧೂ ಲೋಕನಾಥ್, ಹರೀಶ್ ಅರಸು ಮುಂತಾದವರು ತಾರಾಬಳಗದಲ್ಲಿದ್ದಾರೆ. ಶ್ರೀಮುತ್ತು ಟಾಕೀಸ್ ಬ್ಯಾನರ್‌ನಲ್ಲಿ ಕೊಟ್ರೇಶ್ ಗೌಡ ಚಿತ್ರ ನಿರ್ಮಾಣ ಮಾಡಿದ್ದಾರೆ. ವಿಪಿನ್ ಛಾಯಾಗ್ರಹಣ, ವೀರೇಶ್ ಕಂಬಳಿ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಏಪ್ರಿಲ್ 17ರಂದು ಈ ಚಿತ್ರ ರಾಜ್ಯಾದ್ಯಂತ ತೆರೆಗೆ ಬರಲಿದೆ.

ಗುರುರಾಯರ ಅಮಲಾಮೃತ

ಎಂ.ಎಸ್.ಗುರುರಾಜರಾವ್ ನಿರ್ದೇಶದ ಭಕ್ತಿ ಪ್ರಧಾನ ಚಿತ್ರ, ಅಮಲಾಮೃತ ತೆರೆಗೆ ಸಿದ್ಧವಾಗಿದೆ. ಗುರುರಾಯರ ಲೀಲೆಯನ್ನು ಸಾರುವ ಈ ಸಿನಿಮಾದಲ್ಲಿ ಕೆ.ಎಸ್.ಗೋವಿಂದರಾಮ ರಾವ್ ಮುಖ್ಯ ಪಾತ್ರದಲ್ಲಿ ನಟಿಸಿದ್ದು, ಬಾಹ್ಲೀಕರಾಜ, ವ್ಯಾಸರಾಜ ಹಾಗೂ ರಾಘವೇಂದ್ರ ಸ್ವಾಮಿಗಳ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಉಳಿದಂತೆ ವೀರೇಂದ್ರ ಆಚಾರ್ಯ, ಸುಬ್ಬರಾವ್, ಸುಚೇಂದ್ರ, ಚೈತ್ರಾ ಭಾರದ್ವಾಜ್, ಯಶಸ್, ಸುಮನ್, ದೀಪಕ್, ಶ್ರೀಕಾಂತ್ ಮುಂತಾದವರು ನಟಿಸಿದ್ದಾರೆ. ಈ ಹಿಂದೆ ಪುರಂದರದಾಸರು ಮತ್ತು ಶ್ರೀಪಾದರಾಜರ ಸಾಕ್ಷಚಿತ್ರ ಸಿದ್ಧಪಡಿಸಿದ್ದೆ, ಇದರ ಅನುಭವದಿಂದಲೇ ಅಮಲಾಮೃತ ಚಿತ್ರವನ್ನು ನಿರ್ದೇಶನ ಮಾಡಿದ್ದೇನೆ. ಜತೆಗೆ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದೇನೆ. ಅಮಲಾ ಮತ್ತು ಅಮೃತ ಇವರೆಡು ಅ ಅಕ್ಷರದಿಂದ ಕೂಡಿದೆ. ನವ ಭಕುತಿಯ ಜ್ಞಾನಯಜ್ಞದ ಫಲಕ್ಕೆ ಅಮಲ ಅಂತಲೂ, ಸಾರಕ್ಕೆ ಅಮೃತ ಎಂದು ಕರೆಯುತ್ತಾರೆ. ನವಭಕುತಿ ಅಂದರೆ ಸಾಕ್ಷಾತ್ ಭಗವಂತನು ವೈಷ್ಣವ ತತ್ವದಲ್ಲಿ ನೀಡಿದ ಸಂದೇಶ. ಭಕ್ತಿಯಿಂದ ಅರವತ್ತನಾಲ್ಕು ವಿದ್ಯೆಗಳನ್ನು ಕಲಿತವರು ಶ್ರೀರಾಘವೇಂದ್ರ ಸ್ವಾಮಿಗಳು. ಕರ್ಮಜ ದೇವತೆ, ಭಕ್ತ ಪ್ರಹ್ಲಾದ, ಬಾಹ್ಲೀಕರಾಜ, ವ್ಯಾಸರಾಜ, ಗುರುಸಾರ್ವಭೌಮ ಹೀಗೆ ರಾಯರು ಪೂರ್ವಪರದಲ್ಲಿ ಐದು ಅವತಾರಗಳಲ್ಲಿ ಕಾಣಿಸಿಕೊಂಡಿದ್ದರು. ಇವೆಲ್ಲವು ಹುಟ್ಟಿಕೊಂಡ ಬಗೆ ಹೇಗೆ ಎಂಬುದರ ವಿವರವನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ರಾಯರಲ್ಲಿ ಇರುವ ನಿಷ್ಠೆ ಬೇರೆ ಯಾರಲ್ಲೂ ಕಾಣುವುದಿಲ್ಲ. ಸ್ವಾಮಿಗಳ ತಪಸ್ಸಿನ ಫಲದಿಂದ ಎಲ್ಲರಿಗೂ ಪುಣ್ಯದ ಫಲ ಸಿಕ್ಕಿದೆ. ಯಾವುದೇ ರೀತಿಯಲ್ಲಿ ಶ್ರದ್ದೆಯಿಂದ ಬೃಂದಾವನಕ್ಕೆ ನಮಸ್ಕಾರ ಮಾಡಿದಾಗ ಮಾತ್ರ ಒಳ್ಳೆಯದಾಗುತ್ತದೆ ಎಂಬ ಸಂದೇಶ ಚಿತ್ರದಲ್ಲಿದೆ ಎಂದು ನಿರ್ದೇಶಕ ಗುರುರಾಜರಾವ್ ತಿಳಿಸಿದರು. ರಾಯರ ಸನ್ನಿಧಾನಗಳಾದ ಚನ್ನಪಟ್ಟಣ, ಅಬ್ಬೂರುಪೇಟೆ, ಶ್ರೀರಂಗಂ, ಕುಂಬಕೋಣಂ, ಶ್ರೀಮುಷ್ಣಂ, ಮನ್ನಾರ್‌ಗುಡಿ, ಚಿಂತಾಮಣಿಯಲ್ಲಿ ಚಿತ್ರೀಕರಣ ನಡೆಸಲಾಗಿದೆ. ಸಿರಿ ಪ್ರೊಡಕ್ಷನ್ಸ್‌ನಲ್ಲಿ ಅಮಲಾಮೃತ ಚಿತ್ರ ನಿರ್ಮಾಣವಾಗಿದೆ. ಹರಿದಾಸರು ವಿರಚಿಸಿದ ಸಾಹಿತ್ಯಕ್ಕೆ ರತ್ನಪ್ರಸಾದ್ ಸಂಗೀತ ಸಂಯೋಜಿಸಿದ್ದಾರೆ. ಪ್ರದೀಪ್ ಛಾಯಾಗ್ರಹಣ, ಸ್ವಾಮಿ ಸಂಕಲನ ಈ ಚಿತ್ರಕ್ಕಿದೆ. ಮೇ ತಿಂಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ.

ಯಲ್ಲಮ್ಮನ ಸ್ತುತಿಸಿದ ಶ್ರೀಕೃಷ್ಣ

ಈ ಹಿಂದೆ ಬ್ರಹ್ಮರಾಕ್ಷಸ ಚಿತ್ರವನ್ನು ನಿರ್ದೇಶಿಸಿದ್ದ ನಿರ್ದೇಶಕ ಶಂಕರ್ ರಾಜ ವರ್ಮ, ಇದೀಗ ಸದ್ದಿಲ್ಲದೆ ಶ್ರೀಕೃಷ್ಣನನ್ನು ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಹೌದು, ಶ್ರೀಕೃಷ್ಣ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಚಿತ್ರದ ಉಧೋ ಉಧೋ ಯಲ್ಲವ್ವ... ಎಂಬ ಹಾಡು ಬಿಡುಗಡೆಯಾಗಿದೆ. ಎಂ.ಎನ್. ತ್ಯಾಗರಾಜ್ ಸಾಹಿತ್ಯ ಬರೆದು ಹಾಡಿಗೆ ಸಂಗೀತ ಸಂಯೋಜಿಸುವುದರ ಜತೆಗೆ, ಹಾಡಿಗೂ ದನಿಯಾಗಿದ್ದಾರೆ. ಸರಯೂ ಕೂಡ ದನಿಗೂಡಿಸಿದ್ದಾರೆ. ಶಂಕರ್ ರಾಜ ವರ್ಮ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಚೈತ್ರಾ ತೋಟದ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಪ್ರದೀಪ್, ಪೂಜಾರಿ, ಭುವನ್ ಗೌಡ, ಸ್ನೇಹಾ, ಈಶ್ವರ್ ಶೆಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ. ಬ್ರಹ್ಮರಾಕ್ಷಸ ಚಿತ್ರದ ಬಿಡುಗಡೆ ಕಾರಣಾಂತರಗಳಿಂದ ತಡವಾಯಿತು. ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆಗಳೂ ಇದ್ದವು. ಮುಂದೇನು ಎನ್ನುವಾಗ ಶ್ರೀಕೃಷ್ಣನ ಒಂದು ಮಾತು ನೆನಪಾಯಿತು. ಯಾಕೆ ಶ್ರೀಕೃಷ್ಣ ಎಂಬ ಶೀರ್ಷಿಕೆ ಇಟ್ಟುಕೊಂಡು ಸಿನಿಮಾ ಮಾಡಬಾರದೆಂದನಿಸಿತು. ಅಂತೆಯೇ ಸಿನಿಮಾವೂ ಆರಂಭವಾಯಿತು. ಬ್ರಹ್ಮರಾಕ್ಷಸ ಚಿತ್ರದಲ್ಲಿ ಯಾರೆಲ್ಲಾ ಅಭಿನಯಿಸಿದ್ದಾರೋ ಅವರೆಲ್ಲರೂ ಈ ಚಿತ್ರತಂಡದಲ್ಲಿದ್ದಾರೆ. ಮೂವರು ಅನಾಥರ ಜೀವನದಲ್ಲಿ ಏನೆಲ್ಲಾ ಆಗುತ್ತದೆ ಎಂಬುದನ್ನು ಈ ಚಿತ್ರ ಹೇಳುತ್ತದೆ. ಇಲ್ಲಿ ನಾಯಕಿ ಸಹ ಅನಾಥೆ. ಎಲ್ಲರೂ ಜತೆಯಾಗಿರುವಾಗ, ಅವರ ಜೀವನದಲ್ಲೊಂದು ಘಟನೆ ನಡೆಯುತ್ತದೆ. ಇದರಿಂದ ಆ ಮೂವರು ಸೆರೆಮನೆಗೆ ಸೇರುತ್ತಾರೆ. ಜೈಲಿಂದ ತಪ್ಪಿಸಿಕೊಂಡು ಬಂದ ನಂತರ ಅವರು ಏನೆಲ್ಲಾ ಮಾಡುತ್ತಾರೆ ಎನ್ನುವುದೇ ಚಿತ್ರದ ಕಥೆ. ಶ್ರೀಕೃಷ್ಣ ಮೇನಲ್ಲಿ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಶಂಕರ್ ರಾಜವರ್ಮ ಹೇಳಿದರು. ನಾನು ಈ ಚಿತ್ರದಲ್ಲಿ ಅನಾಥೆಯಾಗಿ ಅಭಿನಯಿಸಿದ್ದೇನೆ. ಆಕೆ ಜೀವನದಲ್ಲಿ ಏನೆಲ್ಲಾ ಕಷ್ಟಪಡುತ್ತಾಳೆ, ತೀರಾ ಕಷ್ಟದಲ್ಲಿರುವಾಗ ನಾಯಕ ಬಂದು ಹೇಗೆ ಕಾಪಾಡಿ ಜೀವನವನ್ನು ರೂಪಿಸುತ್ತಾನೆ ಎಂದು ಬಹಳ ಚೆನ್ನಾಗಿ ತೋರಿಸಿದ್ದಾರೆ. ನಿರ್ದೇಶಕರು ಎಲ್ಲರಿಗೂ ಮೆಚ್ಚುಗೆಯಾಗುವಂತೆ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ ಎಂದು ಚೈತ್ರಾ ಸಂತಸದಿಂದ ನುಡಿದರು. ಬೃಹಸ್ಪತಿ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಶಂಕರ್ ರಾಜವರ್ಮ ಮತ್ತು ಅಜಯ್ ಕುಮಾರ್ ಜಂಟಿಯಾಗಿ ಚಿತ್ರ ನಿರ್ಮಿಸಿದ್ದಾರೆ. ಅನಿರುದ್ ಛಾಯಾಗ್ರಹಣ ಹಾಗೂ ಕೀರ್ತಿರಾಜು ಸಂಕಲನ ಈ ಚಿತ್ರಕ್ಕಿದೆ. ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಈ ಚಿತ್ರವು ಮೇ ತಿಂಗಳಲ್ಲಿ ಬಿಡುಗಡೆಯಾಗಲಿದೆ.

ಹನುಮ ಜಯಂತಿಗೆ ರಾಮನ ದರ್ಶನ

ನಿರ್ದೇಶಕ ನಿತೇಶ್ ತಿವಾರಿ, ರಾಮಾಯಣ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ಎರಡು ಭಾಗದಲ್ಲಿ ತೆರೆಗೆ ತರಲಿದ್ದಾರೆ. ರಾಮಾಯಣ ಜಾಗತಿಕ ಮಟ್ಟದ ತಾಂತ್ರಿಕತೆಯಲ್ಲಿ ಮೂಡಿಬರುತ್ತಿದೆ. ಸಿನಿಮಾ ಸೆಟ್ಟೇರಿದಾಗಿನಿಂದಲೂ ನಿರೀಕ್ಷೆ ಹೆಚ್ಚಿಸಿದೆ. ಚಿತ್ರವನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ.

ಹನುಮ ಜಯಂತಿಯಂದು ರಾಮಯಣದ ವಿಶೇಷ ತುಣುಕು ಬಿಡುಗಡೆಯಾಗಲಿದೆ. ಆ ಮೂಲಕ ಕಳೆದ ಹಲವು ವರ್ಷಗಳ ಸತತ ಪರಿಶ್ರಮದ ಮೊದಲ ನೋಟವನ್ನು ಜಗತ್ತಿಗೆ ಪರಿಚಯಿಸಲು ಚಿತ್ರತಂಡ ಸಜ್ಜಾಗಿದೆ.

ರಾಮಾಯಣವು ನಮ್ಮೆಲ್ಲರ ಪರಂಪರೆಯಾಗಿದೆ. ಅತ್ಯಂತ ಜವಾಬ್ದಾರಿ ಮತ್ತು ಭಕ್ತಿಯಿಂದ ಈ ಮಹಾಕಾವ್ಯಕ್ಕೆ ಜೀವ ತುಂಬುತ್ತಿದ್ದೇವೆ. ಹನುಮ ಜಯಂತಿಯಂದು ನಡೆಯಲಿರುವ ಈ ಗ್ರಾಂಡ್ ವರ್ಲ್ಡ್ ರಿವೀಲ್ ಕೇವಲ ಸಿನಿಮಾದ ಅಪ್ಡೇಟ್ ಅಲ್ಲ. ಇದು ವಿಶ್ವಾದ್ಯಂತ ಇರುವ ರಾಮಭಕ್ತರು ಮತ್ತು ಅಭಿಮಾನಿಗಳ ಸಂಭ್ರಮಾಚರಣೆಯಾಗಲಿದೆ ಎಂದು ನಿರ್ಮಾಪಕ ನಮಿತ್ ಮಲ್ಹೋತ್ರ ಸೋಷಿಯಲ್ ಮೀಡಿಯಾ ದಲ್ಲಿ ಬರೆದುಕೊಂಡಿದ್ದಾರೆ.

ರಣಬೀರ್ ಕಪೂರ್ ಶ್ರೀರಾಮನಾಗಿ, ಸಾಯಿ ಪಲ್ಲವಿ ಸೀತೆಯಾಗಿ ಹಾಗೂ ನಟ ಯಶ್ ರಾವಣನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಇನ್ನು ಸನ್ನಿ ಡಿಯೋಲ್ ಹನುಮಂತನಾಗಿ ಮತ್ತು ರವಿ ದುಬೆ ಲಕ್ಷ್ಮಣನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಚಿತ್ರದ ಮೊದಲ ಭಾಗವು ಈ ವರ್ಷದ ದೀಪಾವಳಿಗೆ ತೆರೆಗೆ ಬರಲಿದ್ದು, ಎರಡನೇ ಭಾಗವು ಮುಂದಿನ ವರ್ಷದ ದೀಪಾವಳಿಗೆ ಬಿಡುಗೆಯಾಗಲಿದೆ.

ವಿರಾಮ

ಓದುವ ಲೋಕಕ್ಕೆ ಓದುವ ನಿಲ್ದಾಣ



ಅಂತರ್ಜಾತೀಯ ವಿವಾಹ!

1936ರ ಮೇ 6ರಂದು ಮಂಗಳೂರಿನಲ್ಲಿ ನಡೆದ ಸರಳ ನೋಂದಾವಣೆಯಲ್ಲಿ ತಾತ ಅಮ್ಮನನ್ನು ಮದುವೆಯಾಗಿದ್ದರು. ಅವರ ಅಂತರ್ಜಾತೀಯ ವಿವಾಹದ ಸುದ್ದಿ ಆಗಿನ ಸಂಪ್ರದಾಯವಾದಿ ಬ್ರಾಹ್ಮಣ ಮತ್ತು ಬಂಟ ಸಮುದಾಯಗಳಲ್ಲಿ ದೊಡ್ಡ ಸಾಮಾಜಿಕ ಬಿರುಗಾಳಿಯನ್ನೇ ಹುಟ್ಟು ಹಾಕಿತ್ತು. ಕಡೆಂಜ ಗುತ್ತು ಪರಿವಾರದ ಯಜಮಾನ, ಅಮ್ಮನ ಸೋದರ ಮಾವ ಎಷ್ಟು ಬೇಸರಿಸಿ ದ್ದರೆಂದರೆ ಮದುವೆಯ ಸುದ್ದಿ ಕೇಳಿ ತಲೆ ಚಚ್ಚಿಕೊಂಡು, 'ಛೆ, ಛೆ, ಛೆ, ಎನ್ನ ಕುಲಕ್ಕು ಒಂಜಿ ಐಬು!' (ನನ್ನ ಕುಟುಂಬಕ್ಕಿದು ಎಂಥಾ ಕಳಂಕ!) ಎಂದು ವ್ಯಥೆಪಟ್ಟಿದ್ದರಂತೆ. ಉಡುಪಿಯಲ್ಲಿದ್ದ ಬ್ರಾಹ್ಮಣ ಪತ್ರಕರ್ತನೊಬ್ಬ ಈ 'ವರ್ಣ ಸಂಕರ'ವನ್ನು ನೋಡಿ ಕೆರಳಿ ತನ್ನ ಪೀತ ಪತ್ರಿಕೆಯಲ್ಲಿ ಮಾನಹಾನಿಕರ ಲೇಖನವನ್ನೇ ಬರೆದಿದ್ದನಂತೆ. ತಾತ ಎಂದಿನಂತೆ ರೊಚ್ಚಿಗೆದ್ದು ಅವನ ಮೇಲೆ ದಾವೆ ಹಾಕಿದ್ದರಂತೆ. ಸೋತರೂ ಆ ಸಂಪ್ರದಾಯಸ್ಥ ಉಗ್ರ ಪತ್ರಕರ್ತ ಕ್ಷಮೆ ಕೇಳಿ ದಂಡ ಕಟ್ಟುವ ಬದಲು ತನ್ನ ಸಿದ್ಧಾಂತಕ್ಕೆ ಅಂಟಿಕೊಂಡು ಹಟಕ್ಕೆ ಬಿದ್ದು ಜೈಲಿಗೇ ಹೋದನಂತೆ. (ಪುಟ 140)



ಕಾರಂತರ ಸುಳಿಯಲ್ಲಿ
ಮೂಲ : ಉಲ್ಲಾಸ ಕಾರಂತ, ಮಾಲವಿಕಾ ಕಪೂರ, ಕ್ಷಮಾ ರಾವ್
ಕನ್ನಡಕ್ಕೆ : ವಿಶ್ವೇಶ್ವರ ಭಟ್
ಪ್ರ:ವಿಶ್ವವಾಣಿ ಪುಸ್ತಕ ಬೆಂಗಳೂರು
84310 07267
ಬೆಲೆ ರು.395/-

ಬಹುಮುಖ ಪ್ರತಿಭೆಯ ಅನಾವರಣ!

ಕನ್ನಡದ ಪ್ರಮುಖ ಸಾಹಿತಿ ಮತ್ತು ಬಹುಮುಖ ಪ್ರತಿಭೆಯ ಶಿವರಾಮ ಕಾರಂತರದು ದೈತ್ಯ ವ್ಯಕ್ತಿತ್ವ. ಅವರು 47 ಕಾದಂಬರಿಗಳನ್ನು ಬರೆದಿದ್ದಾರೆ; ಜತೆಯಲ್ಲೇ, ಅವರ ಹೆಸರಿನಲ್ಲಿರುವ ಕನ್ನಡ ಕೃತಿಗಳ ಸಂಖ್ಯೆ 400 ದಾಟಿದೆ. ಸಾಹಿತ್ಯದ ಜತೆಯಲ್ಲೇ, ಯಕ್ಷಗಾನ, ಚಿತ್ರಕಲೆ, ಸಮಾಜಸೇವೆ, ಸಂಗೀತ, ನೃತ್ಯ ಮತ್ತು ಇತರ ಕ್ಷೇತ್ರಗಳಲ್ಲಿ ವ್ಯಾಪಕವಾದ ಕೆಲಸವನ್ನು ಮಾಡಿದ್ದ ಶಿವರಾಮ ಕಾರಂತರು, 'ಯಕ್ಷಗಾನ ಬ್ಯಾಲೆ' ಎಂಬ ಹೊಸ ಪ್ರಕಾರದ ರಂಗಕಲೆಯನ್ನು ರೂಪಿಸಿದ್ದರು. ಶಿವರಾಮ ಕಾರಂತರದು ಬಹುಮುಖ ಮತ್ತು ದೈತ್ಯ ಪ್ರತಿಭೆ; ಅವರ ಕುರಿತು ಅವರ ಮಕ್ಕಳಾದ ಉಲ್ಲಾಸ ಕಾರಂತ, ಮಾಲವಿಕಾ ಕಪೂರ ಮತ್ತು ಕ್ಷಮಾ ರಾವ್ ಅವರು 'ಗ್ರೋಯಿಂಗ್ ಅಪ್ ಕಾರಂತ್' ಎಂಬ ಇಂಗ್ಲಿಷ್ ಕೃತಿಯನ್ನು ರಚಿಸಿದ್ದು, ಅದನ್ನು 'ಕಾರಂತರ ಸುಳಿಯಲ್ಲಿ' ಎಂಬ ಹೆಸರಿನಲ್ಲಿ ಕನ್ನಡ ಅನುವಾದ ಮಾಡಿದವರು ವಿಶ್ವೇಶ್ವರ ಭಟ್. ಹಲವು ಅಪರೂಪದ ಫೋಟೋಗಳೊಂದಿಗೆ ಈ ಅನುವಾದಿತ ಕೃತಿ ಇದೀಗ ಮಾರುಕಟ್ಟೆಗೆ ಬಂದಿದೆ. ಬದುಕಿದ್ದಾಗಲೇ ದಂತಕತೆಯಾಗಿದ್ದ ಶಿವರಾಮ ಕಾರಂತರನ್ನು ಹತ್ತಿರದಿಂದ ಕಂಡ ಅವರ ಮೂವರು ಮಕ್ಕಳ ಲೇಖನಿಯಲ್ಲಿ, ಕಾರಂತರ ಬದುಕಿನ ಹಲವು ಒಳನೋಟಗಳು ಮೂಡಿಬಂದಿವೆ. ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ, ಯಕ್ಷಗಾನ ಮೊದಲಾದ ವಿಷಯಗಳಲ್ಲಿ ಆಸಕ್ತಿ ಇರುವವರೆಲ್ಲರೂ ಓದಲೇಬೇಕಾದ ಪುಸ್ತಕವಿದು. 'ಕಾರಂತರ ಸುಳಿಯಲ್ಲಿ' ಪುಸ್ತಕದ ಆಯ್ದ ಭಾಗಗಳು ಇಲ್ಲಿವೆ.

1922 ರಲ್ಲಿ ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ತಾತ (ಶಿವರಾಮ ಕಾರಂತರನ್ನು ಅವರ ಮಕ್ಕಳು ಕರೆಯುತ್ತಿದ್ದುದು ತಾತ ಎಂದು) ವಿದ್ಯಾರ್ಥಿಯಾಗಿದ್ದಾಗ ಕಣ್ಣಪ್ಪ ಎಂಬೊಬ್ಬ ಶಿಕ್ಷಕರಿದ್ದರು. ಒಂದು ದಿನ ಅವರು ತಾತ ತೀರಾ ಬೇಸರಲ್ಲಿದ್ದುದನ್ನು ನೋಡಿದರು. ಕಾರಣ ಕೇಳಿದಾಗ, ಕಾಲೇಜಿನ ಓದು ತನ್ನ ಬದುಕಿನ ಪ್ರಯಾಣಕ್ಕೆ ಯಾವುದೇ ರೀತಿಯಲ್ಲೂ ಪ್ರಯೋಜನಕ್ಕೆ ಬರುತ್ತಿಲ್ಲ ಎಂದು ತಾತ ಹೇಳಿದರು. ಮರುದಿನವೇ ತಾತ ಕಾಲೇಜು ಬಿಟ್ಟು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಆಗಷ್ಟೇ ಮೋಹನದಾಸ ಕರಮಚಂದ್ ಗಾಂಧಿಯವರ ಪ್ರಭಾವದಲ್ಲಿ ದೇಶದ ಸ್ವಾತಂತ್ರ್ಯ ಚಳವಳಿಗೆ ಹೊಸ ವೇಗೋತ್ಕರ್ಷ ದೊರಕಿತ್ತು. ತಾತ ಮಹಾತ್ಮ ಗಾಂಧೀಜಿಯವರ ಪ್ರಶ್ನಾತೀತ ಅನುಯಾಯಿಯಾದರು.

ಗಾಂಧೀಜಿಯ ಆದೇಶದಂತೆ ಇವರೂ ಖಾದಿ ಮತ್ತು ಗ್ರಾಮೋದ್ಯೋಗ ಉನ್ನತಿಗೆ ಪ್ರೋತ್ಸಾಹ, ಅಸ್ಪೃಶ್ಯತೆ ನಿವಾರಣೆಗೆ ಜಾತಿ ಮೂಲದ ವೇಶ್ಯಾವೃತ್ತಿ ಹಾಗೂ ವಯಸ್ಕರ ಶಿಕ್ಷಣಕ್ಕಾಗಿ ಹಗಲಿರುಳು ದುಡಿಯತೊಡಗಿದರು. ತಾತನ ಈ ಚಟುವಟಿಕೆಗಳು ಅವರದೇ ಮನೆಯಲ್ಲಿ ಬಿರುಗಾಳಿ ಎಬ್ಬಿಸಿದವು. ಅವರದು ಅತ್ಯಂತ ಸಾಂಪ್ರದಾಯಿಕ ಕುಟುಂಬ ಹಾಗೂ ಸಮುದಾಯ.

ತಾತನ ತಂದೆ ಶೇಷ ಕಾರಂತರು ಕೂಡ ಅವರದೇ ರೀತಿಯಲ್ಲಿ ಬಹಳ ಸಾಹಸಿ ಮನುಷ್ಯ. ಅವರೂ ತಾತನ ಈ ಜೀವನ ವಿಧಾನವನ್ನು, ಅವರ ಆಯ್ಕೆಗಳನ್ನು ನೋಡಿ ಬೇಸರದಿಂದ ಕಣ್ಣೀರು ಹಾಕಿದರು. ಶೇಷ ಕಾರಂತರ ಆಪ್ತ ಸ್ನೇಹಿತ ನಾರಾಯಣ ಮಯ್ಯ ಅವರು ಈ 'ಶಿವರಾಮ ಬ್ರಾಹ್ಮಣಿಕೆ ಬಿಟ್ಟು ಹಾಳಾದರೆ ಏನಾಯಿತು, ನಿನಗೆ ಇನ್ನೂ ಏಳು ಮಂದಿ ಒಳ್ಳೆಯ ಗಂಡು ಮಕ್ಕಳಿದ್ದಾರಲ್ಲ. ಅವರು ಕುಟುಂಬದ ಸಂಪ್ರದಾಯವನ್ನು ಮುನ್ನಡೆಸುತ್ತಾರೆ ಎಂದು ಸಮಾಧಾನ ಮಾಡಿದ್ದರಂತೆ. ಆದರೆ ಶೇಷ ಕಾರಂತರು ಅವರಿಗೆ, 'ನಿನಗೆ ನನ್ನ ನಾಲ್ಕನೇ ಮಗ ಶಿವರಾಮನ ನಿಜವಾದ ಯೋಗ್ಯತೆ ಗೊತ್ತಿಲ್ಲ. ಅವನು ಬೇರೆಲ್ಲ ಮಕ್ಕಳನ್ನು ಒಟ್ಟು ಸೇರಿಸಿದರೂ ಅವರಿಗಿಂತ ಹೆಚ್ಚು ತೂಕದವನು' ಎಂದು ಹೇಳಿದ್ದರಂತೆ. (ಪುಟ 38)

ಸಾರಾಯಿ ಸಮಾಜಕ್ಕೆ ಶಾಪ!

1920ರ ದಶಕದಲ್ಲಿ ಮಹಾತ್ಮ ಗಾಂಧೀಜಿಯವರ ಬೋಧನೆಗಳಿಗೆ ಅನುಗುಣವಾಗಿ ಬದುಕಲು ತಾತ ಬಹಳ ಪ್ರಯತ್ನಪಟ್ಟಿದ್ದರು. ಆದರೆ ಪ್ರತಿ ಬಾರಿಯೂ ಸೋಲುತ್ತಿದ್ದರು. ಗಾಂಧೀಜಿ ಹೇಳಿದಂತೆ ಚರಕದಲ್ಲಿ ನೂಲ ತೆಗೆದು ತಯಾರಿಸಿದ ಖಾದಿಯನ್ನು ಹಳ್ಳಿಗಳಲ್ಲಿ ಮಾರಲು ಯತ್ನಿಸಿದರು. ಆದರೆ ಯಾರೂ ಕೊಳ್ಳುತ್ತಿರಲಿಲ್ಲ. ಕೂಲಿಕಾರರು ದಿನದ ಸಂಜೆ ಆಯಾಸ ಮರೆಯಲು ಕುಡಿಯುತ್ತಿದ್ದ 'ಸಾರಾಯಿ ಈ ಸಮಾಜಕ್ಕೆ ಶಾಪ' ಎಂದು ತಾತ ಎಲ್ಲೆಡೆ ಪ್ರಚಾರ ಮಾಡುತ್ತಿದ್ದರು. ಆದರೆ ಯಾರೂ ಕೇಳುತ್ತಿರಲಿಲ್ಲ. ಶ್ರೀಮಂತರಿಗೆ ತಮ್ಮ ಸಮುದಾಯದ ಹೆಣ್ಣುಮಕ್ಕಳನ್ನು ಉಪ ಪತ್ನಿಯರನ್ನಾಗಿ ಕಳುಹಿಸುವ ಜಾತಿಯವರಿಗೆ ಹೆಣ್ಣುಮಕ್ಕಳ ಬ್ರಹ್ಮಚರ್ಯದ ಬಗ್ಗೆ ತಾತ ಬೋಧಿಸುತ್ತಿದ್ದರು. ಅದಕ್ಕೆ ಯಾರೂ ಸೊಪ್ಪು ಹಾಕುತ್ತಿರಲಿಲ್ಲ. ಈ ಎಲ್ಲ ವೈಫಲ್ಯಗಳ ನಡುವೆಯೂ ತಾತ ಒಬ್ಬ ಪ್ರಗತಿಪರ, ನಾಸ್ತಿಕ ಹಾಗೂ ಆಧುನಿಕವಾದಿ ಚಿಂತಕನಾಗಿ ರೂಪುಗೊಳ್ಳುತ್ತಿದ್ದರು. ಸಮಾಜಕ್ಕೆ ವಿಜ್ಞಾನ, ತಂತ್ರಜ್ಞಾನ ಹಾಗೂ ಪಾಶ್ಚಾತ್ಯ ವೈದ್ಯಕೀಯ ಕ್ಷೇತ್ರದಿಂದ ದೊರೆತ ಲಾಭವನ್ನು ಅವರು ಮೆಚ್ಚುತ್ತಿದ್ದರು. ಕ್ರಮೇಣ ತಾತನಿಗೆ ಗಾಂಧೀಜಿಯವರ ಆರ್ಥಿಕ ಬೆಳವಣಿಗೆ ವಿರೋಧಿ ವಾದಗಳು, ಲೈಂಗಿಕತೆಯನ್ನು ಅಲ್ಲಗಳೆಯುವ ಬೋಧನೆಗಳು, ದೇವರಿಗೆ ಹೆದರುವ ನಂಬಿಕೆ ಮುಂತಾದ ಧೋರಣೆಗಳು ಜನಸಾಮಾನ್ಯರ ಬದುಕನ್ನು ಸುಧಾರಿಸುವುದಕ್ಕೆ ಅಪ್ರಸ್ತುತವಾಗಿವೆ ಅನ್ನಿಸತೊಡಗಿತು. ಹೀಗಾಗಿ ಗಾಂಧಿವಾದದಿಂದ ತಾತನ ಗಮನ ವಿಮುಖವಾಗಿ 1930ರ ದಶಕದಲ್ಲಿ ಸಮಾಜ ಸೇವೆಯತ್ತ ತಿರುಗಿತು. (ಪುಟ 52)

ಅಮ್ಮ ಮತ್ತು ಅವರ ಕುಟುಂಬ

ಜಾತಿಯಿಂದ ಅಮ್ಮ ಬಂಟ ಸಮುದಾಯದವರು. ಬಂಟ ಪದಕ್ಕೆ 'ರಾಜನಿಗೆ ನಿಷ್ಠ ಯೋಧ' ಎಂಬ ಅರ್ಥವಿದೆ. ಬಂಟರು ಕೆನರಾ ಹಾಗೂ ಮಲೆನಾಡು ಪ್ರದೇಶಗಳನ್ನು ಆಳಿದ ರಾಜರಿಗೆ ಸೇನಾಧಿಕಾರಿಗಳು ಹಾಗೂ ತೆರಿಗೆ ಸಂಗ್ರಹಿಸಿ ಕೊಡುತ್ತಿದ್ದ ಜಮೀನ್ದಾರರಾಗಿದ್ದರು. 'ಕೆನರಾ' ಎಂಬುದು ಬ್ರಿಟಿಷರ ದಾಖಲೆಗಳಲ್ಲಿ ಅಪಭ್ರಂಶವಾದ 'ಕನ್ನಡ' ಎಂಬ ಪದ. ಈಗ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ನಡುವೆ ಆಡಳಿತಾತ್ಮಕವಾಗಿ ಹಂಚಿ ಹೋದ ಪ್ರದೇಶಗಳನ್ನು ಹಿಂದೆ ಒಟ್ಟಿಗೇ 'ಕೆನರಾ ಪ್ರದೇಶ' ಎಂದು ಕರೆಯುತ್ತಿದ್ದರು. ಇಂದಿನ ಕೇರಳದ ಕಾಸರಗೋಡು ಜಿಲ್ಲೆಯ ಚಂದ್ರಗಿರಿ ನದಿಯ ಉತ್ತರಕ್ಕೆ ಇರುವ ಪ್ರದೇಶ ಕೂಡ ಇದಕ್ಕೆ ಸೇರಿತ್ತು. ಕ್ರಮೇಣ ಈ ಬಂಟ ಯೋಧರು ದಕ್ಷಿಣ ಕನ್ನಡದ ಪ್ರಭಾವಿ ಜಮೀನ್ದಾರ ಜಾತಿಯಾಗಿ ಬೆಳೆದರು. ಅಮ್ಮ ತುಳು ಮಾತನಾಡುತ್ತಿದ್ದರು. ಲೀಲಾ ಆಳ್ವ ಆಕೆಯ ಮೂಲ ಹೆಸರು. 1919ರ ಸೆಪ್ಟೆಂಬರ್ 21 ರಂದು ಮುಂಬಯಿಯಲ್ಲಿ ಜನನ. ತಂದೆ ಕಾಮು ಆಳ್ವ (1887–1937) ಹಾಗೂ ತಾಯಿ ಕಮಲಾ ಆಳ್ವ. ಮಹಿಳಾ ಪ್ರಧಾನ ಕುಟುಂಬದ ಸಂಪ್ರದಾಯದಂತೆ ಅಮ್ಮನ ಮೂಲ ಮನೆ ಕಡೆಂಜ ಗುತ್ತು. ಅದು ಜಮೀನ್ದಾರ ಕುಲ. ಮಂಗಳೂರಿಗೆ ಹೊಂದಿಕೊಂಡು ನೇತ್ರಾವತಿ ನದಿಯ ಬಳಿ ಅವರ ಜಮೀನಿತ್ತು. ನಮ್ಮ ಅಜ್ಜಿ ಕಮಲಾ ಕುಟುಂಬದ ಸೋದರ ಮಾವ (ಗುತ್ತುವಿನ ಯಜಮಾನ) ತ್ಯಾಂಪಣ್ಣ ಭಂಡಾರಿ. ಅವರು ಸಾಂಪ್ರದಾಯಿಕ 'ಮೂಳೆ ವೈದ್ಯ. ಪ್ರಸಿದ್ಧ ಕಡೆಂಜ ಬೇನೆದ ಎಣ್ಣೆ' (ನೋವಿಗೆ ನೀಡುವ ಗಿಡ ಮೂಲಿಕೆ ತೈಲ) ಕಂಡುಹಿಡಿದಿದ್ದು ಹಾಗೂ ಪೇಟೆಂಟ್ ಪಡೆದುಕೊಂಡಿದ್ದು ಅವರ ಹಿರಿಮೆ. (ಪುಟ 43)



ಕಾರಂತ ಸಂಸಾರ: ಹರ್ಷ, ಅಮ್ಮ, ಕ್ಷಮಾ, ಮಾಲವಿಕಾ, ತಾತಾ ಮತ್ತು ಉಲ್ಲಾಸ

ತಾತನ ಗೆಳೆಯರು...

ತಾತನ ಆಹ್ವಾನದ ಮೇಲೆ ದೊಡ್ಡ ದೊಡ್ಡ ಸಾಹಿತಿಗಳೂ ಮನೆಗೆ ಬಂದು ಸಾಹಿತ್ಯದ ಬಗ್ಗೆ, ಲಲಿತ ಕಲೆಗಳ ಬಗ್ಗೆ ಹಾಗೂ ಆಯಾ ಸಮಯದಲ್ಲಿ ಮನಸ್ಸಿಗೆ ತೋಚಿದ ಸಂಗತಿಗಳ ಬಗ್ಗೆ ಅವರೊಡನೆ ಬಗ್ಗೆ ಚರ್ಚಿಸುತ್ತಿದ್ದರು. ದ.ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ. ಸೀತಾರಾಮಯ್ಯ (ವೀಸಿ) ಮುಂತಾದವರು ತಾತನ ಆತ್ಮೀಯ ಸ್ನೇಹಿತರಾಗಿದ್ದರು. ಆಗ ನಮ್ಮ ಮನೆಯ ಅಂಗಳದಲ್ಲಿ ಒಂದು ನಕ್ಷತ್ರಾಕಾರದ ನೈದಿಲೆ ಕೊಳ ಇತ್ತು. ನೀರಿನ ಅಭಾವದ ಕಾರಣ ತಾತ ಅದನ್ನು ಮುಚ್ಚಿಸಿ, ಸಣ್ಣದೊಂದು ವೇದಿಕೆಯ ರೀತಿ ಮಾಡಿಸಿಟ್ಟಿದ್ದರು. ತಾತ ಹಾಗೂ ಅವರ ದಿಗ್ಗಜ ಸಾಹಿತಿ ಗೆಳೆಯರು ಆ ನಕ್ಷತ್ರಾಕಾರದ ವೇದಿಕೆಯ ಮೇಲೆ ಕುಳಿತು ಚರ್ಚೆ ಮಾಡುತ್ತಿದ್ದರು. ಈಗಿನ ಸಾಹಿತಿಗಳಂತೆ ಅವರ್‍ಯಾರೂ ಪರಸ್ಪರರನ್ನು ಸ್ಪರ್ಧಿಗಳಂತೆ ನೋಡುತ್ತಿರಲಿಲ್ಲ. ಬದಲಿಗೆ ಎಲ್ಲರೂ ಆಪ್ತ ಸ್ನೇಹಿತರಂತಿದ್ದರು. ಅದರಲ್ಲೂ ತಾತನಿಗೆ ವೀಸಿ, ಮಾಸ್ತಿ ಹಾಗೂ ಶ್ರೀರಂಗ (ಆರ್.ವಿ. ಜಹಗೀರದಾರ) ಹತ್ತಿರದ ಗೆಳೆಯರಾಗಿದ್ದರು. ನನಗೆ ಅವರೆಲ್ಲ ಮಾವಂದಿರಂತೆ. ಅವರು ಮಾತನಾಡುತ್ತಿದ್ದಾಗ ನಾನು ತಾತನ ಹಿಂದೆ ನಿಂತು ತಾತನ ಉದ್ದ ಕೂದಲಿಗೆ ಜಡೆ ಹಾಕುತ್ತ ನನ್ನದೇ ಮೋಜಿನ ಲೋಕದಲ್ಲಿರುತ್ತಿದ್ದೆ. ಅವರ ನಡುವೆ ನಡೆಯುತ್ತಿದ್ದ ಸಾಹಿತ್ಯ ಲೋಕದ ಸಂಭಾಷಣೆಗಳ ಗಂಧಗಾಳಿಯೂ ನನಗೆ ತಿಳಿಯುತ್ತಿರಲಿಲ್ಲ.

ವರ್ಷಗಳ ನಂತರ ಶ್ರೀರಂಗರ ಮಗಳು, ಖ್ಯಾತ ಲೇಖಕಿ ಶಶಿ ದೇಶಪಾಂಡೆ ಹಾಗೂ ನಾನು ಬಹಳ ಆತ್ಮೀಯ ಗೆಳತಿಯರಾದೆವು. ಸಾಹಿತಿ ಗೆಳೆಯರು ಮನೆಗೆ ಬಂದಾಗಲೂ ತಾತ ತಮ್ಮ ನಿತ್ಯದ ಬರವಣಿಗೆಯನ್ನು ಬಿಡುತ್ತಿರಲಿಲ್ಲ. ಊಟ, ತಿಂಡಿಗೆ ಕೆಳಗೆ ಬಂದು, ಸ್ನೇಹಿತರ ಜತೆ ಸ್ವಲ್ಪ ಸಮಯ ಕಳೆದು, ಮತ್ತೆ ಮಹಡಿಗೆ ಹೋಗಿ ಬರೆಯಲು ಕುಳಿತುಬಿಡುತ್ತಿದ್ದರು. ಆಗೆಲ್ಲ ತಾತನ ಸ್ನೇಹಿತರ ಜತೆ ಅಮ್ಮ ಮಾತಾಡುತ್ತಿದ್ದಳು. ಅವರಲ್ಲಿ ಕೆಲ ಸಾಹಿತಿಗಳಿಗೆ ಅಮ್ಮ ಬೌದ್ಧಿಕವಾಗಿಯೂ ಆತ್ಮೀಯರಾಗಿದ್ದರು. ಅತಿಥಿ ಸತ್ಕಾರದಲ್ಲಿ ಅಮ್ಮ ತುಂಬಾ ಪಳಗಿದ್ದಳು. (ಪುಟ 96)

ವಿದೇಶೀ ವಿದ್ವಾಂಸರ ಗೆಳೆತನ

ಯುನೆಸ್ಕೋದಿಂದ ಸೂಸಿ ಎಂಬ ಮಹಿಳೆಯೊಬ್ಬರು ಪುತ್ತೂರಿನ 'ಬಾಲವನ'ಕ್ಕೆ ಬಂದಿದ್ದರು. ಕ್ಷಮಾ ಹಾಗೂ ನಾನು ಆಕೆಯನ್ನು ಬಹಳ ಹಚ್ಚಿಕೊಂಡಿದ್ದೆವು. ವಯಸ್ಕರ ಶಿಕ್ಷಣದಲ್ಲಿ ತಾತನ ಜತೆ ಕೆಲಸ ಮಾಡಲು ಬಂದಿದ್ದ ಯುನೆಸ್ಕೋ ತಂಡದಲ್ಲಿ ಆ ಮಹಿಳೆಯಿದ್ದರು. ನಾವು ನೋಡಿದ ಮೊದಲ ಆಫ್ರಿಕನ್-ಅಮೆರಿಕನ್ ವ್ಯಕ್ತಿ ಸೂಸಿ. ಅವಳು ಹೋದಲ್ಲೆಲ್ಲ ನಾಯಿಮರಿಗಳಂತೆ ನಾವು ಹಿಂದೆಯೇ ಹೋಗುತ್ತಿದ್ದೆವು. ನಮ್ಮನ್ನು ನೋಡಿ ಸಂತೋಷಗೊಂಡ ಆಕೆ ಆಟಿಗೆ ಇಲಿಯೊಂದನ್ನು ಕೊಟ್ಟಿದ್ದಳು. ಈ ಮೆಕಾನಿಕಲ್ ಮೌಸ್ ಓಡುತ್ತಾ ಹೋಗಿ ಪಲ್ಟಿ ಹೊಡೆಯುತ್ತಿತ್ತು. ನಮಗದು ತುಂಬಾ ಖುಷಿ ಕೊಟ್ಟ ಆಟಿಕೆಯಾಗಿತ್ತು. ಬಾಲವನಕ್ಕೆ ಬಂದ ಇನ್ನೊಬ್ಬರು ಹಳೆಯ ಅತಿಥಿಯೆಂದರೆ ಆಸ್ಟ್ರಿಯಾದ ಮಾನವಶಾಸ್ತ್ರಜ್ಞೆ ಲೂಯಿಸಾ ಕೋಲಿನ್‌ಹಾಫರ್. ಆಕೆ ಕೆನರಾ ಪ್ರದೇಶದ ಬಂಟ ಸಮಾಜದ ಬಗ್ಗೆ ಅಧ್ಯಯನ ಮಾಡಲು ಬಂದಿದ್ದರು. ತಾತನ ಬಂಟ ಸ್ನೇಹಿತ ಅಗ್ರಾಳ ಪುರಂದರ ರೈ ಆಕೆಗೆ ಸಹಾಯ ಮಾಡಿದ್ದರು. 1960ರ ದಶಕದ ಕೊನೆಯಲ್ಲಿ ಮಿಶಿಗನ್ ಯುನಿವರ್ಸಿಟಿಯ ಮಾರ್ಥಾ ಆಶ್ಟನ್ ಎಂಬ ಪಿಎಚ್‌ಡಿ ವಿದ್ಯಾರ್ಥಿನಿ ತಾತನ ಮಾರ್ಗದರ್ಶನದಲ್ಲಿ ಯಕ್ಷಗಾನವನ್ನು ಅಧ್ಯಯನ ಮಾಡಲು ಬಂದಿದ್ದಳು. ನಂತರ ಹಲವಾರು ವರ್ಷಗಳ ಕಾಲ ಆಕೆ ನಮ್ಮ ಕುಟುಂಬದ ಜತೆ ಸಂಪರ್ಕದಲ್ಲಿದ್ದಳು. ತಾತ ಯಕ್ಷಗಾನದ ಸ್ವರೂಪವನ್ನು ಬದಲಿಸುವ ಮೂಲಕ ಅದನ್ನು ಕರ್ನಾಟಕದ ಗಡಿಯಾಚೆ ಯಶಸ್ವಿಯಾಗಿ ಕೊಂಡೊಯ್ಯುವ ಪ್ರಯೋಗ ಮಾಡಿದಾಗ ಆಕೆಗೆ ತಾತನ ಜತೆ ಭಿನ್ನಾಭಿಪ್ರಾಯ ಉಂಟಾಗಿ ಸಂಪರ್ಕ ಕಡಿದುಕೊಂಡಳು. ಇನ್ನೊಬ್ಬ ವಿದೇಶಿ ಅತಿಥಿ ಫ್ರಾನ್ಸ್‌ನಿಂದ ಬಂದ ಅದ್ವೈತ ತತ್ವಶಾಸ್ತ್ರದ ವಿದ್ಯಾರ್ಥಿ ಪೌಲ್ ಮಾರ್ಟಿನ್ ಡ್ಯುಬೋಸ್ಟ್. ತಾತ ತನ್ನ ಸ್ನೇಹಿತ ಶ್ರೀನಿವಾಸ ಜೋಯಿಸರ ಮೂಲಕ ಆತನಿಗೆ ವಿವಿಧ ಅದ್ವೈತ ಮಠಗಳ ಭೇಟಿಗೆ ವ್ಯವಸ್ಥೆ ಮಾಡಿಸಿದ್ದರು. ಶ್ರೀನಿವಾಸ ಜೋಯಿಸರು ಚಿಕ್ಕಮಗಳೂರು ಜಿಲ್ಲೆಯ ಹರಿಹರಪುರದ ಹಳ್ಳಿಯಲ್ಲಿರುತ್ತಿದ್ದರು. ಡ್ಯುಬೋಸ್ಟ್ ಅಲ್ಲಿಗೆ ಬಸ್ಸಿನಲ್ಲಿ ಹೋಗಿ ಅವರನ್ನು ಕೂಡಿಕೊಳ್ಳಬೇಕಿತ್ತು. ಆದರೆ ಡ್ಯುಬೋಸ್ ಫ್ರೆಂಚನಾಗಿದ್ದರಿಂದ ಅವನಿಗೆ 'ಹ' ಮತ್ತು 'ರ' ಉಚ್ಚಾರ ಮಾಡಲು ಬರುತ್ತಿರಲಿಲ್ಲ. ಹೀಗಾಗಿ ಹರಿಹರಪುರದ ದಾರಿ ಕೇಳಲು ಅವನು 'ಅಯಿಅಅಪುಅ' ಎಲ್ಲಿದೆ ಎಂದ ಕೇಳುತ್ತಿದ್ದ! ಹೀಗಾಗಿ ಅವನು ದಾರಿ ಕೇಳಿದ ಎಲ್ಲರೂ ಬೇಸ್ತು ಬೀಳುತ್ತಿದ್ದರು! (ಪುಟ 154)

ಡಯಾನಾ ದಿ ಹಂಟ್ರೆಸ್!

ತಾತನ ಅದ್ಭುತ ಲೈಬ್ರರಿಯನ್ನು ನಾನು ಬಹಳ ಇಷ್ಟಪಡುತ್ತಿದ್ದೆ. ಪುಸ್ತಕಗಳಿಂದ ಕಿಕ್ಕಿರಿದು ತುಂಬಿದ ಹಲವಾರು ಕಪಾಟುಗಳು ಅಲ್ಲಿದ್ದವು. ಬ್ರಿಟಾನಿಕಾ ಸರಣಿಯ ಸಂಪೂರ್ಣ ವಿಶ್ವಕೋಶದ ಜತೆಗೆ ನಾನಾ ರೀತಿಯ ಎನ್‌ಸೈಕ್ಲೋಪೀಡಿಯಾಗಳಿದ್ದವು. ಪ್ರಕೃತಿ, ವಿಜ್ಞಾನ, ಕಲೆ ಮುಂತಾದ ವಿಷಯಗಳ ಬಗ್ಗೆಯೇ ಹೆಚ್ಚು ಪುಸ್ತಕಗಳಿದ್ದವು. ಹಾಗೆ ನೋಡಿದರೆ ಅಪ್ಪಟ ಸಾಹಿತ್ಯದ ಸಂಗ್ರಹ ಅಲ್ಲಿ ಹೆಚ್ಚೇನೂ ಇರಲಿಲ್ಲ. ತಾತನ ಲೈಬ್ರರಿಯಲ್ಲಿ ಪುಸ್ತಕಗಳಲ್ಲದೇ ಒಂದಷ್ಟು ಪ್ರಸಿದ್ಧ ವರ್ಣಚಿತ್ರಗಳನ್ನೂ ನೇತುಹಾಕಲಾಗಿತ್ತು. ಅವುಗಳಲ್ಲಿ ಎರಡು ಚಿತ್ರಗಳು ತಾತನ ಆಪ್ತ ಸ್ನೇಹಿತ ಹಾಗೂ ಪ್ರಸಿದ್ಧ ಕಲಾವಿದ ಕೆ.ಕೆ. ಹೆಬ್ಬಾರ್ ಅವರ ಹಳೆ ಪೇಂಟಿಂಗ್‌ಗಳು. ಅವರೇ ಅವುಗಳನ್ನು ಕೊಡುಗೆಯಾಗಿ ಕೊಟ್ಟಿದ್ದರು. ರವೀಂದ್ರನಾಥ್ ಠಾಗೋರ್ ಅವರ ದೊಡ್ಡ ತೈಲಚಿತ್ರ ಹಾಗೂ ಶಾಂತಿನಿಕೇತನ ಸ್ಕೂಲ್ ಆಫ್ ಆರ್ಟ್‌ನ ಇನ್ನಷ್ಟು ಚಿತ್ರಗಳಿದ್ದವು. ತಾತನ ಸ್ನೇಹಿತ ಹಾಗೂ ರಷ್ಯಾದ ಪ್ರಸಿದ್ಧ ಕಲಾವಿದೆ ಮಾಗ್ದ ನಾಚ್‌ಮನ್ (1889–1951) ಅವರ ಚಿತ್ರಗಳೂ ಇದ್ದವು. ಅವುಗಳಲ್ಲಿ ಒಂದು ತಾತ ಮೂವತ್ತರಲ್ಲಿದ್ದಾಗ ಬರೆದ ಅವರ ಸುಂದರ ಜಲವರ್ಣಚಿತ್ರ ಇನ್ನೊಂದು, ಕ್ಯಾನ್ವಾಸ್ ಮೇಲೆ ಬರೆದ ದೊಡ್ಡ ತೈಲವರ್ಣಚಿತ್ರ 'ಡಯಾನಾ ದಿ ಹಂಟ್ರೆಸ್'. ಬೆತ್ತಲೆ ಡಯಾನಾ ಹಾಗೂ ಆಕೆಯ ಗೆಳತಿಯೊಬ್ಬಳು ಎರಡು ಚಿರತೆಗಳನ್ನು (ಒಂದು ಚುಕ್ಕಿ ಚಿರತೆ, ಇನ್ನೊಂದು ಕಪ್ಪು ಚಿರತೆ) ಹಿಡಿದುಕೊಂಡು ಬೇಟೆಗೆ ಹೋಗುತ್ತಿರುವ ಚಿತ್ರವದು. ತಾತ ಹಲವಾರು ಇಂಗ್ಲಿಷ್ ಪತ್ರಿಕೆಗಳಿಗೆ ಚಂದಾದಾರರಾಗಿದ್ದರು. ರೀಡರ್ಸ್ ಡೈಜೆಸ್ಟ್, ಕೊರೊನೆಟ್, ನ್ಯಾಷನಲ್ ಜಿಯಾಗ್ರಫಿಕ್, ಲೈಫ್ ಹಾಗೂ ಟೈಮ್ ಹೀಗೆ ಹತ್ತಾರು ಇಂಗ್ಲಿಷ್ ನಿಯತಕಾಲಿಕೆಗಳು ಮನೆಗೆ ಬರುತ್ತಿದ್ದವು. ನಾನು ಹನ್ನೊಂದು ವರ್ಷದವರೆಗೆ ಅವುಗಳಲ್ಲಿರುವ ಅದ್ಭುತ ಚಿತ್ರಗಳನ್ನು ಮಾತ್ರ ಬೆರಗುಗಣ್ಣಿನಿಂದ ನೋಡಿ ಖುಷಿಪಡುತ್ತಿದ್ದೆ. ನಂತರ ಹೈಸ್ಕೂಲ್‌ಗೆ ಹೋಗತೊಡಗಿದ ಮೇಲೆ ಇಂಗ್ಲಿಷ್ ಕಲಿತೆ. ಆಮೇಲೆ ಅವುಗಳನ್ನು ಓದುವುದಕ್ಕೂ ಸಾಧ್ಯವಾಯಿತು. (ಪುಟ 158)

ಮೆಡಿಕಲ್ ಕಾಲೇಜಿಗೆ ಮಾನ್ಯತೆ!

ತಾತನ ಇನ್ನೊಂದು ದೀರ್ಘಾವಧಿ ಗೆಳೆತನವೆಂದರೆ ಮಣಿಪಾಲದ ಪೈಗಳ ಜತೆಗಿನದು. ಮಣಿಪಾಲದ ಪೈ ಕುಟುಂಬ ದಕ್ಷಿಣ ಕನ್ನಡದ ಆ ಸಣ್ಣ ಊರಿನ ಬರಡು ಗುಡ್ಡದ ಮೇಲೆ ಇಂದು ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾದ ಶಿಕ್ಷಣ ಸಂಸ್ಥೆಗಳು ಹಾಗೂ ವಾಣಿಜ್ಯೋದ್ಯಮಗಳನ್ನು ಕಟ್ಟಿ ನಿಲ್ಲಿಸುವ ಮೂಲಕ ಪ್ರಸಿದ್ಧಿ ಪಡೆದಿದೆ. ಮಣಿಪಾಲ ಸಾಮ್ರಾಜ್ಯದ ಸಂಸ್ಥಾಪಕ ಸಹೋದರರು ಉಪೇಂದ್ರ ಪೈ (1895–1956) ಮತ್ತು ಮಾಧವ ಪೈ (1898–1979). ಸಿಂಡಿಕೇಟ್ ಬ್ಯಾಂಕ್, ಹಲವಾರು ಆಸ್ಪತ್ರೆಗಳು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ ದೂರದೃಷ್ಟಿಯ ಸಾಧಕರು. ಅವರು 1950ರ ದಶಕದಲ್ಲಿ ಮೊದಲ ಬಾರಿ ಬಂಡವಾಳ ಆಧಾರಿತ ವೈದ್ಯಕೀಯ ಶಿಕ್ಷಣ ಕಾಲೇಜು ಆರಂಭಿಸುವ ಮೂಲಕ ಹೊಸ ಶೈಕ್ಷಣಿಕ ಮಾದರಿಯೊಂದನ್ನು ಹುಟ್ಟುಹಾಕಲು ಮುಂದಾಗಿದ್ದರು. ಆದರೆ ಮೈಸೂರು ವಿಶ್ವವಿದ್ಯಾಲಯದವರು ಅದಕ್ಕೆ ಬೇಕಾದ ಮಾನ್ಯತೆ ನೀಡಲು ನಿರಾಕರಿಸಿದ್ದರು. ತಾತನಿಗೆ ಅವರ ಸಾಹಿತ್ಯಕ ಹಿನ್ನೆಲೆ ಹಾಗೂ ಕರ್ನಾಟಕದ ಏಕೀಕರಣಕ್ಕಾಗಿ ನಡೆಸಿದ ಹೋರಾಟದ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಸ್ನೇಹಿತರಿದ್ದರು. ಅವರಲ್ಲೊಬ್ಬರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಹುಲಕೋಟಿ. ತಾತ ಹಾಗೂ ಪೈ ಸಹೋದರರು ಒಟ್ಟಾಗಿ ಹುಲಕೋಟಿಯವರ ಬಳಿಗೆ ಹೋಗಿ ಈ ಮಾದರಿಯ ಶಿಕ್ಷಣ ಸಂಸ್ಥೆಯ ಮಹತ್ವವನ್ನು ವಿವರಿಸಿದ ಮೇಲೆ ಅವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಮಣಿಪಾಲದ ವೈದ್ಯಕೀಯ ಕಾಲೇಜಿಗೆ ಮಾನ್ಯತೆ ನೀಡಿದ್ದರು. ನಂತರದ್ದು ಎಲ್ಲರೂ ಅರಿತ ಇತಿಹಾಸ. (ಪುಟ 178)

ಆ ಕಾರಂತರಿಗೆ ಈ ಕಾರಂತರೆಂದರೆ ಹೆದರಿಕೆ!

ಬಿ.ವಿ. ಕಾರಂತರು ತಾತನ ಪ್ರಸಿದ್ಧ ಕಾದಂಬರಿಯಾದ 'ಚೋಮನ ದುಡಿ' ಮೇಲೆ ಅದ್ಭುತವಾದ ಸಿನಿಮಾ ಮಾಡಿದ್ದರು. ಆದರೆ ತಾತನಿಗೆ ಆ ಸಿನಿಮಾ ಇಷ್ಟವಾಗಿರಲಿಲ್ಲ. ಬಿ.ವಿ. ಕಾರಂತರು ಬಹಳ ಒಳ್ಳೆಯ ಮನುಷ್ಯ. ಕನ್ನಡ ರಂಗಭೂಮಿಯಲ್ಲಿ ಅಪಾರ ಸಾಧನೆ ಮಾಡಿದ ಅದ್ಭುತ ಪ್ರತಿಭೆ. ಆದರೆ ತಾತನಿಗೆ ಹೋಲಿಸಿದರೆ ಸ್ವಲ್ಪ ಅಶಿಸ್ತಿನ ವ್ಯಕ್ತಿ. ಯಾವತ್ತೂ ಸಮಯ ಪಾಲನೆ ಮಾಡುತ್ತಿರಲಿಲ್ಲ. ಅಷ್ಟೊಂದು ಅದ್ಭುತವಾದ ಸಿನಿಮಾ ಮಾಡಿದ್ದರೂ ತಾತನಿಗೆ ಅದು ಇಷ್ಟವಾಗದಿರುವುದಕ್ಕೆ ಕಾರಣ ಬಹುಶಃ ಸಿನಿಮಾದ ಗುಣಮಟ್ಟಕ್ಕಿಂತ ಹೆಚ್ಚಾಗಿ ಬಿ.ವಿ. ಕಾರಂತರ ಅಶಿಸ್ತಿನ ವ್ಯಕ್ತಿತ್ವವೇ ಇರಬೇಕು ಎಂದು ನನಗೆ ಗುಮಾನಿಯಿದೆ. 'ತಾತನೆಂದರೆ ನನಗೆ ಹೆದರಿಕೆ' ಎಂದು ಬಿ.ವಿ. ಕಾರಂತರ ಒಮ್ಮೆ ನನ್ನ ಬಳಿ ಹೇಳಿದ್ದರು. (ಪುಟ 188)

ಕಾರಂತರ ಸಾಮಾಜಿಕ ಕಳಕಳಿ

1988 ರಲ್ಲಿ ಒಂದು ಸಮಸ್ಯೆಯಾಗಿತ್ತು. ನಾನಾಗ (ಉಲ್ಲಾಸ ಕಾರಂತರು) ಫ್ಲೋರಿಡಾದಲ್ಲಿ ವಿದ್ಯಾರ್ಥಿ. ನಾಗರಹೊಳೆಯ ಸುತ್ತಮುತ್ತ ಸ್ಥಳೀಯ ಕಳ್ಳ ಬೇಟೆಗಾರರು ಹಾಗೂ ಇನ್ನೊಂದಷ್ಟು ಕಾಡುಗಳ್ಳ ಹಿತಾಸಕ್ತಿಗಳೂ ಸೇರಿ ನನ್ನ ಸ್ನೇಹಿತ ಫಾರೆಸ್ಟ್ ರೇಂಜರ್ ಚಿಣ್ಣಪ್ಪ ಅವರ ಮೇಲೆ ಕೊಲೆ ಯತ್ನದ ಕೇಸ್ ಹಾಕಿಸಿದ್ದರು. ಏನಾಗಿತ್ತು ಅಂದರೆ, ಫಾರೆಸ್ಟ್ ಗಾರ್ಡ್ ಒಬ್ಬ ಅಲ್ಲಿನ ತೋಟದ ಮಾಲಿಕನ ಜತೆ ಜಗಳ ಆಡಿಕೊಂಡು ಗುಂಡು ಹೊಡೆದಿದ್ದ. ಚಿಣ್ಣಪ್ಪ ಬಹಳ ಕಟ್ಟುನಿಟ್ಟಿನ ಅಧಿಕಾರಿ. ಅವರಿಂದಾಗಿ ಅಲ್ಲಿನ ಕಳ್ಳಬೇಟೆಗಾರರಿಗೆ ಸಮಸ್ಯೆಯಾಗಿತ್ತು. ಹೀಗಾಗಿ ಈ ಕೇಸಿನಲ್ಲಿ ಏನಾದರೂ ಮಾಡಿ ಚಿಣ್ಣಪ್ಪನನ್ನು ಸಿಕ್ಕಿಹಾಕಿಸಿ ಅವರ 'ಹಾರಾಟ' ಬಂದ್ ಮಾಡಬೇಕೆಂಬ ದುರುದ್ದೇಶದಿಂದ ಎಲ್ಲರೂ ಒಂದಾಗಿದ್ದರು. ಪೊಲೀಸ್ ಅಧಿಕಾರಿಗಳಿಂದ ಚಿಣ್ಣಪ್ಪ ಏನೇನೋ ತನಿಖೆಗೊಳಗಾಗುವುದನ್ನು ತಪ್ಪಿಸಬೇಕೆಂಬ ಅರಣ್ಯ ಇಲಾಖೆಯ ಪ್ರಯತ್ನಗಳೆಲ್ಲ ಸ್ಥಳೀಯ ರಾಜಕೀಯ ಒತ್ತಡದಿಂದಾಗಿ ವಿಫಲವಾಗಿದ್ದವು. ನಾನು ಅಮೆರಿಕದಿಂದ ತಾತನಿಗೆ ಫೋನ್ ಮಾಡಿ ಈ ವಿಷಯ ಹೇಳಿದೆ. ಆಗ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ತಾತನಿಗೆ ಬಹಳ ಗೌರವ ಕೊಡುತ್ತಿದ್ದುದು ನನಗೆ ಗೊತ್ತಿತ್ತು. ಹೀಗಾಗಿ ತಾತನಿಗೆ ಒತ್ತಾಯ ಮಾಡಿದೆ. ಅವರು ಕೂಡಲೇ ಹೆಗಡೆಯವರಿಗೆ "ಚಿಣ್ಣಪ್ಪನಂಥ ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿಯಯನ್ನು ದಮನ ಮಾಡುವುದು ನಿಮ್ಮ ಸರಕಾರಕ್ಕೆ ಕಪ್ಪುಚುಕ್ಕೆ" ಎಂದು ಖಾರವಾದ ಪತ್ರ ಬರೆದರು. ತಕ್ಷಣ ಮಧ್ಯಪ್ರವೇಶಿಸಿದ ಹೆಗಡೆ, ಸ್ಥಳೀಯ ಪೊಲೀಸರ ಕಪಟ ತನಿಖೆಯನ್ನು ತಪ್ಪಿಸಿ ವಿಶೇಷ ಪೊಲೀಸ್ ತನಿಖೆಗೆ ಆದೇಶ ನೀಡಿದರು. ಆ ತನಿಖೆಯಲ್ಲಿ ಚಿಣ್ಣಪ್ಪ ನಿರ್ದೋಷಿಯಾಗಿ ಹೊರಬಂದರು. ನಂತರ ಹೆಗಡೆಯವರಿಂದಲೇ ಚಿಣ್ಣಪ್ಪ ಅತ್ಯುತ್ತಮ ಸೇವಾ ಪದಕ ಕೂಡ ಪಡೆದಿದ್ದರು. (ಪುಟ 204)

ಪುಸ್ತಕ ವಿಮಾನ

ಭೂತಾರಾಧನೆಯ ಸಮಗ್ರ ಅಧ್ಯಯನ

» ರಾಜಶ್ರೀ ಟಿ ರೈ, ಪೆರ್ಲ

ಜಾನಪದ ವಿದ್ವಾಂಸರಾದ ಡಾ.ಕೆ ಚಿನ್ನಪ್ಪ ಗೌಡರು ಕರಾವಳಿಯ ಭೂತಾರಾಧನೆಯ ಕುರಿತು ಇತ್ತೀಚೆಗಿನ ಕೆಲವು ದಶಕಗಳಲ್ಲಿ ಕಂಡುಬಂದ ಸಮರೋಪಾದಿಯ ಅನ್ವೇಷಣೆಯ ಮೂಲ ಸ್ಫೂರ್ತಿಯನ್ನು ''ಭೂತಾರಾಧನೆ-ಜನಪದೀಯ ಅಧ್ಯಯನ'' ಎನ್ನುವ ಕೃತಿಯೊಂದನ್ನು 1990ರಲ್ಲಿ ರಚಿಸಿದ್ದು, ಇದರ ವಿಸ್ತೃತ ಆವೃತ್ತಿಯಾದ ''ಭೂತಾರಾಧನೆ-ಮಾಯಾದ ನಡೆ ಜೋಗದ ನುಡಿ'' ಎನ್ನುವ ಗ್ರಂಥ ಇದೀಗ ಹೊರಬಂದಿದೆ.

ನಮ್ಮ ರಾಜ್ಯದ ಕರಾವಳಿ ಭಾಗದಲ್ಲಿ ಆಚರಣೆಯಲ್ಲಿರುವ ಭೂತಾರಾಧನೆಗೆ ಹಲವು ಆಯಾಮಗಳಿವೆ. ಅದನ್ನು ಅರಿಯುವುದು, ಅಧ್ಯಯನ ಮಾಡುವುದು ಎಂದರೆ ಅದು ಒಂದು ಬಹು ದೊಡ್ಡ ವಿಷಯವೇ ಸರಿ. ಕರಾವಳಿಯ ಜನಪದ ಲೋಕದ ಬಾಲಪಾಠ ಅರಿಯದ ಕುತೂಹಲಿಗೂ, ಅಧ್ಯಯನ ಆಕಾಂಕ್ಷಿಗೂ ಇಬ್ಬರಿಗೂ ಪ್ರಯೋಜನಕಾರಿಯಾಗಿರುವ ಈ ಕೃತಿ ಹಲವು ರೀತಿಯಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ. ಭೂತಾರಾಧನೆಯ ವಿಚಾರದಲ್ಲಿ ಹಲವು ಸ್ಥಿತ್ಯಂತರಗಳಿಂದ ಬಹಳ ಮೊದಲೇ ದಾಖಲಿಸಲ್ಪಟ್ಟ ಮತ್ತು ಶೋಧಿಸಲ್ಪಟ್ಟ ಸಂಗತಿಗಳನ್ನು ಡಾ. ಚಿನ್ನಪ್ಪ ಗೌಡರ ಕೃತಿ ಹೊಂದಿರುವುದರಿಂದ ಕರಾವಳಿಯ ಭೂತಾರಾಧನೆಯ ಕುರಿತಾದ ಅಧ್ಯಯನದ ಮಟ್ಟಿಗೆ ಇದೊಂದು ಮೂಲ ಆಕರಗ್ರಂಥ ಎಂದು ಪರಿಗಣಿಸಲೇಬೇಕಾಗಿದೆ. ಹಿರಿಯ ಸಂಶೋಧಕರಾದ ಪ್ರೊ. ವಿವೇಕ ರೈ ಅವರು ಕೂಡ ಭೂತಾರಾಧನೆಯ ಬಗ್ಗೆ ಮೊಟ್ಟ ಮೊದಲು ಬಂದ ಸಮಗ್ರ ಸಂಶೋಧನಾ ಗ್ರಂಥ ಇದು ಎಂದು ಮೊದಲ ಪ್ರಕಟಣೆಯಲ್ಲಿ ಬರೆದಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು .

ಕರಾವಳಿಯ ಜಾನಪದ ಅಧ್ಯಯನದ ಸಂಶೋಧನಾರ್ಥಿಗಳಿಗೆ ಈ ಗ್ರಂಥ ಶಿಸ್ತುಬದ್ಧ ಸಂಶೋಧನಾ ಮಾದರಿಯೂ ಹೌದು. ಒಟ್ಟು ಹನ್ನೆರಡು ಅಧ್ಯಾಯಗಳನ್ನು ಒಳಗೊಂಡಿದ್ದು ಭೂತಾರಾಧನೆಯಲ್ಲಿ ಸಾಮಾಜಿಕ, ಆಡಳಿತಾತ್ಮಕ, ಸಾಂಸ್ಕೃತಿಕ ಸ್ವರೂಪ ಬದಲಾವಣೆಯ ಕುರಿತಾದ ವಿಚಾರಗಳು ಒಳಗೊಂಡಿರುವುದು ಗಮನಾರ್ಹ ವಿಚಾರ. ಭೂತಾರಾಧನೆಯ ನಡೆ -ನುಡಿ ಅಧ್ಯಯನ ಸಮೀಕ್ಷೆಯಲ್ಲಿ ಹಲವಾರು ಸಂಶೋಧಕರ ಶೋಧನೆಯನ್ನು ಪ್ರಸ್ತಾಪಿಸುತ್ತಾ ಪ್ರಬಂಧದ ಮೊದಲ ಪ್ರಕಟಣೆಯ ನಂತರದ ಅಧ್ಯಯನ ಪ್ರವೃತ್ತಿ ಮತ್ತು ಒಲವುಗಳ ಬಗ್ಗೆ ಬೆಳಕು ಹಾಯಿಸಿರುವುದು ಓದುಗನ ಮಾಹಿತಿ ಅನ್ವೇಷಣೆಯ ವ್ಯಾಪ್ತಿಯ ಹರವು ಹೆಚ್ಚುವಂತೆ ಮಾಡುತ್ತದೆ.



ಭೂತಾರಾಧನೆ ಮಾಯದ ನಡೆ ಜೋಗದ ನುಡಿ
ಲೇ: ಡಾ. ಕೆ. ಚಿನ್ನಪ್ಪ ಗೌಡ
ಪ್ರ: ಕ್ರಿಯೇಟಿವ್ ಪುಸ್ತಕ ಮನೆ, ಕಾರ್ಕಳ
9606474289

ನಮ್ಮ ರಾಜ್ಯದ ಕರಾವಳಿಯಲ್ಲಿ ಆಚರಣೆಯಲ್ಲಿರುವ ಭೂತಾರಾಧನೆಯು ವಿಶಿಷ್ಟ ಮತ್ತು ತುಸು ನಿಗೂಢವೂ ಹೌದು. ಈ ಕಲೆಯ ಸಮಗ್ರ ಅಧ್ಯಯನದ ಸಾರವನ್ನು ಈ ಪುಸ್ತಕದಲ್ಲಿ ಕಾಣಬಹುದು; ಇದು ಸಂಶೋಧಕರಿಗೆ, ಗಂಭೀರ ಓದುಗರಿಗೆ ಉಪಯುಕ್ತವಾಗುವ ಸಮಯದಲ್ಲೇ, ಸಾಮಾನ್ಯ ಓದುಗರಿಗೂ ಇಷ್ಟವಾಗಬಲ್ಲದು.

ಸುಮಾರು 500 ಪುಟಗಳನ್ನು ಹೊಂದಿರುವ ಈ ಪುಸ್ತಕದಲ್ಲಿ, ಭೂತಾರಾಧನೆಗೆ ಸಂಬಂಧಪಟ್ಟಂತೆ ಹಲವಾರು ವರ್ಣಚಿತ್ರಗಳು ಮತ್ತು ಕಪ್ಪುಬಿಳುಪು ಚಿತ್ರಗಳು ಇದ್ದು ಓದುಗನಿಗೆ ಸಂಶೋಧಕರು ನೀಡಬಯಸುತ್ತಿರುವ ಮಾಹಿತಿಗಳ ಸ್ಪಷ್ಟತೆ ನೀಡುವಲ್ಲಿ ಉಪಕಾರಿಯಾಗಿವೆ . ಈ ಪುಸ್ತಕದ ಮೊದಲ ಪ್ರಕಟಣೆಯ ಸಂದರ್ಭದಲ್ಲಿ ಖ್ಯಾತ ವಿಮರ್ಶಕರು ಬರೆದ, ಆ ಕೃತಿಯ ಕುರಿತು ಪ್ರಕಟಿತ ವಿಮರ್ಶೆಗಳನ್ನು ಮತ್ತಿತರ ಹಲವಾರು ವಿಚಾರಗಳನ್ನುಪರಿಷ್ಕೃತ ಆವೃತ್ತಿ ಹೊಂದಿದೆ. ಭೂತಾರಾಧನೆ ಮತ್ತು ಯಕ್ಷಗಾನದ ತೌಲನಿಕ ವಿವೇಚನೆಗಳು, ಭೂತಾರಾಧನೆಯ ಇಂದಿನ ಸ್ವರೂಪ, ಹಿಂದಿನ ಭೂತಾರಾಧನೆಯ ಆಚರಣೆಗೆ ಹೋಲಿಸಿದಾಗ ಇಂದು ಕಾಣುವ ಬದಲಾವಣೆಗಳು, ಜಾಲಾಟ ಮತ್ತು ಯಕ್ಷಗಾನ, ಪಾಡ್ದನ ಸಾಹಿತ್ಯ, ಭೂತಗಳ ಸಂಖ್ಯೆ ಮತ್ತು ವರ್ಗೀಕರಣ ಮೊದಲಾದ ಹಲವು ಕುತೂಹಲಕಾರಿ ಅಧ್ಯಾಯಗಳು ಈ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದ್ದು, ಜನಸಾಮಾನ್ಯ ಓದುಗರ ಕುತೂಹಲವನ್ನೂ ತಣಿಸುವಂತಿವೆ.

ವೈವಿಧ್ಯತೆಯನ್ನು ಗೌರವಿಸುವ ತುಳು ಜನಪದ ಜಗತ್ತಿನ ಆಚರಣೆ ಸಂಪ್ರದಾಯಗಳ ಒಳ ಆಶಯದ ಜತೆ ಸ್ಪಂದಿಸುವಲ್ಲಿ ಈ ಕೃತಿ ಕರಾವಳಿ ಸಂಸ್ಕೃತಿಯ ಮಾರ್ಗದರ್ಶಿಯಾಗಿದೆ. ಇತ್ತೀಚೆಗೆ ಕಲಾ ಮಾಧ್ಯಮಗಳು ಕರಾವಳಿ ನೆಲದ ಆರಾಧನೆ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ತಮ್ಮ ಮಾಧ್ಯಮ ಅಭಿವ್ಯಕ್ತಿಯ ಸಾಧನವಾಗಿ ಪರಿಗಣಿಸಿರುವಾಗ ಸಹಜ ಕುತೂಹಲಿಗಳಾಗುವ ಬಾಹ್ಯ ಜಗತ್ತಿನ ಅನ್ವೇಷಿಗಳ ಜ್ಞಾನದಾಹಕ್ಕೆ ದಕ್ಕುವಂತೆ ಇಂಗ್ಲೀಷ್ ಮತ್ತಿತರ ಭಾಷೆಗಳಿಗೆ ಭಾಷಾಂತರಗೊಂಡು ಈ ಗ್ರಂಥ ಜನಪದ ಸಾಂಸ್ಕೃತಿಕ ಸಿರಿವಂತಿಕೆಯ ಸಾಂಕೇತಿಕ ಪ್ರತಿನಿಧಿಯಾಗಿ ಜಾಗತಿಕ ಮಟ್ಟದಲ್ಲಿ ಗುರುತಿಸುವುದಕ್ಕೂ ಅರ್ಹವಾಗಿದೆ.

ರಾಧಾ ಮಾಧವರ ಉತ್ಕಟ ಪ್ರೇಮ

» ಬೇದ್ರೆ ಮಂಜುನಾಥ, ಮೈಸೂರು

ರಾಧೆ ಮತ್ತು ಮಾಧವರ ಮನೋವಿಲಾಸವನ್ನು, ಉತ್ಕಟ ಪ್ರೇಮದ ಚಿತ್ರಣವನ್ನು, ಉಲ್ಲಸಿತ ಮನೋಭಿತ್ತಿಯ ಹಿನ್ನಲೆಯಲ್ಲಿ, 47 ಕವನಗಳಲ್ಲಿ ಹಿಡಿದಿಟ್ಟಿದ್ದಾರೆ ಬಿ. ಕೆ. ಮೀನಾಕ್ಷಿಯವರು, ತಮ್ಮ 'ಪ್ರೇಮ ಗೋಕುಲ ಕವನ ಸಂಕಲನದಲ್ಲಿ. 'ರಾಧೆ ಮತ್ತು ಕೃಷ್ಣರ ನಡುವಿನ ವಿಪ್ರಲಂಭ ಶೃಂಗಾರದ ಕವಿತೆಗಳು, ಭಾವದ ತೀವ್ರತೆ ಮತ್ತು ಈ ತೀವ್ರತೆಯ ಕಾವಿಗೆ ಒಳಗಾಗಿ ಭಾಷೆಯು ಪಡೆದುಕೊಳ್ಳುವ ಹೊಸ ಜೀವಂತಿಕೆ, ಇವೆರಡರ ಸಂಬಂಧವೇ ರಾಧಾ-ಕೃಷ್ಣರ ನಡುವಿನ ಸಂಬಂಧವಾಗಿದೆ! ನಿಜವಾದ ಕವಿಮನಸ್ಸಿಗೆ ಇದು ನಿತ್ಯಾನುಭವ' ಎನ್ನುತ್ತಾರೆ ಹಿರಿಯ ಭಾಷಾ ಪಂಡಿತರು, ವಿದ್ವಾಂಸರಾದ ಲಕ್ಷ್ಮೀಶ ತೋಳ್ಪಾಡಿಯವರು.

ಪ್ರೇಮ ಗೋಕುಲ ರೂಪಿತವಾದ ಬಗೆಯನ್ನು ಕುರಿತು ಕವಯತ್ರಿ ಹೀಗೆ ಹೇಳುತ್ತಾರೆ, 'ಈ ಕೃಷ್ಣ ಎಂಥವನು! ಇವನ ಕರುಣೆಯ ಪಾರಮ್ಯವೆಂತಹುದು, ಎಂದು ಯೋಚಿಸುತ್ತಲೇ ಇರುವಾಗ, ಅದ್ಯಾವ ಸಮಯದಲ್ಲೋ ರಾಧೆಯೆಂದರೆ.. ಎಂಬ ಕವನ ಬರೆದೆ. ನಂತರ ಕರುಣೆಯುಳ್ಳ ಕಣ್ಣುಗಳಲ್ಲೆಲ್ಲ ಕೃಷ್ಣನೇ ಕಾಣಿಸತೊಡಗಿದ. ಅವನ ಕತೆಗಳಲ್ಲಿ ಅವನ ನಾಯಕತ್ವ, ಪರರ ಸಂತೋಷಕ್ಕಾಗಿ ಹಂಬಲಿಸುವ, ಮಣಿಯುವ, ಪ್ರೀತಿಯನ್ನು ಹೃದಯದಿಂದ ನೀಡಿದ ಅವನನ್ನು ಓದುತ್ತಾ ಹೋದಂತೆ, ಅವನು ನನಗೆ ಪ್ರೇಮಮಯಿಯಾಗಿ ಕಂಡ. ಅವನ ಅನನ್ಯ ಪ್ರೇಮವನ್ನು ಚಿತ್ರಿಸಬೇಕೆಂದರೆ ರಾಧೆಯೇ ಬೇಕೆನಿಸಿತು. ಹಾಗಾಗಿ 'ಪ್ರೇಮಗೋಕುಲ' ರಚನೆಯಾಯಿತು'.

'ಇಲ್ಲಿನ ಕವನಗಳ ರಾಧೆ ಎಲ್ಲ ಬಗೆಯಲ್ಲಿಯೂ ಭಾವಮಯವಾಗಿ ಪ್ರಕಟವಾಗುತ್ತಾಳೆ. ಅವಳ ಕೃಷ್ಣಪ್ರೀತಿಗೆ ಆದಿಯೂ ಇಲ್ಲ, ಅಂತ್ಯವು ಇಲ್ಲ. ಇಲ್ಲಿರುವ ಕವಿತೆಗಳಿಗಿರುವ ಧ್ವನಿ ಶಕ್ತಿಯು ಪ್ರೀತಿಯ ಅರ್ಥವನ್ನು ವಿಸ್ತರಿಸುತ್ತ ಹೋಗುತ್ತದೆ. ಪ್ರಶ್ನೆಗಳ ಮೂಲಕವೇ ಕೃಷ್ಣನನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರೂ ಪ್ರಶ್ನೆಯಾಗಿಯೇ ಉಳಿವ ಕೃಷ್ಣ ಬೆರಗನ್ನು ಮೂಡಿಸುತ್ತಾನೆ, ನಿಗೂಢವಾಗುತ್ತಾನೆ. ಆದರೂ ಕಾಣದಡವಿಯಲ್ಲಿ ದಾರಿದೀಪವಾಗಿ ಎದೆಯಲ್ಲಿ ಉಳಿಯುತ್ತಾನೆ...... ಈ ಕವಿತೆಗಳ ವಿಶೇಷವೆಂದರೆ ಕವನದಿಂದ ಕವನಕ್ಕೆ ರಾಧೆಯ ಆಲೋಚನೆಗಳು ಬೆಳೆಯುತ್ತ ಓದುಗನ ಮನೋಲೋಕವನ್ನು ವಿಸ್ತರಿಸುತ್ತ ಹೋಗುವುದು...... ಮೀನಾಕ್ಷಿಯವರ 'ಪ್ರೇಮ ಗೋಕುಲ'ದ ಕವಿತೆಗಳಲ್ಲಿ ಅಬ್ಬರ, ಆಡಂಬರಗಳಿಲ್ಲ, ಅತಿಯಾದ ಚಮತ್ಕಾರದ ಪ್ರದರ್ಶನವಿಲ್ಲ, ಬಿಕ್ಕಟ್ಟಿನ ಹೆಣಿಗೆಯಲ್ಲಿ ಕವಿತೆಗಳನ್ನು ಗೋಜಲಾಗಿಸುವುದಿಲ್ಲ. ಅವು ಶಾಂತವಾದ ನದಿಯಂತೆ ಹರಿಯುತ್ತ ಹೋಗುತ್ತದೆ. ಗೇಯಗುಣ, ಪದಲಾಲಿತ್ಯ, ಭಾಷೆಯ ಸೊಗಸು, ಸರಳತೆ, ಸಹಜತೆಗಳೇ ಕವನಗಳನ್ನು ಆಪ್ತವಾಗಿಸುತ್ತದೆ. ಕವಿಯ ಹೃದಯದ ಗಾಢ ಭಾವಗಳೇ ರಾಧೆಯೆಂಬ ಸರಸ್ಸಿನಲ್ಲಿ ಮಿಂದು ಚಿತ್ರವತ್ತಾದ ಕವಿತೆಗಳಾಗಿ, ಚಿಂತನೆಗಳಾಗಿ ಹೊರ ಹೊಮ್ಮಿವೆ' ಎನ್ನುತ್ತಾರೆ ಲೇಖಕಿ ಎಂ. ಆರ್. ಕಮಲಾ.

ಅಮರ ಪ್ರೇಮದ ಪ್ರತೀಕವಾಗಿ ನಿಲ್ಲುವ ರಾಧಾ-ಮಾಧವರ ಮನೋವಿಲಾಸವನ್ನು ರಸವತ್ತಾಗಿ, ಆಪ್ತವಾಗಿ, ಉತ್ಕಟವಾದ ಪದಗಳಲ್ಲಿ 'ಪ್ರೇಮ ಗೋಕುಲ'ವಾಗಿ ಕಟ್ಟಿಕೊಟ್ಟಿರುವ ಬಿ. ಕೆ. ಮೀನಾಕ್ಷಿಯವರು ನಿಜಕ್ಕೂ ಅಭಿನಂದನಾರ್ಹರು.

ಪ್ರೇಮ ಗೋಕುಲ - ರಾಧಾ ಮಾಧವ ಮನೋವಿಲಾಸ
ಲೇ:ಬಿ. ಕೆ. ಮೀನಾಕ್ಷಿ
ಪ್ರ: ಸಿರಿದೇವಿ ಪ್ರಕಾಶನ, ಶಾರದಾದೇವಿ ನಗರ, ಮೈಸೂರು
ಬೆಲೆ ರು.80/-

» ಡಾ. ಬಿ.ಎಸ್. ನರಹರಿ

ಮನುಷ್ಯನು ತನ್ನ ದೀರ್ಘಾನುಭವದ ಮೂಸೆಯಲ್ಲಿ ಜೀವನವನ್ನು ಪರಿಭಾವಿಸಿ ತೆಗೆದ ಉದ್ಗಾರ, 'ಜೀವನ ಯಾತ್ರೆ' ಎಂಬುದು. ತನ್ನ ಲೌಕಿಕ ಪ್ರಪಂಚದ ಯಾತ್ರೆಯಿಂದ ಬಿಡುಗಡೆ ಹೊಂದಿ ಹೊಸ ಉಸಿರನ್ನು ಪಡೆಯಲೂ ಅನಂತತೆಯಲ್ಲಿ ತನ್ನನ್ನು ಮರೆಯಲೂ ದೇವತಾ ಯಾತ್ರೆ ಮಾಡಿದ, ಪುಣ್ಯಕ್ಷೇತ್ರಗಳಿಗೆ ಹೋದ. ಈ ಅನುಭವ ವಿಶೇಷವು ಸಾಹಿತ್ಯ ರೂಪದಲ್ಲಿಯೂ ಕಾಣಿಸಿಕೊಂಡಿತು. ಬಸ್ಸುಗಳಲ್ಲಿ ಮಾಡುವ ಸಮೂಹ ಯಾತ್ರೆಯು ಮೂರ್ತರೂಪದಲ್ಲಿ ಮತ್ತು ಮುಷ್ಟಿ ಗ್ರಾಹ್ಯವಾಗಿ ಜೀವನ ಯಾತ್ರೆಯ ಸ್ವರೂಪವನ್ನು ಕಟ್ಟಿಕೊಟ್ಟಿತು. ಪ್ರಯಾಣವು ಈ ಅನುಭವದ ಕ್ಷಿತಿಜವನ್ನು ವಿಸ್ತರಿಸಿತು. ಪ್ರಣತಾರ್ತಿಹರನ್ ಅವರ ಇತ್ತೀಚಿನ ಕಾದಂಬರಿ ಸಂಕೀರ್ಣವಾಗಿದೆ, ಸಾಂದ್ರವಾಗಿದೆ - ಈ ದಿಕ್ಕಿನಲ್ಲಿ.

ದೇವತಾಕಾರ್ಯಕ್ಕಾಗಿ ಮಾಡುವ ಯಾತ್ರೆಯು ಇಲ್ಲಿ ಒಂದು ನೆಪ; ಅದರ ಭಾಗವಾಗಿ ಬರುವ ಕುಲದೈವ ಯಾತ್ರೆಯ ವಿವರವು ಆನುಷಂಗಿಕ; ಅದಕ್ಕೆ ಹೊಂದಿಕೊಂಡು ಬರುವ ಪರಂಪರೆಗಳ ಜೀವನ ವಿವರವು ಒಂದು ವಿಸ್ಮಯ; ಅದರ ಜಿಜ್ಞಾಸೆಯಿಂದ ಹೊರಡುವುದು ಒಂದ ದರ್ಶನ. ಹಲವು ಪಾತ್ರಗಳ, ಘಟನೆಗಳ, ಸ್ಮರಣೆಗಳ ಪರಿಕರ ಅದಕ್ಕಿದೆ; ಈ ಪರಿಕರದ ದಟ್ಟಣೆಯು ಜೀವನದ ಪ್ರತಿಬಿಂಬವಾಗಿ ಬಂದು ಗತಿಬಿಂಬವಾಗಿ ಬೆಳೆಯುತ್ತದೆ.

ಇದು ವಿಕಾಸಶೀಲವಾದ ಯಾತ್ರೆ; ಎರಡು ಮನೆತನಗಳು ಹಳ್ಳಿಯ ದೀರ್ಘಕಾಲದ ಸಂಪ್ರದಾಯನಿಷ್ಠ ಜೀವನಕ್ರಮದಿಂದ ಆಧುನಿಕತೆಗೆ, ನಗರಜೀವನಕ್ಕೆ, ಸಂಕ್ರಮಿಸಿದ ವಿವರದಲ್ಲಿ ಈ ವಿಕಾಸ ಕಾಣುತ್ತದೆ. ಆದರೆ ಹಳ್ಳಿಯ ಸರಳಸಮಾಜದ ವಿದ್ಯೆ-ವೃತ್ತಿ-ಅನುಷ್ಠಾನ ಮತ್ತು ನಗರ ಜೀವನದಲ್ಲಿ ಕಾಣುವ ಹೊಸ ಹೊಸ ಪಲ್ಲಟಗಳು ಮುಖಾಮುಖಿಯಾಗುತ್ತವೆ. ನಿಸರ್ಗದ ನಡುವೆ ತಾವೂ ನಿಸರ್ಗದ ಭಾಗವಾಗಿ ಅಲ್ಪತೃಪ್ತಿಯಲ್ಲಿ ಕಂಡ ಶಾಂತಿ ಸಮಾಧಾನಗಳ ಜೀವನಪಾತಳಿ ಬೇಕೆ, ನಗರಗಳಲ್ಲಿನ ಅನಾರೋಗ್ಯಕರ ಪೈಪೋಟಿಯ ತಳಮಳ ಬೇಕೆ ಎಂಬ ಪ್ರಶ್ನೆ 'ಪರಿವರ್ತನೆಯು, ಅನಿವಾರ್ಯ' ಎಂಬ ಒತ್ತಡದಲ್ಲಿ ಕರಗಿಹೋಗುತ್ತದೆ.

ಈ ಪರಿವರ್ತನೆಯ ಅಜೇಯ ಪ್ರವಾಹದ ನಡುವೆ 'ಎಲ್ಲರನ್ನೂ ಒಳಗೊಳ್ಳುವುದು' ಎಂಬ ಬೆಳಕಿನ ಗೆರೆ ಇದೆ; ಅಕಳಂಕ ಪ್ರೀತಿಯೇ ಆತ್ಯಂತಿಕ ಫಲ ಎಂಬ ಫಲಿತಾಂಶವಿದೆ. ಈ ಯಾತ್ರೆಯ ಪ್ರಾರಂಭದಲ್ಲಿ 'ಬಾಗಿಲು ತೆಗೆಯಿರಿ, ಬೆಳಕು ಬರಲಿ' ಎಂಬ ಆದೇಶವಿದೆ; ಅದು ಬರುವುದು ಅಪರಿಚಿತ ವ್ಯಕ್ತಿಯಿಂದ; ಆ ಅಪರಿಚಿತ ವ್ಯಕ್ತಿ ಹುಟ್ಟಿಸಿದ್ದ ಗುಮಾನಿಯು ಸರಳವಾಗಿ ಅಳಿಸಿಹೋಗಿ ಅಲ್ಲಿ ಪ್ರೀತಿ ಹುಟ್ಟುತ್ತದೆ. ನಡುವೆ ಶಾರದಾ ಎಂಬ ಸಾರ್ಥಕನಾಮದ ಸುಶಿಕ್ಷಿತೆಯು ಆ ಪ್ರೀತಿಯನ್ನು ಹೆಮ್ಮರವಾಗಿ ಬೆಳೆಸುತ್ತಾಳೆ; ಗುಣವೇ ಪೂಜಾಸ್ಥಾನ ಎಂಬುವವರೆಗೆ ಅದು ಬೆಳೆಯುತ್ತದೆ. ಕಾದಂಬರಿಯ ಕೊನೆಯಲ್ಲಿ ಪ್ರವೇಶಿಸುವ ಕೊಳಕಾದ, ಹಳ್ಳಿಯ ಅಶಿಕ್ಷಿತೆಯೊಬ್ಬಳು ತನ್ನದೇ ಆದ ಜೀವನ ಕಾಣ್ಕೆಯನ್ನು ಪಂಡಿತರಿಗೆ ಸಮಸಮವಾಗಿ ಪ್ರಕಟಿಸಿ ಅನುಭೂತಿಯ ಪರಾಕಾಷ್ಠೆಯನ್ನು ಮೆರೆಯುತ್ತಾಳೆ; ಈ ಯಾತ್ರೆ ಕೊನೆಗೊಳ್ಳಬಾರದ ಪ್ರೀತಿಯ ಅಂಟಾಗಿ ಇದ್ದುಬಿಡಲಿ ಎಂಬ ಮಿಂಚು ಹೊಳೆಯುತ್ತದೆ.



ಯಾತ್ರೆ
ಕಾದಂಬರಿ
ಲೇ: ಬಿ.ಎಸ್.ಪ್ರಣತಾರ್ತಿ ಹರನ್
ಪ್ರ: ಈಶ್ವರಿ ಪ್ರಕಾಶನ ಮೈಸೂರು
ಬೆಲೆ ರು. 145/-

ಒಂದು ಸಾಂದ್ರ ಕಾದಂಬರಿ

ಕಾದಂಬರಿಯಲ್ಲಿ ಕುತೂಹಲವನ್ನು ಮೀಟುತ್ತ ಕ್ಷಿಪ್ರವಾಗಿ ನಡೆದುಹೋಗುವ ಘಟನೆಗಳ ಮತ್ತು ಅದರ ವಿವರಗಳ ನಡುವೆ ಅಲ್ಲಲ್ಲಿ ಜೀವನಜಿಜ್ಞಾಸೆಯ ಉದ್ಗಾರಗಳು ಸೂತ್ರರೂಪದಲ್ಲಿ ಕಂಡು, ಕಾದಂಬರಿಯ ಓಟದಲ್ಲಿರುವ ತತ್ತ್ವನಿರಂತರತೆಗೆ ಸಾಕ್ಷಿಗಳಾಗಿವೆ. 'ಗೋವಿಂದರಾಯರಲ್ಲಿ ಆದ ರೂಪಾಂತರಗಳನ್ನೆಲ್ಲ ಒಂದು ರೀತಿಯ ಅನೂಹ್ಯವಾದ ದಿಗಂತಕ್ಕೆ ಹೊರಟ ಯಾತ್ರೆಯೇನೋ ಅನ್ನುವ ಹಾಗೆ ಅಸಹಾಯಕರಾಗಿ ಒಪ್ಪಿಕೊಳ್ಳುತ್ತಿದ್ದರು...', 'ನಮ್ಮ ಪುರಾಣ, ಪುಣ್ಯಕತೆ, ಆಚಾರ, ವಿಚಾರ ಎಲ್ಲಾ ಒಂದಕ್ಕೊಂದು ಹೆಣೆದುಕೊಂಡಿದೆ. ಮೂಲದಲ್ಲಿ ಅದೆಲ್ಲಾ ಈ ಜೀವನಯಾತ್ರೆ ಅನ್ನೋದು ವಿಕಾರಕ್ಕೆ ಅವಕಾಶಕೊಡದ ಹಾಗೆ ಪ್ರಸನ್ನವಾಗಿ ನಡೆಯಲಿ ಅನ್ನೋದೇ ಆಶಯ'. ಇಂಥ ಮಾತುಗಳು ಆಯಾ ಸನ್ನಿವೇಶದ ಮಡಿಲಿನಿಂದ ಅರ್ಥಪೂರ್ಣವಾಗಿ ಹುಟ್ಟುವ ಸಹಜ ವ್ಯಾಖ್ಯಾನಗಳು.

ಇದು ಈ ಲೇಖಕರ ಮೂರನೆಯ ಕಾದಂಬರಿ. ಈ ಕಾದಂಬರಿಯನ್ನು ಸಂಕೇತಿ ಭಾಷೆಯಲ್ಲಿ 'ಯಾತ್ರ' ಎಂಬ ಹೆಸರಿನಿಂದ ರಚಿಸಿ, ಲೇಖಕರೇ 'ಯಾತ್ರೆ' ಎಂಬ ಹೆಸರಿನಿಂದ ಕನ್ನಡಕ್ಕೆ ತಂದಿದ್ದಾರೆ. ಕಾದಂಬರಿ ಮತ್ತು ಆಕಾಶವಾಣಿಯ ರೂಪಕಗಳ ಸತ್ತ್ವಗಳನ್ನು ಬೆರೆಸಿದ ಈ ಸಾಹಿತ್ಯ ರೂಪವನ್ನು 'ಕಾರೂಪಕ' ಎನ್ನಬಹುದು. ಹಾಗಾಗಿಯೇ ದೃಶ್ಯಮಾಧ್ಯಮಗಳಲ್ಲಿ ಹೆಚ್ಚು ಪ್ರಕರ್ಷಿಸಬಹುದಾದ ಕೃತಿ ಇದಾಗಿದೆ.

ನಾವು ಫೀನಿಕ್ಸ್‌ನಂತೆ ಬರುತ್ತೇವೆ!

'ಕ್ಷಮಿಸು ಗೊಮ್ಮಟನಂತೆ' ಕವನ ಸಂಕಲನದ ಮುನ್ನುಡಿಯನ್ನು ಕವಿ ಡಾ. ದೊಡ್ಡರಂಗೇಗೌಡ ಬರೆದಿದ್ದು, ಅದರ ಆಯ್ದಭಾಗಗಳು ಇಲ್ಲಿವೆ.

ಕವಯತ್ರಿ ಡಾ. ಪದ್ಮಿನಿಗೆ ಮಾನವ ಸಂಬಂಧಗಳು ಬಹಳ ಮುಖ್ಯವಾಗುತ್ತವೆ. ಇಲ್ಲಿನ ಅವರ ಅನೇಕ ಕವಿತೆಗಳಲ್ಲಿ ಈ ಬಗ್ಗೆ ಉಲ್ಲೇಖಗಳಿವೆ. ಕರೋನಾದಂಥ ಸಾಮಾಜಿಕ ಸಮಸ್ಯೆ ಆಂತರ್ಯದಲ್ಲೂ ಇದು ನಿಚ್ಚಳ ಕಾಣಿಸಿಕೊಂಡಿದೆ. ಕರೋನ ಸಂದರ್ಭದಲ್ಲಿ ನಡೆದ ವ್ಯವಹಾರಗಳು ಅವರ ಮನ ಕಲುಕಿವೆ. ಪ್ರೀತಿಪಾತ್ರರನ್ನು ಕಳಕೊಂಡ ಮನಗಳ ಸಂತೈಸುವ ಕಾಯಕ ಆಗುತ್ತಿಲ್ಲ. ಎಲ್ಲವೂ ಈಗ ವ್ಯಾಪಾರೀಕರಣಕ್ಕೆ ಒಳಗಾಗಿವೆ. ಕವಯತ್ರಿಯ ವಿಷಾದ ಭಾವ ಹೆಪ್ಪುಗಟ್ಟಿ ಮನಸ್ಸು ಕಲಕುತ್ತದೆ.

ಡಾ. ಪದ್ಮಿನಿ ಅವರ ಕವಿತೆಗಳಲ್ಲಿ ಜೀವಜೀವಾಳ ಇರುವುದು ಫೀನಿಕ್ಸ್‌ನಂತೆ ದಿಕ್ಕು ಬದಲಿಸುವ ರೂಪಾಂತರಗಳಲ್ಲಿ.

ನೀವು ಅಕ್ಷರದ ಮರೆಯಲ್ಲಿ
ನಮ್ಮ ಮರೆಮಾಚಿ
ನಿಮ್ಮ ಕಾಲುಗಳ ಚಪ್ಪಲಿಯಾಗಿಸಿದಿರಿ

ಕವಯತ್ರಿಯ ಇಂಥ ವಿಡಂಬನಾತ್ಮಕ ಸಾಲುಗಳಲ್ಲಿ, ಪದ್ಯಗಳಲ್ಲಿ ನೈಜ ಕವಿದರ್ಶನ ಇರುವುದು. ಚಿಂತನೆ ಪ್ರಬುದ್ಧ. ಮಾತು ಕ್ರೂರ. ಕತ್ತಿಯ ಅಲುಗಿನಂಥೆ ಹರಿತ. ಇಂಥಲ್ಲಿ ಕವಿ ಮತ್ತು ಕವಯತ್ರಿ ಇಬ್ಬರೂ ತೆರೆದುಕೊಳ್ಳುತ್ತಾರೆ. ಒಬ್ಬ ಚಿಂತನಶೀಲ ಕವಿಯ ನಡೆ ಹಾಗೂ ನುಡಿ ಇಂಥ ಕಡೆ ಇತ್ಯಾತ್ಮಕ ಆಗುತ್ತದೆ.

ನಮ್ಮ ನೆರಳೂ ಬೀಳಬಾರದೆಂದು
ಡಂಗೂರ ಸಾರಿಸಿದ್ದ ನಿಮ್ಮೂರಲ್ಲೆ
ನಾವು ಆಲದ ಬೀಳಲುಗಳಂತೆ
ಹಬ್ಬಿ ನಿಂತಿದ್ದೀವಿ
ನಮ್ಮ ಕೇರಿಗೂ ಕಾಲಿಕ್ಕಿದವರು
ಜೊತೆಯಾಗಿ ಎಂದು ಗೊಗರೆದು
ಕಾಲಹಿಡಿದು ಓಲೈಸುತ್ತಿದ್ದೀರಿ
ನಾವೀಗ ಭೂತವಲ್ಲ

ಕ್ಷಮಿಸು ಗೊಮ್ಮಟನಂತೆ
ಲೇ: ಡಾ. ಪದ್ಮಿನಿ ನಾಗರಾಜು
ಪ್ರ: ಮಿಂಚುಳ್ಳಿ ಪ್ರಕಾಶನ
ಬೆಲೆ ರು.130/-

ವರ್ತಮಾನದ ಭವಿಷ್ಯಗಳು

ಹೀಗೆ ಕವಯತ್ರಿ ವಾಸ್ತವದ ಚಿತ್ರಣ ನೀಡುತ್ತಾ ಇರುವಿಕೆಯ ರನ್ನ ಕನ್ನಡಿಯಲ್ಲಿ ಸಮಾಜ ದರ್ಶನ ಮಾಡಿಸುತ್ತಾರೆ. ಆ ಕವಿತೆಯ ಕೊನೆಯ ಸಾಲುಗಳಲ್ಲಿ

ನಾವು ಕೆಂಡಗಳಾಗಿ ಉರಿಯುತ್ತಿದ್ದೇವೆ
ನಿಮ್ಮನ್ನು ಕೊಂಡ ಹಾಯಿಸಲು
ಫೀನಿಕ್ಸ್‌ನಂತೆ (ದಿಕ್ಕು ಬದಲಿಸುವೆವು ಫೀನಿಕ್ಸ್‌ನಂತೆ)

ಹೀಗೆ ಕವಯತ್ರಿ ಡಾ. ಪದ್ಮಿನಿ ಬುದ್ಧ, ಬಸವಣ್ಣ, ಕನಕ, ಸಾವಿತ್ರಿಬಾಯಿ ಫುಲೆ, ಬಾಬಾ ಸಾಹೇಬರ ದಾರಿಯಲ್ಲಿ ಸಾಗಿ ಮನುವಿನ ಜಾಲಿಮರವ ಉರುಳಿಸಲು ಕರೆ ನೀಡುವ ಲೇಖಕಿ, ನಮ್ಮ ಕಾಲ ಈಗ ಭೂತ ಅಲ್ಲ 'ನಾವು ತಾಯ್ತನವ ಹೊತ್ತವರು ಫೀನಿಕ್ಸ್‌ನಂತೆ ಬರುತ್ತೇವೆ' ಎಂಬ ಕವನದ ಸಾಲುಗಳು ದಮನಿತರ ದನಿಯಾಗಿದೆ. ಡಾ. ಪದ್ಮಿನಿ ಕಂಡ ಸತ್ಯಗಳು ಲೇಖನಿಯಿಂದ ಕೆಂಡದುಂಡೆಗಳಂತೆ ಅನಾವರಣವಾಗುತ್ತವೆ.

ಮಣ್ಣಲ್ಲಿ ಹೂತ ಬೀಜಕ್ಕೆ
ಮೊಳಕೆಯಾಗಿ ಟಿಸಿಲೊಡೆದು
ಮರವಾಗುವ ಆತುರ
ಗೂಡಲ್ಲಿ ಕುಳಿತ
ಕಂಬಳಿಗೋ ಕಾಮನಬಿಲ್ಲಿನ
ಕನಸು ಚಿಟ್ಟೆಯಾಗಲು
ಕುದಿವ ಅಕ್ಕಿಗೆ
ಅನ್ನವಾಗಿ ಅಮೃತವಾಗಿ
ಸಂತೃಪ್ತಿಯ ತೋರುವ ಹೊತ್ತು
ನಾಳೆಯ ಭರವಸೆಯ
ಸೂರ್ಯನು ದಯವ
ಕಣ್ಣ ಬೆಳಕಾಗಿ
ಬಾಳ ಬದುಕಾಗಿ
ಕಾಪಿಡಬೇಕಿದೆ
ಗರ್ಭದ ಕೂಸಂತೆ (ಭರವಸೆಯ ಬದುಕಿಗೆ)

ಸಮಾಜ ವಿಷಮತೆಗಳ ಸಾಗರ. ಕವಯತ್ರಿ ಡಾ. ಪದ್ಮಿನಿ ನಾಗರಾಜು ನಿಜ ಸಮಸ್ಯೆಗಳ ಮಹಾಸಾಗರವನ್ನೇ ಅನಾವರಣ ಮಾಡುತ್ತಾರೆ. ವಿಕ್ಷಿಪ್ತತೆಗಳ ಬಗೆಯುವ, ನೈಜ ಕಾಯಕಲ್ಪ ಕಡೆಯುವ, ನುಡಿ ನುಡಿಯಲ್ಲೂ ಚಾಟಿಏಟು ಬಾರಿಸುವ, ನುಡಿ ನುಡಿಯಲ್ಲೂ ಸತ್ಯವನ್ನೇ ಆವಿಷ್ಕಾರ ಮಾಡುವ ಕವಿಯತ್ರಿಯ ಪ್ರತಿಭೆಯನ್ನು ಯಾರೂ ಮೆಚ್ಚಬೇಕಾಗುತ್ತದೆ.

ಇಲ್ಲಿ ಶಿವಸೌಂದರ್ಯದ ಇನ್ನೊಂದು ರೂಪ ಇದೆ. ನೇತ್ಯಾತ್ಮಕತೆ ನಡುವೆಯೂ ಇತ್ಯಾತ್ಮಕವಾಗಿ ಚಿಂತಿಸುವ, ನುಡಿಯಲ್ಲಿ ಬಿಂಬಿಸುವ ಕೆಚ್ಚಿದೆ, ಕವಯತ್ರಿಯ ನೆಚ್ಚಿದೆ. ಇಲ್ಲಿ ಪದ ಪದಗಳಲ್ಲೂ ಕಾಣುವುದು ಕಡಲ ಭೋರ್ಗರೆತ. ನೋಡಲಿಕ್ಕೆ ಪ್ರಶಾಂತತೆ, ಆಂತರ್ಯದಲ್ಲಿ ಕಡಲಕಿಚ್ಚು! ವಿಷಾದವೇ ಕವಿಭಾವ. ಕಾಯಕಲ್ಪವ ಕಂಡುಹಿಡಿವ ಆಶಾವಾದ. ಡಾ. ಪದ್ಮಿನಿ ನೀಡುವ ಪ್ರತಿಮೆಗಳು ಧ್ವನಿಪೂರ್ಣ, ಸಂಕೀರ್ಣ! ಶೈಲಿಯಲ್ಲಿ ಹೊಸತನವಿದೆ. ಚಿಂತನೆಗಳಲ್ಲಿ ಗಾಂಭೀರ್ಯ ಎದ್ದು ಕಾಣುತ್ತದೆ. ಮಾತು ಮಾತಿನಲ್ಲಿ ಕಾವ್ಯಾತ್ಮಕತೆ ತುಂಬಿ ತುಳುಕುತ್ತದೆ. ನುಡಿ ನುಡಿಯೂ ಸಾಂಕೇತಿಕ, ಮೆಚ್ಚಲೇಬೇಕಾದ ಅಂಶ.

ತುಂಬಿದ್ದು ತುಳುಕಿ
ತಳ ಸೇರುವ ಮುನ್ನ
ಗಟ್ಟಿಯಾಗಿಸಬೇಕು
ಸಂಬಂಧಗಳ...
ಇದು ಲೇಖಕಿಗಿರುವ ಕಾಳಜಿ.

ಮುಂದುವರೆದು,
ಜಾತಿ ಚಪ್ಪಲಿಯ
ಮನೆಯಾಚೆ ನೂಕು
ಎನ್ನುತ್ತಲೇ ಮನುಷ್ಯ ಹೇಗೆ ಬದುಕಬೇಕೆಂಬ ಪಾಠ ಹೇಳುತ್ತಲೇ
ಅಂತರಂಗವ ಸ್ವಚ್ಛಗೊಳಿಸು
ನಿನ್ನೆದೆಯ ಗೂಡಲ್ಲಿ
ಹಣತೆಗಳ ಬೆಳಗಿಸು
ಕ್ಷಮಿಸು ಗೊಮ್ಮಟನಂತೆ (ಕ್ಷಮಿಸು ಗೊಮ್ಮಟನಂತೆ)

ಎಂಬ ಸರಳ ಬದುಕಿನ ಸೂತ್ರವನ್ನು ತಿಳಿಸುತ್ತಾರೆ.

ಹೀಗೆ ಒಂದೊಂದೂ ಬದುಕಿನ ಕ್ಷತಾಂಕ, ಅವುಗಳನ್ನು ನಾವು ಅಳಿಸಿ ಹಾಕಬೇಕಾದರೆ ಜಾಗೃತಿ ಅತ್ಯಾವಶ್ಯಕ. ಅಂಥಹ ಎಚ್ಚರಿಕೆ ನಮ್ಮದಾಗಲಿ. ಬಿರಿದ ಭೂಮಿಯಲ್ಲಿ ಪೈರು ಚಿಗುರಿ ವಿಶಾಲ ಆಲ ಬೆಳೆಯುವಂತಾಗಲಿ. (ದೊಡ್ಡರಂಗೇಗೌಡ ಅವರು ಬರೆದ ಮುನ್ನುಡಿಯ ಆಯ್ದ ಭಾಗ)

ವಿಶ್ವವಾಣಿ ಅಂಕಿತ ಟಾಪ್ ಟೆನ್

1
ಕಥಾನಾಯಕನ ಕಥೆ - ಡಾ| ರಾಜಕುಮಾರ್ ಆತ್ಮ ಚರಿತ್ರೆ
(ನಾನೇ ಹೇಳಿ ಬರೆಸಿದ ನನ್ನ ಕಥೆ - ರಾಜಕುಮಾರ್)
ನಿರೂಪಣೆ: ಚಿ.ದತ್ತರಾಜ್
ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬೆಲೆ: ರೂ 1200/-



2
ಕಾರಂತ ಸುಳಿಯಲ್ಲಿ
(ಶಿವರಾಮ ಕಾರಂತರ ಮಕ್ಕಳು ಕಂಡಂತೆ ಕಾರಂತರು!)
ಲೇ: ಉಲ್ಲಾಸ ಕಾರಂತ, ಮಾಲವಿಕಾ ಕಪೂರ, ಕ್ಷಮಾರಾವ್
ಕನ್ನಡಕೆ: ವಿಶ್ವೇಶ್ವರಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರೂ 395/-



3
ನಾನೂ ಕಾಫಿರ
(ಬಾಬಾ ಸಾಹೇಬರ ಹಿಂದುತ್ವ ಕಥನ - ಅಂಬೇಡ್ಕರ್ ಚಿಂತನೆಗಳು)
ಡಾ| ಸುಧಾಕರ ಹೊಸಳ್ಳಿ
ಪ್ರ: ಸ್ವರಾಷ್ಟ್ರ ಪ್ರಕಾಶನ, ಬೆಂಗಳೂರು
ಬೆಲೆ: ರೂ 300/-



4
ನಿಗಳ
(ಕಲೆ, ಸಾಹಿತ್ಯ, ತರ್ಕಶಾಸ್ತ್ರ, ಮನಃಶಾಸ್ತ್ರ, ಮೀಮಾಂಸಾ ಸಾಹಿತ್ಯ-ಎಲ್ಲವನ್ನೂ ಕಾದಂಬರಿ ರೂಪದಲ್ಲಿ ಒಳಗೊಂಡಿರುವ ಕೃತಿ)
ಲೇ: ಡಾ| ಶಾರದಾ ಚೈತ್ರ
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ: ರೂ 395/-



5
ಕದಡಿದ ಕೊಳವು ತಿಳಿಯಾಗಿರಲು
(ಲೇಖಕಿ ಬರೆದಿರುವ ಹಲವು ಬರಹಗಳು ಈಗ ಪುಸ್ತಕ ರೂಪ ತಾಳಿವೆ)
ಲೇ: ಎನ್. ಸಂಧ್ಯಾರಾಣಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 250/-



6
ವಿಕ್ರಮಾದಿತ್ಯ
(ಎಂದೂ ಯುದ್ಧಗಳನ್ನು ಸೋಲದ, ಇಮ್ಮಡಿಯ ನಂತರ ಅತಿ ಹೆಚ್ಚು ಕಾಲ ವಾತಾಪಿ ಶಾಸನ ನಿರ್ವಹಿಸಿದ ಪುಲಕೇಶಿ ಪುತ್ರನ ಸಾಹಸಗಾಥೆ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ: ರೂ 499/-



7
ರಹಸ್ಯ
(ಸೂಫಿಗಳ ಕುರಿತು ರಜನೀಶ್ ಆಶ್ರಮದಲ್ಲಿ 1978 ರಲ್ಲಿ ಓಶೋ ನೀಡಿದ ಉಪನ್ಯಾಸಗಳ ಪುಸ್ತಕ ರೂಪ)
ಲೇ: ಓಶೋ
ಅನು: ಪ.ರಾ. ಕೃಷ್ಣಮೂರ್ತಿ
ಪ್ರ: ವಂಶಿ ಪಬ್ಲಿಕೇಷನ್ಸ್, ನೆಲಮಂಗಲ
ಬೆಲೆ: ರೂ 300/-

8
ಸ್ವರ್ಣ ಬೆಟ್ಟದ ರಹಸ್ಯ
(ಬೆಟ್ಟ ಹತ್ತಿದವರಿಗೆ ನಿಜವಾಗಿಯೂ ನಿಧಿ ಸಿಕ್ಕಿತೇ? ಒಂದು ರೋಚಕ ಕಾದಂಬರಿ)
ಲೇ: ಕಾರ್ತಿಕ್ ಹೆಗಡೆ
ಪ್ರ: ಅವ್ವ ಪುಸ್ತಕಾಲಯ, ಕೆಂಚನಹಳ್ಳಿ
ಬೆಲೆ: ರೂ 250/-

9
ಲೋಕ ರಾವಣ
(ಲಂಕಾಧಿಪತಿಯಾದ ದಶಕಂಠ ರಾವಣನನ್ನು ಕುರಿತ ಕಾದಂಬರಿ)
ಲೇ: ರಾಧಾಕೃಷ್ಣ ಕಲ್ಚಾರ್
ಪ್ರ: ವೀರಲೋಕ , ಬೆಂಗಳೂರು
ಬೆಲೆ: ರೂ 250/-

10
ಸಮಗ್ರ ಕಥೆಗಳು
(ಆಲನಹಳ್ಳಿಯವರ ಎಲ್ಲಾ ಕಥೆಗಳು 25 ವರ್ಷಗಳ ನಂತರ ಮರು ಮುದ್ರಣವಾಗಿದೆ)
ಲೇ:ಶ್ರೀ ಕೃಷ್ಣ ಆಲನಹಳ್ಳಿ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಬೆಲೆ: ರೂ 295/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಪುಟ್ಟ ಹಳ್ಳಿಯಲ್ಲಿ ಯಕ್ಷ ತರಬೇತಿ!

» ವೈಶಾಲಿ ಹೆಬ್ಬಾರ್

ಕರಾವಳಿ ಪ್ರದೇಶವು ಯಕ್ಷಗಾನಕ್ಕೆ ಅಂಗಣ ಎನಿಸಿದೆ. ನನ್ನ ತವರೂರಾದ ಹಾಲಾಡಿಯಲ್ಲಿ, ಅಜ್ಜ ಸದಾಶಿವ ಹೆಬ್ಬಾರರು ಮದ್ದಲೆ ವಾದಕರಾಗಿ ಪ್ರಸಿದ್ಧರಾದವರು. ನನ್ನ ಮಗಳಿಗೆ ಅದಾವ ನಂಟೋ, ಅಜ್ಜನ ಕನಸೊ ತಿಳಿಯದು, ಯಕ್ಷಗಾನದ ಮೇಲೆ ಅತೀವ ಪ್ರೀತಿ. ಆ ಕಲೆಯನ್ನು ಕಲಿಯಲು, ತರಬೇತಿ ಪಡೆಯಬೇಕು ಎಂಬ ಹಂಬಲ ಇದ್ದರೂ ಕೂಡ, ಎಲ್ಲಿ ಕಲಿಯುವುದು ಎಂಬ ಜಿಜ್ಞಾಸೆ. ನಮ್ಮ ಹಳ್ಳಿಯ ಸುತ್ತಮುತ್ತ ಎಲ್ಲಿಯೂ ಯಕ್ಷಗಾನದ ತರಗತಿಗಳು ಆಗ ಇರಲಿಲ್ಲ. ಕೊನೆಗೆ, ನಮ್ಮೂರಿನ ಪಕ್ಕದಲ್ಲೇ, ಶಂಕರನಾರಾಯಣದಲ್ಲಿ ಹವ್ಯಾಸಿ ಬಾಲ ಮೇಳವಿರುವುದೆಂದು ತಿಳಿದು ಅಲ್ಲಿ ಸೇರಿಸಿದೆ.

ಮಗಳು ಯಕ್ಷಗಾನ ತರಬೇತಿ ಪಡೆಯತೊಡಗಿದಳು; ಯಕ್ಷಗಾನದ ಅ, ಆ, ಇ, ಈ ಗಳನ್ನು ಕಲಿತು, ಮನೆಯಲ್ಲಿ ಅವಳು ಪ್ರಾಕ್ಟೀಸ್ ಮಾಡುವಾಗ, ನಮಗೆಲ್ಲ ಒಂದು ಕಡೆ ನಗು, ಇನ್ನೊಂದು ಕಡೆ ಅಭಿಮಾನ. ಅವಳ ಇಷ್ಟದಂತೆ ಯಕ್ಷಗಾನ ಕಲಿಯಲು ಆರಂಭಿಸಿದಳಲ್ಲಾ ಎಂಬ ತೃಪ್ತಿ. ಶಂಕರನಾರಾಯಣದಲ್ಲಿರುವ 'ಯಕ್ಷಸಿರಿ' ತರಬೇತಿ ಸಂಸ್ಥೆಗೆ ಸೇರಿ ಈಗ 4 ಸಂವತ್ಸರಗಳು ಸಂದವು. ಇಂದು ನನ್ನ ಮಗಳು, ಲವ – ಕುಶ, ಕೃಷ್ಣ, ಬಲರಾಮ, ದೇವೇಂದ್ರ, ಶಿವೆ.. ಸೀತೆ, ತಾರಾವಳಿ, ಹೀಗೆ ನಾನಾ ವೇಷಗಳು… ಈ ರಂಗ ಪಯಣದಲ್ಲಿ ಅದೆಷ್ಟೋ ವೇಷ ಮಾಡಿ ಜನ ಮೆಚ್ಚುಗೆ ಪಡೆದು ಕಲಾವಿದೆ ಎಂದೆನಿಸಿಕೊಂಡಿದ್ದಾಳೆ. ಇನ್ನೂ ಕಲಿಯುತ್ತಲೂ ಇದ್ದಾಳೆ.

ಪರವಾಗಿಲ್ಲ ಈ ಬಾಲಕಿ ಯಕ್ಷಗಾನ ಕುಣಿತ ಕಲಿತಿದ್ದಾಳೆ, ಎಲ್ಲಿ ಕಲಿತದ್ದು ಎಂಬ ಪ್ರಶ್ನೆಯನ್ನು ಕೆಲವರು ಕೇಳಲು ತೊಡಗಿದರು. ಇದಕ್ಕೆ ಶಂಕರನಾರಾಯಣ ಗ್ರಾಮದಲ್ಲಿರುವ 'ಯಕ್ಷಸಿರಿ' ಹಾಗೂ ಯಕ್ಷಗುರು ಕಿಶೋರ್ ಕುಮಾರ್ ಆರೂರ್.

ಶ್ರೀ ಶಂಕರನಾರಾಯಣ ಕೃಪಾಪೋಷಿತ 'ಯಕ್ಷಸಿರಿ', ಶಂಕರನಾರಾಯಣ– ಯಕ್ಷಗಾನ ಕಲಿಕಾಸಕ್ತ ಮಕ್ಕಳಿಗೆ ವರದಾನ. ಯಕ್ಷ ಗುರು ಕಿಶೋರ್ ಕುಮಾರ್ ಆರೂರ್ ಅವರ ನೇತೃತ್ವದಲ್ಲಿ ಕಳೆದ ಒಂದು ದಶಕದಿಂದ ಶಂಕರನಾರಾಯಣ ಹಾಗೂ ಸುತ್ತಮುತ್ತಲಿನ ಊರಿನ ಮಕ್ಕಳಿಗೆ ಯಕ್ಷಗಾನ ಕಲಿಸುತ್ತಿರುವ, ಯಕ್ಷಸಿರಿ ಸಂಸ್ಥೆಯು, ಪುಟ್ಟ ಹಳ್ಳಿಯಲ್ಲಿಲ್ಲೇ ಕಲಾ ಸೇವೆ ಮಾಡುತ್ತಿರುವುದು ನಿಜಕ್ಕೂ ವಿಶೇಷ.

ಯಕ್ಷಸಿರಿ ಸಂಸ್ಥಾಪಕ ಯಕ್ಷಗುರು ಕಿಶೋರ್ ಕುಮಾರ್ ಆರೂರು ವೃತ್ತಿಯಲ್ಲಿ ಉಪನ್ಯಾಸಕರು, ಪ್ರವೃತ್ತಿಯಲ್ಲಿ ಯಕ್ಷಗಾನ ಕಲಾವಿದರು; ಯಕ್ಷಪರಂಪರೆಯ ಆರೂರು ಮನೆತನದಲ್ಲಿ ಜನಿಸಿದ ಇವರು 'ಯಕ್ಷವೃಕ್ಷ' ಎಂದೇ ಪ್ರಸಿದ್ಧಿ ಪಡೆದಿದ್ದ, ತಾಳ ಮದ್ದಲೆಯ ಅರ್ಥದಾರಿಯಾಗಿದ್ದ, ಅವರ ಅಜ್ಜ ಆರೂರು ಸರ್ವೋತ್ತಮ ಶೇಟ್‌ರಿಂದ ಪ್ರಾಥಮಿಕ ಕಲಿಕೆ ಪಡೆದು, ಹೆರಂಜಾಲ ವೆಂಕಟರಮಣ ಗಾಣಿಗರಿಂದಯಕ್ಷಗಾನ ಕಲಿತು ಹವ್ಯಾಸಿ ಕಲಾವಿದನಾಗಿ, ಶ್ರೀ ಶಂಕರನಾರಾಯಣ ಯಕ್ಷಗಾನ ಕಲಾಸಂಘದ ಸದಸ್ಯನಾಗಿ ಹಲವು ಯಕ್ಷಗಾನ ಪ್ರದರ್ಶನಗಳನ್ನು ನೀಡಿದ್ದಾರೆ. ತಮ್ಮ ಅಜ್ಜ ಸರ್ವೋತ್ತಮ ಶೇಟ್‌ರ ಕನಸನ್ನು ನನಸಾಗಿಸುವುದರ ಜತೆಗೆ, ಪಕ್ಕಾ ಗ್ರಾಮೀಣ ಪ್ರದೇಶ ಎನಿಸಿರುವ ತನ್ನ ಊರು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಮಕ್ಕಳಿಗೆ ಯಕ್ಷಗಾನದ ಪರಿಚಯ ಮಾಡಿಸುವ ಕನಸು ಹೊತ್ತು, 2017 ರಲ್ಲಿ ಶಂಕರನಾರಾಯಣ ದೇವಸ್ಥಾನದ ವಠಾರದಲ್ಲಿ ಮೊದಲ ತರಬೇತಿ ಆರಂಭಿಸಿದರು.

ನಾವಿರುವುದು ಪುಟ್ಟ ಹಳ್ಳಿ, ಇಲ್ಲಿ ಸಾಹಿತ್ಯ, ಕಲೆ ಬೆಳೆಯುವುದು ಕಷ್ಟ ಎಂಬ ಮಾತನ್ನು ಹಲವರು ಹೇಳುವುದುಂಟು. ಪುಟ್ಟ ಹಳ್ಳಿಯೊಂದರಲ್ಲಿ ನೂರಾರು ಮಕ್ಕಳಿಗೆ ಯಕ್ಷಗಾನ ತರಬೇತಿ ನೀಡುತ್ತಿರುವ ಸಂಸ್ಥೆಯೊಂದು ಎಲ್ಲರಿಗೂ ಮಾದರಿಯಾಗಿದೆ, ಇನ್ನಷ್ಟು ಜನರಿಗೆ ತರಬೇತಿ ನೀಡುತ್ತಿದೆ.

ಮಕ್ಕಳ ಮೇಳ– ಯಕ್ಷಸಿರಿ ಶಂಕರನಾರಾಯಣ ಎಂಬ ಸಂಸ್ಥೆ ರಚಿಸಿ, ನೂರಾರು ಮಕ್ಕಳಿಗೆ ಯಕ್ಷಗಾನ ತರಬೇತಿ, ಆನ್‌ಲೈನ್ ತರಬೇತಿ ನೀಡುತ್ತಾ ಬಂದಿದ್ದಾರೆ. ಅಲ್ಲಿಗೆ ಹಳ್ಳಿಯೂರ ಮಕ್ಕಳಿಗೆ ಸಾಂಸ್ಕೃತಿಕ ಪರಂಪರೆಯೊಂದು ತೆರೆದಂತಾಯಿತು. ಆನ್‌ಲೈನ್ ತರಬೇತಿಯ ಮೂಲಕ ಮುಂಬೈ, ಹೈದ್ರಾಬಾದ್, ಮೈಸೂರು, ಬೆಂಗಳೂರು ಸೇರಿದಂತೆ ವಿವಿಧ ಭಾಗದ ವಿದ್ಯಾರ್ಥಿಗಳು ಇವರಲ್ಲಿ ತರಬೇತಿ ಪಡೆದಿದ್ದಾರೆ. ಮುಂದೆ ಚಂಡೆ, ಮದ್ದಲೆ ವಾದಕರಾಗಿ ಅಲ್ಲದೇ.. ಉತ್ತಮ ಭಾಗವತರಾಗಿಯೂ ಕಲಾ ರಸಿಕರ ಮನವನ್ನು ಗೆದ್ದಿದ್ದಾರೆ. ಹಲವು ಪ್ರಸಂಗಗಳನ್ನೂ ರಚಿಸಿದ್ದಾರೆ.ಇವರ ಜತೆಯಲ್ಲಿ, ಸಹ ಸಂಚಾಲಕರಾಗಿ ಸಂತೋಷ ಡಿ. ಎಸ್ ಮತ್ತು ಬಸವಣ್ಣ ಸದಾ ಗುರುಗಳಿಗೆ ಸಾಥ್ ನೀಡುತ್ತಾ ಬಂದಿರುತ್ತಾರೆ.

ಹಲವು ಪ್ರದರ್ಶನಗಳು

2017 ರಲ್ಲಿ ಪ್ರಾರಂಭವಾದ ಈ 'ಯಕ್ಷಸಿರಿ' ಸಂಸ್ಥೆ, ಈಗಾಗಲೇ ನೂರಾರು ಯಕ್ಷಗಾನ ಪ್ರದರ್ಶನಗಳನ್ನು ನೀಡಿದೆ. ಇಲ್ಲಿ ವೇಷ ಧರಿಸುವವರು ಪ್ರಧಾನವಾಗಿ ಮಕ್ಕಳು! ಆದ್ದರಿಂದ ಮಕ್ಕಳ ಮೇಳದ ಯಕ್ಷಗಾನವನ್ನು ನೋಡಲು ಸುತ್ತಲಿನ ಜನರ ಪ್ರೋತ್ಸಾಹವೂ ದೊರಕಿತು. ಆಳ್ವಾಸ್ ಕಾರ್ಯಕ್ರಮದಿಂದ ಹಿಡಿದು – ದೂರದ ಕಾರವಾರದ ಕರಾವಳಿ ಉತ್ಸವದ ತನಕ ತನ್ನ ಗೆಜ್ಜೆಯ ಸದ್ದನ್ನ ಮೂಡಿಸಿದೆ. ಸಾಯಿ ವಿಶ್ರಾಮ್ ರೆಸಾರ್ಟ್ ಆಟದ ಮೂಲಕ ದೇಶದ ಮೂಲೆ ಮೂಲೆಯ ಕಲಾಪ್ರೇಮಿಗಳ ಮನಸೂರೆಗೊಂಡಿದೆ.

ಪ್ರತಿ ವರ್ಷ 'ಯಕ್ಷಸಿರಿ' ಸಂಸ್ಥೆಯ ವಾರ್ಷಿಕೋತ್ಸವದಲ್ಲಿ ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಕಲೆ ಮತ್ತು ವಿದ್ಯಾಕ್ಷೇತ್ರದ ಸಾಧಕರಿಗೆ ಬೆಂಬಲ ನೀಡುವ ಜೊತೆ, ಅದೇ ದಿನ ಒಂದೇ ವೇದಿಕೆಯಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗೆಜ್ಜೆ ಕಟ್ಟಿ ಪ್ರತಿಭಾ ಪ್ರದರ್ಶನ ನೀಡಿ ಸಂಭ್ರಮಿಸುತ್ತಾರೆ. ಕಲಿತ ವಿದ್ಯೆ ಸಾರ್ಥಕವಾಗಲು ಅದರಲ್ಲಿ ನೈಪುಣ್ಯತೆ ಇಂತಹ ಪ್ರದರ್ಶನಗಳು ಇಂಬು ನೀಡುತ್ತವೆ.

ಇದೀಗ ದಶಕದ ಹಾದಿಯಲ್ಲಿರುವ ಯಕ್ಷಸಿರಿ ನೂರಾರು ಪ್ರದರ್ಶನಗಳನ್ನು, ಸಾವಿರಾರು ಮಕ್ಕಳನ್ನು ಕಲಾವಿದರನ್ನಾಗಿ ಮಾಡಿ ಸಾರ್ಥಕತೆ ಪಡೆದಿದೆ. ನರ್ತನ, ವಾದನ, ಅಭಿನಯ, ವಾಚಿಕ, ಭಾಗವತಿಕೆ, ಮುಖವರ್ಣಿಕೆ, ಆಹಾರ್ಯಗಳಲ್ಲೂ ಕೂಡ ಸಂಘದ ಮಕ್ಕಳಿಗೆ ತರಬೇತಿ ನೀಡಲಾಗಿದೆ. ಸಂಘದ ಕೆಲವು ಮಕ್ಕಳು ಭಾಗವತಿಕೆಯಲ್ಲಿ, ಚಂಡೆ – ಮದ್ದಲೆ ವಾದನದಲ್ಲಿ ಪ್ರದರ್ಶನ ನೀಡಿದ್ದಾರೆ. ತಂಡದ ಕಲಾವಿದನೊಬ್ಬ ಮೇಳಕ್ಕೆ ಸೇರಿ ಯಶಸ್ಸು ಪಡೆದಿರುವುದಷ್ಟೇ ಅಲ್ಲದೆ ಪ್ರಮುಖ ಪಾತ್ರಧಾರಿಯಾಗಿ ಹೊರಹೊಮ್ಮಿರುವುದು ಇಲ್ಲಿ ತರಬೇತಿಯ ಮೌಲ್ಯಕ್ಕೆ ಒಂದು ಗರಿಯೇ ಸರಿ. ಅದೇ ರೀತಿ ಸಂಸ್ಥೆಯ ವಿದ್ಯಾರ್ಥಿಗಳು ವೃತ್ತಿ ಮೇಳದ ರಂಗಸ್ಥಳದಲ್ಲೂ ತಮ್ಮ ಛಾಪನ್ನು ಮೂಡಿಸಿದ್ದಾರೆ. ಪ್ರತಿ ವರ್ಷ ಹಲವು ಮಕ್ಕಳು ಸಂಘ ಸೇರುತ್ತಿದ್ದು, ಅತಿ ಕಡಿಮೆ ಶುಲ್ಕ ಹೊಂದಿದ್ದು ಹಳ್ಳಿಯ ಮಕ್ಕಳಿಗೆಂದೇ ತೆರೆದ ತರಬೇತಿ ಸಂಸ್ಥೆ ಇದು.

ಪುಟ್ಟ ಹಳ್ಳಿ ಎನಿಸಿರುವ, ಮಲೆನಾಡಿನ ಅಂಚಿನಲ್ಲಿರುವ ಶಂಕರನಾರಾಯಣದಲ್ಲಿರುವ ಯಕ್ಷಸಿರಿ ಸಂಸ್ಥೆಯು, ತನ್ನಪಾಡಿಗೆ ತಾನು ಮಕ್ಕಳಿಗೆ ಯಕ್ಷಗಾನವನ್ನು ಹೇಳಿಕೊಡುತ್ತಿದೆ, ಆ ಮೂಲಕ ಯಕ್ಷಗಾನ ಕಲೆಗೆ ತನ್ನದೇ ಕೊಡುಗೆ ನೀಡುತ್ತಿದೆ. ಪುಟ್ಟ ಹಳ್ಳಿಯಾದರೇನು, ಕಲೆಯ ಮೇಲೆ ಅಭಿಮಾನವಿದ್ದರೆ, ನೂರಾರು ಕಲಾವಿದರನ್ನು ತಯಾರಿಸಬಹುದು ಎಂಬುದಕ್ಕೆ ಇದೊಂದು ನಿದರ್ಶನ! ಅಲ್ಲವೆ?

ದ್ರವ ರೂಪದ ಚಿನ್ನ ಇದು!

ನಿಮ್ಮ ಅಜ್ಜಿ ಪ್ರತಿದಿನ ಬಿಸಿ ಅನ್ನಕ್ಕೆ ಒಂದು ಚಮಚ ತುಪ್ಪ ಹಾಕುತ್ತಿದ್ದರು. ಆದರೆ ಯಾವುದೋ ಭಯಕ್ಕೆ ನೀವು ತುಪ್ಪ ಹಾಕಿಕೊಳ್ಳುವುದನ್ನು ನಿಲ್ಲಿಸಿದ್ದೀರಾ? ಈ ಗೊಂದಲಕ್ಕೆ ಒಂದು ಮುಕ್ತಾಯ ಹಾಡುವ ಸಮಯ ಈಗ ಬಂದಿದೆ.

ಕಳೆದ ಮೂರ್ನಾಲ್ಕು ದಶಕಗಳಿಂದ ನಾವು ತುಪ್ಪವನ್ನು ಒಂದು 'ವಿಲನ್' ಥರ ನೋಡಿದೆವು. ಅದು ರಕ್ತನಾಳ ಕಟ್ಟುತ್ತದೆ, ರಕ್ತ ದಪ್ಪಗಾಗಿಸುತ್ತದೆ ಎಂದು ನಂಬಿ, 'ಹಾರ್ಟ್ ಫ್ರೆಂಡ್ಲಿ' ಎನ್ನಲಾದ ರಿಫೈನ್‌ಡ್ ಎಣ್ಣೆಗೆ ಮೊರೆ ಹೋದೆವು. ಹೆಚ್ಚಿನವರು ತುಪ್ಪ ತಿನ್ನುವುದನ್ನು ಕಡಿಮೆಮಾಡಿದರು. ಆದರೆ ಹೃದ್ರೋಗ ಕಡಿಮೆ ಆಯ್ತಾ? ಇಲ್ಲ, ಇನ್ನೂ ಹೆಚ್ಚಾಯ್ತು! ಈಗ ಗೊತ್ತಾಗುತ್ತಿದೆ, ತುಪ್ಪದಿಂದ ಅಂತಹ ತೊಂದರೆ ಏನೂ ಇಲ್ಲ! ಬದಲಿಗೆ, ಹಿತ ಮಿತವಾಗಿ ಬಳಸಿದರೆ, ಲಾಭವೇ ಜಾಸ್ತಿ!

ಸ್ಥಿರತೆಯೇ ತುಪ್ಪದ ಮ್ಯಾಜಿಕ್

ಅಡುಗೆ ಎಣ್ಣೆಯ ಅತಿದೊಡ್ಡ ಶತ್ರು 'ಶಾಖ'. ಸೂರ್ಯಕಾಂತಿ ಅಥವಾ ಕುಸುಬೆ ಎಣ್ಣೆಯನ್ನು ನಾವು ಕರಿಯಲು ಉಪಯೋಗಿಸಿದಾಗ, ಶಾಖದ ಕಾರಣದಿಂದ ಅದು ಒಡೆದು ವಿಷಕಾರಿ ರಾಸಾಯನಿಕವಾಗುತ್ತದೆ. ಆದರೆ ತುಪ್ಪ ಹಾಗಲ್ಲ. ಇದರ 'ಸ್ಮೋಕ್ ಪಾಯಿಂಟ್' ತುಂಬಾ ಹೆಚ್ಚು (ಸುಮಾರು 250 ಡಿಗ್ರಿ ಸೆ.). ಇದನ್ನು ಕಾಯಿಸಿ, ಕರಿಯಿರಿ, ಅಥವಾ ಒಗ್ಗರಣೆ ಹಾಕಿ – ಇದು ಒಡೆಯುವುದಿಲ್ಲ, ಸ್ಥಿರವಾಗಿರುತ್ತದೆ. ರಿಫೈನ್‌ಡ್ ಎಣ್ಣೆಗಳ ಹಾಗೆ ಬಾಣಲೆಯಲ್ಲಿ ತುಪ್ಪ 'ವಿಷ'ವಾಗುವುದಿಲ್ಲ.

ಪೋಷಕಾಂಶಗಳನ್ನು ಸಾಗಿಸುವ ವಾಹನ

ಜನಸಾಮಾನ್ಯರಲ್ಲಿ ಅನೇಕರಿಗೆ ತಿಳಿಯದ ಇನ್ನೊಂದು ವಿಷಯವಿದೆ. ಕ್ಯಾರಟ್ ಅಥವಾ ಸೊಪ್ಪಿನಲ್ಲಿರುವ ಹಲವು ವಿಟಮಿನ್‌ಗಳನ್ನು ಹೀರಿಕೊಳ್ಳಲು ದೇಹಕ್ಕೆ ಕೊಬ್ಬಿನಂಶ ಬೇಕೇ ಬೇಕು. ಆದರೆ ಇಲ್ಲೊಂದು ವಿಪರ್ಯಾಸವಿದೆ. ತರಕಾರಿಯಲ್ಲಿರುವ ಈ ವಿಟಮಿನ್‌ಗಳು ನಮ್ಮ ಆರೋಗ್ಯ ರಕ್ಷಕರು (ಆ್ಯಂಟಿ ಆಕ್ಸಿಡೆಂಟ್ಸ್). ಕಾಯಿಸಿದಾಗ ಆಕ್ಸಿಡೈಸ್ ಆಗುವ (ಕೆಡುವ) ರಿಫೈನ್‌ಡ್ ಎಣ್ಣೆಯ ಜತೆ, ಈ ತರಕಾರಿಗಳನ್ನು ತಿಂದರೆ ಪ್ರಯೋಜನ ಶೂನ್ಯ. ಅದು

ಕ್ಷ ಕಿರಣ

» ಡಾ ಶಶಿಕಿರಣ್ ಉಮಾಕಾಂತ್

ಅಮೃತವನ್ನು ವಿಷದ ಜೊತೆ ಬೆರೆಸಿದಂತೆ!

ಆದರೆ, ತುಪ್ಪ ಹಾಗಲ್ಲ. ಅದು ಸ್ಥಿರ ಮತ್ತು ಸುರಕ್ಷಿತ. ಸೊಪ್ಪು ತರಕಾರಿಗಳಲ್ಲಿರುವ ಹಲವು ಪೌಷ್ಟಿಕಾಂಶಗಳನ್ನು ದೇಹ ಹೀರಿಕೊಳ್ಳಲು ಅನುಕೂಲವಾಗುವ ಕೊಬ್ಬಿನ ಅಂಶ ತುಪ್ಪದಲ್ಲಿದೆ; ಆದ್ದರಿಂದ, ಒಂದು ಚಮಚ ತುಪ್ಪ ಅಂದರೆ, ಅದರಲ್ಲಿರುವ ವಿಟಮಿನ್‌ಗಳ ಜತೆ, ಆಹಾರದಕ್ಕೆ ಬಳಸುವ ಸೊಪ್ಪು ತರಕಾರಿಗಳಲ್ಲಿನ ವಿಟಮಿನ್‌ಗಳನ್ನು ನಮ್ಮ ದೇಹಕ್ಕೆ ಹೀರಿಕೊಡುತ್ತದೆ. ತುಪ್ಪದಲ್ಲೇ ನೈಸರ್ಗಿಕವಾಗಿ ಹಲವು ವಿಟಮಿನ್‌ಗಳು ಇರುತ್ತವೆ. ಅಂದರೆ ತುಪ್ಪ ಕೇವಲ ವಾಹನ ಮಾತ್ರವಲ್ಲ, ಅದುವೇ ಒಂದು ಪೋಷಕಾಂಶ!

ತಪ್ಪು ಕಲ್ಪನೆ: ತುಪ್ಪ ತಿಂದರೆ ದಪ್ಪಗಾಗುತ್ತೇವೆ.

ವಾಸ್ತವ: ತುಪ್ಪದಲ್ಲಿ ಕ್ಯಾಲೋರಿ ಜಾಸ್ತಿ, ನಿಜ. ಆದರೆ ಇದನ್ನು ತಿಂದಾಗ ಹೊಟ್ಟೆ ತುಂಬಿದ ಅನುಭವ ಬೇಗ ಸಿಗುತ್ತದೆ, ಜಂಕ್ ಫುಡ್ ತಿನ್ನುವ ಬಯಕೆ ಕಡಿಮೆಯಾಗುತ್ತದೆ. ತೂಕ ಹೆಚ್ಚಳಕ್ಕೆ ನಿಜವಾದ ಕಾರಣ ಸಕ್ಕರೆ ಮತ್ತು ಸಂಸ್ಕರಿಸಿದ ಕಾರ್ಬೋಹೈಡ್ರೇಟ್ಸ್, ತುಪ್ಪದಂತಹ ನೈಸರ್ಗಿಕ ಕೊಬ್ಬಲ್ಲ.

ತಪ್ಪು ಕಲ್ಪನೆ: ಇದು ಕೊಲೆಸ್ಟ್ರಾಲ್ ಹೆಚ್ಚಿಸುತ್ತದೆ.

ವಾಸ್ತವ: ಬಹುತೇಕ ಜನರಿಗೆ, ಮಿತವಾಗಿ ತುಪ್ಪ ಸೇವಿಸುವುದರಿಂದ ಲಿಪಿಡ್ ಪ್ರೊಫೈಲ್ ಹಾಳಾಗುವುದಿಲ್ಲ.



ರಿಫೈನ್‌ಡ್ ಎಣ್ಣೆ ಒಳ್ಳೆಯದು ಎಂದು ಅವುಗಳ ಹಿಂದೆ ನಾವು ವರ್ಷಗಟ್ಟಲೆ ಓಡಿದೆವು. ಆದರೆ ಪ್ರಪಂಚದ ಶ್ರೇಷ್ಠವಾದ ಎಣ್ಣೆ, ನಮ್ಮ ಅಡುಗೆಮನೆಯಲ್ಲೇ ಇದೆ ಎನ್ನುವುದನ್ನು ಮರೆತಿದ್ದೆವು.

ಬದಲಾಗಿ, ತುಪ್ಪದಲ್ಲಿರುವ 'ಬ್ಯುಟರಿಕ್ ಆಸಿಡ್' ಕರುಳು ಮತ್ತು ದೇಹದ ಉರಿಯೂತವನ್ನು ಕಡಿಮೆ ಮಾಡುತ್ತದೆ.

ತಪ್ಪು ಕಲ್ಪನೆ: ಬೆಣ್ಣೆ ಕೂಡ ತುಪ್ಪದಷ್ಟೇ ಒಳ್ಳೆಯದು.

ವಾಸ್ತವ: ಇಲ್ಲ. ಬೆಣ್ಣೆಯಲ್ಲಿ ಹಾಲಿನ ಘನ ಅಂಶಗಳಿರುತ್ತವೆ (ಮಿಲ್ಕ್ ಸಾಲಿಡ್ಸ್), ಇವು ಕಾಯಿಸಿದಾಗ ಸೀದು ಕಪ್ಪಾಗುತ್ತವೆ. ತುಪ್ಪ ಶುದ್ಧೀಕರಿಸಿದ ಕೊಬ್ಬು. ಅತಿಯಾದ ಉಷ್ಣತೆಗೆ ತುಪ್ಪ ಸುರಕ್ಷಿತ, ಬೆಣ್ಣೆ ಅಲ್ಲ.

ಈಗ ನಾವೇನು ಮಾಡಬಹುದು?

ನಿಮ್ಮ ಬಿಸಿ ಅನ್ನ, ಬೇಳೆ ಅಥವಾ ಖಿಚಡಿಗೆ ಒಂದು ಚಮಚ ತುಪ್ಪ ಸೇರಿಸಿ. ಇದು ಅನ್ನದ 'ಗ್ಲೈಸೆಮಿಕ್ ಇಂಡೆಕ್ಸ್' ಕಡಿಮೆ ಮಾಡಿ, ರಕ್ತದಲ್ಲಿ ಗ್ಲುಕೋಸ್ ಅಂಶ ತಕ್ಷಣವೇ ಏರುವುದನ್ನು ತಡೆಯುತ್ತದೆ. ಮಿತವಾಗಿ ಸೇವಿಸುವ ಸಿಹಿ ತಿನಿಸು ಅಥವಾ ಕರಿಯುವ ಪದಾರ್ಥಗಳಿಗೆ ತುಪ್ಪವನ್ನೇ ಬಳಸಿ. ಇದು ಯಾವುದೇ ರಿಫೈನ್‌ಡ್ ಆಯಿಲ್‌ಗಿಂತ ಹೆಚ್ಚು ಸುರಕ್ಷಿತ. ಇದು ಸ್ವಲ್ಪ ದುಬಾರಿ ಇರಬಹುದು, ಆದರೆ ಹೃದ್ರೋಗ ಬಂದರೆ ಆಗುವ ಖರ್ಚಿಗಿಂತ ಅಗ್ಗ!

ಅಂಗಡಿ ತುಪ್ಪದ ಉಪಯೋಗ ಪರವಾಗಿಲ್ಲ, ಆದರೆ ಹಾಲಿನಿಂದ ಮನೆಯಲ್ಲೇ ಕಾಯಿಸಿದ ತುಪ್ಪ ನಿಜವಾದ ಲಿಕ್ವಿಡ್ ಗೋಲ್ಡ್. ಅದರ ಪರಿಮಳ ಮತ್ತು ಶುದ್ಧತೆ ಶ್ರೇಷ್ಠ.

ನೆನಪಿಡಿ, ಇದೊಂದು ಸೂಪರ್ ಫುಡ್, ಆದರೆ ಅತಿಯಾಗಿ ತಿನ್ನಲು ಲೈಸೆನ್ಸ್ ಅಲ್ಲ. ದಿನಕ್ಕೆ 3 ರಿಂದ 4 ಚಮಚ ಮಾತ್ರ ಉಪಯೋಗಿಸಿ. ಅಷ್ಟೇ ಸಾಕು.

ಮಹಾಕಾವ್ಯಗಳನ್ನು ಓದುವುದು ಹೇಗೆ?

» ಗ.ನಾ.ಭಟ್ಟ

ಶ್ರೀಮದ್ವಾಲ್ಮೀಕಿ ಮಹರ್ಷಿ ಪ್ರಣೀತವಾದ ಶ್ರೀಮದ್ರಾಮಾಯಣವು ಪರಮ ಸುಂದರವೂ ಪರಮ ಮಂಗಲಕರವೂ ಆದ ಗ್ರಂಥವೆಂದು ಜಗತ್ಪ್ರಸಿದ್ಧವಾಗಿದೆ. ಭರತಖಂಡದ ಜನಕ್ಕೆ ಅದು ಎಷ್ಟೋ ಸಾವಿರ ವರ್ಷಗಳಿಂದ ಅವರ ಜೀವನಯಾತ್ರೆಯಲ್ಲಿ ಮಾರ್ಗಜ್ಯೋತಿಯಾಗಿ ಬೆಳಗುತ್ತಿದೆ. ಈ ಮಹಾಕಾವ್ಯ ಈ ದೇಶದ ಜನಾಂಗವನ್ನು ಗಾಢವಾಗಿ ಮುಟ್ಟಿದ, ತಟ್ಟಿದ ಕೃತಿ. ಜನಜೀವನದ ಸಂಸ್ಕೃತಿಯನ್ನೂ, ನೀತಿಸಂಹಿತೆಯನ್ನೂ ರೂಪಿಸಿದ ಒಂದು ಮಹಾಕಾವ್ಯ. ಕಾವ್ಯರಸಿಕರ ಹೃದಯವನ್ನು ಕಲಕಿದ, ಶಾಸ್ತ್ರಜ್ಞರ ಬುದ್ಧಿಯನ್ನು ತಿದ್ದಿದ ಕೃತಿ ಇದು. ಜನಸಾಮಾನ್ಯರಿಂದ ಹಿಡಿದು ವಿದ್ವಾಂಸರವರೆಗೂ ಎಲ್ಲರ ಹೃದಯವನ್ನೂ ಸೂರೆಗೊಂಡ ಅನನ್ಯ ಕೃತಿ ಇದು.

'ಪರಂ ಕವೀನಾಮ್ ಆಧಾರಮ್' ಅನ್ನುವಂತೆ ಇತರ ಸಾಹಿತಿಗಳಿಗೆ ಕಾವ್ಯದ ಮೂಲಸ್ಫೂರ್ತಿ ಇದು. ಆದಿಕಾವ್ಯ ಇದು. ಇದನ್ನು ಆಧರಿಸಿ ಹುಟ್ಟಿಕೊಂಡ ಪದ್ಯಪ್ರಬಂಧ, ಚಂಪೂಕಾವ್ಯ, ನಾಟಕ, ಸ್ತೋತ್ರ ಮೊದಲಾದವುಗಳಿಗೆ ಕೊನೆಮೊದಲಿಲ್ಲ. ಇಂತಹ ಕೃತಿಯನ್ನು ಹೇಗೆ ನೋಡಬೇಕು? ಯಾವ ದೃಷ್ಟಿಯಿಂದ ನೋಡಬೇಕು? ಎಂಬುದು ಈ ಲೇಖನದ ಆಶಯ. ಮುಖ್ಯವಾಗಿ ಇದನ್ನು ಎರಡು ದೃಷ್ಟಿಯಿಂದ ನೋಡಲು ಸಾಧ್ಯವಿದೆ.

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ ॥

''ವೇದವೇದ್ಯನಾದ ಭಗವಂತ ದಶರಥನ ಮಗನಾಗಿ, ರಾಮನಾಗಿ ಜನಿಸಿದಾಗ ವೇದವೂ ವಾಲ್ಮೀಕಿಯ ಮುಖದಿಂದ ರಾಮಾಯಣವಾಗಿ ಹೊರಹೊಮ್ಮಿತು'' ಎಂಬುದು ಒಂದು ಪ್ರಾಚೀನ ಉಕ್ತಿ. ''ಮಹಾವಿಷ್ಣುವು ಶ್ರೀರಾಮನಾಗಿ ಮನುಷ್ಯರೂಪದಲ್ಲಿ ಅವತರಿಸಿದನು. ತದನುಸಾರವಾಗಿ ವೇದವು ರಾಮಾಯಣರೂಪದಲ್ಲಿ ಅವತರಿಸಿತು'' ಎಂಬುದು ಒಂದು ದೃಷ್ಟಿ. ''ಶ್ರೀರಾಮನು ಮನುಷ್ಯನಾಗಿ ಹುಟ್ಟಿ ಮಹಾವಿಷ್ಣು ಪದವಿಗೆ ಏರಿದನು. ತದನುಸಾರವಾಗಿ ವಾಲ್ಮೀಕಿಪ್ರಣೀತ ರಾಮಾಯಣವು ವೇದಪ್ರಾಯವಾಯಿತು'' ಎಂಬುದು ಎರಡನೆಯ ದೃಷ್ಟಿ.

ಮೊದಲನೆಯದರಲ್ಲಿ ಅನುಗ್ರಹಾಪೇಕ್ಷೆಯ ದೃಷ್ಟಿ ಇದೆ. ಎರಡನೆಯದರಲ್ಲಿ ಅರ್ಹತಾಸಂಪಾದನೆಯ ದೃಷ್ಟಿಯಿದೆ. ಇವರೆಡೂ ವಿರೋಧಿಗಳೇನೂ ಅಲ್ಲ.

ಮೊದಲನೆಯ ದೃಷ್ಟಿಯಲ್ಲಿ ಪ್ರಸಾದನಿರೀಕ್ಷೆ, ಅನುಗ್ರಹ ಮುಖ್ಯ ಆಶಯವಾಗಿದೆ. ಶ್ರೀರಾಮನು ಭಗವಂತನ ಪ್ರತ್ಯಕ್ಷ ಮೂರ್ತಿ. ಅವನು ಕೃಪಾಳು. ಆತನನ್ನು ಆಶ್ರಯಿಸಿದರೆ ತಮ್ಮ ಇಷ್ಟಾರ್ಥಲಾಭ ನೆರವೇರುತ್ತದೆ. ಆದ್ದರಿಂದ ರಾಮಭಕ್ತಿ ಪರಮ ಶ್ರೇಯಸ್ಸಾಧಕ. ಇಲ್ಲಿ ಪ್ರಶ್ನೆಗಳಿಗೆ, ವಿಚಾರಗಳಿಗೆ ಎಡೆಯಿಲ್ಲ, ದೃಢವಾದ ಶ್ರದ್ಧೆ, ನಂಬಿಕೆಯೇ ಕರ್ತವ್ಯ. ಪ್ರಪಂಚದಲ್ಲಿ ಇದನ್ನು ಅನುಸರಿಸುವವರೇ ಹೆಚ್ಚು.

ಎರಡನೆಯ ದೃಷ್ಟಿಯಲ್ಲಿ ಪ್ರಯತ್ನದಾರ್ಢ್ಯ, ಅರ್ಹತಾ ಸಂಪಾದನೆ ಮುಖ್ಯ ಆಶಯವಾಗಿದೆ. ಶ್ರೀರಾಮ ಮಾನುಷಸತ್ತ್ವಕ್ಕೆ ಆದರ್ಶಮೂರ್ತಿ. ಅವನು ಭಗವಂತನ ಅವತಾರವಾದರೂ ಮನುಷ್ಯ ಬೋಧೆಗಾಗಿ ಅವತರಿಸಿದವನು. ಮನುಷ್ಯನು ಹೇಗೆ ಆತ್ಮಸಂಯಮದಿಂದ, ಆತ್ಮಪರೀಕ್ಷೆಯಿಂದ, ಆತ್ಮಶಿಕ್ಷಣದಿಂದ, ಆತ್ಮಪ್ರಯತ್ನದಿಂದ, ಆತ್ಮಶೌರ್ಯದಿಂದ ಲೋಕಜೀವನದ ಕಷ್ಟಪರೀಕ್ಷೆಗಳಿಂದ ಪಾರಾಗಿ ಪರಮಪದವಿಗೇರಬಹುದು ಎಂಬುದಕ್ಕೆ ನಿದರ್ಶನವಾಗಿದೆ ರಾಮಚರಿತ್ರೆ. ರಾಮನು ಮನುಷ್ಯನಿಗೆ ಅನುಕರಣೀಯ; ಅವನು ಧರ್ಮಗುರು ಎನ್ನುವುದು ಈ ದೃಷ್ಟಿ. ಇದು ಹೇಗೆ ಅಂದರೆ–

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವಹ್ಯಾತ್ಮನೋ ಬಂಧುರಾತ್ಮೈವರಿಪುಮಾತ್ಮನಃ ॥
ಗೀತೆ– 6–5

''ತನ್ನಿಂದ ತಾನು ಉದ್ಧಾರವಾಗಬೇಕು'' ಎಂಬ ಭಗವದ್ಗೀತೆಯ ಮಾತಿಗೆ ನಿದರ್ಶನವಾಗಿದೆ. ಇದಕ್ಕೆ ಮುಖ್ಯ ಕಾರಣ–ಸ್ವತಃ ಶ್ರೀರಾಮಮಚಂದ್ರನೇ ತನ್ನನ್ನು ತಾನು ಮನುಷ್ಯ ಅಂತ ಹೇಳಿಕೊಂಡಿದ್ದು ಮತ್ತು ಅದರಂತೆ ನಡೆದುಕೊಂಡಿದ್ದು. ''ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಮ್ ।'' ''ನಾನು ಮನುಷ್ಯನೆಂದೂ, ದಶರಥಪುತ್ರನಾದ ರಾಮನೆಂದೂ ತಿಳಿದುಕೊಂಡಿದ್ದೇನೆ'' ಎಂದು ಸ್ವತಃ ಶ್ರೀರಾಮನೇ ಯುದ್ಧ ಕಾಂಡದ ಕೊನೆಯಲ್ಲಿ ಬ್ರಹ್ಮಾದಿ ಲೋಕಪಾಲಕರ ಎದುರು ಹೇಳಿಕೊಂಡಿದ್ದಾನೆ. (ಯುದ್ಧ: 120– 11)

ಮತ್ತೆ ವಾಲ್ಮೀಕಿಮಹರ್ಷಿ ನಾರದರಿಂದ ತಿಳಿಯಬಯಸಿದ್ದು ಮನುಷ್ಯ ವಿಷಯವನ್ನೇ. ''ಮಹರ್ಷೇ ತ್ವಂ ಸಮರ್ಥೋಸಿ ಜ್ಞಾತುಮೇವಂವಿಧಂ ನರಮ್ ।''–''ಹೇ ಮಹರ್ಷೇ, ಇಂತಹ ಒಬ್ಬ ಮನುಷ್ಯನನ್ನು ತಿಳಿಯುವುದಕ್ಕೆ ನೀನು ಸಮರ್ಥನಿದ್ದಿ. ದಯಮಾಡಿ ತಿಳಿಸು'' ಅಂತ ವಾಲ್ಮೀಕಿ ನಾರದರನ್ನು ಕೇಳಿಕೊಂಡಿದ್ದ. (ಬಾಲಕಾಂಡ: 1–5)

ಒಂದು– ರಾಮನನ್ನು ಸಾಕ್ಷಾತ್ ದೇವರೆಂದು ಭಾವಿಸುವುದು, ಇನ್ನೊಂದು–ರಾಮನನ್ನು ಮನುಷ್ಯನನ್ನಾಗಿ ಕಂಡು ಅವನು ದೇವರ ಮಟ್ಟಕ್ಕೆ ಹೋದನೆಂದು ಭಾವಿಸುವುದು. ಮಹಾಕಾವ್ಯಗಳನ್ನು ನೋಡುವುದಕ್ಕೆ ಈ ಎರಡು ದೃಷ್ಟಿಗಳ ಹೊರತಾಗಿಯೂ ಇನ್ನೊಂದು ದೃಷ್ಟಿಯೂ ಇದೆ. ಅದು ಕಾವ್ಯ ದೃಷ್ಟಿ.

ಕಾವ್ಯವನ್ನು ಅನುಭವಿಸಬೇಕಾದರೆ ವಾಚಕ ಅಥವಾ ಶ್ರೋತೃ ಸಮಾಹಿತಚಿತ್ತನಾಗಿರಬೇಕು; ಅವಧಾನವುಳ್ಳವನಾಗಿರಬೇಕು. ಅವಸರ ಅವಸರವಾಗಿ ಸರ್ಗಗಳನ್ನು ಮುಗಿಸಬೇಕು ಎಂಬ ಆತುರದಲ್ಲಿ ಇರಬಾರದು. ಇದಕ್ಕೆ ಕೆಲವು ಮೂಲಸೂತ್ರಗಳಿವೆ. ರಾಮಾಯಣ ಒಂದು ಕಾವ್ಯ; ಮಹಾಕಾವ್ಯ. ಅದು ಬರಿಯ ಕಥೆಯಲ್ಲ. ಚರಿತ್ರೆಯಲ್ಲ. ಶಾಸ್ತ್ರಗ್ರಂಥವೂ ಅಲ್ಲ. ಕಾವ್ಯವನ್ನೋದುವ ಮನಸ್ಸಿನಲ್ಲಿ ಓದಬೇಕು ಅದನ್ನು.

ಬರೀ ಕಥೆಯಲ್ಲ

ಕಾವ್ಯದಲ್ಲಿ ಕಥೆಯೇನೋ ಇರುತ್ತದೆ. ಆದರೆ ಅದು ಬರೀ ಕಥೆಯಲ್ಲ. ಮಹಾಕಾವ್ಯದಲ್ಲಿ ಕಥೆಯು ಜೀವಸ್ಪರ್ಶಿಯಾದ ರಸನಾಳಿಕೆಯಲ್ಲಿ ಹರಿದುಬರುತ್ತದೆ. ಅಲ್ಲಿ ಕಥೆಯ ಘಟನೆಗಿಂತ ಅದರಲ್ಲಡಗಿರುವ ರಸದ್ರವ್ಯ ಮುಖ್ಯವಾಗಿರುತ್ತದೆ. ರಸಸಾಮಗ್ರಿಯಲ್ಲಿ ವಿನೋದಕ್ಕಿಂತ ಸಂಸ್ಕಾರಕಾರಕವಾದ ಗುಣ ಮುಖ್ಯವಾಗಿರುತ್ತದೆ. ಇಂತಹ ಕಾವ್ಯಾನುಷ್ಠಾನಕ್ಕೆ ಅವಶ್ಯವಾದದ್ದು ಆತ್ಮಾರ್ಪಣ ಬುದ್ಧಿ. ಇಲ್ಲಿ ವಾಚಕ ಅಥವಾ ಶ್ರೋತೃ ತನ್ನ ಸ್ವಂತ ವಿಮರ್ಶೆ, ಸ್ವಂತ ಪಾಂಡಿತ್ಯ, ಸ್ವಂತ ಚಾಲಾಕುತನಗಳನ್ನು ವರ್ಜಿಸಬೇಕು. ಅಂದರೆ ಆತ ಅಹಂಕಾರವನ್ನು ಬಿಡಬೇಕು. ಒಂದು ಬಗೆಯ ಶರಣಾಗತಭಾವವನ್ನು ಇರಿಸಿಕೊಳ್ಳಬೇಕು. ಇದು ಎಲ್ಲಾ ಕಲಾಭ್ಯಾಸಕ್ಕೂ, ಕಾವ್ಯೋಪಾಸನೆಗೂ, ಆತ್ಮೋಪಾಸನೆಗೂ ಅನ್ವಯಿಸುವ ಮಾತಾಗಿದೆ. ಒಂದು ವಿಷಯದ ಪೂರ್ಣಜ್ಞಾನ ದೊರೆಯಬೇಕಾದರೆ ನಾವು ಆ ವಸ್ತುವಿನಲ್ಲಿ ಸೇರಿಕೊಳ್ಳಬೇಕು. ಅಂದರೆ–ನಾವು ಆ ವಸ್ತುವಾಗಬೇಕು ಇದನ್ನೇ ತಲ್ಲೀನತೆ, ತಾದಾತ್ಮ್ಯ ಅಂತ ಕರೆಯುವುದು.



ರಾಮಾಯಣವನ್ನು ಎರಡು ದೃಷ್ಟಿಗಳಲ್ಲಿ ಓದಬಹುದು: 1. ಮಹಾವಿಷ್ಣುವು ಶ್ರೀರಾಮನಾಗಿ ಮನುಷ್ಯರೂಪದಲ್ಲಿ ಅವತರಿಸಿದನು. 2.ಶ್ರೀರಾಮನು ಮನುಷ್ಯನಾಗಿ ಹುಟ್ಟಿ ಮಹಾವಿಷ್ಣು ಪದವಿಗೆ ಏರಿದನು. ಮೊದಲನೆಯದರಲ್ಲಿ ಅನುಗ್ರಹಾಪೇಕ್ಷೆಯ ದೃಷ್ಟಿ ಇದೆ. ಎರಡನೆಯ ದೃಷ್ಟಿಯಲ್ಲಿ ಪ್ರಯತ್ನದಾರ್ಢ್ಯ, ಅರ್ಹತಾಸಂಪಾದನೆ ಮುಖ್ಯ ಅಶಯವಾಗಿದೆ.

ಶ್ರೋತೃ ಅಥವಾ ವಾಚಕ ಅಥವಾ ಪ್ರೇಕ್ಷಕನಾದವನು ಕವಿಯ ವಾಕ್ಕನ್ನು ಯಥಾರ್ಥ ಬುದ್ಧಿಯಿಂದ ಗ್ರಹಿಸಬೇಕು. ಕಾವ್ಯವ್ಯಾಸಂಗಕಾಲದಲ್ಲಿ ಆ ವ್ಯಾಸಂಗದ ಮಟ್ಟಿಗೆ ಅವನು ತನ್ನ ಅಪನಂಬಿಕೆಯನ್ನೂ ಶಂಕೆಯನ್ನೂ ಬದಿಗಿರಿಸಬೇಕು. ಅವನ್ನು ಅಮಾನತ್ತಿನಲ್ಲಿಡಬೇಕು.

ರಾವಣನಿಗೆ ಹತ್ತು ತಲೆಯಿದ್ದದ್ದು ನಿಜವೆ? ಅವನು ಕಾಮರೂಪಿಯಾಗಿದ್ದನೆ? ಮಾರೀಚನು ಕನಕಮೃಗವಾದದ್ದು ಹೇಗೆ? ಪಾಂಡವರ ಜನನ ಮಂತ್ರಪ್ರಭಾವದಿಂದ ಆದದ್ದು ಹೌದೇ? ಶ್ರೀಕೃಷ್ಣನು ನರಕಾಸುರನ ಪಟ್ಟಣದಿಂದ ತಂದ ಸ್ತ್ರೀಯರ ಸಂಖ್ಯೆ ಹೆಚ್ಚು ಕಡಿಮೆಯಿಲ್ಲದೆ ಹದಿನಾರು ಸಾವಿರವೇ ಹೌದೆ? ಅವರ ವಯಸ್ಸೆಲ್ಲ ಒಂದೇ ಇತ್ತೇ? ಅವರಲ್ಲಿ ಕೆಲವರು ಮುದುಕಿಯರಾಗಿರಲಿಲ್ಲವೆ?– ಇಂತಹ ಅಸಂಗತ ಪ್ರಶ್ನೆಗಳನ್ನು ಕೇಳಬಾರದು.

ಕಾವ್ಯವನ್ನು ಆಸ್ವಾದಿಸುವ ಮಟ್ಟಿಗೆ ರಾವಣನಿಗೆ ಹತ್ತು ತಲೆ ಇದ್ದದ್ದು ಹೌದು ಅಂತ ಒಪ್ಪಬೇಕು. ಕಾವ್ಯದಲ್ಲಿ ಮುಖ್ಯವಾದದ್ದು ಬಹಿರಂಗ ಸಂಗತಿಗಿಂತ ಅಂತರಂಗ ಸಂಗತಿ ಮುಖ್ಯ. ಬಹಿರಂಗ ಸಂಗತಿ ಕೇವಲ ಸಾಂಕೇತಿಕವಾದುದು. ರಾವಣ ಒಬ್ಬ ಮಹಾಬಲಿಷ್ಠ; ಅತಿಶಯ ಪರಾಕ್ರಮಿ ಅಂತ ತಿಳಿಸಲು ದಶಶಿರಸ್ಸಿನ ಉಪಾಯವನ್ನು ಕವಿ ಮಾಡಿರುತ್ತಾನೆ. ಒಬ್ಬ ಸಾಮಾನ್ಯ ಮನುಷ್ಯನ ಶಕ್ತಿಯನ್ನು ನಾಲ್ಮಡಿ ಆರ್ಮಡಿ ಮಾಡಿದರೆ ಎಷ್ಟಾಗಬಹುದೋ ಅಷ್ಟು ಶಕ್ತಿಯನ್ನು ಒಬ್ಬನೇ ಪಡೆದಿದ್ದ ಅಂತ ತಿಳಿಸಲು ಕವಿ ಇಂತಹ ರೂಪಕಗಳನ್ನೊ ಉಪಾಯವನ್ನೋ ಮಾಡುತ್ತಾನೆ. ಕವಿಯ ಹೊರವರ್ಣನೆಯ ಒಳತಾತ್ಪರ್ಯವನ್ನು ಗ್ರಹಿಸದಿದ್ದರೆ ದಶಕಂಠತ್ವ, ಕಪಿಯ ಸಂಭಾಷಣೆ, ಸಮುದ್ರಲಂಘನ–ಇಂಥಹ ಬಹಿರ್ಘಟನೆಗಳ ಅಸಾಮಂಜಸ್ಯವೇ ದೊಡ್ಡದಾಗಿ ಕಾವ್ಯದ ಅಂತರಂಗಾನುಭವ ನಮಗೆ ದುರ್ಲಭವಾಗಿಹೋಗುತ್ತದೆ. ಮಹಾಕಾವ್ಯದ ಒಳಮರ್ಮವನ್ನು ತಿಳಿಯಬಯಸುವವರು ಎಳೆಯ ಮಕ್ಕಳು ಅಜ್ಜಿ ಹೇಳುವ ಕಥೆಯನ್ನು ಅಕ್ಷರಕ್ಷರವೂ ಯಥಾರ್ಥವೆಂದು ಗ್ರಹಿಸಿ ಹೂಂಗುಟ್ಟುವಂತೆ ನಡೆದುಕೊಳ್ಳಬೇಕು. ಇಲ್ಲದೆ ಇದ್ದರೆ ಕಾವ್ಯದ ಕಾವ್ಯಾಂಶ ಹಾರಿಹೋಗುತ್ತದೆ. ಬೆಂಕಿಯ ಮೇಲಿನ ಕಾವಲಿಯಲ್ಲಿ ಹಾಕಿದ ಹೂವಿನ ಸುವಾಸನೆಯಂತೆ ಆಗಿಹೋಗುತ್ತದೆ.

ವಾಕ್ಯಪದಗಳ ಧೋರಣೆಯ ಅರ್ಥವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಪದಪದವನ್ನೂ, ಅಕ್ಷರ ಅಕ್ಷರವನ್ನೂ ವಿಂಗಡಿಸಿ ನೋಡಬಾರದು. ಕಮಲದ ಹೂವಿನಲ್ಲಿ ಸಾವಿರ ರೇಕುಗಳಿರುತ್ತವೆ. ಒಂದೊಂದು ರೇಕಿಗೂ ಏನು ಅರ್ಥ? ಏನು ತಾತ್ಪರ್ಯ ಎಂದು ಬಿಡಿಸಿ ನೋಡಿದರೆ ಸಮಗ್ರ ಸ್ವಾರಸ್ಯ ಹೊರಟುಹೋಗುತ್ತದೆ. ಪ್ರತ್ಯೇಕಾಂಶದಲ್ಲಿ ಸೌಂದರ್ಯವಿಲ್ಲ. ಮಹಾಕವಿಯ ವಾದ್ಧೋರಣೆಯೇ ಒಂದು ಸೊಗಸು. ಅದು ಮಳೆಗಾಲದಲ್ಲಿ ನದಿಯಲ್ಲಿ ಬಂದ ಪ್ರವಾಹದಂತೆ ಇರುತ್ತದೆ. ಅದರ ಒಟ್ಟಂದವನ್ನು ನೋಡಿ ಅದರ ಸೊಗಸನ್ನು ನಾವು ಅನುಭವಿಸಬೇಕು. ಇದರ ಹೊರತಾಗಿ ಇನ್ನೂ ಒಂದು ದೃಷ್ಟಿ ಇದೆ. ಅದು ಕಾವ್ಯಮೀಮಾಂಸೆಯ ದೃಷ್ಟಿ.

ನಮ್ಮ ಪ್ರಾಚೀನ ಕಾವ್ಯ–ನಾಟಕಗಳನ್ನು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಮಾನದಂಡದಿಂದ ವಿಮರ್ಶಿಸುವ ಪರಿಪಾಟ ನಮ್ಮಲ್ಲಿ ಅಷ್ಟು ಹೆಚ್ಚಾಗಿ ಬೆಳೆದು ಬಂದಿಲ್ಲ. ನಮ್ಮವೇ ಆದ ಲಕ್ಷ್ಯ–ಲಕ್ಷಣಗಳ ಪರಿಮಿತಿಯಲ್ಲಿ ಕಾವ್ಯಗಳ ವಿಮರ್ಶೆ ಸಾಗಿದೆ. ಯಾರೋ ಯಾವಾಗಲೋ ಮಾಡಿದ ಮತ್ತು ಅದರ ಪರಿಧಿಯಲ್ಲೇ ಸುತ್ತು ಹೊಡೆಯುವ ಕ್ರಮ ಇನ್ನೂ ನಮ್ಮಲ್ಲಿ ಚಾಲ್ತಿಯಲ್ಲಿದೆ. ಅದು ಕೃತಿಯಲ್ಲಿ ಎಷ್ಟು ಅಡಗಿದೆ? ಅಥವಾ ಇಲ್ಲ ಎಂಬ BhgOe|ñh ಲಾಜಿಕ್‌ನಂತಹ ಅನುಮಾನಾತ್ಮಕ ಸೂತ್ರಬದ್ಧ ರೀತಿಯನ್ನು ನಾವು ಇಂದಿಗೂ ಕಾಣಬಹುದು. ತದನುಗುಣವಾಗಿ, ತದಾಧಾರಿತವಾಗಿ ಅವನ್ನು ಅಳೆದಳೆದು ಸುರಿದರು. ಸೂರ್ಯೋದಯ, ಚಂದ್ರೋದಯ, ಋತುಗಳ ವರ್ಣನೆ, ಸಮುದ್ರವರ್ಣನೆ ಇತ್ಯಾದಿ ಇದ್ದರೆ ಮಾತ್ರ ಅದು ಕಾವ್ಯ ಇಲ್ಲದಿದ್ದರೆ ಅದು ಕಾವ್ಯವಲ್ಲ ಎಂಬ ತೀರ್ಮಾನಕ್ಕೆ ಬಂದುಬಿಟ್ಟರು. ಅದು ಒಂದು ರೀತಿಯ ಕೃತಕ ಮಾನದಂಡ ಅಂದರೂ ತಪ್ಪಾಗಲಾರದು. ಈ ಮಾದರಿಯಲ್ಲೇ ನಮ್ಮ ಕಾವ್ಯಮೀಮಾಂಸೆ ಸಾಗಿತು. ಅಭಿಜಾತ ಅಟಚಿ ಛಿಚಟ ಎಂಬ ಕಾಳಿದಾಸ, ಭವಭೂತಿ, ಭಾಸ, ಹರ್ಷ, ಬಾಣಭಟ್ಟ, ಶೂದ್ರಕ ಮೊದಲಾದವರ ಕಾವ್ಯ, ನಾಟಕ, ಅಲ್ಲಿಂದಾದಮೇಲೆ ಇತರ ಕೃತಿಗಳಿಗೂ ಇದು ಮೀಸಲಾಯಿತು.

ವಾಲ್ಮೀಕಿ ವ್ಯಾಸರನ್ನು ದೈವಾಂಶಸಂಭೂತರೆಂದು ಭಾವಿಸಿ, ಅವರ ಕಾವ್ಯಕೃತಿಗಳಿಗೆ ಕೈಮುಗಿದು ಮರ್ಯಾದೆ ತೋರುವ ಭರದಲ್ಲಿ ಅವರ ಅಮರಕೃತಿಗಳನ್ನು ನಾವು ಆಸ್ವಾದನೆ ಮಾಡಲೇ ಇಲ್ಲ. ''ರಾಮಾಯಣ ಭಾರತ, ಭಾಗವತಗಳನ್ನು ಓದುವಾಗ ನಾವು ಪಡೆದದ್ದೇನು? ಪಡೆಯಬೇಕಾದುದೇನು? ಇದರಿಂದ ಏನು ಲಾಭ ಆಯಿತು? ಪುರುಷಾರ್ಥಪ್ರಾಪ್ತಿ ಆಯಿತೋ ಇಲ್ಲವೋ? ಎಂಬೀ ರೀತಿಯ ಪ್ರಶ್ನೆ ಕೇಳುವುದೇ ಅಪರಾಧ ಎಂಬ ಮಟ್ಟಿಗೆ ಆ ಮೇರು ಕೃತಿಗಳ ಲಾಭವನ್ನು ನಾವು ಪಡೆದುಕೊಳ್ಳಲೇ ಇಲ್ಲ. ಒಂದು ಬಗೆಯ ಆತ್ಮ ವಂಚನೆ ಮಾಡಿಕೊಂಡೆವು.

ಭಾರತೀಯರಲ್ಲಿ ಬಹುಪಾಲು ಎದ್ದು ಕಾಣುವುದು ವ್ಯಾಖ್ಯಾನ ಪರಂಪರೆ. ಇದೇನೂ ಕಡಿಮೆ ಅಲ್ಲ. ನಮ್ಮ ರಾಮಾಯಣಕ್ಕೆ ಗೋವಿಂದರಾಜರು, ಮಹೇಶ್ವರತೀರ್ಥರು, ನೀಲಕಂಠರು, ಶ್ರೀಧರರು, ವೀರರಾಘವ ಮೊದಲಾದವರು ತುಂಬಾ ಸೊಗಸಾಗಿ ವ್ಯಾಖ್ಯಾನ ಮಾಡಿದ್ದಾರೆ. ಆದರೆ ಇವರ ವ್ಯಾಖ್ಯಾನವನ್ನು ನೋಡಿದವರು ಬಹಳ ಕಡಿಮೆ.

ಇದನ್ನು ಕುರಿತು ಡಿವಿಜಿ ಹೇಳಿದ ಒಂದು ಮಾತನ್ನು ನಾವಿಲ್ಲಿ ಗಮನಿಸಬೇಕು. 1932ರಲ್ಲಿ ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನದ ಅಧ್ಯಕ್ಷರಾಗಿ ಹೇಳಿದ ಮಾತದು. ''ಸಂಸ್ಕೃತವು ಮೂಲವಿಗ್ರಹದಂತೆ ಗುಡಿಯೊಳಗೆ ಕುಳಿತಿದ್ದಾಗ ಕನ್ನಡವು ಉತ್ಸವವಿಗ್ರಹದಂತೆ ಹೊರಕ್ಕೆ ಬಂದು ಜನರಿಗೆ ದಿವ್ಯದರ್ಶನವನ್ನು ದೊರಕಿಸಿದೆ. ಲೋಕೋಪಕಾರದ ವಿಸ್ತೀರ್ಣವನ್ನು ಅಳೆದು ನೋಡಿದರೆ ಬಸವಣ್ಣ ಅಲ್ಲಮರುಗಳಿಂದಲೂ ಪುರಂದರ ಕನಕರುಗಳಿಂದಲೂ ಆಗಿರುವಷ್ಟು ವೇದಾಂತತತ್ತ್ವಪ್ರಚಾರವು ಅನೇಕ ಉಪನಿಷದ್ವ್ಯಾಖ್ಯಾತರುಗಳಿಂದ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಕುಮಾರವ್ಯಾಸ ಕುಮಾರವಾಲ್ಮೀಕಿಗಳಿಂದ ಆಗಿರುವಷ್ಟು ಭಾರತ ರಾಮಾಯಣ ಕಥಾ ಪ್ರಸಾರವು ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದ ನೀಲಕಂಠ, ಗೋವಿಂದರಾಜರುಗಳಿಂದ ಆಗಿಲ್ಲವೆಂದು ಹೇಳಬಹುದು'' ಎಂದು ಹೇಳುತ್ತಾರೆ. ಇದು ಎಷ್ಟು ಸತ್ಯದ ಮಾತು ಅಂತ ನೋಡಿ. ನೀಲಕಂಠ, ಗೋವಿಂದರಜರುಗಳಿಂದ ರಾಮಾಯಣ– ಭಾರತ ಪ್ರಚಾರ ಆಗುವುದು ಇರಲಿ. ನೂರಕ್ಕೆ ತೊಂಭತ್ತೈದರಷ್ಟು ಜನಕ್ಕೆ ಅವರ ಹೆಸರೇ ಗೊತ್ತಿಲ್ಲ.

''ನೀಲಕಂಠ, ಗೋವಿಂದರಾಜ ಮೊದಲಾದವರು ರಾಮಾಯಣ ಭಾರತಗಳ ಶ್ಲೋಕ, ಸಂದರ್ಭಗಳ ಹಿನ್ನೆಲೆ, ಪ್ರಾಚೀನ ವೈದಿಕ ಪ್ರಮಾಣಗಳು, ಶ್ಲೋಕಾರ್ಥ, ಇಂಗಿತ ಅವುಗಳ ರಸ, ಧ್ವನಿ, ಅಲಂಕಾರಗಳ ಬಗೆಗೆ ಪುಷ್ಕಲ ಮಾಹಿತಿಯನ್ನು ನೀಡಿದ್ದಾರೆ. ಆದರೂ ಒಂದು ವ್ಯವಸ್ಥಿತ ಕ್ರಮದಲ್ಲಿ ಪಾತ್ರವಿಶ್ಲೇಷಣೆ, ಸಂದರ್ಭ, ಪ್ರಸಂಗಗಳ ವಿಶ್ಲೇಷಣೆ ಆಗಲಿಲ್ಲ'' ಅಂತ ಕೆ.ಎಸ್. ನಾರಾಯಣಾಚಾರ್ಯರು ಹೇಳುತ್ತಾರೆ. ''ಅದು ಪಾಶ್ಚಾತ್ಯರಲ್ಲಿ ಚೆನ್ನಾಗಿ ಸಾಗಿದೆ'' ಅಂತಲೂ ಸಾಧಾರಿತವಾಗಿ ಹೇಳುತ್ತಾರೆ.

''ಆಂಗ್ಲರಲ್ಲಿ ಪ್ರಸಂಗ ಸಂದರ್ಭಗಳ ವಿಶ್ಲೇಷಣೆ ಮತ್ತು ಪಾತ್ರವಿಶ್ಲೇಷಣೆ ಎಂಬ ಕೋನಗಳಲ್ಲಿ, ಆಯಾಮಗಳಲ್ಲಿ ಕತೆ, ಕಾದಂಬರಿಗಳ ಹಾಸುಹೊಕ್ಕನ್ನು ವಿವೇಚಿಸುವುದಿದೆ. ಅರಿಸ್ಟಾಟಲ್ ಗ್ರೀಕ್ ನಾಟಕಗಳ ಬಗ್ಗೆ ಈ ದೃಷ್ಟಿಯನ್ನಿತ್ತು ವಿಮರ್ಶೆಯನ್ನು ಪೋಷಿಸಿದ. ಅದು ಐರೋಪ್ಯ ಸಾಹಿತ್ಯ ಕೃಷಿಗೆ ಸಹಾಯಕವಾಯಿತು. ಕಾದಂಬರಿಕಾರರ ಪ್ರತಿಭಾಸಾಮರ್ಥ್ಯದ ನಿರ್ಣಯಕ್ಕೆ ಮಾನದಂಡವೂ ಆಯಿತು. ಕಥಾ ಸಂವಿಧಾನ, ಹೆಣಿಕೆ, ರಚನೆ, ಪಾತ್ರಗಳ ಪರಾಮರ್ಶೆ, ಅವುಗಳ ನೋವು–ನಲಿವು, ಸಂಕೀರ್ಣತೆ ಮುಂತಾದ ವಿಷಯಗಳ ಬಗ್ಗೆ ಅವರು ಬೆಳಕು ಚೆಲ್ಲಿದ್ದಾರೆ'' ಅಂತ ಹೇಳುತ್ತಲೇ ಆ ಮಾನದಂಡವನ್ನು ತಮ್ಮ ಕೃತಿಗಳಲ್ಲೂ ಪ್ರಯೋಗಿಸಿ ನಮ್ಮ ಇಡೀ ಪ್ರಾಚೀನಸಾಹಿತ್ಯಕ್ಕೇ ಹೊಸ ಸ್ಪರ್ಶವನ್ನೂ, ಹೊಸ ಕಾಂತಿಯನ್ನೂ ತಂದಿದ್ದಾರೆ.

ಅವರೆಲ್ಲರ ನೆನಪಿನಲ್ಲಿ ಇಷ್ಟು ಬರೆಯಬೇಕೆನ್ನಿಸಿತು. ಬರೆದಿದ್ದೇನೆ. ಉಳಿದದ್ದು ನಿಮಗೆ ಬಿಟ್ಟದ್ದು.

ಗಲ್ಫ್ ಯುದ್ಧದ ದೃಶ್ಯ ನೋಡುತ್ತಾ 'ಸುದ್ದಿವ್ಯಸನ'ಕ್ಕೆ ಒಳಗಾಗಿದ್ದೀರಾ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಭಾಗ್ಯಶ್ರೀ (ಇಮೇಲ್ ಮೂಲಕ)

- **ಭಟ್ರೇ, ಗಲ್ಫ್ ದೇಶದಲ್ಲಿ ನಡೆಯುತ್ತಿರುವ ಯುದ್ಧ ನಮ್ಮ ಮನೆಯಲ್ಲೂ ನಡೆಯುತ್ತಿದೆ. ನನ್ನ ಗಂಡ ದಿನಪೂರ್ತಿ ಅದೇ ಯುದ್ಧದ ಸುದ್ದಿಗಳನ್ನು ನೋಡುತ್ತಿರುತ್ತಾರೆ. ಇದರಿಂದ ಮನೆಯಲ್ಲೇ ಕಿರಿಕಿರಿ ಉಂಟಾಗುತ್ತಿದೆ ಮತ್ತು ಕೆಲವೊಮ್ಮೆ ಈ ವಿಷಯದ ಬಗ್ಗೆ ನಮ್ಮಿಬ್ಬರ ನಡುವೆ ಜಗಳವೂ ಆಗುತ್ತಿದೆ. ನಾನು ಅವರಿಗೆ ಹಲವು ಬಾರಿ ಹೇಳಲು ಪ್ರಯತ್ನಿಸಿದ್ದೇನೆ; ನಾವು ಇಲ್ಲಿ ಕುಳಿತುಕೊಂಡು ದಿನಪೂರ್ತಿ ಯುದ್ಧದ ಸುದ್ದಿಗಳನ್ನು ನೋಡಿದರೆ ಆ ದೇಶಗಳ ಸಮಸ್ಯೆ ಪರಿಹಾರವಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಇದರಿಂದ ನನ್ನ ಮನಸ್ಸಿಗೂ ಶಾಂತಿ ಇಲ್ಲ. ಈ ಪರಿಸ್ಥಿತಿಯಲ್ಲಿ ನಾನು ನನ್ನ ಗಂಡನಿಗೆ ಹೇಗೆ ಶಾಂತವಾಗಿ ಮತ್ತು ಜಗಳವಾಗದಂತೆ ಹೇಳಬೇಕು? ಅವರಿಗೆ ಅರ್ಥವಾಗುವಂತೆ ಯಾವ ರೀತಿಯಲ್ಲಿ ಮಾತಾಡಿದರೆ ಉತ್ತಮ?**

– ಭಾಗ್ಯಶ್ರೀ ಅವರೇ, ನಿಮ್ಮ ಮನೆಯ ಪರಿಸ್ಥಿತಿ ಇಂದು ಅನೇಕ ಕುಟುಂಬಗಳಲ್ಲಿ ಕಂಡುಬರುತ್ತಿರುವ ಒಂದು ಗಂಭೀರವಾದ ಮಾನಸಿಕ ಹಾಗೂ ಸಾಮಾಜಿಕ ಸವಾಲಾಗಿದೆ. ಅಂತಾರಾಷ್ಟ್ರೀಯ ಸಂಘರ್ಷಗಳ ತೀವ್ರತೆ ಮತ್ತು ದೃಶ್ಯ ಮಾಧ್ಯಮಗಳ ಅತಿಯಾದ ಪ್ರಭಾವ ನಮ್ಮ ಖಾಸಗಿ ಬದುಕಿನ ನೆಮ್ಮದಿಯನ್ನು ಕದಡುತ್ತಿರುವುದು ನಿಜ. ನಿಮ್ಮ ಪತಿಯ ಆಸಕ್ತಿಯನ್ನು ಬದಲಾಯಿಸುವುದಕ್ಕಿಂತ ಹೆಚ್ಚಾಗಿ, ಅವರ ಮನಸ್ಥಿತಿಯನ್ನು ಅರ್ಥಮಾಡಿಕೊಂಡು ಶಾಂತಿಯುತವಾಗಿ ಸಂವಹನ ನಡೆಸುವುದು ಇಲ್ಲಿ ಮುಖ್ಯ.

ಸಾಮಾನ್ಯವಾಗಿ ನಾವು 'ನೀವು ಯಾವಾಗಲೂ ಇದನ್ನೇ ಮಾಡ್ತೀರಿ' ಎಂದು ಮಾತನಾಡಿದಾಗ ಎದುರಿಗಿರುವವರು ರಕ್ಷಣಾತ್ಮಕವಾಗಿ (ಡಿಫೆನ್ಸಿವ್) ವರ್ತಿಸುತ್ತಾರೆ. ಇದು ಜಗಳಕ್ಕೆ ಕಾರಣವಾಗುತ್ತದೆ. ಅದರ ಬದಲು ನಿಮ್ಮ ಭಾವನೆಗಳನ್ನು ಹಂಚಿಕೊಳ್ಳಿ. 'ನೀವು ಟಿವಿ ನೋಡುವುದರಿಂದ ನನಗೆ ತೊಂದರೆಯಾಗುತ್ತಿದೆ' ಎನ್ನುವ ಬದಲು, 'ನಮ್ಮ ಮನೆಯಲ್ಲಿ ಯುದ್ಧದ ಸುದ್ದಿಗಳ ಶಬ್ದ ಕೇಳುತ್ತಿದ್ದರೆ ನನಗೆ ತುಂಬಾ ಆತಂಕವಾಗುತ್ತದೆ ಮತ್ತು ನನ್ನ ಮನಸ್ಸಿನ ಶಾಂತಿ ಹಾಳಾಗುತ್ತದೆ' ಎಂದು ಹೇಳಿ.

'ದಿನಪೂರ್ತಿ ಇಂಥ ಹಿಂಸಾತ್ಮಕ ಸುದ್ದಿಗಳನ್ನು ನೋಡುವುದರಿಂದ ನಿಮ್ಮ ಬಿಪಿ (ರಕ್ತದೊತ್ತಡ) ಅಥವಾ ಮಾನಸಿಕ ನೆಮ್ಮದಿಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು ಎಂಬ ಭಯ ನನಗಿದೆ' ಎಂದು ಪ್ರೀತಿಯಿಂದ ತಿಳಿಸಿ. ಯುದ್ಧದ ಸುದ್ದಿಗಳು ನಮಗೆ ಮಾಹಿತಿ ನೀಡಬೇಕೇ ಹೊರತು ನಮ್ಮ ಬದುಕನ್ನೇ ಆವರಿಸಿಕೊಳ್ಳಬಾರದು ಎಂಬುದನ್ನು ಸಮಾಧಾನದಿಂದ ಹೇಳಿ. ಆಗ ಅವರಿಗೆ ನಿಮ್ಮ ಅಸಮ್ಮತಿಯ ಸಂದೇಶ ಹೋಗುತ್ತದೆ.

ಗಲ್ಫ್ ದೇಶಗಳಲ್ಲಿ ನಡೆಯುತ್ತಿರುವ ಘಟನೆಗಳು ನಮ್ಮ ಹತೋಟಿಯಲ್ಲಿಲ್ಲ. ನಾವು 24 ಗಂಟೆ ಸುದ್ದಿ ನೋಡಿದರೂ ಅಲ್ಲಿನ ಪರಿಸ್ಥಿತಿ ಬದಲಾಗುವುದಿಲ್ಲ. ಆದರೆ, ನಮ್ಮ ಮನೆಯ ವಾತಾವರಣ ನಮ್ಮ ಹತೋಟಿಯಲ್ಲಿದೆ ಎಂಬ ಹಕೀಕತ್ತನ್ನು ಅವರಿಗೆ ತಿಳಿಸಿ. ಮಾಹಿತಿ ಮತ್ತು ಗೀಳಿನ ನಡುವಿನ ವ್ಯತ್ಯಾಸವನ್ನು ಗಮನಕ್ಕೆ ತನ್ನಿ. ದಿನಕ್ಕೆ ಒಂದು ಬಾರಿ ಅಪ್‌ಡೇಟ್ ಪಡೆಯುವುದು ಮಾಹಿತಿ ಪಡೆಯುವಿಕೆ. ಆದರೆ ನಿರಂತರವಾಗಿ ಅದನ್ನೇ ನೋಡುವುದು ಒಂದು ರೀತಿಯ 'ಗೀಳು' (Obsession). ಇದು ವ್ಯಕ್ತಿಯ ಸೃಜನಶೀಲತೆಯನ್ನು ಕೊಲ್ಲುತ್ತದೆ ಎಂದು ವಿವರಿಸಿ.

ಜಗಳವಾಗದಂತೆ ಕೆಲವು ಒಪ್ಪಂದಗಳನ್ನು ಮಾಡಿಕೊಳ್ಳಿ. 'ಬೆಳಗ್ಗೆ ಅರ್ಧ ಗಂಟೆ ಮತ್ತು ಸಂಜೆ ಅರ್ಧ ಗಂಟೆ ಮಾತ್ರ ಸುದ್ದಿ ನೋಡೋಣ, ಉಳಿದ ಸಮಯದಲ್ಲಿ ಟಿವಿ ಆಫ್ ಮಾಡೋಣ ಅಥವಾ ಬೇರೆ ಕಾರ್ಯಕ್ರಮ ನೋಡೋಣ' ಎಂದು ಕೇಳಿಕೊಳ್ಳಿ. ಊಟ ಮಾಡುವಾಗ ಮತ್ತು ಮಲಗುವ ಮುನ್ನ ಕನಿಷ್ಠ ಒಂದು ಗಂಟೆ ಯಾವುದೇ ಯುದ್ಧದ ಸುದ್ದಿಗಳ ಬಗ್ಗೆ ಚರ್ಚಿಸಬಾರದು ಎಂಬ ನಿಯಮವನ್ನು ಪ್ರೀತಿಯಿಂದ ಜಾರಿಗೆ ತನ್ನಿ.

ಕೇವಲ 'ನೋಡಬೇಡಿ' ಎಂದು ಹೇಳಿದರೆ ಅವರು ಕೇಳಲಿಕ್ಕಿಲ್ಲ. ಅವರ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಿಸಿ. ಅವರಿಗೆ ಇಷ್ಟವಾದ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸಿ. ಸಂಜೆ ಸಮಯದಲ್ಲಿ ಒಟ್ಟಿಗೆ ವಾಕಿಂಗ್ ಹೋಗುವುದು ಅಥವಾ ಮನೆಯವರೊಂದಿಗೆ ಸಮಯ ಕಳೆಯುವಂತೆ ಮಾಡಿ. ಯುದ್ಧದ ಸುದ್ದಿಗಳ ಬದಲು ಯಾವುದಾದರೂ ತಿಳಿ ಹಾಸ್ಯ ಅಥವಾ ಜ್ಞಾನವರ್ಧಕ ಕಾರ್ಯಕ್ರಮಗಳನ್ನು ಒಟ್ಟಿಗೆ ನೋಡಿ.

ಅವರು ಕೂಡ ಒಂದು ರೀತಿಯ 'ಸುದ್ದಿ ವ್ಯಸನ'ಕ್ಕೆ ಒಳಗಾಗಿರಬಹುದು. ಇದು ಒಂದೇ ದಿನದಲ್ಲಿ ಬದಲಾಗುವುದಿಲ್ಲ. ಅವರು ಸುದ್ದಿ ನೋಡಲು ಕುಳಿತಾಗ ನೀವು ಕಿರಿಕಿರಿ ಮಾಡಿಕೊಳ್ಳುವ ಬದಲು, ಅಲ್ಲಿಂದ ಎದ್ದು ಹೋಗಿ ನಿಮ್ಮ ಕೆಲಸದಲ್ಲಿ ತೊಡಗಿಸಿಕೊಳ್ಳಿ. ನಂತರ ಅವರು ಶಾಂತವಾಗಿದ್ದಾಗ ಮೇಲೆ ತಿಳಿಸಿದ ವಿಷಯಗಳನ್ನು ಪ್ರಸ್ತಾಪಿಸಿ.

ಯುದ್ಧದ ಸುದ್ದಿಗಿಂತ ನಿಮ್ಮಿಬ್ಬರ ನಡುವಿನ ಸಂಬಂಧ ಮುಖ್ಯ. 'ನಮಗೆ ಹೊರಗಿನ ಯುದ್ಧ ಬೇಡ, ಮನೆಯೊಳಗಿನ ಶಾಂತಿ ಬೇಕು' ಎಂಬುದು ನಿಮ್ಮ ಮಾತಿನ ಸಾರಾಂಶವಾಗಿರಲಿ.

ಸುಧಾ (ಇಮೇಲ್ ಮೂಲಕ)

- **ಭಟ್ರೇ, ನನ್ನ ಗಂಡ ಯಾವಾಗಲೂ ತನ್ನ ಆಫೀಸ್ ಕೆಲಸ ನಿಮಿತ್ತ ಪ್ರಯಾಣ ಮಾಡುತ್ತಿರುತ್ತಾರೆ. ನಾನು ಅವರಿಗೆ ನನ್ನನ್ನೂ ಜತೆಗೆ ತೆಗೆದುಕೊಂಡು ಹೋಗಿ ಎಂದು ಹೇಳಿದಾಗ, ಅವರು ನಿಮ್ಮ ಉದಾಹರಣೆ ಕೊಡುತ್ತಾರೆ. ನೀವು ನಿಮ್ಮ ಹೆಂಡತಿ ಬಿಟ್ಟು ನೂರಾರು ದೇಶಗಳನ್ನು ನೋಡಿದ್ದೀರಿ ಎಂದು. ಆದರೆ ಈಗ ನಾನು ಗಮನಿಸಿದ್ದೇನೆ, ನೀವು ಇತ್ತೀಚೆಗೆ ನಿಮ್ಮ ಹೆಂಡತಿಯ ಜತೆ ವಿದೇಶಗಳಿಗೆ ಹೋಗಲು ಆರಂಭಿಸಿದ್ದೀರಿ. ಅದನ್ನು ನಾನು ನನ್ನ ಗಂಡನಿಗೆ ಹೇಳಿದೆ, ಈಗ ಭಟ್ ಸರ್ ಕೂಡ ತಮ್ಮ ಹೆಂಡತಿಯನ್ನು ವಿದೇಶಗಳಿಗೆ ಕರೆದುಕೊಂಡು ಹೋಗುತ್ತಿದ್ದಾರೆ ಎಂದು. ಆದರೆ ಅದರಿಂದಲೂ ಯಾವುದೇ ಬದಲಾವಣೆ ಆಗಿಲ್ಲ. ಅವರು ಹೇಳುತ್ತಾರೆ – 'ಭಟ್ ಸರ್ ಸುತ್ತಾಡೋಕೆ ಹೋಗುತಾರೆ. ನಾನು ಆಫೀಸ್ ಕೆಲಸಕ್ಕಾಗಿ ಹೋಗುತ್ತೇನೆ, ಆದ್ದರಿಂದ ನಾನು ನಿನ್ನನ್ನು ಜತೆಗೆ ಕರೆದುಕೊಂಡು ಹೋಗಲು ಸಾಧ್ಯವಿಲ್ಲ.' ನನಗೆ ಗೊತ್ತಿದೆ ನೀವು ರಜೆಗಾಗಿ ಹೋಗುತ್ತಿಲ್ಲ, ನೀವು ಕೂಡ ಕೆಲಸಕ್ಕಾಗಿ ಮಾತ್ರ ಹೋಗುತ್ತೀರಿ. ಆದರೂ ನೀವು ನಿಮ್ಮ ಹೆಂಡತಿಗೆ ಸಮಯ ಕೊಡುತ್ತೀರಿ. ನನ್ನ ಗಂಡ ನನಗೆ ಏಕೆ ಸಮಯ ಕೊಡಲಾರರು?**

– ಸುಧಾ ಅವರೇ, ನಿಮ್ಮ ಮಾತಿನಲ್ಲಿರುವ ನೋವು ಮತ್ತು ಕಳಕಳಿ ನನಗೆ ಅರ್ಥವಾಗುತ್ತಿದೆ. ಒಬ್ಬ ಪತ್ನಿಯಾಗಿ ಪತಿಯ ಜತೆ ಸಮಯ ಕಳೆಯಬೇಕು, ಅವರ ಪ್ರಯಾಣದಲ್ಲಿ ಭಾಗಿಯಾಗಬೇಕು ಎಂಬ ಹಂಬಲ ಇರುವುದು ತೀರಾ ಸಹಜ. ಆದರೆ, ನಿಮ್ಮ ಗಂಡನ ಮನಸ್ಥಿತಿಯನ್ನು ಬದಲಿಸಲು ಮತ್ತು ಅವರಿಗೆ ವಿಷಯ ಮನವರಿಕೆ ಮಾಡಲು ನಾನು ಕೆಲವು ಆಪ್ತವಾದ ಸಲಹೆಗಳನ್ನು ನೀಡಬಹುದು.

ನಿಮ್ಮ ಗಂಡ ಹೇಳುವುದು ಒಂದು ರೀತಿಯಲ್ಲಿ ನಿಜ; ಆಫೀಸ್ ಕೆಲಸಕ್ಕಾಗಿ ಹೋದಾಗ ಮೀಟಿಂಗ್‌ಗಳು, ಒತ್ತಡ ಮತ್ತು ಸಮಯದ ಅಭಾವವಿರುತ್ತದೆ. ಆದರೆ, ನೀವು ಅವರಿಗೆ ಈ ರೀತಿ ಹೇಳಿ – 'ನೀವು ಹಗಲು ಪೂರ್ತಿ ಆಫೀಸ್ ಕೆಲಸ ಮಾಡಿ, ನಾನು ಹೋಟೆಲ್‌ನಲ್ಲಿ ಇರುತ್ತೇನೆ ಅಥವಾ ಹತ್ತಿರದ ಜಾಗಗಳನ್ನು ನೋಡುತ್ತೇನೆ. ಸಂಜೆ ನೀವು ಕೆಲಸ ಮುಗಿಸಿ ಬಂದಾಗ ನಾವು ಒಟ್ಟಿಗೆ ಕಾಫಿ ಕುಡಿಯಬಹುದು ಅಥವಾ ಊಟ ಮಾಡಬಹುದು. ಇದರಿಂದ ನಿಮಗೂ ಕೆಲಸದ ಒತ್ತಡ ಕಡಿಮೆಯಾಗುತ್ತದೆ.'

ಅವರು ನಿಮ್ಮನ್ನು ಕರೆದುಕೊಂಡು ಹೋಗದಿರಲು ಮುಖ್ಯ ಕಾರಣ – ಅವರಿಗೆ ನಿಮ್ಮ ಜವಾಬ್ದಾರಿಯನ್ನು ಹೊರಲು ಆ ಸಮಯದಲ್ಲಿ ಸಾಧ್ಯವಾಗದಿರುವುದು. 'ನಾನು ನಿಮಗೆ ಅಲ್ಲಿ ಹೊರೆಯಾಗುವುದಿಲ್ಲ, ಬದಲಿಗೆ ನಿಮ್ಮ ಒತ್ತಡದ ಕೆಲಸದ ನಡುವೆ ಒಂದು ಸಣ್ಣ ಆಸರೆಯಾಗಿರುತ್ತೇನೆ' ಎಂಬ ಭರವಸೆ ನೀಡಿ.

'ಭಟ್ ಸರ್ ಕರೆದುಕೊಂಡು ಹೋಗುತ್ತಾರೆ, ನೀವು ಯಾಕೆ ಹೋಗಲ್ಲ?' ಎಂದು ಕೇಳಿದಾಗ ಪುರುಷರಿಗೆ ಅದು ಅಹಂನ ಅಥವಾ ಕಿರಿಕಿರಿಯ ವಿಷಯವಾಗಬಹುದು. ಗಂಡಸರು ಮತ್ತೊಬ್ಬ ಗಂಡಸರ ಉದಾಹರಣೆಯನ್ನು ಇಷ್ಟಪಡದಿರಬಹುದು. ಅದರ ಬದಲು, 'ನನಗೆ ನಿಮ್ಮ ಜತೆ ಸಮಯ ಕಳೆಯುವ ಆಸೆಯಿದೆ. ನೀವು ಹೋದ ಕಡೆಯಲ್ಲೆಲ್ಲ ನಾನು ಬರಲು ಹಠ ಮಾಡುವುದಿಲ್ಲ, ವರ್ಷದಲ್ಲಿ ಒಂದು ಅಥವಾ ಎರಡು ಬಾರಿ ನಿಮ್ಮ ಕೆಲಸದ ಪ್ರವಾಸದ ಜತೆಗೆ ಒಂದೆರಡು ದಿನ ರಜೆ ಸೇರಿಸಿಕೊಂಡು ನಾವು ಹೋಗಬಹುದಲ್ಲವೇ?' ಎಂದು ಕೇಳಿ.

ಕೆಲವೊಮ್ಮೆ ಕಂಪನಿಗಳು ಕೇವಲ ಉದ್ಯೋಗಿಯ ಖರ್ಚನ್ನು ಮಾತ್ರ ಭರಿಸುತ್ತವೆ. 'ನನ್ನ ಪ್ರಯಾಣದ ಖರ್ಚನ್ನು ನಾವೇ ಭರಿಸೋಣ, ಆದರೆ ನಿಮ್ಮ ಜತೆ ಇರುವ ಅವಕಾಶ ನನಗೆ ಸಿಗಲಿ' ಎಂದು ಹೇಳಿ ನೋಡಿ.

ನಿಮ್ಮ ಮಾತನ್ನು ಕೇಳಿದಾಗ ನನಗೆ ಅನಿಸಿದ್ದೇನು ಗೊತ್ತಾ? My husband's idea of a romantic getaway is a business trip where he actually remembers to call me (ನನ್ನ ಗಂಡನ ದೃಷ್ಟಿಯಲ್ಲಿ ರೊಮ್ಯಾಂಟಿಕ್ ಪ್ರವಾಸ ಅಂದರೆ, ಅವರು ಕೆಲಸದ ಪ್ರವಾಸಕ್ಕೆ ಹೋದಾಗ ನನಗೆ ಫೋನ್ ಮಾಡಲು ಮರೆಯದಿರುವುದು!) ಎಂಬ ಯಾವನೋ ಅನುಭಾವಿ ಹೇಳಿದ ಮಾತು.

ಈ ವಿಷಯದಲ್ಲಿ ಬಹಳ ಒತ್ತಡ ಹೇರಬೇಡಿ. ನನ್ನ ಪತ್ನಿ ನನಗೆ ಎಂದೂ ವಿದೇಶಗಳಿಗೆ ಕರೆದುಕೊಂಡು ಹೋಗಿ ಎಂದು ದುಂಬಾಲು ಬಿದ್ದಿಲ್ಲ. ನನಗೇ ಅನಿಸಿತು – ಪ್ರತಿ ಸಲ ಅವಳನ್ನು ಬಿಟ್ಟು ಹೋಗುತ್ತಿದ್ದೇನೆ, ಇನ್ನು ಮುಂದೆ ಅವಳನ್ನೂ ಕರೆದುಕೊಂಡು ಹೋಗಬೇಕೆಂದು. ನಮ್ಮ ಸಂತಸದ ಕ್ಷಣಗಳಲ್ಲಿ ನಮ್ಮ ಕುಟುಂಬದವರು ಜತೆಯಲ್ಲಿರಬೇಕು. ಇದೇ ಅವಳನ್ನು ಜತೆಯಲ್ಲಿ ಕರೆದುಕೊಂಡು ಹೋಗಲು ಪ್ರೇರೇಪಿಸಿತು.

ಅದೇನೇ ಇರಲಿ, Behind every successful man is a surprised wife who is still waiting for him to come home from a business trip (ಪ್ರತಿ ಯಶಸ್ವಿ ಪುರುಷನ ಹಿಂದೆ, ತನ್ನ ಗಂಡ ಕೆಲಸದ ಪ್ರವಾಸ ಮುಗಿಸಿ ಮನೆಗೆ ಬರುವುದನ್ನೇ ಕಾಯುತ್ತಿರುವ ಆಶ್ಚರ್ಯಚಕಿತ ಹೆಂಡತಿ ಇರುತ್ತಾಳೆ!) ಎಂಬ ಮಾತನ್ನು ಮರೆಯಬೇಡಿ. ನನ್ನ ಹೆಸರನ್ನು ಪ್ರಸ್ತಾಪಿಸಿದಾಗ ನಿಮ್ಮ ಪತಿ ಸಿಡಿಮಿಡಿಗೊಳ್ಳಲಿಲ್ಲ ಅಂದ್ರೆ, ಒಂದು ಮಾತನ್ನು ಹೇಳಿ – If 'Bhat Sir' can balance his briefcase in one hand and his wife's hand in the other, why is your briefcase so heavy?

ಚೈತ್ರಾ, ಬೆಂಗಳೂರು

- **ಸಂಪಾದಕರೇ, ಇದು ಮಾರ್ಚ್ ತಿಂಗಳು, ಕಂಪನಿಯಲ್ಲಿ ಎಲ್ಲರಿಗೂ performance appraisal ಆಗಿದೆ. ನಮ್ಮ ತಂಡದಲ್ಲಿ ಐದು ಜನ ಇದ್ದಾರೆ. ಅವರಲ್ಲಿ ಇಬ್ಬರಿಗೆ ಅತ್ಯುತ್ತಮ ಇನ್ಕ್ರಿಮೆಂಟ್ ಬಂದಿವೆ, ಆದರೆ ಅವರು ಹೆಚ್ಚುವರಿ ಸಮಯ ಕೆಲಸ ಮಾಡುವುದಿಲ್ಲ, ಅವರ ಕೆಲಸದಲ್ಲೂ ಅಷ್ಟು ಸ್ಮಾರ್ಟ್ ಇಲ್ಲ. ಅವರಿಗೆ ಹೆಚ್ಚು ಇನ್ಕ್ರಿಮೆಂಟ್ ಬಂದಿರುವ ಕಾರಣ ನನಗೆ ಗೊತ್ತಿದೆ. ನಾನು ಅವರಂತಾಗಲು ಸಾಧ್ಯವಿಲ್ಲ. ಇದು ನನ್ನನ್ನು ಡಿಪ್ರೆಶನ್ ಕಡೆಗೆ ತಳ್ಳುತ್ತಿದೆ. ನಾನು ಕೆಲಸ ಬದಲಾಯಿಸುವುದು ಉತ್ತಮವೇ ಅಥವಾ ಇದನ್ನೇ ಸಹಿಸಿಕೊಂಡು ಮುಂದುವರೆಯಬೇಕೇ ಎಂದು ದಯವಿಟ್ಟು ಸಲಹೆ ನೀಡಿ.**

– ಚೈತ್ರಾ ಅವರೇ, ಮಾರ್ಚ್ ಮತ್ತು ಏಪ್ರಿಲ್ ತಿಂಗಳು ಉದ್ಯೋಗಿಗಳಿಗೆ ಕೇವಲ ಹಣಕಾಸಿನ ವಿಚಾರವಲ್ಲ, ಅದು ಭಾವನಾತ್ಮಕವಾಗಿಯೂ ಬಹಳ ಒತ್ತಡದ ಸಮಯ. ನಿಮ್ಮ ಪರಿಸ್ಥಿತಿ ನಿಜಕ್ಕೂ ಬೇಸರ ತರಿಸುತ್ತದೆ. ಕಷ್ಟಪಟ್ಟು ಕೆಲಸ ಮಾಡುವವರಿಗಿಂತ, ಬೇರೆ ಕಾರಣಗಳಿಗಾಗಿ ಬೇರೆಯವರಿಗೆ ಮನ್ನಣೆ ಸಿಕ್ಕಾಗ ಅಸಮಾಧಾನವಾಗುವುದು ಸಹಜ.

ಮೊದಲನೆಯದಾಗಿ, ಬೇರೆಯವರಿಗೆ ಸಿಕ್ಕ ಇನ್ಕ್ರಿಮೆಂಟ್ ನಿಮ್ಮ ಸಾಮರ್ಥ್ಯಕ್ಕೆ ಸಿಕ್ಕ ಅಂಕಗಳಲ್ಲ. ಕಾರ್ಪೊರೇಟ್ ಜಗತ್ತಿನಲ್ಲಿ ಕೆಲವೊಮ್ಮೆ 'ಪರ್ಫಾರ್ಮೆನ್ಸ್'ಗಿಂತ 'ಪರ್ಸೆಪ್ಷನ್' (ಅವರು ಹೇಗೆ ಕಾಣಿಸಿಕೊಳ್ಳುತ್ತಾರೆ) ಮತ್ತು 'ನೆಟ್‌ವರ್ಕಿಂಗ್' ಮುಖ್ಯವಾಗಿಬಿಡುತ್ತದೆ. ಅದಕ್ಕಾಗಿಯೇ ನೀವು ಡಿಪ್ರೆಶನ್‌ಗೆ ಒಳಗಾಗಬಾರದು. ನಿಮ್ಮ ಮೌಲ್ಯ ಆ ಕಂಪನಿ ನೀಡುವ ಶೇಕಡಾವಾರು ಇನ್ಕ್ರಿಮೆಂಟ್ ಮೇಲೆ ನಿರ್ಧಾರಿತವಾಗಬಾರದು.

ಕೆಲಸ ಬದಲಿಸುವ ನಿರ್ಧಾರ ಮಾಡುವ ಮುನ್ನ ಈ ಪ್ರಶ್ನೆಗಳನ್ನು ಕೇಳಿಕೊಳ್ಳಿ. ಈ ತಾರತಮ್ಯ ಕೇವಲ ಈ ಬಾರಿ ಆಗಿದೆಯೇ ಅಥವಾ ಈ ಕಂಪನಿಯಲ್ಲಿ ಯಾವಾಗಲೂ 'ಚಾಚೂ' ಸಂಸ್ಕೃತಿ (Favoritism) ಇದೆಯೇ? ನಿಮ್ಮ ಮ್ಯಾನೇಜರ್ ನಿಮ್ಮ ಕೆಲಸವನ್ನು ಗುರುತಿಸುತ್ತಿದ್ದಾರೆಯೇ? ಅಪ್ರೈಸಲ್ ಚರ್ಚೆಯ ಸಮಯದಲ್ಲಿ ನೀವು ನಿಮ್ಮ ಸಾಧನೆಗಳನ್ನು ಸರಿಯಾಗಿ ಮಂಡಿಸಿದ್ದೀರಾ? ಈ ಕಂಪನಿಯಲ್ಲಿ ನಿಮಗೆ ಕಲಿಯಲು ಇನ್ನೂ ಅವಕಾಶಗಳಿವೆಯೇ?

ನಿಮ್ಮ ಮ್ಯಾನೇಜರ್ ಜೊತೆ ಮುಕ್ತವಾಗಿ ಮಾತನಾಡಿ. ಜಗಳವಾಡುವ ಧಾಟಿಯಲ್ಲಿ ಅಲ್ಲದೆ, ಬಹಳ ವೃತ್ತಿಪರವಾಗಿ ಚರ್ಚಿಸಿ. 'ನಾನು ಈ ವರ್ಷ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಆದರೆ ನನ್ನ ನಿರೀಕ್ಷೆಯಷ್ಟು ಫಲಿತಾಂಶ ಸಿಕ್ಕಿಲ್ಲ. ನಾನು ಇನ್ನೂ ಉತ್ತಮ ಪ್ರದರ್ಶನ ನೀಡಲು ಏನು ಮಾಡಬೇಕು? ನನ್ನಲ್ಲಿರುವ ಕೊರತೆಗಳೇನು?' ಎಂದು ಕೇಳಿ. ಅವರ ಉತ್ತರದಿಂದ ನಿಮಗೆ ಆ ಕಂಪನಿಯಲ್ಲಿ ಭವಿಷ್ಯವಿದೆಯೇ ಅಥವಾ ಇಲ್ಲವೇ ಎಂಬುದು ಸ್ಪಷ್ಟವಾಗುತ್ತದೆ.

ಒಂದು ವೇಳೆ ಕಂಪನಿಯಲ್ಲಿ ಪ್ರತಿಭೆಗಿಂತ 'ಚಮಚಾಗಿರಿ'ಗೆ ಮಾತ್ರ ಬೆಲೆ ಇದೆ ಎಂದು ನಿಮಗೆ ಖಚಿತವಾದರೆ, ಖಂಡಿತವಾಗಿಯೂ ಕೆಲಸ ಬದಲಿಸುವುದು ಉತ್ತಮ. ಆದರೆ ಆವೇಶದಲ್ಲಿ ನಿರ್ಧಾರ ಬೇಡ. ಈ ಕ್ಷಣದ ಸಿಟ್ಟಿನಲ್ಲಿ ರಾಜೀನಾಮೆ ನೀಡಬೇಡಿ. ನಿಮ್ಮ ರೆಸ್ಯೂಮೆಯನ್ನು ಅಪ್‌ಡೇಟ್ ಮಾಡಿ, ಹೊಸ ಕೌಶಲಗಳನ್ನು ಕಲಿಯಿರಿ ಮತ್ತು ಬೇರೆಡೆ ಸಂದರ್ಶನಗಳನ್ನು ನೀಡಲು ಆರಂಭಿಸಿ. ಬೇರೆ ಕಂಪನಿಯಲ್ಲಿ ನಿಮಗೆ ಈಗ ಸಿಗುತ್ತಿರುವುದಕ್ಕಿಂತ ಹೆಚ್ಚಿನ ಸಂಬಳ ಸಿಕ್ಕಾಗ, ಈ ಬೇಸರ ತಾನಾಗಿಯೇ ಮರೆಯಾಗುತ್ತದೆ.

'ಸ್ಮಾರ್ಟ್ ವರ್ಕ್' ಮಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ, 'ಸ್ಮಾರ್ಟ್ ವರ್ಕ್' ಎಂದರೆ ಕೇವಲ ಕೆಲಸ ಮಾಡುವುದಲ್ಲ, ಮಾಡಿದ ಕೆಲಸವನ್ನು ಸರಿಯಾದ ಜನರಿಗೆ ತಲುಪಿಸುವುದು.

ಶ್ರೀಕಾಂತ ಜಿ., (ಇಮೇಲ್ ಮೂಲಕ)

- **ಸಂಪಾದಕರೇ, ನಿಜವಾಗಿಯೂ ತಂದೆ-ತಾಯಿಗಳು ಮನೆಯಲ್ಲಿರುವ ಮಕ್ಕಳಲ್ಲಿ ಕಿರಿಯ ಮಗುವಿನ ಮೇಲೆ ಹೆಚ್ಚು ಪ್ರೀತಿ ತೋರಿಸುತ್ತಾರೆಯೇ? ನಮ್ಮ ಮನೆಯಲ್ಲಿ ನಾವು ಇಬ್ಬರು ಸಹೋದರರು ಇದ್ದೇವೆ. ನನಗೆ ಯಾವಾಗಲೂ ನನ್ನ ತಾಯಿ ನನ್ನ ಕಿರಿಯ ಸಹೋದರನ ಮೇಲೆ ಹೆಚ್ಚು ಮಮತೆ ತೋರಿಸುತ್ತಾರೆ ಎಂಬ ಭಾವನೆ. ಬಾಲ್ಯದಿಂದಲೇ ನನ್ನದಲ್ಲದ ತಪ್ಪಿಗೆ ಹೊಡೆತ ತಿಂದೆ. ಕೆಲವೊಮ್ಮೆ ನಾನು ನನ್ನ ಮನೆಯಲ್ಲೇ ಒಂಟಿತನ ಅನುಭವಿಸಿದ್ದೇನೆ. ಸಾಮಾನ್ಯವಾಗಿ ಜನರು 'ತಂದೆ ತಾಯಿಗಳಿಗೆ ಎಲ್ಲ ಮಕ್ಕಳು ಒಂದೇ' ಎಂದು ಹೇಳುತ್ತಾರೆ. ಆದರೆ ನನ್ನ ಅನುಭವದಲ್ಲಿ ಅದು ಬೇರೆ ರೀತಿಯಾಗಿ ಕಾಣಿಸುತ್ತದೆ. ಇಂಥ ಭಾವನೆಗಳು ಸಾಮಾನ್ಯವೇ?**

–ಶ್ರೀಕಾಂತ ಅವರೇ, ನಿಮ್ಮ ಮನಸ್ಸಿನಲ್ಲಿರುವ ಈ ಭಾವನೆ ತೀರಾ ಸಾಮಾನ್ಯ ಮತ್ತು ವಾಸ್ತವಿಕವಾದದ್ದು. 'ತಂದೆ-ತಾಯಿಗೆ ಎಲ್ಲ ಮಕ್ಕಳೂ ಒಂದೇ' ಎಂಬುದು ಆದರ್ಶದ ಮಾತಾಯಿತಷ್ಟೇ, ಆದರೆ ಪ್ರಾಯೋಗಿಕವಾಗಿ ಅನೇಕ ಕುಟುಂಬಗಳಲ್ಲಿ ಮಕ್ಕಳ ನಡುವೆ ಈ ರೀತಿಯ ವ್ಯತ್ಯಾಸಗಳು ಕಂಡುಬರುತ್ತವೆ. ಇದನ್ನು ಮನೋವಿಜ್ಞಾನದಲ್ಲಿ Parental Favoritism ಎಂದು ಕರೆಯುತ್ತಾರೆ.

ಸಾಮಾನ್ಯವಾಗಿ ಪೋಷಕರು ಕಿರಿಯ ಮಗುವನ್ನು ಯಾವಾಗಲೂ 'ಚಿಕ್ಕ ಮಗು' ಎಂದೇ ನೋಡುತ್ತಾರೆ. ಕಿರಿಯ ಮಗು ದೈಹಿಕವಾಗಿ ಮತ್ತು ಮಾನಸಿಕವಾಗಿ ಸ್ವಲ್ಪ ದೌರ್ಬಲ್ಯ ತೋರಿಸಿದಾಗ, ಪೋಷಕರಲ್ಲಿ ರಕ್ಷಣಾತ್ಮಕ ಪ್ರವೃತ್ತಿ ಹೆಚ್ಚಾಗುತ್ತದೆ. ಹಿರಿಯ ಮಗುವಿನ ಮೇಲೆ ಪೋಷಕರು ಹೆಚ್ಚು ನಿರೀಕ್ಷೆ ಇಟ್ಟಿರುತ್ತಾರೆ. 'ನೀನು ದೊಡ್ಡವನು, ನೀನು ಅರ್ಥ ಮಾಡಿಕೊಳ್ಳಬೇಕು' ಎಂಬ ಮಾತು ಹಿರಿಯ ಮಗುವಿಗೆ ಶಿಕ್ಷೆಯಂತೆ ಕೇಳಿಸುತ್ತದೆ.

ಹಲವು ಮನೆಗಳಲ್ಲಿ ಹಿರಿಯ ಮಗುವನ್ನು ಒಂದು 'ಮಾದರಿ'ಯನ್ನಾಗಿ ಮಾಡಲು ಪೋಷಕರು ಪ್ರಯತ್ನಿಸುತ್ತಾರೆ. ಕಿರಿಯವನು ತಪ್ಪು ಮಾಡಿದಾಗ ಅವನಿಗಿನ್ನೂ ತಿಳಿವಳಿಕೆ ಇಲ್ಲ ಎಂದು ಬಿಟ್ಟುಬಿಡುತ್ತಾರೆ. ಆದರೆ ಹಿರಿಯವನು ಸಣ್ಣ ತಪ್ಪು ಮಾಡಿದರೂ 'ನಿನಗೆ ಬುದ್ಧಿ ಇಲ್ವಾ?' ಎಂದು ಗದರಿಸುತ್ತಾರೆ. ಇದು ನಿಮಗೆ ಬಾಲ್ಯದಿಂದಲೇ ಅನ್ಯಾಯದ ಭಾವನೆ ಮೂಡಿಸಿರುವುದು ಸಹಜ.

ಮನೆಯಲ್ಲೇ ಇದ್ದೂ ಒಂಟಿತನ ಅನುಭವಿಸುವುದು ಬಹಳ ನೋವಿನ ಸಂಗತಿ. ನಿಮ್ಮ ತಾಯಿ ನಿಮ್ಮ ತಮ್ಮನಿಗೆ ಹೆಚ್ಚು ಬೆಂಬಲ ನೀಡಿದಾಗ, ನಿಮಗೆ 'ನನ್ನನ್ನು ಯಾರೂ ಅರ್ಥ ಮಾಡಿಕೊಳ್ಳುತ್ತಿಲ್ಲ' ಎನಿಸಿರಬಹುದು. ಇದು ನಿಮ್ಮ ಆತ್ಮವಿಶ್ವಾಸದ ಮೇಲೂ ಪರಿಣಾಮ ಬೀರಿರಬಹುದು. ಪೋಷಕರು ತಮ್ಮ ಮಕ್ಕಳಲ್ಲಿ ಒಬ್ಬರ ಕಡೆಗೆ ಸ್ವಲ್ಪ ಹೆಚ್ಚು ಒಲವು ಹೊಂದಿರುತ್ತಾರೆ. ಆದರೆ ಅವರು ಅದನ್ನು ಒಪ್ಪಿಕೊಳ್ಳಲು ಸಿದ್ಧರಿರುವುದಿಲ್ಲ. ಇದು ಅವರ ಉದ್ದೇಶಪೂರ್ವಕ ನಿರ್ಧಾರವಾಗಿರುವುದಿಲ್ಲ, ಬದಲಿಗೆ ಅವರ ಮನಸ್ಥಿತಿಗೆ ಹತ್ತಿರವಾಗುವ ಮಗುವಿನ ಸ್ವಭಾವದ ಕಾರಣವಿರಬಹುದು.

ನಿಮ್ಮ ತಾಯಿಯ ಪ್ರೀತಿ ನಿಮ್ಮ ತಮ್ಮನ ಮೇಲೆ ಹೆಚ್ಚಿದೆ ಎಂದ ಮಾತ್ರಕ್ಕೆ ಅವರಿಗೆ ನಿಮ್ಮ ಮೇಲೆ ಪ್ರೀತಿ ಇಲ್ಲ ಎಂದಲ್ಲ. ಅವರ ಪ್ರೀತಿ ತೋರಿಸುವ ರೀತಿ ಬೇರೆಯಾಗಿರಬಹುದು. ಪೋಷಕರಿಂದ ಸಿಗದ ಮಾನ್ಯತೆಯನ್ನು (Validation) ನೀವೇ ಸೃಷ್ಟಿಸಿಕೊಳ್ಳಿ. ನಿಮ್ಮ ಸಾಧನೆಗಳು ಮತ್ತು ನಿಮ್ಮ ವ್ಯಕ್ತಿತ್ವದ ಮೇಲೆ ಗಮನ ಹರಿಸಿ. ಯಾವುದಾದರೂ ಶಾಂತವಾದ ಸಮಯದಲ್ಲಿ ನಿಮ್ಮ ತಾಯಿಯ ಜತೆ ಕುಳಿತು, 'ಅಮ್ಮಾ, ಬಾಲ್ಯದಲ್ಲಿ ಆ ಘಟನೆ ನಡೆದಾಗ ನನಗೆ ತುಂಬಾ ಬೇಸರವಾಗಿತ್ತು, ನನಗೆ ನೀವು ನನ್ನನ್ನು ಕಡೆಗಣಿಸುತ್ತಿದ್ದೀರಿ ಎಂದು ಅನಿಸುತ್ತಿತ್ತು' ಎಂದು ಹಳೆಯ ನೋವನ್ನು ಹಂಚಿಕೊಳ್ಳಿ. ಜಗಳದ ರೂಪದಲ್ಲಿ ಅಲ್ಲದೆ ಕೇವಲ ನಿಮ್ಮ ಭಾವನೆಯನ್ನು ಹೇಳಿ.

ಜೀವನದಲ್ಲಿ ನಮಗೆ ಸಿಗುವ ಸ್ಥಾನಮಾನಗಳಿಗಿಂತ, ನಮ್ಮ ಮನಸ್ಸಿನ ಶಾಂತಿ ಮುಖ್ಯ. ಇಷ್ಟಾಗಿಯೂ ಒಂದು ಮಾತು ಮಾತು ಹೇಳುತ್ತೇನೆ – 'ನಮ್ಮ ಶ್ರೇಯಸ್ಸನ್ನು ಯಾವ ಪ್ರತಿಫಲಾಪೇಕ್ಷೆ ಇಲ್ಲದೇ ಬಯಸುವವರೆಂದರೆ ನಮ್ಮ ತಂದೆ-ತಾಯಿ ಮಾತ್ರ. ಹೀಗಾಗಿ ಅವರನ್ನು ಎಂದೂ ತಪ್ಪು ತಿಳಿಯಬೇಡಿ.'



ಪ್ರತಿ ವರ್ಷ ಮಾರ್ಚ್ ತಿಂಗಳಿಂದ ಜೂನ್ ತನಕದ ಅವಧಿಯು ಮಂಗಟ್ಟೆಗಳಿಗೆ ಪ್ರಶಸ್ತ ದಾಂಪತ್ಯದ ಸಮಯ. ಈಗಲೇ ಇವುಗಳ ಸಂತತಿ ನಾಶವಾಗುವ ಕಾಲವೂ ಹೌದು. ಈಗ ಉತ್ತರ ಕನ್ನಡದ ಅಣಶಿ ಅಭಯಾರಣ್ಯದಲ್ಲಿ ನೂರಾರು ಮಂಗಟ್ಟೆಗಳು ಸಂತಾನೋತ್ಪತ್ತಿಯ ಪ್ರಕ್ರಿಯೆ ಆರಂಭಿಸಿವೆ.

ಕೊಕ್ಕಿನ ಹಕ್ಕಿಯ ದಾಂಪತ್ಯ ದೀಪಿಕೆ

» ಸಂತೋಷಕುಮಾರ ಮೆಹೆಂದಳೆ

ಈಶಾನ್ಯ ರಾಜ್ಯವೊಂದರ ರಾಜ್ಯ ಪಕ್ಷಿಯಾಗಿ ಗುರುತಿಸಿಕೊಂಡಿರುವ ಮಂಗಟ್ಟೆ ಅಥವಾ ಕೊಕ್ಕಿನ ಹಕ್ಕಿ ಅರ್ಥಾತ್ ಹಾರ್ನ್‌ಬಿಲ್ ಎಂದೇ ಖ್ಯಾತಿಯಾಗಿರುವ ಈ ಪಕ್ಷಿಗೀಗ ಬಾಣಂತನದ ಸಂಭ್ರಮ. ಮಂಗಟ್ಟೆಗೆ ವಿಶೇಷತೆ ಪ್ರಾಧಾನ್ಯವಾಗಿರುವುದು ಅದರ ಮೂಗಿನ ಮೇಲಿರುವ ಹೆಚ್ಚುವರಿ ಕೊಂಬಿನಿಂದಾಗಿ. ಆ ಕೊಂಬೇ ಅದರ ಅವಸಾನಕ್ಕೂ ಕಾರಣವಾಗುತ್ತಿರುವುದು ಅದರ ದುರಂತ. ಕೊಂಬಿನ ಉತ್ಪನ್ನ, ಅದರ ಔಷಧ ಆರ್ಥರೈಟಿಸ್ ಕಾಯಿಲೆಗೆ ಸ್ಥಳೀಯವಾಗಿ ಬಳಕೆಯಾಗುತ್ತಿರುವುದು. ಅದರಿಂದ ಅನಿಯಂತ್ರಿತ ಬೇಟೆಗೆ ಬಲಿಯಾಗುತ್ತಿದ್ದ 2002 ರ ಹೊತ್ತಿಗೆ ತೀವ್ರವಾಗಿ ನಾಶವಾಗುತ್ತಿರುವ ಪಕ್ಷಿ ಸಂಕುಲ ಎಂದೇ ಪರಿಗಣಿಸಲಾಗಿತ್ತು.

ಪ್ರಸ್ತುತ ಉ.ಕ. ಅಣಶಿ ಅಭಯಾರಣ್ಯದಲ್ಲೇ ಈ ವರ್ಷ ಆರೂವರೆ ಸಾವಿರ ಮಂಗಟ್ಟೆಗಳು ದಾಖಲಾಗಿದ್ದು 2010 ರಲ್ಲಿ ಕರ್ನಾಟಕ ಸರ್ಕಾರ ಈ ವಲಯವನ್ನು ಮಂಗಟ್ಟೆ ಸಂರಕ್ಷಿತ ಅರಣ್ಯ ವಲಯ ಎಂದು ಗುರುತಿಸಿ, ಅವುಗಳ ರಕ್ಷಣಾ ಕಾರ್ಯಕ್ರಮಕ್ಕೆ ಹಣವನ್ನು ಬಿಡುಗಡೆ ಮಾಡಲಾಗಿತ್ತು.

ಇಷ್ಟೆಲ್ಲಾ ಮುತುವರ್ಜಿ ವಹಿಸಲು ಕಾರಣ ಮಂಗಟ್ಟೆ ಹಕ್ಕಿಯದ್ದು ಅದ್ಭುತ ಎನ್ನುವಷ್ಟು ಪ್ರಾಮಾಣಿಕವಾಗಿ ಬದುಕುವ, ಅಪರೂಪದ ದಾಂಪತ್ಯ. ಜೀವಮಾನದಲ್ಲಿ ಒಮ್ಮೆ ಮಾತ್ರ ಜೋಡಿಯಾಗುವ ಮಂಗಟ್ಟೆಗಳಲ್ಲಿ ಅಕಸ್ಮಾತಾಗಿ ಜೋಡಿ ತೀರಿಹೋದರೆ ಇನ್ನೊಂದೂ ಕೂಡಾ ಜೀವ ಕೊಡುತ್ತದೆ. ಇಲ್ಲಿಯವರೆಗಿನ ಸತತ ಅಭ್ಯಾಸದಲ್ಲಿ ಸಾಬೀತಾಗಿರುವ ಸತ್ಯ ಎಂದರೆ ಅಂತಹ ಏಕಾಂಗಿತನದ ಅಕಾಲಿಕ ಮರಣಕ್ಕೆ ಕಾರಣ ಮಾನವನೇ ಎನ್ನುವುದು. ಹೆಚ್ಚಿನಂಶ ಇದು ಅವುಗಳ ಸಂತಾನೋತ್ಪತ್ತಿಯ ಕಾಲದಲ್ಲಿ ಜರುಗಿಬಿಡುವ ವಿದ್ರಾವಕ ಕಥಾನಕ.

ಮಾರ್ಚನಿಂದ ಜೂನ್ ತಿಂಗಳವರೆಗೆ ನಡೆಯುವ ಮಂಗಟ್ಟೆ ಕುಟುಂಬ ವ್ಯವಸ್ಥೆಗಾಗಿ ಹೆಚ್ಚಿನ ಜೋಡಿಗಳು ಸಿದ್ಧವಾಗಿದ್ದು, ಉ.ಕ. ಜಿಲ್ಲೆಯ ಅಣಶಿ ಅಭಯಾರಣ್ಯದ ವ್ಯಾಪ್ತಿಯಲ್ಲಿ ನಡೆಯುವ ಸಂತಾನೋತ್ಪತ್ತಿಗೆ ಈಗಾಗಲೇ ಅವುಗಳ ಹಾರಾಟ, ಕೂಗಾಟಗಳ ಕಲರವದೊಂದಿಗೆ ಸಿದ್ಧಗೊಳ್ಳುತ್ತಿವೆ. ಆದರೆ ಗೂಡಿನಲ್ಲೇ ಪ್ರತಿವರ್ಷ ಮರಣಿಸುತ್ತಿರುವ, ಹೊರಗೆ ಜೋಡಿಗಾಗಿ ಜೀವ ಕೊಡುವ ಮಂಗಟ್ಟೆಗಳ ಸಂಖ್ಯೆ ಸರಿ ಸುಮಾರು ಇನ್ನೂರರ ಆಸು ಪಾಸು. ಅಲ್ಲಿಗೆ ಅರ್ಧಕ್ಕರ್ಧ ಈಗಲೂ ಅಳಿವಿನಂಚಿನಲ್ಲೇ ಇವೆ.

ಪ್ರತಿ ಜನೇವರಿಯ ಹೊತ್ತಿಗೆ ಕನಿಷ್ಠ ಅರವತ್ತೆಪ್ಪತ್ತು ಅಡಿಗೂ ಮಿಗಿಲಾದ ಎತ್ತರದ ಗುರುತಿಸಿ, ಅದರಲ್ಲಿ ಪೊಟರೆಯನ್ನು ಕೊರೆದು, ಏಕಮುಖ ವ್ಯವಸ್ಥೆಯ ಗೂಡನ್ನು ನಿರ್ಮಿಸಿಕೊಳ್ಳುತ್ತವೆ. ಮುಕ್ತಾಯ ಹಂತದಲ್ಲಿ ಅದರ ಬಾಯಿಗೆ ಮರಮುಟ್ಟಿನ ಕಡ್ಡಿಗಳನ್ನು ಇರಿಸಿ ಅರೆ ಮಾಡಿ ನಿರ್ಗಮಿಸುವ ಜೋಡಿಗಳದ್ದು ನಂತರದಲ್ಲಿ ನಿರಂತರ ಸುರತ. ಸುಮಾರು ಮೂರು ವಾರಗಳ ಕಾಲ ಎತ್ತರದ ರೆಂಬೆ, ನದಿತೀರ, ಕಾಡು ಪ್ರದೇಶಗಳಲ್ಲಿ ಸರಸ ಸಲ್ಲಾಪ ಮುಗಿಸಿ ಸಮಯ ಮಾಗುತ್ತಿದ್ದಂತೆ ಹೆಣ್ಣು ಬಾಣಂತನಕ್ಕೆ ತಯಾರಾಗುತ್ತದೆ. ಗಂಡು ಬೆಂಗಾವಲಾಗಿ ಅದನ್ನು ಕಟ್ಟಿಕೊಂಡಿದ್ದ ತಮ್ಮ ಸೂರಿಗೆ ತಂದು ಸೇರಿಸುತ್ತದೆ. ಆ ಹೊತ್ತಿನಲ್ಲಿ ಹೆಣ್ಣುಪಕ್ಷಿಯನ್ನು, ಗಂಡು ಅದ್ಯಾವ ಪರಿಯಲ್ಲಿ ಆರೈಕೆ ಮಾಡುತ್ತಾ, ಆಹಾರ ಪೂರೈಸಿರುತ್ತದೆಂದರೆ ಹೆಣ್ಣು ಮಂಗಟ್ಟೆ ಸರಿಯಾಗಿ ಎರಡರಷ್ಟು ತನ್ನ ತೂಕ ಹೆಚ್ಚಿಸಿಕೊಂಡಿರುತ್ತದೆ.

ಜೇಡಿಮಣ್ಣಿನ ತೇಪೆ

ಗೂಡು ಸೇರಿ ಮೊಟ್ಟೆ ಇರಿಸುತ್ತಿದ್ದಂತೆ ತನ್ನ ಗೂಡಿನ ಪ್ರವೇಶ ದ್ವಾರವನ್ನು ಮುಚ್ಚಿಕೊಳ್ಳುತ್ತದೆ. ಈ ನಿರ್ದಿಷ್ಟ ಸಲ್ಲಾಪೋತ್ತರ ಅವಧಿಯಲ್ಲಿ ಮೂಗಿನ ಮೇಲ್ಗಡೆಯ ಕೊಂಬಿನಿಂದ ದಪ್ಪ ಮೇಣ ಒಸರಲಾರಂಭಿಸುತ್ತದೆ. ಈ ಮೇಣ ಮತ್ತು ಪೊಟರೆಯ ಒಳಗಡೆಯ ಮರದ ಹುಡಿಯನ್ನು ಸೇರಿಸಿ ಬಾಗಿಲನ್ನು ಲಂಬಾಕಾರವಾಗಿ ಪರಿವರ್ತಿಸಿ ಉಳಿದದ್ದನ್ನು ಮುಚ್ಚಿಬಿಡುತ್ತದೆ. ಹೊರಗಡೆಯಿಂದ ಗಂಡು ಜೇಡಿಮಣ್ಣು ಮತ್ತು ಮಾವಿನ ಚಿಗುರಿನ ಒಸರು ಸಹಿತ ಗೊಂದಿನಂತಹ ಪದಾರ್ಥದಿಂದ ತೇಪೆ ಹಾಕುತ್ತಿರುತ್ತದೆ.

ಹೊರಗಿನಿಂದ ಆಹಾರ ಪೂರೈಕೆಗೆ, ಒಂದು ಕೊಕ್ಕಿನಷ್ಟು ಜಾಗ ಉಳಿಸಿ ಸಂಪೂರ್ಣ ಭದ್ರಪಡಿಸುವ ಪೊಟರೆಯ ಒಳಗೆ ಹೆಣ್ಣು ಸ್ವಯಂ ಬಂಧಿಯಾಗುತ್ತದೆ. ಅದೀಗ ಗೂಡಿನ ತಳಭಾಗ ಸೇರಿಕೊಂಡರೆ, ಹೊರಗಿರುವ ಗಂಡು ಹತ್ತಿರದಲ್ಲೇ ಹಾರುತ್ತಾ ಆಹಾರ ಪೂರೈಕೆ ಮತ್ತು ಕಾವಲಿಗೆ ನಿಲ್ಲುತ್ತದೆ. ಇದು ಮಂಗಟ್ಟೆ ಪ್ರಪಂಚ ಅಪರೂಪದ ಜೀವನಕ್ರಮ. ಅದಾದ ನಲವತ್ತೆಂಟು ಗಂಟೆಯಲ್ಲಿ, ಹೆಣ್ಣು ಯಶಸ್ವಿಯಾಗಿ ಎರಡರಿಂದ ಐದು ಮೊಟ್ಟೆಗಳನ್ನಿಡುತ್ತದೆ.

ಈ ಆರೈಕೆಯ ಕಾಲಾವಧಿಯ ಉದ್ದಕ್ಕೂ ಗಂಡು ದಿನಕ್ಕೆ ಏಳೆಂಟು ಬಾರಿ ಆಹಾರವನ್ನು ಹೊರಗಿನಿಂದಲೇ ಹೆಣ್ಣಿನ ಕೊಕ್ಕಿಗೆ ದಾಟಿಸುತ್ತಾ, ಅಲ್ಲೇ ಸುತ್ತು ಹಾಕುತ್ತಾ ದನಿಯ ಮೂಲಕ ತನ್ನಿರವನ್ನು ಸೂಚಿಸುತ್ತಾ ಸುರಕ್ಷೆಯನ್ನೂ ಧೈರ್ಯವನ್ನೂ ಕೊಡುತ್ತಿರುತ್ತದೆ. ಹೆಣ್ಣು ಸುಮಾರು ಮೂವತ್ತು ದಿನ ಕಾವು ಕೊಟ್ಟು ಮರಿ ಮಾಡುತ್ತಿದ್ದಂತೆ ಆಹಾರ ಪೂರೈಕೆಯ ವಿಧ ಮತ್ತು ಸಮಯದಲ್ಲೂ ಬದಲಾವಣೆ ಮಾಡಿಕೊಳ್ಳುವ ಗಂಡು ಈಗ ದಿನಕ್ಕೆ ಸರಿ ಸುಮಾರು ಹದಿನಾರು ಬಾರಿ ವಿವಿಧ ರೀತಿಯ ಹಣ್ಣುಗಳು, ಚೊಗರು ಸೇರಿದಂತೆ, ಬೇಲದ ಹಣ್ಣಿನ ಅಹಾರ ಪೂರೈಕೆ ಮಾಡುತ್ತದೆ.

ಈ ಹಂತದಲ್ಲಿ ಹೆಣ್ಣಿನ ಅದ್ಭುತ ಕಾರ್ಯಯೋಜನೆ ಜಾರಿಗೊಳ್ಳುತ್ತದೆ. ಮರಿಗಳು ಈಚೆಗೆ ಬರುತ್ತಿದ್ದಂತೆ ಅದರ ಮೆತ್ತೆಯ ಅಗತ್ಯತೆಗೆ ತನ್ನದೇ ಮೈಯ್ಯ ಗರಿಗಳನ್ನು ಉದುರಿಸುತ್ತಾ ಒಳಗೆ ಹಾಸಿಗೆ ಸಿದ್ಧಪಡಿಸಿಕೊಡುತ್ತದೆ. ಇದರಿಂದ ಕೊನೆಗೊಮ್ಮೆ ಮೈಪೂರ್ತಿ ಬೋಳಾಗಿರುತ್ತದೆ. ಮರಿಗಳು ಬೆಳೆಯಲಾರಂಭಿಸುತ್ತಿದ್ದಂತೆ ಜಾಗದ ಇಕ್ಕಟ್ಟಿನಿಂದ ಪಾರಾಗಲು ಹೆಣ್ಣು ಡಯಟ್ ಆರಂಭಿಸಿ, ಮೈಯ್ಯನ್ನೆಲ್ಲಾ ಹಿಡಿಯಾಗಿಸಿಕೊಂಡು ಉಪವಾಸವಿದ್ದು ಸಣ್ಣಗಾಗುತ್ತ ಅವುಗಳಿಗೆ ಸಾಕಷ್ಟು ಜಾಗ ಮಾಡಿಕೊಡುತ್ತದೆ. ಇದೆಲ್ಲ ಪ್ರಕ್ರಿಯೆ ಜಾರಿಯಾಗುವ ಕೊನೆಯ ಹಂತದಲ್ಲಿ ಮರಿಗಳಿಗೆ ಹೊರಬರುವ ಸಕಾಲವಾದರೆ ತಾಯಿಗೂ ಜೀವ ಉಳಿಕೆಯ ಕೊನೆಯ ಹಂತದಲ್ಲಿರುತ್ತದೆ. ಉಪವಾಸ ಮತ್ತು ಆರೈಕೆಯ ಕಾರಣ ಹೆಣ್ಣು ನಿತ್ರಾಣವಾಗುತ್ತಿರುತ್ತದೆ. ಈ ಹಂತವನ್ನು ಚಿತ್ರೀಕರಿಸಲು ಈ ಪೊಟರೆಗಳೊಳಗೆ ಬಲು ಸೂಕ್ಷ್ಮವಾಗಿ ಕ್ಯಾಮೆರಾ ತೂರಿಸಲು ಜಾಗತಿಕವಾಗಿ ಮಾಡಿದ ಸುಮಾರು ಹನ್ನೆರಡು ಪ್ರಯತ್ನಗಳು ವ್ಯರ್ಥವಾಗಿದ್ದು, ಅಂತಹ ಸಂದರ್ಭದಲ್ಲೆಲ್ಲಾ ಮಂಗಟ್ಟೆ ಜೀವ ಕೊಟ್ಟಿದೆ. ಅಲ್ಲಿಗೆ ಇದರ ಗೂಡೊಳಗಿನ ಪ್ರಕ್ರಿಯೆ ಅರಿಯುವ ಕಾರ್ಯಕ್ಕೆ ತಡೆಬಿದ್ದಿದೆ.

ಮಕ್ಕಳೀಗ ಸಂಪೂರ್ಣ ತಯಾರಾಗಿವೆ ಎನ್ನುವ ಸಂದೇಶವನ್ನು ಹೆಣ್ಣು, ಹೊರಗಿದ್ದ ಗಂಡಿಗೆ ಕೊಡುತ್ತಿದ್ದಂತೆ ಅದಕ್ಕಾಗೇ ಕೂಗುತ್ತಾ ಕಾಯುತ್ತಿದ್ದ ಗಂಡು ಮಂಗಟ್ಟೆ ಶೀಘ್ರ ಪೊಟರೆಯ ಬಾಯಿ ಕೊರೆದು ಹಾಕುತ್ತದೆ. ಮರಿಗಳನ್ನು ಹೊರಕ್ಕೆ ಕರೆದೊಯ್ದು ಹೆಣ್ಣನ್ನು ಮಾತ್ರ ಒಳಗೆ ಉಳಿಸಿ, ಅಹಾರ, ಭದ್ರತೆ ಇತ್ಯಾದಿಗಳ ಸಂಪೂರ್ಣ ಕೌಟುಂಬಿಕ ಪರಿಸರವನ್ನು ಮತ್ತೆ ಒದಗಿಸುತ್ತದೆ. ಈ ಬಾರಿ ಎರಡೇ ವಾರದಲ್ಲಿ ಚಿಗಿತುಕೊಳ್ಳುವ ಹೆಣ್ಣು ಮತ್ತೊಮ್ಮೆ ಪುನರ್‌ಜನ್ಮ ಪಡೆದಂತೆ, ರೆಕ್ಕೆ ಚಿಗುರಿಸಿಕೊಂಡು ಪೊಟರೆಯಿಂದ ಹೊರಬರುತ್ತದೆ. ಮಕ್ಕಳು ಮರಿಗಳೊಂದಿಗೆ ಗುಂಪಾಗಿ ಸಂಸಾರ ಸಾಗಿಸುವ ಮಂಗಟ್ಟೆ ಜೋಡಿ, ಒಂದು ವರ್ಷದವರೆಗೆ ಮರಿಗಳನ್ನು ಪೋಷಿಸುತ್ತಾ, ಮತ್ತೆ ಹಳೆಯ ಪೊಟರೆ ಹುಡುಕಿ ಬರುತ್ತವೆ.

ಹೆಣ್ಣು ಹಕ್ಕಿಯ ತ್ಯಾಗ ಜೀವನ

ಈ ಹಿಂದೆ ನಿರ್ಮಿಸಿದ ಅಥವಾ ಮರಿ ಮಾಡಿದ ಪೊಟರೆ ಸಂಪೂರ್ಣ ನಾಶವಾಗುವವರೆಗೂ ಅಲ್ಲೇ ಸಂತಾನೋತ್ಪತ್ತಿ ಮಾಡುವ ಮಂಗಟ್ಟೆ ಜೀವಿತಾವಧಿಯಲ್ಲಿ ಕನಿಷ್ಟ ಆರರಿಂದ ಹದಿನಾಲ್ಕು ಬಾರಿಯವರೆಗೂ ಪುನರಾವರ್ತಿಸುತ್ತವೆ. ಮರಿಗಳು ಬೇರೆ ಜೋಡಿ ನೋಡಿಕೊಂಡು ಇನ್ನೊಂದು ಮರವನ್ನು ಆಶ್ರಯಿಸುತ್ತವೆ.

ಈ ಪ್ರತಿ ಆವರ್ತನೆಯಲ್ಲೂ ಯಾವತ್ತಿಗೂ ಜೋಡಿ ಬದಲಾಗುವುದಿಲ್ಲ. ದಾರುಣ ಎಂದರೆ ಸಂತಾನೋತ್ಪತ್ತಿಯ ಕಾಲದಲ್ಲಿ ಹೊರಗಿದ್ದ ಗಂಡು ಅಕಸ್ಮಾತ್ ಮರಣಕ್ಕೀಡಾದರೆ ಒಳಗಿದ್ದ ಹೆಣ್ಣು ಯಾವ ಕಾರಣಕ್ಕೂ ಹೊರಬರದೆ ಅಲ್ಲೇ ಜೀವ ಕೊಡುತ್ತದೆ.



ಕೆಲವೊಮ್ಮೆ ಒಳಗಿದ್ದ ಹೆಣ್ಣು ಪೋಷಿಸುವ ಭರದಲ್ಲಿ ಮರಿಗಳಿಗಾಗಿ ರೆಕ್ಕೆ ಪುಕ್ಕ ಕಿತ್ತುಕೊಂಡು ಅಹಾರ ಕಡಿಮೆ ಮಾಡಿಕೊಂಡು ನಿಶಕ್ತಿಯಾಗಿ ಅಥವಾ ಶತ್ರುದಾಳಿಗೆ ಸಿಕ್ಕಿ ಸಾಯುವುದೂ ಇದೆ. ಆಗ ಮರಿಗಳೂ ಕೂಡಾ ಹೊರಬರದೇ ಅಲ್ಲೇ ಸತ್ತು ಹೋದರೆ, ಹೊರಗಿದ್ದ ಮಂಗಟ್ಟೆ ಹೃದಯ ವಿದ್ರಾವಕವಾಗಿ ಕೂಗುತ್ತಾ ಕೆಲವು ದಿನದವರೆಗೆ ಏಕಾಂಗಿಯಾಗಿ ತಿರುಗಾಡಿ, ಮಾಸದೊಳಗೇ ಜೀವ ಕೊಡುತ್ತದೆ. ಈ ಜೋಡಿಗಳ ದಾಂಪತ್ಯ ನಿಷ್ಠೆ ಜಾಗತಿಕವಾಗಿ ಚರ್ಚೆಯಲ್ಲಿದೆಯಲ್ಲದೆ, ಇವತ್ತಿಗೂ ಕದಲದಿರುವ ಅದರ ನಿಷ್ಠೆ ಮನುಕುಲಕ್ಕೂ ಮಾದರಿಯಾಗಿದೆ. ಕಾಡೊಂದರ ಮೌಲ್ಯ ಮಾಪನ ನಡೆಯುವುದೇ ಈ ಪಕ್ಷಿ ಕಾಡಿನಲ್ಲಿ ಸಂತಾನೋತ್ಪತ್ತಿ ಮಾಡುತ್ತಿದೆಯೇ ಎನ್ನುವುದರ ಮೇಲೆ.

ಎಲ್ಲಕ್ಕಿಂತಲೂ ಮಿಗಿಲಾಗಿ ಈ ಹಕ್ಕಿ ಸುಲಭಕ್ಕೆ ತನ್ನ ಸಂತಾನೋತ್ಪತ್ತಿಯ ಮಾಹಿತಿಯನ್ನು ಯಾವ ಪಕ್ಷಿ ಪರಿಣಿತರಿಗೂ ಬಿಟ್ಟುಕೊಟ್ಟಿಲ್ಲ. ಇವತ್ತು ಕರ್ನಾಟಕದ ಅಧಿಕ ಸಂಖ್ಯೆಯಲ್ಲಿ ಅಣಶಿ ಅಭಯಾರಣ್ಯದಲ್ಲಿ ಇದು ವಾಸವಾಗಿರುವುದು ದಾಖಲೆಗೆ ಪಾತ್ರವಾಗಿದ್ದರೆ, ಅಷ್ಟರ ಮಟ್ಟಿಗೆ ಕಾಳಿ ಅರಣ್ಯ ಪ್ರದೇಶ ಅತ್ಯಂತ ಸುರಕ್ಷಿತ ಎಂದೇ ವ್ಯಾಖ್ಯಾನಿಸಲು ಪೂರಕವಾಗುತ್ತಿದೆ. ಪ್ರಸ್ತುತ ಜಾಗತಿಕವಾಗಿ ಭಾರತದ ಪಶ್ಚಿಮಘಟ್ಟ ಪ್ರದೇಶದಲ್ಲಿ ಅತಿಹೆಚ್ಚು ಮಂಗಟ್ಟೆಗಳಿದ್ದು, ಉಳಿದಂತೆ ನೇಪಾಳ, ಶ್ರೀಲಂಕಾ ಮತ್ತು ಇಂಡೊನೇಶಿಯಾದಲ್ಲಿ ಇತರ ಏಳೆಂಟು ಪ್ರಭೇಧದ ಮಂಗಟ್ಟೆಗಳು ಇವೆ.

ಅಲಂಕಾರಕ್ಕೆ ರೆಕ್ಕೆ

ಈಶಾನ್ಯ ರಾಜ್ಯದ ನಾಗ ಬುಡುಕಟ್ಟುಗಳಲ್ಲಿ ಮಂಗಟ್ಟೆ ರೆಕ್ಕೆ ಪುಕ್ಕಗಳಿಲ್ಲದೆ ಹಬ್ಬದ ದಿನ ವೇಷ ಭೂಷಣಗಳು ಪೂರ್ಣಗೊಳ್ಳುವುದಿಲ್ಲ. ಹಾಗಾಗಿ ಈಶಾನ್ಯ ರಾಜ್ಯದಲ್ಲಿ ಬೇಟೆ ಅವ್ಯಾಹತ. ಅಲ್ಲಿಂದ ಪಕ್ಕದಲ್ಲೇ ಇರುವ ಬರ್ಮಾ ರಾಜ ಪತಾಕೆಯಲ್ಲಿ ಮಂಗಟ್ಟೆಗೆ ಶಾಸ್ವತ ಸ್ಥಾನ ಕಲ್ಪಿಸಲಾಗಿದ್ದು, ಮೊದಲೆರಡು ವರ್ಷದ ಯುವ ಮಂಗಟ್ಟೆ ಮಾಂಸಕ್ಕೆ ಅಪಾರ ಬೇಡಿಕೆ ಇದೆ.

ಅನಿಮಾಲಿಯಾ ಗುಂಪಿನ ಕೋರ್ಡಾಟ್ ಪ್ರಬೇಧದಲ್ಲಿ ಬ್ಯೂಸೆರೋಟೆಡಿಯಾ ಕುಟುಂಬಕ್ಕೆ ಸೇರಿದ ಹಕ್ಕಿಯಾಗಿ ಗುರುತಿಸಲಾಗಿದ್ದು ಇದನ್ನು ಅವೇಸ್‌ನ ಗುಂಪಿನಲ್ಲಿ ವರ್ಗೀಕರಿಸಲಾಗಿದೆ. ಉ.ಕ.ಜಿಲ್ಲೆಯ ಮಲೆನಾಡಿನ ಕಾಡು ಪ್ರದೇಶ ಈಗ ಇವುಗಳ ಗಲಾಟೆಯಿಂದ ತುಂಬಿಹೋಗುತ್ತಿದ್ದು, ಅಣಶಿ ಸಂರಕ್ಷಿತ ವಲಯ ಈಗ ಸಂಪೂರ್ಣ ಸುರಕ್ಷತೆಯನ್ನು ಕೊಡುತ್ತಿದ್ದುದರಿಂದ ಗಣನೀಯ ಪ್ರಮಾಣದಲ್ಲಿ ಇವುಗಳ ಸಂಖ್ಯೆ ಪ್ರತಿ ವರ್ಷ ಏರಿಕೆ ಕಾಣುತ್ತಿದೆ.